ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ

ಪುಷ್ಪರತ್ನಸಂಖ್ಯಾ—೧೧

ವರಿವಸ್ಯಾರಹಸ್ಯಂ

(ಸಂಸ್ಕೃತವ್ಯಾಖ್ಯಾನ, ಕನ್ನಡ ಅನುವಾದಸಹಿತ)

ಅನುವಾದಕ:

ಆಸ್ಥಾನವಿದ್ವಾನ್ ಪಾಟಿಣಕರ ಚಂದ್ರಶೇಖರಭಟ್ಟ

ಮೈಸೂರು:
ದಿ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್,
೧೯೪೪

బి. ఎస్. కృష్ణమూర్తయ్య.
3-10-1945

ಶ್ರೀ ಜಯಚಾಮರಾಜೇಂದ್ರ ಗ್ರಂಥಮಾಲಾ

ಪುಷ್ಪರತ್ನಸಂಖ್ಯಾ—೧೧

ವರಿವಸ್ಯಾರಹಸ್ಯಂ

(ಸಂಸ್ಕೃತವ್ಯಾಖ್ಯಾನ, ಕನ್ನಡ ಅನುವಾದಸಹಿತ)

ಅನುವಾದಕ:

ಆಸ್ಥಾನವಿದ್ವಾನ್ ಪಾಟಣಕರ ಚಂದ್ರಶೇಖರಭಟ್ಟ

ಮೈಸೂರು:
ದಿ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್,
೧೯೪೪

ಮುನ್ನುಡಿ

ಜಗದೀಶ್ವರನು ಲೋಕಹಿತಾರ್ಥವಾಗಿ ಉಪದೇಶ ಮಾಡಿದ ವಿದ್ಯಾಪ್ರಸ್ಥಾನಗಳಲ್ಲಿ ಮಂತ್ರಶಾಸ್ತ್ರಪ್ರಸ್ಥಾನವು ಅತಿ ಗಂಭೀರವಾಗಿದೆ. ಈ ಮಂತ್ರಶಾಸ್ತ್ರೋಕ್ತ ವಿಧಿಯನ್ನನುಸರಿಸಿ ಮಂತ್ರಜಪಾದಿಗಳಿಂದ ದೇವತೆಯನ್ನಾರಾಧಿಸಿ ವಿವಿಧ ಸಿದ್ಧಿ-ಕೈವಲ್ಯಗಳನ್ನು ಹೊಂದಬಹುದು. ಇಲ್ಲಿ ವಿಹಿತವಾದ ವಿದ್ಯೆಗಳಲ್ಲಿ "ಶ್ರೀವಿದ್ಯೈವ ತು ಮಂತ್ರಾಣಾಂ" ಮುಂತಾದ ಪ್ರಮಾಣವಚನಗಳಿಂದ ಶ್ರೀವಿದ್ಯೆಯು ಪ್ರಧಾನವಾಗಿ ಗಣಿಸಲ್ಪಟ್ಟಿದೆ. ಪಂಚದಶ್ಯಾತ್ಮಕವಾದ ಶ್ರೀವಿದ್ಯೆಯಲ್ಲಿ ತ್ರಿಪುರಸುಂದರೀ ದೇವಿಯು ಉಪಾಸ್ಯ ದೇವತೆ. ಅಂತರ್ಯಾಗರೂಪವಾದ ಈ ದೇವಿಯ ಉಪಾಸನೆಯು ಗೌಣಭಕ್ತಿಯ ಒಂದು ಉತ್ತಮ ಭೂಮಿಕೆಯು. ಇದರ ಅನುಷ್ಠಾನಪರಂಪರಾಪರಿಪಾಕದಿಂದ ಪರಾಭಕ್ತಿಯೆಂಬ ಪುರುಷಾರ್ಥವು ಲಭಿಸುವುದು. ಭಕ್ತಿಯು ಸ್ವತಂತ್ರ ಪುರುಷಾರ್ಥವಾಗಲು ಅರ್ಹವೆಂಬುದನ್ನು ಇತರ ಲೇಖನದಲ್ಲಿ ಸಮರ್ಥಿಸಿದೆ.

ವರ್ಣಮಾಲೆಯಲ್ಲಿ ಸೇರಿದ ಕೆಲ ಕೆಲವು ವರ್ಣಗಳ ಉದ್ಧಾರದಿಂದ ವಿವಿಧ ಮಂತ್ರಗಳು ಏರ್ಪಟ್ಟಿವೆ. ಈ ಮಂತ್ರಾಕ್ಷರಗಳಿಗೆ ಅರ್ಥವು ಆಪಾತವಾಗಿ ಯಾವುದೊಂದೂ ಭಾಸವಾಗದಿರುವುದರಿಂದ ಮಂತ್ರ-ದೇವತಾ ಸಂಬಂಧವೂ ಮಂತ್ರೋಪಾಸನೆಯಿಂದ ದೇವತಾಪ್ರಸಾದಪ್ರಾಪ್ತಿಯೂ ಸಮಂಜಸವಾಗಿ ತೋರುವುದಿಲ್ಲ; ಇದರಿಂದ ಒದಗುವ ಸಂಶಯಾಕ್ಷೇಪಸಮಸ್ಯೆಗಳಿಂದ ಮಂತ್ರಶಾಸ್ತ್ರಪ್ರಸ್ಥಾನವು ಜಟಿಲವಾಗಿದೆ. ಉಪಾಸಕರು ಈ ಪ್ರಕ್ರಿಯೆಯನ್ನು ಅಲ್ಪವಾದರೂ ಅರಿತಿರುವುದು ಮೇಲೆ ಕಂಡ ಸಮಸ್ಯಾಪರಿಹಾರಕ್ಕೆ ಸಾಧನವಾಗುವುದು.

ಶಬ್ದ ಸೃಷ್ಟಿ, ಅರ್ಥ ಸೃಷ್ಟಿ ಎಂದು ಸೃಷ್ಟಿವರ್ಗವು ದ್ವಿವಿಧವಾಗಿದೆ. ಈ ಸೃಷ್ಟಿಗಳು ನಿರ್ವಿಶೇಷ ಪ್ರಕಾಶ ಸ್ವರೂಪನಾದ ಶಿವ, ವಿಮರ್ಶಾತ್ಮಕ ಶಕ್ತಿಗಳ ಪರಸ್ಪರಮೇಳನವೆಂಬ ಸಾಮರಸ್ಯದಿಂದ ಜನಿಸಿವೆ. ಇವುಗಳಲ್ಲಿ ಸೂಕ್ಷ್ಮತ್ವ ತಾರತಮ್ಯದಿಂದ ಕೂಡಿದ ಪರಾ, ಪಶ್ಯಂತೀ ಮುಂತಾದ ಶಬ್ದಗಳೂ ಅದೇ ರೀತಿಯ ಅರ್ಥಗಳೂ ಅಂತರ್ಗತವಾಗಿವೆ. ಸಾಮರಸ್ಯವೆಂಬ ಮೂಲಕಾರಣವು ತ್ರಿಪುರಸುಂದರೀ, ಪರಾಭಟ್ಟಾರಿಕಾ ಮುಂತಾದ ಶಬ್ದಗಳಿಂದ ವ್ಯಪದೇಶ್ಯವಾಗಿದೆ. ಕಾರಣ-ಕಾರ್ಯಗಳ ಅಭೇದ ಸಿದ್ಧಾಂತದಿಂದ ಶಬ್ದಾತ್ಮಕ ಮಂತ್ರ, ತತ್ಪ್ರತಿಪಾದ್ಯ

ಅರ್ಥವೆಂಬ ಕಾರ್ಯ, ಮೂಲಕಾರಣವಾದ ಶಕ್ತಿ ಇವುಗಳಿಗೆ ಐಕ್ಯವು ಸಿದ್ಧಿಸುವುದು. ಹೀಗೆ ದೇವಿಗೆ ಕರಚರಣಾದಿಯುತವಾದ ಒಂದು ಮೂರ್ತಿ, ವಾಗಿಂದ್ರಿಯ ಶ್ರವಣೇಂದ್ರಿಯಗೋಚರವಾದ ಮಂತ್ರಮಯವಾದ ಮತ್ತೊಂದು ಮೂರ್ತಿ, ಯೋಗಿಪ್ರತ್ಯಕ್ಷವಾದ, ವಾಸನಾಮಯವಾದ ಇನ್ನೊಂದು ಮೂರ್ತಿಯೂ ಸೇರಿ ಮೂರು ವಿಗ್ರಹಗಳಿವೆ. ನಿರ್ವಿಶೇಷ ಬ್ರಹ್ಮವಸ್ತುವು ತ್ರಯಾತೀತವು. ಇದು ಮಂತ್ರಶಾಸ್ತ್ರ ಪ್ರಕ್ರಿಯೆಗಳ ಸಾರಾಂಶವು, ಈ ಪ್ರಕ್ರಿಯೆಯಿಂದ ಮಂತ್ರಗಳಲ್ಲಿನ ಪ್ರತಿಯೊಂದು ವರ್ಣವೂ ದೇವೀ ವಿಭೂತಿ ರೂಪವಾದ ಅರ್ಥವನ್ನು ಬೋಧಿಸುತ್ತದೆ. ಅದರಿಂದ ದೇವತೆಯ ಸಾರ್ವಾತ್ಮ್ಯವು ವ್ಯಕ್ತವಾಗುವುದು.

ಶ್ರೀ ಭಾಸ್ಕರರಾಯಮಖಿವಿರಚಿತವಾದ ಸವ್ಯಾಖ್ಯಾನ, ವರಿವಸ್ಯಾರಹಸ್ಯವೆಂಬ ಈ ಗ್ರಂಥದಲ್ಲಿ ಪಂಚದಶೀ ವಿದ್ಯೆಯ ವರ್ಣ-ತದರ್ಥ ಮುಂತಾದ ಅಂತರಂಗಗಳು ಸಂಗ್ರಹವಾಗಿಯೂ, ಸುಲಭವಾಗಿಯೂ ವಿವರಿಸಲ್ಪಟ್ಟಿವೆ. ಋಷಿ ಛಂದೋ ದೇವತಾ ಮುಂತಾದ ಬಹಿರಂಗಗಳು ಗ್ರಂಥಾಂತರದಲ್ಲಿ ವಿವರಿಸಲ್ಪಟ್ಟಿವೆ. ಈ ಗ್ರಂಥಕಾರನು ಜ್ಞಾನ ವಿಜ್ಞಾನ ಸಂಪನ್ನನಾದ ಮಹೋಪಾಸಕನೆಂದು ಸರ್ವತಂತ್ರ ಸಮನ್ವಯ ದೃಷ್ಟಿಯಿಂದ ಕೂಡಿದ ಈ ಗ್ರಂಥ ಪ್ರಾಶಸ್ತ್ಯದಿಂದಲೂ ಅರಿಯಬಹುದು. ಇಲ್ಲಿ ಅರ್ಥಜ್ಞಾನವಿಲ್ಲದ ಅನುಷ್ಠಾನವನ್ನು ನಿಂದಿಸಿ ಮಂತ್ರ ಬೀಜಾಕ್ಷರಗಳಿಗೆ ವ್ಯಾಕರಣ ತ್ರಿಪುರೋಪನಿಷತ್ ಮುಂತಾದ ಪ್ರಮಾಣಗಳಿಗೆ ಸಮ್ಮತವಾಗುವ ಅರ್ಥಗಳನ್ನು ತೋರಿಸಿದೆ. ಮತ್ತು ವಿಸ್ತಾರವಾದ ವ್ಯಾಖ್ಯಾನ ಗ್ರಂಥದಲ್ಲಿ ಅನೇಕ ಮಂತ್ರಶಾಸ್ತ್ರ ಪ್ರಕ್ರಿಯೆಗಳನ್ನು ತೋರಿಸಿ ಶ್ರೀವಿದ್ಯೆಯ ಮಹಿಮೆಯನ್ನು ಪುಷ್ಟೀಕರಿಸಿದೆ.

ಇಂತಹ ಉತ್ತಮ ಗ್ರಂಥವು ಕೆಲವರಿಗೆ ಮಾತ್ರ ಪರಿಚಿತವಾದ ಸಂಸ್ಕೃತ ಭಾಷಾಮಯವಾಗಿದ್ದುದರಿಂದ ಹೆಚ್ಚು ಜನಗಳಿಗೆ ಜ್ಞಾನಾರ್ಜನೆಗೆ ಅನುಕೂಲವಾಗದಿರುವ ಕೊರತೆಯನ್ನು ಪರಿಹರಿಸಲು ದಯಾಮಯರಾದ ಆಳುವ ಮಹಾಸ್ವಾಮಿಯವರು ಕನ್ನಡ ಭಾಷೆಗೆ ಪರಿವರ್ತಿಸಲು ಆಜ್ಞೆಯಿತ್ತಿದ್ದಾರೆ. ಅದರಂತೆ ಸಂಸ್ಕೃತದಲ್ಲಿದ್ದ ಈ ಗ್ರಂಥವನ್ನು ಕನ್ನಡಕ್ಕೆ ಪರಿವರ್ತಿಸಿ ಪ್ರಕಾಶಪಡಿಸುತ್ತಲಿದ್ದೇನೆ. ಈ ಗ್ರಂಥವು ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸಿನವರಿಂದ ಅಂದವಾಗಿ ಮುದ್ರಿಸಲ್ಪಟ್ಟಿದೆ; ಈ ರೀತಿ ಸಂಸ್ಕೃತ ವ್ಯಾಖ್ಯಾನ ಕನ್ನಡ ಅನುವಾದಗಳಿಂದ ಕೂಡಿದ ಈ ಗ್ರಂಥವು ಪ್ರಕಾಶಕ್ಕೆ ಬಂದು ಸಜ್ಜನರ ಸೇವೆ ಮಾಡಲು ನನಗೆ ಅವಕಾಶಮಾಡಿಕೊಟ್ಟ ಮಹನೀಯರಿಗೆ ತುಂಬಾ ಕೃತಜ್ಞನಾಗಿದ್ದೇನೆ.

ಅನುವಾದಕ

ಶ್ರೀಃ

ವರಿವಸ್ಯಾರಹಸ್ಯಮ್

ಪ್ರಥಮೋಽಂಶಃ

೧

ಪ್ರಹ್ಲಾದಾಭೀಷ್ಟದಾನೇ ವಿಬುಧಸಮುದಯಸ್ತ್ರಾಯಮಾಣಾಪದಾನೇ
ಶೇಷಕ್ಷೋಣೀಭೃದಂತಃಪ್ರವಿಲಸಿತಪದಾಹೋಬಲಕ್ಷೇತ್ರಗರ್ಭಾತ್ ।
ಪ್ರಾದುರ್ಭೂತೇ ಹಿರಣ್ಯದ್ವಿರದಮತಿಮದಧ್ವಾಂತತಂತ್ರಂ ನಿಹಂತುಂ
ಧೀರೇ ಽಸಚ್ಛಾಸ್ತ್ರಯೋನೌ ಮಮ ಭುವನಗುರಾವಸ್ತು ಭಕ್ತಿರ್ನೃಸಿಂಹೇ ॥ ೧ ॥

ವರಿವಸ್ಯಾರಹಸ್ಯವ್ಯಾಖ್ಯಾನಮ್

ವಿದ್ಯಾನಾಂ ಚ ಮನೂನಾಂ ಮನುಸಂಖ್ಯಾನಾಂ ಚ ವಿದ್ಯಾನಾಮ್ ।
ಉಪದೇಷ್ಟಾ ಜಯತಿತರಾಂ ನರಸಿಂಹಾನಂದನಾಥಗುರುಃ ॥
ವರಿವಸ್ಯಾರಹಸ್ಯಾಖ್ಯೋ ಗ್ರಂಥೋ ಯಃ ಸ್ವೇನ ನಿರ್ಮಿತಃ ।
ತತ್ರ ದುರ್ಘಟಶಬ್ದಾನಾಮರ್ಥಃ ಸಂಕ್ಷಿಪ್ಯ ಕಥ್ಯತೇ ॥

ಮಂತ್ರ ಶಾಸ್ತ್ರಗಳಲ್ಲಿ ವಿಹಿತವಾದ ಅನೇಕ ಮಂತ್ರ ವಿದ್ಯೆಗಳನ್ನೂ ಇತರ ಚತುರ್ದಶ ವಿದ್ಯೆಗಳನ್ನೂ ಉಪದೇಶಮಾಡಿದ ನರಸಿಂಹಾನಂದನಾಥರೆಂಬ ಗುರುಗಳು ಸರ್ವೋತ್ಕೃಷ್ಟರಾಗಿರುವರು, ಎಂದು ವರಿವಸ್ಯಾರಹಸ್ಯ ಗ್ರಂಥದ ವ್ಯಾಖ್ಯಾನದ ಆದಿಯಲ್ಲಿ ಮಾಡಿದ ಗುರುಸ್ಮೃತಿ ರೂಪವಾದ ಮಂಗಲ ಪದ್ಯವು.

'ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್' (ಮುಂ ಉ ೨-೧೨) 'ಆಚಾರ್ಯವಾನ್ಪುರುಷೋ ವೇದ (ಛಾಂ ಉ ೬-೧೪-೨) ಇತ್ಯಾದಿ ಶ್ರುತ್ಯಾ ಗುರೂಪಸದನಸ್ಯ ತತ್ತ್ವಜ್ಞಾನಜನಕತ್ವಾತ್ಪ್ರಥಮಂ ಸಕಲಮಂತ್ರಾಧಿಷ್ಠಾತೃದೇವತಾಽಪರರೂಪಂ ಗುರುಂ ಶ್ಲೇಷೇಣ ತದ್ದೈವತಂ ನರಸಿಂಹಂ ಚ ವಿಘ್ನವಿಘಾತಾಯ ಸ್ತುವನ್ಸಂಪ್ರದಾಯಂ ತದಾಜ್ಞಯೈವ ಪ್ರವರ್ತಯತಿ :—ಪ್ರಹ್ಲಾದಾಖ್ಯೋ ದೈತ್ಯಃ, ತದಭೀಷ್ಟಾನಾಂ ದಾನಂ ಯಸ್ಮಾತ್; ಪಕ್ಷೇ ಪ್ರಕೃಷ್ಟೋ ಹ್ಲಾದೋ ಬ್ರಹ್ಮಾನಂದಃ, ತಸ್ಯ, ಅಭೀಷ್ಟಾನಾಂ ಧರ್ಮಾರ್ಥಕಾಮಾನಾಂ ಚ ದಾನಂ ಯಸ್ಮಾತ್, ತಸ್ಮಿನ್. ವಿಬುಧಾನಾಂ ದೇವಾನಾಂ ಪಂಡಿತಾನಾಂ ಚ ಸಮುದಯೇನ ಸಮುದಾಯೇನ ಸ್ತೂಯಮಾನಮುಪದಾನಂ ಪೂರ್ವಚರಿತ್ರಂ ಯಸ್ಯ ತಸ್ಮಿನ್. 'ಅಪದಾನಂ ಕರ್ಮ ವೃತ್ತಂ' ಇತ್ಯಮರಃ. ಹಿರಣ್ಯಾಖ್ಯೋ ಯೋಗ್ಯತಯಾ ಹಿರಣ್ಯಕಶಿಪುಃ, ನಾಮೈಕದೇಶೇ ನಾಮ

ವರಿವಸ್ಯಾ ರಹಸ್ಯವೆಂದು ತನ್ನಿಂದಲೇ ರಚಿತವಾದ ಗ್ರಂಥದಲ್ಲಿರುವ ಸುಲಭವಾಗಿ ಅರ್ಥವಾಗದಿರುವ ಶಬ್ದಗಳ ಅರ್ಥವನ್ನು ಸಂಕ್ಷೇಪವಾಗಿ ಬರೆಯುವೆನು, ಎಂದು ಗ್ರಂಥಕಾರನು ತನ್ನ ಧ್ಯೇಯವನ್ನು ಸ್ಪಷ್ಟಪಡಿಸಿರುವರು.

ವರಿವಸ್ಯಾರಹಸ್ಯವೆಂಬ ಮೂಲಗ್ರಂಥದ ಉಪಕ್ರಮದಲ್ಲಿ "ಪ್ರಹ್ಲಾದಾಭೀಷ್ಟದಾನೇ" ಎಂಬ ಮೊದಲನೇ ಶ್ಲೋಕವು ಮಂಗಲಪದ್ಯವು. ಇದರಲ್ಲಿ ಈ ಗ್ರಂಥವು ನಿರ್ವಿಘ್ನವಾಗಿ ಮುಗಿಯಲೆಂಬ ಕೋರಿಕೆಯಿಂದ ತನ್ನ ಉಪಾಸ್ಯ ದೇವತೆ, ಮತ್ತು ವಿದ್ಯಾಗುರು ಇಬ್ಬರಲ್ಲಿಯೂ ನರಸಿಂಹ ಎಂಬ ಒಂದೇ ಹೆಸರು ಇರುವದರಿಂದ ಶಬ್ದಶ್ಲೇಷದಿಂದ ಇಬ್ಬರನ್ನೂ ಗ್ರಂಥಕಾರನು ಸ್ತುತಿಸಿರುತ್ತಾನೆ.

ದೇವತಾ ನಮಸ್ಕಾರವು ಮುಖ್ಯವಾಗಿರುವಂತೆ "ತದ್ವಿಜ್ಞಾನಾರ್ಥಂ ಸಗುರುಮೇವಾಭಿಗಚ್ಛೇತ್, ಆಚಾರ್ಯವಾನ್ ಪುರುಷೋ ವೇದ" ಮುಂತಾದ ಶ್ರುತಿಗಳು ಗುರುಉಪಸದನವನ್ನೂ ತತ್ತ್ವಜ್ಞಾನಕ್ಕೆ ಮುಖ್ಯವಾದ ಅಂಗವೆಂದು ವಿಧಿಸಿರುವುದರಿಂದ ಗುರುವಂದನವೂ ಮುಖ್ಯವಾದುದು; ಶ್ಲೇಷವನ್ನು ಅವಲಂಬಿಸಿ ವರ್ಣನೆ ಮಾಡಿರುವ ರೀತಿಯಿಂದ ಎಲ್ಲ ಮಂತ್ರಗಳ ಅಧಿಷ್ಠಾತೃದೇವತೆಯ ಅಪರರೂಪವೇ ಗುರುವೆಂದು ಗ್ರಂಥಕಾರನ ನಂಬಿಕೆಯು ಸ್ಫುಟಪಡುತ್ತದೆ. ಹೀಗೆ ಮಂಗಲ ಪದ್ಯವನ್ನು ಗ್ರಂಥದಲ್ಲಿ ಬರೆದಿರುವುದರಿಂದ ಮಂಗಲಕರ್ತವ್ಯತೆಯಲ್ಲಿ ಸಂಪ್ರದಾಯವನ್ನು ಸೂಚಿಸಿದಂತಾಗುವುದು. ಪ್ರಹ್ಲಾದನೆಂಬ ತನ್ನ ಭಕ್ತನಾದ

ಗ್ರಹಣಾತ್; ಸ ಏವ ದ್ವಿರದಃ, ಸಿಂಹವಧ್ಯತ್ವಾತ್ ತಂ. ಕೀದೃಶಂ ತಂ? ಅತಿಶಯಿತಮದ ಏವಾಜ್ಞಾನಪರಿಣಾಮತ್ವಾದ್ಧ್ವಾಂತಂ, ತತ್ತಂತ್ರಂ ತದಧೀನಂ, ಮದಪರವಶಮಿತಿ ಯಾವತ್; ಪಕ್ಷೇ ಹಿರಣ್ಯಂ ಧನೋಪಲಕ್ಷಣಂ, ದ್ವಿರದಾಃ ಸೇನಾಂಗೋಪಲಕ್ಷಣಂ, ಮತಿರಸಚ್ಛಾಸ್ತ್ರಜ್ಞಾನಂ, ತತ್ಸಂಬಂಧೀ ಮದೋ ಯೇಷಾಂ ತೇಷಾಂ ಧ್ವಾಂತಾನಾಂ ಧ್ವಕಾರೋಽಂತೇ ಯೇಷಾಂ ನಾಮ್ನಿ ತೇಷಾಂ ಮಾಧ್ವಾನಾಂ ತಂತ್ರಂ ಶಾಸ್ತ್ರಂ ನಿಹಂತುಂ ಶೇಷಕ್ಷೋಣೀಭೃತಃ ಶೇಷಾಚಲಸ್ಯಾಂತಃ ಪ್ರವಿಲಸಿತಂ ಶೋಭಮಾನಂ ಪದಂ ಸ್ಥಾನಂ ಯಸ್ಯಾಹೋಬಲಾಖ್ಯಕ್ಷೇತ್ರಸ್ಯ ತಸ್ಯ ಗರ್ಭಾನ್ಮಧ್ಯಾತ್, ಪಕ್ಷೇ, ಅಶೇಷಾಣಾಂ ಸಮಸ್ತಾನಾಂ ಕ್ಷೋಣೀಭೃತಾಂ ರಾಜ್ಞಾಂ ಮಧ್ಯೇ ಪ್ರವಿಲಸಿತೇ ಪದೇ ಚರಣೌ ಯಸ್ಯಾಹೋಬಲಾಖ್ಯಸ್ಯ ಪುರುಷಧೌರೇಯಸ್ಯ ತಸ್ಯ ಕ್ಷೇತ್ರಂ ಪತ್ನೀ, ತಸ್ಯಾ ಗರ್ಭಾತ್, ಪ್ರಾದುರ್ಭೂತೇ; ಧೀರೇ ಧೈರ್ಯಶಾಲಿನಿ, ಪಕ್ಷೇ ಧಿಯಂ ರಾತೀತಿ ಧೀರಃ

ಅಸುರನಿಗೆ ಇಷ್ಟಾರ್ಥಗಳನ್ನು ಕೊಟ್ಟಿರುವ, ದೇವತೆಗಳ ಬೃಂದದಿಂದ ಸ್ತುತಿಸಲ್ಪಡುವ ಶ್ಲಾಘ್ಯವಾದ ಪೂರ್ವಚರಿತ್ರೆಯುಳ್ಳ, ಹಿರಣ್ಯಕಶಿಪುವೆಂಬ ಅತಿಮದಾಂಧಕಾರದಿಂದ ಮೆರೆಯುವ ಆನೆಯನ್ನು ನಿಗ್ರಹಿಸಲು ಶೇಷಾಚಲದೊಳಗಿನ ಅಹೋಬಲವೆಂಬ ಕ್ಷೇತ್ರದೊಳಗಿನಿಂದ ಪ್ರಾದುರ್ಭವಿಸಿದ, 'ಯಸ್ಯ ನಿಶ್ವಸಿತಂ ವೇದಾಃ, ಛಂದಾಂಸಿ ಜಜ್ಞಿರೇ ತಸ್ಮಾತ್' ಇತ್ಯಾದಿ ಶ್ರುತಿ ಪ್ರಮಾಣಾನುಸಾರವಾಗಿ ಸಚ್ಛಾಸ್ತ್ರಗಳ ಉತ್ಪತ್ತಿಗೆ ಕಾರಣವೂ, ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ ಎಂಬ ಶ್ರುತಿವಚನಾನುಸಾರವಾಗಿ ಸಚ್ಛಾಸ್ತ್ರಪ್ರಮಾಣಗಳಿಂದಲೇ ವೇದ್ಯವೂ ಆದ ಧೈರ್ಯ ಶಾಲಿಯಾದ, ಪ್ರಪಂಚಕ್ಕೆ ಗುರುವಾದ ನೃಸಿಂಹನೆಂಬ ಉಪಾಸ್ಯದೇವತೆಯಲ್ಲಿ ನನಗೆ ಸ್ಥಿರವಾದ ಭಕ್ತಿಯಿರಲಿ. ಎಂದು ಪ್ರಾರ್ಥನಾರೂಪವಾದ ಅರ್ಥವು ಇದರಿಂದ ತೋರುತ್ತದೆ. ತನ್ನ ವಿದ್ಯಾಗುರುಪರವಾಗಿಯೂ ಈ ಪದ್ಯವು ಅರ್ಥವನ್ನು ಬೋಧಿಸುವುದು.—ಬ್ರಹ್ಮಾನಂದ ಧರ್ಮಾರ್ಥ ಕಾಮುಗಳೆಂಬ ಸಮಸ್ತ ಪುರುಷಾರ್ಥಗಳನ್ನು ಕೊಡುವ, ಅನೇಕ ಪಂಡಿತವೃಂದದಿಂದ ಸ್ತುತಿಸಲ್ಪಡುವ ಪುಣ್ಯಚರಿತ್ರವುಳ್ಳ, ಧನ, ಸೇನಾದಿಸಹಾಯ, ಅಸಚ್ಛಾಸ್ತ್ರಜ್ಞಾನ ಇವುಗಳಿಂದ ಮದಾಂಧರಾದ ಮಧ್ವಮತಾಭಿಮಾನಿಗಳ ದ್ವೈತ ಶಾಸ್ತ್ರವನ್ನು ಖಂಡಿಸಲು ಅಶೇಷ ರಾಜಾಧಿರಾಜರ ಗೋಷ್ಠಿಯಲ್ಲಿ ಪೂಜ್ಯವಾದ ಚರಣಾಂಬುಜಗಳುಳ್ಳ ಅಹೋಬಲರೆಂಬ ಪೂಜ್ಯಪಾದರ ಪತ್ನೀ

ಪಂಡಿತಸ್ತಸ್ಮಿನ್; ಸತಾಂ ಶಾಸ್ತ್ರಾಣಾಂ ಯೋನಿಃ ಕಾರಣಂ, 'ಯಸ್ಯ ನಿಃಶ್ವಸಿತಂ ವೇದಾಃ', 'ಛಂದಾಂಸಿ ಜಜ್ಞಿರೇ ತಸ್ಮಾತ್' ಇತ್ಯಾದಿ ಶ್ರವಣಾತ್; ಸಚ್ಛಾಸ್ತ್ರಾಣ್ಯೇವ ಯೋನಿರ್ಜ್ಞಾಪಕಹೇತುರ್ಯಸ್ಯೇತಿ ವಾ 'ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ' (ಬೃ ಉ ೩-೯-೨೬) ಇತಿ ಶ್ರವಣಾತ್, ಶಾಸ್ತ್ರಯೋನಿತ್ವಾಧಿಕರಣೇ ದ್ವೇಧಾಽಪಿ ವ್ಯಾಖ್ಯಾನಾತ್; ಪಕ್ಷೇ ಸಚ್ಛಾಸ್ತ್ರಾಣಾಂ ಯೋನಿಃ ಕರ್ತಾ ಗ್ರಂಥಕರ್ತೇತಿಯಾವತ್; ತಸ್ಮಿನ್ ಭುವನಗುರೌ ನೃಸಿಂಹೇ ನರಕೇಸರಿಣಿ ನೃಸಿಂಹನಾಮಕೇ ಚ ಮಮ ಭಕ್ತಿರಸ್ತ್ವಿತಿ ಪ್ರಾರ್ಥನಾ. ಅತ್ರೋಪಮೇಯೋಪಮಾಯಾ ಉಪಮಾಯಾ ಅಭೇದಸ್ಯ ವಾ ಧ್ವನಿಃ. ಶ್ಲೇಷೋಽಲಂಕಾರಃ. ಸೋಽಪಿ ಚ ಪ್ರಕೃತೋಭಯವಿಷಯಕಃ ಸಭಂಗೋಽಭಂಗಶ್ಚ. ಸ್ರಗ್ಧರಾವೃತ್ತಂ ||೧||

ಗರ್ಭದಿಂದ ಜನಿಸಿದ, ಪಂಡಿತವರ್ಯರಾದ, ಅನೇಕ ಸಚ್ಛಾಸ್ತ್ರಗ್ರಂಥಗಳನ್ನು ರಚಿಸಿ ಪ್ರಪಂಚಕ್ಕೆ ಗುರುವಾದ ನೃಸಿಂಹರೆಂಬ ಗುರುವಿನಲ್ಲಿ ನನಗೆ ನಿಶ್ಚಲವಾದ ಭಕ್ತಿಯು ಇರಲಿ. ಎಂದು ಪ್ರಾರ್ಥನೆಯು. ಇಲ್ಲಿ ಸಮಾನವಾದ ಶಬ್ದಗಳಿಂದ ಗುರುದೇವತೆಗಳನ್ನು ವರ್ಣಿಸಿರುವುದರಿಂದ ಗುರುದೇವತೆಗಳಿಗೆ ಸಾಮ್ಯವು ತೋರುವುದಾದ್ದರಿಂದ ಉಪಮಾಲಂಕಾರವು. ಅಥವಾ ಐಕ್ಯವನ್ನು ಬೋಧಿಸುವುದರಲ್ಲಿ ಗ್ರಂಥಕಾರನ ಆಶಯವಿದ್ದ ಪಕ್ಷದಲ್ಲಿ ರೂಪಕಾಲಂಕಾರವು ಈ ಪದ್ಯದಲ್ಲಿ ಸಂಭವಿಸುವುದು. ನಾನಾರ್ಥಗಳಿರುವುದರಿಂದ ಶ್ಲೇಷಾಲಂಕಾರವೂ ಜೊತೆಯಲ್ಲಿದೆ. ಸ್ರಗ್ಧರಾ ಎಂಬ ವೃತ್ತವು. ||೧||

೨

ಆಪ್ರಾಚಃ ಕಾಮರೂಪಾದ್ ದ್ರುಹಿಣಸುತನದಪ್ಲಾವಿತಾದಾಪ್ರತೀಚೋ
ಗಾಂಧಾರಾತ್ಸಿಂಧುಸಾಂದ್ರಾದ್ರಘುವರಚರಿತಾದಾಚಸೇತೋರವಾಚಃ ।
ಆಕೇದಾರಾದುದೀಚಸ್ತುಹಿನಗಹನತಃ ಸಂತಿ ವಿದ್ವತ್ಸಮಾಜಾ
ಯೇ ಯೇ ತಾನೇಷ ಯತ್ನಃಸುಖಯತು ಸಮಜಾನ್ ಕಶ್ಚ ಮತ್ಕರ್ತುಮೀಷ್ಟೇ ॥೨॥

ಕಾಮರೂಪಗಾಂಧಾರೌ ದೇಶೌ. ಸೇತುಕೇದಾರೌ ಕ್ಷೇತ್ರೇ. ದ್ರುಹಿಣಸುತಸಿಂಧೂ ನದವಿಶೇಷೌ. ವಿದುಷಾಂ ವಿದ್ಯೋಪಾಸಕಾನಾಂ ಸಮಜಾಃ 'ನ ಶಿಲ್ಪಾದಿಜ್ಞಾನಯುಕ್ತೇ ವಿದ್ವಚ್ಛಬ್ದಃ ಪ್ರಯುಜ್ಯತೇ' ಇತ್ಯಾದಿನಾ ವಿದ್ವಚ್ಛಬ್ದಸ್ಯೋಪಾಸಕಪರತಾಯಾಸ್ತ್ರಿಶತ್ಯಾಂ (ಶ್ಲೋ ೮೫) ಪ್ರವರ್ತನಾತ್. ಸಮಜಾಃ ಪಶುಗಣಾಃ 'ಪಶೂನಾಂ ಸಮಜೋಽನ್ಯೇಷಾಂ ಸಮಾಜಃ' ಇತ್ಯಮರಃ ॥೨॥

ಅನೇಕ ದೇಶದ ವಿದ್ವಾಂಸರು ಈ ಗ್ರಂಥವನ್ನು ನೋಡಿ ನನ್ನ ಪರಿಶ್ರಮವನ್ನು ಸಾರ್ಥಕಗೊಳಿಸಬೇಕೆಂದು ಗ್ರಂಥಕಾರನು ಪ್ರಾರ್ಥಿಸುತ್ತಾನೆ. ಬ್ರಹ್ಮಪುತ್ರವೆಂಬ ನದಿಯು ಹರಿಯುತ್ತಿರುವ ಕಾಮರೂಪವೆಂಬ ಪೂರ್ವ ದಿಗಂತದ ದೇಶದವರೆಗೂ ಸಿಂಧು ನದಿಯು ಹರಿಯುವ ಗಾಂಧಾರವೆಂಬ ಪಶ್ಚಿಮದಿಗಂತ ದೇಶದವರೆಗೂ ಶ್ರೀರಾಮಚಂದ್ರನ ಸಂಚಾರದಿಂದ ಪವಿತ್ರವಾದ ದಕ್ಷಿಣದಿಗಂತದಲ್ಲಿರುವ ಸೇತುಕ್ಷೇತ್ರದವರೆಗೂ ಹಿಮಪರಿಪೂರ್ಣವಾದ ಹಿಮಾಚಲ ಪರ್ವತದ ಕೇದಾರ ಕ್ಷೇತ್ರವೆಂಬ ಉತ್ತರಾವಧಿಯವರೆಗೂ ಇರುವ ಮಂತ್ರೋಪಾಸಕರನ್ನು ತೃಪ್ತಿಪಡಿಸಲು ಈ ಗ್ರಂಥರಚನೆಯ ಪರಿಶ್ರಮವನ್ನು ಹೊಂದಿರುವೆನು. ಪಶುಪ್ರಾಯರಾದ ಇತರರನ್ನು ಸಂತೋಷಪಡಿಸುವುದು ಯಾರಿಗೆ ತಾನೇ ಸಾಧ್ಯವು? "ನಶಿಲ್ಪಾದಿಜ್ಞಾನಯುಕ್ತೇ ವಿದ್ವಚ್ಛಬ್ದಃ ಪ್ರಯ್ಯುಜತೆ" ಎಂದು ತ್ರಿಶತಿಯಲ್ಲಿ ವಿದ್ವಚ್ಛಬ್ದವನ್ನು ಉಪಾಸಕನೆಂಬ ಅರ್ಥದಲ್ಲಿ ವಿವರಿಸಿರುವುದನ್ನು ಇಲ್ಲಿ ಅಂಗೀಕರಿಸಿದೆ. ಸಮಜವೆಂದರೆ ಪಶುಗಳ ಗುಂಪೆಂದೂ ಸಮಾಜವೆಂದರೆ ಇತರ ವ್ಯಕ್ತಿಗಳ ಗುಂಪೆಂದೂ "ಪಶೂನಾಂ ಸಮಜೋಽನ್ಯೇಷಾಂ ಸಮಾಜೋಽಥ ಸಧರ್ಮಿಣಾಂ" ಎಂಬ ನಿಘಂಟುಪ್ರಮಾಣವು ಬೋಧಿಸುತ್ತಿದೆ. ॥೨॥

೩

ಸ ಜಯತಿ ಮಹಾನ್ ಪ್ರಕಾಶೋ ಯಸ್ಮಿನ್ ದೃಷ್ಟೇ ನ ದೃಶ್ಯತೇ ಕಿಮಪಿ।
ಕಥಮಿವ ತಸ್ಮಿನ್ ಜ್ಞಾತೇ ಸರ್ವಂ ವಿಜ್ಞಾತಮುಚ್ಯತೇ ವೇದೇ ॥೩॥

ಸ ಸರ್ವೇಷಾಮಾತ್ಮತ್ವೇನ ಪ್ರಸಿದ್ಧಃ ಮಹಾನ್ದೇಶಕಾಲಾದ್ಯನವಚ್ಛಿನ್ನಃ ಪರಾಪ್ರಕಾಶ್ಯಃ, ಪ್ರಕಾಶಃ ಸರ್ವದಾಽನಾವೃತಾತ್ಮಸ್ವರೂಪಜ್ಯೋತಿಃ 'ಸ್ವರೂಪಜ್ಯೋತಿರೇವಾಂತಃ' ಇತಿ ರಹಸ್ಯಾಗಮಾತ್, 'ನ ತತ್ರ ಸೂರ್ಯೋ ಭಾತಿ' (ಕ ಉ ೫-೧೫) ಇತ್ಯಾದಿಶ್ರವಣಾಚ್ಚ. ಜಯತಿ ಸರ್ವೋತ್ಕರ್ಷೇಣ ವರ್ತತೇ. ಯಸ್ಮಿನ್ನಧಿಷ್ಠಾನೇ ದೃಷ್ಟೇ ನಿರ್ವಿಕಲ್ಪಾತ್ಮಕಚರಮವೃತ್ತಿವಿಷಯೀಕೃತೇ ಸತಿ ಕಿಮಪಿ ದೃಶ್ಯಂ ನ ದೃಶ್ಯತೇ, ಅಧಿಷ್ಠಾನಜ್ಞಾನನಾಶ್ಯತ್ವಾತ್. ಅತ ಏವೈಕವಿಜ್ಞಾನೇನ ಸರ್ವವಿ

ಯಾವ ಆತ್ಮಸ್ವರೂಪಜ್ಯೋತಿಯನ್ನು ನಿರ್ವಿಕಲ್ಪ ಸಾಕ್ಷಾತ್ಕಾರದಿಂದ ಅರಿಯಲಾಗಿ ತತ್ತ್ವಜ್ಞಾನದಿಂದ ದೃಶ್ಯವಸ್ತುಗಳೆಲ್ಲವೂ ಲಯವಾಗಿ ಹೋಗುವುದರಿಂದ ಯಾವುದೂ ಜ್ಞೇಯವಾಗಿರಲಾರದೋ ಅಂತಹ, ಸರ್ವ ಪ್ರಾಣಿಗಳಿಗೆ ಆತ್ಮರೂಪವಾಗಿಯೂ, ದೇಶಕಾಲ ವಸ್ತುಗಳ ಪರಿಚ್ಛೇದ ಅತೀತವಾಗಿಯೂ, ಪರಾಧೀನ ಪ್ರಕಾಶವಲ್ಲದೇ ಸ್ವತಂತ್ರವಾಗಿಯೇ ಪ್ರಕಾಶವಾಗುವದಾಗಿಯೂ, ಇರುವ ಆತ್ಮಸ್ವರೂಪಜ್ಯೋತಿಯು ಸರ್ವೋತ್ಕೃಷ್ಟವಾಗಿರುವುದು. ಆತ್ಮಸ್ವರೂಪವು ಜ್ಯೋತಿರೂಪವು ಮತ್ತು ಪರಾಧೀನ ಪ್ರಕಾಶವಲ್ಲದ್ದು ಎಂಬುವುದಕ್ಕೆ "ಸ್ವರೂಪಜ್ಯೋತಿರೇವಾಂತಃ, ನ ತತ್ರ ಸೂರ್ಯೋ ಭಾತಿ" ಮುಂತಾದ ಆಗಮ ಶ್ರುತಿವಚನಗಳು ಪ್ರಮಾಣಗಳಾಗಿವೆ. ತತ್ತ್ವಜ್ಞಾನದಿಂದ ದೃಶ್ಯವಸ್ತುಗಳೆಲ್ಲವೂ ನಿಶ್ಶೇಷವಾಗಿ ಲಯವನ್ನು ಹೊಂದಿದರೆ ಶ್ರುತಿಯಲ್ಲಿ ಹೇಳಿರುವ "ಆತ್ಮವನ್ನು ತಿಳಿದರೆ ಎಲ್ಲವೂ ತಿಳಿದಂತಾಗುವುದು" ಎಂಬ ಮಾತು ಬಹು ಆಶ್ಚರ್ಯಕರವಾದುದು. ಮತ್ತು ವೇದಾಂತಶಾಸ್ತ್ರಜ್ಞರು "ಯೇನಾಶ್ರುತಂ ಶ್ರುತಂ ಭವತಿ" ಎಂಬ ಶ್ರುತಿವಾಕ್ಯಕ್ಕೆ ವಿವರ್ತ ವಾದವನ್ನು ಅವಲಂಬಿಸಿ ತಾತ್ಪರ್ಯವನ್ನು ಹೇಳುವರು. ಕಾರಣದಲ್ಲಿ ಮೊದಲು ಇಲ್ಲದ ಒಂದು ವಸ್ತು ಕಾರಣದಿಂದ ಹೊಸದಾಗಿ ಹುಟ್ಟಿತೆಂಬುದು ಆರಂಭವಾದವೆಂದೂ, ಕಾರಣವೇ ತನ್ನ ಮೊದಲಿನ ರೂಪವನ್ನು ಬಿಟ್ಟು ಕಾರ್ಯದ ರೂಪವನ್ನು ಪರಿಗ್ರಹಿಸಿತೆನ್ನುವುದು ಪರಿಣಾಮವಾದವೆಂದೂ, ಕಾರಣ

ಜ್ಞಾನಂ ಶ್ರುತಾವುಕ್ತಂ ಕಥಂ ಸಂಗಚ್ಛತ ಇತಿ ಸಾಶ್ಚರ್ಯಮಾಹ :— ಕಥಮಿವೇತಿ. ಅಥವಾ ವಿವರ್ತವಾದಂ ವೇದಾಂತಿಸಂಮತಂ ಪರಿಣಾಮವಾದೀ ತಾಂತ್ರಿಕೋ ದೂಷಯತಿ :—ಕಥಮಿವೇತಿ. ತನ್ಮತೇ ಮೃದ್ಘಟಾದಿದೃಷ್ಟಾಂತಾನುಪಪತ್ತಿರಿತ್ಯರ್ಥಃ. ಅತ್ರೇಯಂ ತಾಂತ್ರಿಕಪ್ರಕ್ರಿಯಾ:- 'ಇಚ್ಛಾಮಿ, ಜಾನಾಮಿ' ಇತ್ಯಾದಾವುತ್ತಮಪುರುಷಾಂತರ್ಭಾಸಮಾನಸ್ಫುರಣಾನ್ವಯಿ ಜ್ಞಾನಮೇವ ಪ್ರಕಾಶಾಭಿಧಂ ಬ್ರಹ್ಮ. ತಚ್ಚ ಸರ್ವಜ್ಞತ್ವಸರ್ವೇಶ್ವರತ್ವಸರ್ವಕರ್ತೃತ್ವಪೂರ್ಣತ್ವವ್ಯಾಪಕತ್ವಾದಿಶಕ್ತಿಸಂವಲಿತಂ. ತಸ್ಯ ಚಾನಂದರೂಪಾಂಶ ಏವ ಸ್ಫುರಣಂ, ಪರಾಽಹಂತಾ, ವಿಮರ್ಶಃ, ಪರಾ ಲಲಿತಾ, ಭಟ್ಟಾರಿಕಾ, ತ್ರಿಪುರಸುಂದರೀತ್ಯಾದಿಪದೈರ್ವ್ಯವಹ್ರಿಯತೇ. ಉಕ್ತಂ ಚ ವಿರೂಪಾಕ್ಷಪಂಚಾಶಿಕಾಯಾಂ ವಿಶ್ವಶರೀರಸ್ಕಂಧೇ-' ಈಶ್ವರತಾ ಕರ್ತೃತ್ವಂ ಸ್ವತಂತ್ರತಾ ಚಿತ್ಸ್ವರೂಪತಾ ಚೇತಿ | ಏತೇಽಹಂತಾಯಾಃ ಕಿಲ ಪರ್ಯಾಯಾಃ ಸದ್ಭಿರುಚ್ಯಂತೇ'॥ ಇತಿ |

ಸ್ವರೂಪವೇ ತತ್ತ್ವದಿಂದಿರುವಾಗ ಗೃಹೀತೃಗಳ ಅಜ್ಞಾನ ಸಂಸ್ಕಾರಗಳಿಂದ ಕಾರ್ಯಾಕಾರಗಳಿಂದ ತೋರುವುದೆಂಬುದು ವಿವರ್ತವಾದವೆಂದೂ ವ್ಯವಹರಿಸಲ್ಪಟ್ಟವೆ. ಇಂತಹ ವಿವರ್ತವಾದವು ಯುಕ್ತಿ ಯುಕ್ತವಲ್ಲವೆಂದು ತಂತ್ರಶಾಸ್ತ್ರಗಳ ಸಿದ್ಧಾಂತವು. ಶ್ರುತಿಯಲ್ಲಿ ಒಂದು ಮಣ್ಣಿನ ವಸ್ತುವನ್ನು ನೋಡಿದರೆ ಮಣ್ಣಿನ ಪದಾರ್ಥಗಳನ್ನೆಲ್ಲ ಕಂಡಂತೆ ಆತ್ಮವಸ್ತು ಸಾಕ್ಷಾತ್ಕಾರದಿಂದ ಪ್ರಪಂಚವೆಲ್ಲವೂ ತಿಳಿಯಲ್ಪಡುವುದೆಂದು ಮಣ್ಣುಗಡಿಗೆಗಳ ದೃಷ್ಟಾಂತವನ್ನು ಕೊಟ್ಟು ಪ್ರತಿಪಾದಿಸಲ್ಪಟ್ಟಿದೆ. ಮಣ್ಣಿನಿಂದ ಗಡಿಗೆಯು ಪರಮಾರ್ಥವಾಗಿ ಹುಟ್ಟಿ ವಸ್ತುವೆನಿಸಿರುವುದರಿಂದ ಪರಿಣಾಮವಾದಕ್ಕೆ ಇದು ಸರಿಯಾಗುವುದೇ ಹೊರತು ವಿವರ್ತವಾದಕ್ಕೆ ಅನ್ವಯಿಸಲಾರದು. ಆದ್ದರಿಂದ ಯುಕ್ತಿ ಅನುಭವಗಳಿಗೆ ಹೊಂದಿಕೆಯಾಗಿರುವ ಪರಿಣಾಮವಾದ ಪ್ರಕ್ರಿಯೆಯನ್ನು ನಾವು ಸಿದ್ಧಾಂತವಾಗಿ ನಂಬಬಹುದು. ತಂತ್ರಶಾಸ್ತ್ರಗಳ ಪ್ರಕ್ರಿಯೆಯು ಈ ರೀತಿಯಾಗಿದೆ— ನಾನು ತಿಳಿಯುವೆನು, ಆಶಿಸುವೆನು, ಮುಂತಾದ ಜ್ಞಾನಗಳು ಹುಟ್ಟುವಾಗ ತಾನು ಎಂಬ ರೂಪದಲ್ಲಿ ಭಾಸವಾಗುವ ವಸ್ತುವು ಪ್ರಕಾಶ ಸ್ವರೂಪವಾದ ಬ್ರಹ್ಮವು, ಆ ವಸ್ತುವು ಸ್ಫುರಿಸುವಾಗ ಸರ್ವಜ್ಞತ್ವ, ಸರ್ವೇಶ್ವರತ್ವ, ಸರ್ವಕರ್ತೃತ್ವ, ಪೂರ್ಣತ್ವ, ವ್ಯಾಪಕತ್ವ, ಮುಂತಾದ ಅನೇಕ ಶಕ್ತಿಗಳಿಂದ ಸಹಿತವಾಗಿಯೇ ಗೋಚರವಾಗುವುದು, ಅದರಲ್ಲಿ ಸೇರಿದ ಆನಂದಾಂಶಕ್ಕೆ ಅಹಂತಾ,

ಪರಾಹಂತಾಮಂತರೇಣೇದಂತಾಯಾ ಅಸಂಸ್ಫುರಣಾದಹಮಿದಮೋಃ ಸಸಂಬಂಧಿಕತ್ವಾದಿದಂಪದಗಮ್ಯಸ್ಯ ದೃಶ್ಯಸ್ಯಾಹಂತಾರೂಪಶಕ್ತ್ಯಾ ತದ್ವಿಶಿಷ್ಟ ಬ್ರಹ್ಮಣಾ ವಾ ಜನ್ಯತ್ವಂ, ತಚ್ಚ ದೃಶ್ಯಂ ತತ್ಪರಿಣಾಮ ಏವ, 'ತಸ್ಯಾಂ ಪರಿಣತಾಯಾಂ ತು ನ ಕಶ್ಚಿತ್ಪರ ಇಷ್ಯತೇ' ಇತಿ ವಾಮಕೇಶ್ವರತಂತ್ರಾತ್. 'ವಾಚಾಽಽರಂಭಣಂ ವಿಕಾರಃ '(ಛಾಂ ಉ ೬-೧-೪) ಇತ್ಯಾದಿ ಶ್ರುತೀನಾಂ ತತ್ರೈವ ಸ್ವಾರಸ್ಯಾಚ್ಚ. ಶಕ್ತಿಶಕ್ತಿಮತೋರುಪಾದಾನೋಪಾದೇಯಯೋರತ್ಯಂತಮಭೇದಃ ನ ಪುನರೌಪನಿಷದಾದಿವದ್ಭೇದಾಭೇದೌ. ಅತ ಏವ 'ಸರ್ವಂ ಖಲ್ವಿದಂ ಬ್ರಹ್ಮ' (ಛಾಂ ಉ ೩-೧೪-೧) ಇತಿ ಸಾಮಾನಾಧಿಕರಣ್ಯಮಭೇದೇ, ನ ಪುನರ್ಬಾಧಾಯಾಂ. ಅದ್ವೈತಶ್ರುತಯಃ ಸರ್ವಾ ಅಪ್ಯೇತದಭಿಪ್ರಾಯಿಕಾ ಏವಾವಿರುದ್ಧಾಃ. ಸರ್ವಪ್ರಮಾಣಮೂರ್ಧನ್ಯಯಾ ಶ್ರುತ್ಯಾ ತದನುಸಾರಿಭಿಸ್ತಂತ್ರೈಶ್ಚಾದ್ವೈತೇ ಕಥಿತೇ, ತದ್ವಿರುದ್ಧತ್ವೇನ ಭಾಸಮಾನಃ ಕಾರ್ಯಕಾರಣಯೋರ್ಭೇ

ವಿಮರ್ಶ, ಭಟ್ಟಾರಿಕಾ, ತ್ರಿಪುರ ಸುಂದರೀ, ಪರಾ, ಲಲಿತಾ, ಮುಂತಾದ ಹೆಸರುಗಳೂ ಇವೆ. ಈಶ್ವರತಾ ಕರ್ತೃತ್ವಂ ಸ್ವತಂತ್ರತಾ ಚಿತ್ಸ್ವರೂಪತಾ ಚೇತಿ. ಏತೇಽಹಂತಾಯಾಃ ಕಿಲ ಪರ್ಯಾಯಾಃ ಸದ್ಭಿರುಚ್ಯಂತೇ. " ಎಂಬ ವಿರೂಪಾಕ್ಷ ಪಂಚಾಶಕೆಯವಚನದಂತೆ ಮೇಲೆ ಹೇಳಿದ ಹೆಸರುಗಳೆಲ್ಲವೂ ಒಂದೇ ಅರ್ಥದಲ್ಲಿರುವುವೆಂದು ತಿಳಿಯುವುದು. ಪರಮಾತ್ಮನಿಂದ ದೃಶ್ಯ ಪ್ರಪಂಚವು ಹುಟ್ಟಬೇಕಾದರೆ ಮೇಲೆ ಹೇಳಿದ ಅಹಂತೆಯೆಂಬ ಶಕ್ತಿಯ ಸಹಾಯವೂ ಬೇಕಾಗುವುದು. ದೃಶ್ಯವಸ್ತುಗಳ ವ್ಯವಹಾರವು ಅಹಂತೆಯಸ್ಪರ್ಶವಿಲ್ಲದೇ ಸ್ವತಂತ್ರವಾಗಿ ಬರಲಾರದಾದ್ದರಿಂದ ಶಕ್ತಿಬ್ರಹ್ಮ ವಸ್ತುಗಳ ಸಂಪರ್ಕದಿಂದ ಪ್ರಪಂಚವು ಜನ್ಮತಾಳಿದೆಯೆಂದು ಮನಗಾಣಬಹುದು. ಹೀಗೆ ಶಕ್ತಿವಿಶಿಷ್ಟವಾದ ಬ್ರಹ್ಮವು ದೃಶ್ಯಸ್ವರೂಪವನ್ನು ಹೊಂದಿದೆಯೆಂಬುವುದು ಪರಿಣಾಮವಾದವು. ತಸ್ಯಾಂಪರಿಣತಾಯಾಂ ತು ನ ಕಶ್ಚಿತ್ಪರೇ ಇಷ್ಯತೆ ಎಂಬ ವಾಮಕೇಶ್ವರ ತಂತ್ರವಚನವನ್ನೂ ವಾಚಾರಂಭಣಂ ವಿಕಾರೋ ನಾಮಧೇಯಂ ಎಂಬ ಶ್ರುತಿವಚನದ ಸ್ವಾರಸ್ಯವನ್ನೂ ಪ್ರರ್ಯಾಲೋಚಿಸಿದಲ್ಲಿ ದೃಶ್ಯವಸ್ತುಗಳೆಲ್ಲವೂ ಕಾರಣದ ಪರಿಣಾಮಗಳೆದು ವ್ಯಕ್ತವಾಗುವುದರಿಂದ ಪರಿಣಾಮವಾದದ ಯುಕ್ತತೆಯೂ ವಿವರ್ತವಾದದ ಅಯುಕ್ತತೆಯೂ ವ್ಯಕ್ತವಾಗುವುವು. ಶಕ್ತಿ ಮತ್ತು ಶಕ್ತಿಸಹಿತ ವಸ್ತುಗಳಿಗೆ ಅಭೇದವನ್ನು ಒಪ್ಪಬೇಕು. ವೇದಾಂತಿಮತದಂತೆ ಭೇದ ಭೇದಗಳನ್ನು ಒಪ್ಪುವದೂ

ದಾಂಶ ಏವ ಕಲ್ಪಿತ ಆಸ್ತಾಂ ನ ಪುನಃ ಸರ್ವೋಽಪಿ ಪ್ರಪಂಚಃ. 'ನೇಹ ನಾನಾಽಸ್ತಿ ಕಿಂಚನ'(ಬೃ ಉ ೪.೪-೧೯) ಇತ್ಯಾದಿ ಶ್ರುತಿಷ್ವಪಿ ಭೇದಾಂಶಸ್ಯೈವ ನಿಷೇಧೋ ನ ಪ್ರಪಂಚಸ್ಯ.' ಏಕಮೇವಾದ್ವಿತೀಯಂ ' ಇತ್ಯಾದಾ ಶ್ರೂಯಮಾಣೋ ಭೇದವತ್ಪ್ರಪಂಚಾಭಾವೋಽಪಿ ವಿಶೇಷಣಾಭಾವಪ್ರಯುಕ್ತ ಏವ. ಅತ ಏವ ಭಾಮತ್ಯಾಂ ಹಾಟಕಮುಕುಟಗ್ರಂಥೇ ಭೇದಸ್ಯೈವಹಾಟಕನ್ಯೂನಸತ್ತಾಕತ್ವಂ ನ ಮುಕುಟಸ್ಯೋಕ್ತಂ, ಪರಿಣಾಮಸ್ಯ ಪರಿಣಾಮಿಸಮಾನಸತ್ತಾಕತ್ವಾವಶ್ಯಕತ್ವಾತ್. 'ಮಾಯಾಮಾತ್ರಮಿದಂ ದ್ವೈತಂ' (ಗೌಡ ೧-೧೭) ಇತ್ಯತ್ರಾಪಿ ದ್ವೈತಶಬ್ದೇನ ಭೇದಸ್ಯೈವ ಮಿಥ್ಯಾತ್ವಮುಚ್ಯತೇ, ನ ಪುನರ್ಭೇದವತಃ. ತಥಾತ್ವೇ ತು ಪ್ರತಿಯೋಗಿತಾಸಂಬಂಧೇನ ಜಗತ ಇವಾನುಯೋಗಿತಾಸಂಬಂಧೇನ ಬ್ರಹ್ಮಣೋಽಪಿ ಭೇದವತ್ತ್ವಸ್ಯ ಸತ್ತ್ವಾತ್ಸದಸದ್ಭ್ಯಾಮಭಾವೋ ನಿರೂಪ್ಯತ ಇತಿ ನ್ಯಾಯಸಿದ್ಧತ್ವಾವಿಶೇಷಾನ್ಮಿಥ್ಯಾತ್ವಾಪತ್ತೇಃ. ತತಶ್ಚ ಶ್ರುತೇರಪಿ ಪರಿಣಾಮ

ಪ್ರಪಂಚಕ್ಕೆ ಬ್ರಹ್ಮವ್ಯತಿರಿಕ್ತವಾದ ಸ್ವರೂಪವೇ ಇಲ್ಲವೆಂದು ಹೇಳುವುದೂ ಸರಿಯಲ್ಲ, "ಸರ್ವಂಖಲ್ವಿದಂಬ್ರಹ್ಮ" ಎಂಬ ಉಪನಿಷತ್ತು ಪರಿಣಾಮಪ್ರಕ್ರಿಯೆಯನ್ನನುಸರಿಸಿ ಬ್ರಹ್ಮ-ಪ್ರಪಂಚಗಳಿಗೆ ಅಭೇದವನ್ನು ಹೇಳುತ್ತದೆ. ಹೀಗೆ ಅದ್ವೈತ ಶ್ರುತಿಗಳಿಗೆ ಪರಿಣಾಮವಾದದ ಅಭಿಪ್ರಾಯವನ್ನು ಹೇಳುವುದರಿಂದ ಯಾವ ವಿರೋಧವೂ ಇಲ್ಲ. ಸರ್ವ ಪ್ರಮಾಣಗಳಿಗೂ ಉತ್ತಮವಾದ ಶ್ರುತಿಗಳೂ ತದನುಸಾರಿಗಳಾಗಿ ಇರುವ ತಂತ್ರಶಾಸ್ತ್ರಗಳೂ ಅದ್ವೈತವನ್ನು ಪ್ರತಿಪಾದಿಸುವುದರಿಂದ ಅದಕ್ಕೆ ವಿರುದ್ಧವಾಗಿ ತೋರುವ ಕಾರ್ಯಕಾರಣಗಳ ಭೇದಾಂಶವು ಮಾತ್ರ ಕಲ್ಪಿತವೂ ಅಸತ್ಯವೂ ಆಗಬಹುದು. ಪ್ರಪಂಚವನ್ನೇ ಅಸತ್ಯವೆಂದು ಹೇಳುವುದು ಆವಶ್ಯಕವಲ್ಲ. "ನೇಹ ನಾನಾಸ್ತಿಕಿಂಚನ" ಎಂಬ ವಚನವು ಭೇದಾಂಶವನ್ನು ಮಾತ್ರ ನಿಷೇಧಮಾಡುವುದೇ ವಿನಹ ವಸ್ತುವನ್ನು ನಿಷೇಧಿಸುವುದಿಲ್ಲ. "ಏಕಮೇವಾದ್ವಿತೀಯಂ" ಎಂಬ ವಾಕ್ಯವು ಯಥಾಶ್ರುತವಾಗಿ ಭೇದವುಳ್ಳ ದ್ವಿತೀಯವಸ್ತುವು ಪರಮಾತ್ಮನಲ್ಲಿಲ್ಲವೆಂದು ಬೋಧಿಸಿದರೂ ದ್ವಿತೀಯವಸ್ತುವಿನಲ್ಲಿ ವಿಶೇಷಣವಾದ ಭೇದವಿಲ್ಲವೆಂದೂ ಆದ್ದರಿಂದಲೇ ಭೇದಸಹಿತವಾಗಿ ದ್ವಿತೀಯವಸ್ತು ಬ್ರಹ್ಮನಲ್ಲಿರಲಾರದಾದ್ದರಿಂದ ಬ್ರಹ್ಮವು ಅಂತಹ ದ್ವಿತೀಯವಸ್ತು ಶೂನ್ಯವಾಗಿದೆಯೆಂದೂ ಹೇಳುವುದೂ ತುಂಬ ಸಮಂಜಸವಾಗುವುದು. ಸೂತ್ರಭಾಷ್ಯಕ್ಕೆ ವ್ಯಾಖ್ಯಾನವಾಗಿರುವ ಭಾಮತೀ ಗ್ರಂಥದಲ್ಲಿ ಕೂಡ ಚಿನ್ನ ಮತ್ತು ಅದರಿಂದಾದ

ವಾದ ಏವ ಸಂಮತಃ ಸಿದ್ಧ್ಯತಿ. ಭಗವತಾ ವ್ಯಾಸೇನಾಪಿ 'ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾಂತಾನುಪರೋಧಾತ್' (ಬ್ರ ಸೂ ೧-೪-೧೩) ಇತ್ಯಸ್ಮಿನ್ನಧಿಕರಣ ಏಕವಿಜ್ಞಾನೇನ ಸರ್ವವಿಜ್ಞಾನ ಪ್ರತಿಜ್ಞಾಂ ಮೃದ್ಘಟನ-ಖನಿಕೃಂತನಾದಿದೃಷ್ಟಾಂತಂ 'ಬಹು ಸ್ಯಾಂ ಪ್ರಜಾಯೇಯ' (ತೈ ಉ ೨-೭) ಇತ್ಯಭಿಧ್ಯೋಪದೇಶಾದಿಕಂ ಚಾನುಸಂದಧಾನೇನ ಪರಿಣಾಮವಾದ ಏವಾಭಿಪ್ರೇತಃ, ಕಂಠರವೇಣೋಕ್ತಶ್ಚ 'ಆತ್ಮಕೃತೇಃ ಪರಿಣಾಮಾತ್' (ಬ್ರ ಸೂ ೧-೪-೨೬) ಇತಿ ಸೂತ್ರೇ. ಭಾಷ್ಯಕಾರೈರಪಿ ತತ್ರ ವಿವರ್ತವಾದಾನುಸಾರೇಣ ವ್ಯಾಚಕ್ಷಾಣೈರಪಿ ಸೌಂದರ್ಯಲಹರ್ಯಾಂ 'ಮನಸ್ತ್ವಂ ವ್ಯೋಮ ತ್ವಂ' (೩೫) ಇತಿ ಶ್ಲೋಕೇ 'ತ್ವಯಿ ಪರಿಣತಾಯಾಂ' ಇತಿ ಸ್ವಾಭಿಮತಃ ಪರಿಣಾಮವಾದ ಏವ ಸ್ಫುಟೀಕೃತಃ. ಅಸ್ಮಿನ್ಪಕ್ಷೇ ರಹಸ್ಯನಾಮಸಹಸ್ರೇ 'ಮಿಥ್ಯಾಜಗದಧಿಷ್ಠಾನಾ' (೭೩೫) ಇತ್ಯಾದೌ ಶ್ರೂಯಮಾಣಂ ಮಿಥ್ಯಾತ್ವಂ ತು ಸ್ವಾನತಿರಿಕ್ತರೂಪತ್ವಂ,

ಕಿರೀಟವೆಂಬ ಒಡವೆ, ಇವೆರಡರಲ್ಲಿ ಒಡವೆಯಲ್ಲಿ ಕಾಣುವ ಚಿನ್ನದ ಭೇದ ಮಾತ್ರವೇ ಕಲ್ಪಿತವೆಂದು ಹೇಳಿದೆ. ಕಿರೀಟವನ್ನು ಕಲ್ಪಿತವಾದುದೆಂದು ಹೇಳಿಲ್ಲ. ಕಾರಣವೂ ಮತ್ತು ಅದರ ಪರಿಣಾಮವಾದ ಕಾರ್ಯವೂ ಒಂದೇ ವಿಧದ ಸತ್ಯತೆಯುಳ್ಳವುಗಳಾಗಿವೆ, ಅವುಗಳ ಭೇದಾಂಶವು ಕಲ್ಪಿತವೆನ್ನುವುದರಲ್ಲಿ ಬಾಧಕವಿಲ್ಲ. ಇದೇ ಯುಕ್ತಿಯಿಂದ "ಮಾಯಾಮಾತ್ರಮಿದಂದ್ವೈತಂ" ಎಂಬ ಗೌಡಪಾದ ಕಾರಿಕೆಯಲ್ಲಿಯೂ ಭೇದವನ್ನೇ ಮಾಯಾಸ್ವರೂಪವೆಂದು ಹೇಳಿದೆ, ಭೇದವುಳ್ಳದ್ದನ್ನೂ ಮಿಥ್ಯಾವಸ್ತುವೆಂದು ಕರೆದರೆ ಬ್ರಹ್ಮ-ಪ್ರಪಂಚಗಳ ಪರಸ್ಪರ ಭೇದವು ಪ್ರತಿಯೋಗಿತಾ ಎಂಬ ಸಂಬಂಧದಿಂದ ಪ್ರಪಂಚದಲ್ಲಿರುವಂತೆ ಅನುಯೋಗಿತಾ ಎಂಬ ಸಂಬಂಧದಿಂದ ಬ್ರಹ್ಮವಸ್ತುವಿನಲ್ಲಿಯೂ ಇರುವುದರಿಂದ ಜಗತ್ತಿನಂತೆ ಬ್ರಹ್ಮವಸ್ತುವಿಗೂ ಅಸತ್ಯತ್ವವು ಪ್ರಸಕ್ತವಾಗುವುದು. ಶ್ರುತಿಗಳಿಗೆ ಕೂಡ ಈ ಯುಕ್ತಿಗಳಿಂದ ಪರಿಣಾಮವಾದವೇ ಸಮ್ಮತವಾಗಿರುವುದನ್ನು ಕಂಡು ವ್ಯಾಸಮುನಿಗಳೂ "ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾಂತಾನುಪರೋಧಾತ್" ಎಂಬ ಅಧಿಕರಣದಲ್ಲಿ ಆತ್ಮವಸ್ತು ಒಂದರ ಜ್ಞಾನದಿಂದಲೇ ಸರ್ವ ವಸ್ತುಜ್ಞಾನವುಂಟಾಗುವುದೆಂಬ ಉಪನಿಷತ್ತಿನ ಪ್ರತಿಜ್ಞಾ ವಾಕ್ಯವನ್ನೂ, ಮಣ್ಣು ಗಡಿಗೆಗಳ ದೃಷ್ಟಾಂತದ ಉಲ್ಲೇಖವನ್ನೂ, "ಬಹುಸ್ಯಾಂಪ್ರಜಾಯೇಯ" ಎಂಬ ಅನೇಕ ರೂಪವನ್ನು ತಾಳುವೆನೆಂಬ ಆತ್ಮವಸ್ತುವಿನ ಸಂಕಲ್ಪವನ್ನೂ ಎತ್ತಿ ತೋರಿಸುವುದರ ಮೂಲಕ

ಘಟಾದಿರೂಪೇಣಾನಿತ್ಯತ್ವಂ ಬ್ರಹ್ಮರೂಪೇಣ ನಿತ್ಯತ್ವಂ, ಮೃದ್ಘಟಯೋರ ಭೇದೇಽಪಿ ಘಟರೂಪೇಣ ಧ್ವಸ್ತತ್ವಂ ಮೃದ್ರೂಪೇಣಾಧ್ವಸ್ತತ್ವಂ ಚೇತ್ಯಾದಿ ವದ್ವಿರುದ್ಧಧರ್ಮನಿರಾಸಾದಿಕಮೂಹ್ಯಮಿತ್ಯಾದಿಕಃ ಶಾಂಭವಾನಂದ ಕಲ್ಪಲತಾಯಾಂ ವಿಸ್ತರಃ ||೩||

ಪರಿಣಾಮವಾದದಲ್ಲಿಯೇ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಇಷ್ಟೇ ಅಲ್ಲದೇ "ಆತ್ಮಕೃತೇಃ ಪರಿಣಾಮಾತ್" ಎಂಬ ಸೂತ್ರದಲ್ಲಿ ಸ್ಪಷ್ಟವಾಗಿ ಪರಿಣಾಮವಾದವನ್ನು ಹೇಳಿರುತ್ತಾರೆ. ಶ್ರೀ ಶಂಕರ ಭಗವತ್ಪಾದಾಚಾರ್ಯರು ವಿವರ್ತವಾದವೆಂಬ ಸಿದ್ಧಾನ್ತವನ್ನವಲಂಬಿಸಿ ಶಾರೀರಕ (ವ್ಯಾಸಸೂತ್ರ) ಭಾಷ್ಯದಲ್ಲಿ ವಿವರಣೆಯನ್ನು ಮಾಡಿದರೂ ಸೌಂದರ್ಯಲಹರೀ ಗ್ರಂಥದ "ಮನಸ್ತ್ವಂ ಎಂಬ ಶ್ಲೋಕವನ್ನು ತ್ವಯಿಪರಿಣತಾಯಾಂ" ಎಂದು ಮುಗಿಸಿರುವುದರಿಂದ ಪರಿಣಾಮವಾದದಲ್ಲಿರುವ ತಮ್ಮ ಸೂಕ್ತಾಭಿಪ್ರಾಯವನ್ನು ಸ್ಪಷ್ಟ ಪಡಿಸಿರುತ್ತಾರೆ. ಸಹಸ್ರನಾಮದಲ್ಲಿರುವ "ಮಿಥ್ಯಾಜಗದಧಿಷ್ಠಾನಾ" ಎಂಬಲ್ಲಿ ಜಗತ್ತಿನಲ್ಲಿ ಹೇಳಿರುವ ಮಿಥ್ಯಾತ್ವವನ್ನು ಬ್ರಹ್ಮಾವ್ಯತಿರಿಕ್ತ ರೂಪವಾಗಿ ಪ್ರಪಂಚವು ಇದೆಯೆಂಬ ತಾತ್ಪರ್ಯದಲ್ಲಿಟ್ಟುಕೊಳ್ಳಬೇಕು. ಗಡಿಗೆಯು ತನ್ನ ರೂಪದಿಂದ ಮಿಥ್ಯಾಭೂತವಾದುದೂ ಬ್ರಹ್ಮವೆಂಬ ಕಾರಣರೂಪದಿಂದ ನಿತ್ಯವಾದುದೂ ಆಗಿದೆಯೆಂದು ಅಂಗೀಕರಿಸಿ ನಿತ್ಯತ್ವ ಅನಿತ್ಯತ್ವಗಳು ಪರಸ್ಪರ ವಿರುದ್ಧ ಧರ್ಮಗಳಾಗಿರುವುದರಿಂದ ಒಂದು ವಸ್ತುವಿನಲ್ಲಿ ಬರಲಾರವೆಂದು ಮೊದಲಾದ ಶಂಕೆಗಳಿಗೆ ಸಮಾಧಾನ ಮಾಡಿಕೊಳ್ಳಬೇಕು || ೩ ||

೪

ನೈಸರ್ಗಿಕೀ ಸ್ಫುರತ್ತಾ ವಿಮರ್ಶರೂಪಾಽಸ್ಯ ವರ್ತತೇ ಶಕ್ತಿಃ ।
ತದ್ಯೋಗಾದೇವ ಶಿವೋ ಜಗದುತ್ಪಾದಯತಿ ಪಾತಿ ಸಂಹರತಿ ॥ ೪ ॥

ಇಮಮೇವಾರ್ಥಂ ಶ್ಲೋಕದ್ವಯೇನಾಹ–ಇಹೋತ್ಪಾದನಾದಿ ತ್ರಯಂ ತಿರೋಧಾನಾನುಗ್ರಹಯೋರುಪಲಕ್ಷಣಮ್ ॥೪॥

ಪ್ರಪಂಚದ ಉತ್ಪತ್ತಿ ಸ್ಥಿತಿ ಸಂಹಾರ ತಿರೋಧಾನ ಅನುಗ್ರಹಗಳೆಂಬ ಐದು ಕಾರ್ಯಗಳನ್ನು ನಿರ್ವಹಿಸುವ ಶಿವನಿಗೆ ಸಹಾಯವಾಗಿರುವ ಸ್ಫುರಣ ಮತ್ತು ವಿಮರ್ಶವೆಂದೆನಿಸುವ ಶಕ್ತಿಯು ನೈಸರ್ಗಿಕವಾದುದು ॥ ೪ ॥

೫

ಸಾವಶ್ಯಂ ವಿಜ್ಞೇಯಾ ಯತ್ಪರಿಣಾಮಾದಭೂದೇಷಾ ।
ಅರ್ಥಮಯೀ ಶಬ್ದಮಯೀ ಚಕ್ರಮಯೀ ದೇಹಮಯ್ಯಪಿ ಚ ಸೃಷ್ಟಿಃ॥ ೫ ॥

ಅವಶ್ಯಂ ಸರ್ವವಿಜ್ಞಾನಸಾಧನತ್ವಾನ್ಮೋಕ್ಷಾದಿಪುರುಷಾರ್ಥಪ್ರದತ್ವಾಚ್ಚ. ಅರ್ಥಮಯೀ ಶಿವಾದಿಕ್ಷಿತ್ಯಂತಷಟ್ತ್ರಿಂಶತ್ತತ್ತ್ವರೂಪಾ. ಶಬ್ದಮಯೀ ಪರಾಽಽದಿವೈಖರ್ಯಂತಾ. ಚಕ್ರಮಯೀ ಬಿಂದ್ವಾದಿಭೂಗೃಹಾಂತಾ. ದೇಹಮಯೀ ಸೂಕ್ಷ್ಮಾದಿಸ್ಥೂಲಾಂತಾ ॥೫॥

ಸದಾಶಿವ ತತ್ತ್ವ ಮೊದಲಾಗಿ ಮೂವತ್ತಾರು ತತ್ತ್ವರೂಪವಾದ ಅರ್ಥಗಳು, ಪರಾ ಪಶ್ಯಂತೀ ಮಧ್ಯಮಾ ವೈಖರೀ ಎಂಬ ಶಬ್ದಗಳು, ಬಿಂದು ಮೊದಲಾದ ಭೂಗೃಹಪರ್ಯಂತ ಚಕ್ರಗಳು, ಸ್ಥೂಲ ಸೂಕ್ಷ್ಮದೇಹಗಳು ಎಂಬ ಈ ವಿಧವಾದ ಸಮಸ್ತ ಸೃಷ್ಟಿಯೂ ಶಕ್ತಿಯ ಪರಿಣಾಮದಿಂದಾಗಿರುವುದರಿಂದ ಅಂತಹ ಶಕ್ತಿಯ ಜ್ಞಾನವು ವಿಶ್ವದಜ್ಞಾನ ಮತ್ತು ಮೋಕ್ಷ ಪುರುಷಾರ್ಥಗಳಿಗೆ ಸಾಧನವಾಗಿರುವುದರಿಂದ ಶಕ್ತಿಯನ್ನು ತಿಳಿಯಬೇಕಾದುದು ಅತ್ಯವಶ್ಯವಾದುದು ॥ ೫ ॥

೬

ತಜ್ಜ್ಞಾನಾರ್ಥಮುಪಾಯಾ ವಿದ್ಯಾ ಲೋಕೇ ಚತುರ್ದಶ ಪ್ರೋಕ್ತಾಃ।
ತೇಷ್ವಪಿ ಚ ಸಾರಭೂತಾ ವೇದಾಸ್ತತ್ರಾಪಿ ಗಾಯತ್ರೀ ॥ ೬ ॥

ಚತುರ್ದಶ ವಿದ್ಯಾಃ ಚತ್ವಾರೋ ವೇದಾಃ ಷಡಂಗಾನಿ ನ್ಯಾಯೋ ಮೀಮಾಂಸಾ ಪುರಾಣಂ ಧರ್ಮಶಾಸ್ತ್ರಂ ಚೇತಿ ತಂತ್ರಾಣಾಂ ಧರ್ಮಶಾಸ್ತ್ರೇಽಂತರ್ಭಾವಃ. ತೇಷಾಂ ಪ್ರಾಮಾಣ್ಯಸಮರ್ಥನಂ ತ್ವಸ್ಮದೀಯೇ ತ್ರಿಪುರಸುಂದರೀಬಾಹ್ಯವರಿವಸ್ಯಾವಿಧೌ ದ್ರಷ್ಟವ್ಯಂ. ತಂತ್ರರಾಜವ್ಯಾಖ್ಯಾನೇ ಚ ವಿಸ್ತರೇಣ ತಂತ್ರಾಣಾಂ ಧರ್ಮಶಾಸ್ತ್ರೇಽಂತರ್ಭಾವಃ ಪ್ರಪಂಚಯಿಷ್ಯತೇ. ಏವಂ ಚ ನ ಶಿಷ್ಟಾಕೋಪಾಧಿಕರಣಸ್ಥವಾರ್ತಿಕವಿರೋಧಃ, ಶಾಸ್ತ್ರಪರಿಮಾಣಾನತಿಕ್ರಮಾತ್ ॥೬॥

ನಾಲ್ಕು ವೇದಗಳು, ಶಿಕ್ಷಾ ವ್ಯಾಕರಣ ಕಲ್ಪ ನಿರುಕ್ತ ಜ್ಯೋತಿಷ ಛಂದಸ್ಸು ಎಂಬ ಷಡಂಗಳು, ನ್ಯಾಯ-ಮೀಮಾಂಸಾ-ಧರ್ಮಶಾಸ್ತ್ರ-ಪುರಾಣಗಳೆಂಬ ನಾಲ್ಕು ಶಾಸ್ತ್ರಗಳು ಒಟ್ಟಾಗಿ ಈ ಹದಿನಾಲ್ಕು ವಿದ್ಯೆಗಳು ಆ ಶಕ್ತಿಯ ಜ್ಞಾನಕ್ಕೆ ಉಪಾಯಗಳಾಗಿವೆ. ತಂತ್ರರಾಜವೆಂಬ ಗ್ರಂಥದ ವ್ಯಾಖ್ಯಾನದಲ್ಲಿ ತಂತ್ರಶಾಸ್ತ್ರಗಳೆಲ್ಲವೂ ಧರ್ಮಶಾಸ್ತ್ರದಲ್ಲಿ ಸೇರಿವೆಯೆಂಬುದನ್ನೂ ಅವುಗಳ ಪ್ರಾಮಾಣ್ಯವನ್ನೂ ಸಮರ್ಥಿಸುವೆವು. ಹೀಗೆ ಚತುರ್ದಶ ವಿದ್ಯೆಗಳಲ್ಲೆಲ್ಲ ಚತುರ್ವೇದಗಳೂ ಅವುಗಳಲ್ಲೆಲ್ಲ ಗಾಯತ್ರೀ ಮಂತ್ರವೂ ಉತ್ತಮವಾದುದು ॥ ೬ ॥

೭

ತಸ್ಯಾ ರೂಪದ್ವಿತಯಂ ತತ್ರೈಕಂ ಯುತ್ಪ್ರಪತ್ಯತೇಽಸ್ಪಷ್ಟಮ್ ।
ವೇದೇಷು ಚತುರ್ಷ್ವಪಿ ಪರಮತ್ಯಂತಂ ಗೋಪನೀಯತರಮ್ ॥ ೭ ॥

ತಸ್ಯಾ ಗಾಯತ್ರ್ಯಾಃ. ಸ್ಪಷ್ಟಮಸ್ಪಷ್ಟಂ ಚೇತಿ ಪದಚ್ಛೇದ ಅನ್ವತ್ರ್ಯಾ. ಚರಣತ್ರಯಂ 'ತತ್ಸವಿತುಃ' ಇತ್ಯಾದಿ ಸ್ಪಷ್ಟಂ 'ಪರೋರಜಸೇಸಾವದೋಂ' ಇತಿ ಚತುರ್ಥಚರಣಂ ತ್ವಸ್ಪಷ್ಟಮಿತ್ಯರ್ಥಃ । ಪರಂ ಶ್ರೀವಿದ್ಯಾಽಽಖ್ಯಂ ದ್ವಿತೀಯಂ ರೂಪಮ್ ॥೭॥

ಅಂತಹ ಗಾಯತ್ರಿಯು "ತತ್ಸವಿತುಃ" ಎಂದು ಮೊದಲಾಗುವ ಪ್ರಸಿದ್ಧವಾದ ಮೂರು ಪಾದಗಳಲ್ಲಿ ಸ್ಪಷ್ಟರೂಪದಿಂದಲೂ "ಪರೋರಜಸೇಸಾವದೊಮ್" ಎಂಬ ಚತುರ್ಥಪಾದದಲ್ಲಿ ಅಸ್ಪಷ್ಟ ರೂಪದಿಂದಲೂ ಇರುವುದು. ಇದೊಂದು ಗಾಯತ್ರಿಯ ರೂಪವು. ಮತ್ತೊಂದು ಶ್ರೀ ವಿದ್ಯಾರೂಪವು. ಇದು ಎಲ್ಲ ವೇದಗಳಲ್ಲಿ ವಿಶೇಷವಾಗಿ ಗೋಪ್ಯವಾಗಿರುವುದು ॥ ೭ ॥

೮

ಕಾಮೋ ಯೋನಿಃ ಕಮಲೇತ್ಯೇವಂ ಸಾಂಕೇತಿಕೈಃ ಶಬ್ದೈಃ ।
ವ್ಯವಹರತಿ ನ ತು ಪ್ರಕಟಂ ಯಾಂ ವಿದ್ಯಾಂ ವೇದಪುರುಷೋಽಪಿ ॥ ೮ ॥

ಯದ್ಯಪಿ ತಂತ್ರರಾಜಾದೌ ಸೌಂದರ್ಯಲಹರ್ಯಾಂ ಚ ಹಾದಿ ವಿದ್ಯಾಯಾ ಏವ ಪ್ರಥಮಮುದ್ಧಾರೋ ದೃಶ್ಯತೇ, ತಥಾಽಪಿ 'ಶ್ರೀವಿದ್ಯೈವ ತು ಮಂತ್ರಾಣಾಂ ತತ್ರ ಕಾದಿರ್ಯಥಾ ಪರಾ' ಇತಿ ವಚನಾತ್, ಷೋಡಶೀಘಟಕತ್ವಾಚ್ಚ, 'ಯದಕ್ಷರೈಕಮಾತ್ರೇಽಪಿ' 'ಯದೇಕಾದಶಮಾಧಾರಂ' ಇತ್ಯಾದಿ ರಹಸ್ಯಾರ್ಥ ಪ್ರತಿಪಾದ್ಯಕ್ಷರಶಾಲಿತ್ವಾಚ್ಚ, ತ್ರಿಶತ್ಯಾಮಸ್ಯಾ ಏವಾದರಾಚ್ಚ, ತ್ರಿಪುರೋಪನಿಷದ್ಯೇತನ್ಮೂಲಕತ್ವೇನೈವಾನ್ಯಾಸಾಮುದ್ಧಾರಾಚ್ಚ, ಯೋಗಿನೀಹೃದಯಾದಾವುಕ್ತಾನಾಮಿಹಾಪಿ

ಈ ಪದ್ಯವು ಶ್ರೀ ವಿದ್ಯೆಯ ವರ್ಣಗಳ ಉದ್ಧಾರ ಕ್ರಮವನ್ನು ಸೂಚಿಸುವುದು. ಈ ಶ್ರೀ ವಿದ್ಯೆಯಲ್ಲಿ ಕಾದಿ ವಿದ್ಯೆಯೆಂದೂ ಹಾದಿ ವಿದ್ಯೆಯೆಂದೂ ಎರಡು ಪಕ್ಷಗಳಿವೆ. ತಂತ್ರರಾಜ ಮುಂತಾದ ಗ್ರಂಥಗಳಲ್ಲಿ ಹಾದಿ ವಿದ್ಯೆಯ ಉದ್ಧಾರವೇ ಮೊದಲು ಪ್ರತಿಪಾದಿಸಲ್ಪಟ್ಟಿದೆ. ಇದರಿಂದ ಅದೇ ಪ್ರಧಾನವಾಗಿ ತೋರುತ್ತದೆ. ಆದರೂ ಕಾದಿ ವಿದ್ಯೆಯನ್ನು ಪ್ರಧಾನವೆಂದು ಒಪ್ಪುವುದಕ್ಕೆ ಅನೇಕ ಯುಕ್ತಿಗಳು ಇವೆ. "ಶ್ರೀ ವಿದ್ಯೈವ ತು ಮಂತ್ರಾಣಾಂ ತತ್ರ ಕಾದಿರ್ಯಥಾ ಪರಾ" ಎಂಬ ವಚನವು ಕಾದಿ ವಿದ್ಯೆಯನ್ನೇ ಪ್ರಧಾನವೆಂದು ಹೇಳಿದೆ. ಮತ್ತು ಕಾದಿ ವಿದ್ಯೆಯು ಷೋಡಶಾಕ್ಷರೀ ಮಂತ್ರದಲ್ಲಿ (ಘಟಕ) ಸೇರಿರುವುದಾಗಿಯೂ "ಯದಕ್ಷರೈಕಮಾತ್ರೇಽಪಿ–ಯದೇಕಾದಶಮಾಧಾರಂ" ಇತ್ಯಾದಿ ರಹಸ್ಯಾರ್ಥಗಳನ್ನು ಪ್ರತಿಪಾದಿಸುವ ಅಕ್ಷರಗಳಿಂದ ಸೇರಿರುವುದಾಗಿಯೂ ಲಲಿತಾತ್ರಿಶತಿಯಲ್ಲಿ ವಿಶೇಷವಾಗಿ ಆದರದಿಂದ ವರ್ಣಿಸಲ್ಪಟ್ಟಿರುವುದಾಗಿಯೂ ತ್ರಿಪುರಾ ಉಪನಿಷತ್ತಿನಲ್ಲಿ ಹೇಳಿರುವ ಕ್ರಮದಲ್ಲಿ ಇತರ ಮಂತ್ರಗಳ ಉದ್ಧಾರಕ್ಕೆ ಮೂಲವಾಗಿರುವುದಾಗಿಯೂ ಯೋಗಿನೀಹೃದಯಾದಿ ಗ್ರಂಥಗಳಲ್ಲಿ ಹೇಳಿರುವ, ಇಲ್ಲಿ ಮುಂದೆ ಹೇಳಲ್ಪಡುವ ಅರ್ಥಗಳೆಲ್ಲ ಸ್ವಾರಸ್ಯವಾಗಿ ಅನ್ವಯಿಸುವುದಾಗಿಯೂ, "ಚತ್ವಾರ ಈಂಬಿಭ್ರತಿ" ಎಂಬ ಶಾಂಖಾಯನ ಶ್ರುತಿಯಲ್ಲಿ ಮೊದಲು ಉದ್ಧಾರ ಮಾಡಲ್ಪಟ್ಟಿದ್ದಾಗಿಯೂ ಇರುವುದರಿಂದ ಇದು ಪ್ರಧಾನವೆನ್ನುವುದು ಸುವ್ಯಕ್ತವಾಗುವುದು. ಆದ್ದರಿಂದ

ವಕ್ಷ್ಯಮಾಣಾನಾಮರ್ಥಾನಾಮತ್ರೈವ ಸ್ವಾರಸ್ಯಾಚ್ಚ, ಶಾಂಖಾಯನ ಶ್ರುತೌ 'ಚತ್ವಾರ ಈಂ ಬಿಭ್ರತಿ' ಇತ್ಯಸ್ಯಾಮೃಚಿ ಚ ಪ್ರಥಮಮಸ್ಯಾ ಏವೋದ್ಧಾರಾಚ್ಚ ಕಾದಿವಿದ್ಯಾಯಾಃ ಪ್ರಾಧಾನ್ಯಮಿತಿ ದ್ಯೋತಯಂಸ್ತಸ್ಯಾಃ ಪ್ರತೀಕಮಾದತ್ತೇ 'ಕಾಮೋ ಯೋನಿಃ ಕಮಲಾ ವಜ್ರಪಾಣಿರ್ಗುಹಾಹಸಾ ಮಾತರಿಶ್ವಾಽಭ್ರಮಿಂದ್ರಃ- ಪುನರ್ಗುಹಾ ಸಕಲಾಮಾಯಯಾ ಚ ಪುರೂಚ್ಯೇಷಾ ವಿಶ್ವಮಾತಾಽಽದಿವಿದ್ಯಾ' ಇತಿ ಶಾಂಖಾಯನಶ್ರುತಿಃ. ಕಾಮೋ ಮಾತರಿಶ್ವಾ ಚ ಕಕಾರಃ. ಯೋನಿರೇಕಾರಃ. ಕಮಲಾ ತುರೀಯಃ ಸ್ವರಃ. ವಜ್ರಪಾಣಿರಿಂದ್ರಶ್ಚ ಲಕಾರಃ. ಗುಹಾದ್ವಯಂ ಮಾಯಾ ಚ ಲಜ್ಜಾಬೀಜಂ. ಹಸೇತಿ ಸಕಲೇತಿ ಚ ಸ್ವರೂಪಂ. ಗುಹಯಾ ಸಹ ಸಮಾಸಾದ್ಬಹುವಚನಂ ನ ಪುನಃ ಸಕಾರೋ ದೀರ್ಘಃ ಏವಂ ಲಕಾರೋಽಪಿ. ಅಭ್ರಂ ಹಕಾರಃ. ಏತಾದೃಶೈಃ ಸಾಂಕೇತಿಕೈಃ ಶಬ್ದೈರ್ವ್ಯವಹಾರಾದತ್ಯಂತಗೋಪನೀಯತ್ವಂ ಸಮರ್ಥಿತಂ ಭವತಿ ||೮||

ಕಾದಿ ವಿದ್ಯೆಯನ್ನೇ ಈ ಪದ್ಯವು ಉದ್ಧಾರಮಾಡಿ ತೋರಿಸುವುದು.

"ಕಾಮೋಯೋನಿಃ ಕಮಲಾ ವಜ್ರಪಾಣಿರ್ಗುಹಾಹಸಾ ಮಾತರಿಶ್ವಾಽಭ್ರಮಿಂದ್ರಃ. ಪುನರ್ಗುಹಾಸಕಲಾಮಾಯಯಾಚಪುರೂಚ್ಯೇಷಾ ವಿಶ್ವಮಾತಾಽಽದಿವಿದ್ಯಾ" ಎಂಬುದು ಶ್ರೀ ವಿದ್ಯಾವರ್ಣಗಳ ಉದ್ಧಾರಕ್ರಮವನ್ನು ತೋರಿಸುವ ಶ್ರುತಿವಚನವು. ಇಲ್ಲಿ ಕಾಮಃ–ಕಕಾರ, ಯೋನಿಃ ಏಕಾರ, ಕಮಲಾ–ಈಕಾರ, ವ್ರಜಪಾಣಿಃ–ಲಕಾರ, ಗುಹಾ–ಹ್ರೀಂಕಾರ, ಹಸಾ–ಹಕಾರ, ಸಕಾರ, ಮಾತರಿಶ್ವಾ–ಕಕಾರ, ಅಭ್ರಂ–ಹಕಾರ, ಇಂದ್ರಃ–ಲಕಾರ, ಗುಹಾ–ಹ್ರೀಂಕಾರ, ಸಕಲಾಃ–ಸಕಾರ–ಕಕಾರ–ಲಕಾರ, ಮಾಯಾ–ಹ್ರೀಂಕಾರವೆಂಬ ಸಂಕೇತ ಶಬ್ದಗಳಿಂದಲೇ ಶ್ರೀ ವಿದ್ಯೆಯನ್ನು ತೋರಿಸಿರುವುದು. ವೇದ ಪುರುಷನು ಸ್ಪಷ್ಟವಾಗಿ ಉಪದೇಶ ಮಾಡದೇ ಈ ಕಾಮ-ಯೋನಿ-ಕಮಲಾ ಮುಂತಾದ ಸಂಕೇತ ಶಬ್ದಗಳಿಂದ ಉಪದೇಶಿಸಿರುವುದರಿಂದ ಶ್ರೀ ವಿದ್ಯೆಯು ಪರಮರಹಸ್ಯವೆನ್ನುವುದು ವ್ಯಕ್ತವಾಗುವುದು || ೮ ||

೯-೧೧

ಕ್ರೋಧೀಶಃ ಶ್ರೀಕಂಠಾರೂಢಃ ಕೋಣತ್ರಯಂ ಲಕ್ಷ್ಮೀಃ।
ಮಾಂಸಮನುತ್ತರರೂಢಂ ವಾಗ್ಭವಕೂಟಂ ಪ್ರಕೀರ್ತಿತಂ ಪ್ರಥಮಮ್ ॥೯॥
ಶಿವಹಂಸಬ್ರಹ್ಮವಿಯಚ್ಛಕ್ರಾಃ ಪ್ರತ್ಯೇಕಮಕ್ಷರಾರೂಢಾಃ।
ದ್ವೈತೀಯಿಕಂ ಕೂಟಂ ಕಥಿತಂ ತತ್ಕಾಮರಾಜಾಖ್ಯಮ್ ॥೧೦॥
ಶಿವತೋ ವಿಯತೋ ಮುಕ್ತಂ ತೃತೀಯಮಿದಮೇವ ಶಕ್ತಿಕೂಟಾಽಽಖ್ಯಮ್।
ಹೃಲ್ಲೇಖಾನಾಂ ತ್ರಿತಯಂ ಕೂಟತ್ರಿತಯೇಽಪಿ ಯೋಜ್ಯಮಂತೇ ಸ್ಯಾತ್ ॥೧೧॥

ವಿದ್ಯಾವರ್ಣಾನುದ್ಧರತಿ—ಕ್ರೋಧೀಶೋ ಬ್ರಹ್ಮಾ ಚ ಕಕಾರಃ. ಶ್ರೀಕಂಠೋಽನುತ್ತರಮಕ್ಷರಂ ಚಾಕಾರಃ. ತಮಾರೂಢಸ್ತೇನ ಯುಕ್ತಃ. ಕೋಣತ್ರಯಂ ಯೋನಿಃ. ಲಕ್ಷ್ಮೀಃ ಕಮಲಾ. ಮಾಂಸಂ ಶಕ್ರಶ್ಚೇಂದ್ರಃ. ಶಿವೋ ವಿಯಚ್ಚ ಹಕಾರಃ. ಹಂಸಃ ಸಕಾರಃ. ಅಕ್ಷರಸಮೂಹಾತ್ಮಕತ್ವಾತ್ಕೂಟತ್ವವ್ಯಪದೇಶಃ ॥ ೯-೧೦-೧೧ ॥

ಶ್ರೀ ವಿದ್ಯೆಯಲ್ಲಿ ಸೇರಿದ ಮೇಲೆ ಹೇಳಿದ ವರ್ಣಗಳನ್ನು ಈ ಪದ್ಯಗಳು ಸ್ಪಷ್ಟಪಡಿಸುತ್ತವೆ. ಕ್ರೋಧೀಶಃ-ಕಕಾರವು ಶ್ರೀಕಂಠಾರೂಢವೆಂದರೆ ಅಕಾರ ಸಹಿತವೆಂದು ಅರ್ಥವು. ಕೋಣತ್ರಯ–ಏಕಾರ, ಲಕ್ಷ್ಮೀಃ–ಈಕಾರ, ಅನುತ್ತರರೂಢಂಮಾಂಸಂ–ಅಕಾರಸಹಿತವಾದ ಲಕಾರ, ಈ ವರ್ಣಗಳೆಲ್ಲವೂ ಸೇರಿ ಆಗುವ ಕ+ಏ+ಈ+ಲ+ಎಂಬ ಕೂಟವು ವಾಗ್ಭವ ಕೂಟವೆಂದು ಕರೆಯಲ್ಪಡುವುದು ॥ ೯ ॥

ಹೀಗೆಯೇ ಶಿವ–ಹಕಾರ, ಹಂಸ–ಸಕಾರ, ಬ್ರಹ್ಮ–ಕಕಾರ, ವಿಯತ್–ಹಕಾರ, ಶಕ್ರ–ಲಕಾರ, ಈ ಎಲ್ಲವ್ಯಂಜನಗಳೂ ಅಕಾರ ಸಹಿತವಾದರೆ ಲಭಿಸುವ ಹ+ಸ+ಕ+ಹ+ಲ ಎಂಬ ವರ್ಣ ರಾಶಿಗೆ ಕಾಮರಾಜ ಕೂಟವೆಂದು ಹೆಸರು ॥ ೧೦ ॥

ಶಿವ, ವಿಯತ್, ಎಂಬ ಸಂಕೇತಗಳುಳ್ಳ ಎರಡು ಹಕಾರಗಳನ್ನು ತ್ಯಜಿಸಿ ಮಿಕ್ಕ ಸ+ಕ+ಲ, ಎಂಬ ವರ್ಣರಾಶಿಯು ಶಕ್ತಿಕೂಟವೆಂದು ಕರೆಯಲ್ಪಡುವುದು. ಇಲ್ಲಿ ಕೂಟವೆಂದರೆ ವರ್ಣರಾಶಿಯೆಂದು ಅರ್ಥ, ಈ ಮೂರು ಕೂಟಗಳ ಕಡೆಯಲ್ಲಿಯೂ ಪ್ರತ್ಯೇಕವಾಗಿ ಹೃಲ್ಲೇಖೆ (ಹ್ರೀಂಕಾರ) ಗಳನ್ನು ಸೇರಿಸಬೇಕು ॥

೧೨-೧೩

ಹೃಲ್ಲೇಖಾಯಾಃ ಸ್ವರೂಪಂ ತು ವ್ಯೋಮಾಗ್ನಿರ್ವಾಮಲೋಚನಾ ॥
ಬಿಂದ್ವರ್ಧಚಂದ್ರರೋಧಿನ್ಯೋ ನಾದನಾದಾಂತಶಕ್ತಯಃ ॥ ೧೨ ॥
ವ್ಯಾಪಿಕಾಸಮನೋನ್ಮನ್ಯ ಇತಿ ದ್ವಾದಶಸಂಹತಿಃ ।
ಬಿಂದ್ವಾದೀನಾಂ ನವಾನಾಂ ತು ಸಮಷ್ಟಿರ್ನಾದ ಉಚ್ಯತೇ ॥ ೧೩ ॥

ವ್ಯೋಮ ಹಕಾರಃ ಕೇವಲೋ ನತ್ವಕಾರವಿಶಿಷ್ಟಃ. ಅಗ್ನೀ ರೇಫ ಸ್ತಾದೃಶಃ. ವಾಮಲೋಚನೇಕಾರಃ. ಬಿಂದ್ವಾದಯೋ ನವಾಪಿ ಸೂಕ್ಷ್ಮ ಸೂಕ್ಷ್ಮತರ ಸೂಕ್ಷ್ಮತಮ ಕಾಲೈರುಚ್ಚಾರ್ಯಾ ಧ್ವನಿವಿಶೇಷಾಃ, ವರ್ಣ ವಿಶೇಷಾ ವಾ. ನ ಚ ಕಕಾರಾದಿವತ್ಸ್ಪಷ್ಟಮನುಚ್ಚಾರ್ಯತ್ವಾತ್ತಂತ್ರೀ ಸ್ವರತುಲ್ಯತ್ವೇನ ಶ್ರೂಯಮಾಣತ್ವಾಚ್ಚ ಕಾರಪ್ರತ್ಯಯಾದ್ಯಭಾವಾಚ್ಚ,

ವ್ಯೋಮ–ಹಕಾರ, ಅಗ್ನಿ-ರೇಫ, ವಾಮಲೋಚನಾ–ಈ ಕಾರ ಈ ಮೂರು ವರ್ಣಗಳು ಸೇರಿದ "ಹ್ರೀ" ಎಂಬುದು ಮತ್ತು ಮುಂದೆ ವಿವಿಕ್ತಸ್ವರೂಪ ಗಳಿಂದ ಸ್ಪಷ್ಟವಾಗಿ ನಿರೂಪಿಸಿರುವ ಬಿಂದು, ಅರ್ಧ ಚಂದ್ರ ರೋಧಿನೀ, ನಾದ, ನಾದಾಂತ, ಶಕ್ತಿ, ವ್ಯಾಪಿಕಾ, ಸಮನಾ, ಉನ್ಮನೀ ಎಂಬ ಸೂಕ್ಷ್ಮ-ಸೂಕ್ಷ್ಮತರ ಸೂಕ್ಷ್ಮತಮ ಕಾಲಗಳಲ್ಲಿ ಉಚ್ಚರಿಸಲ್ಪಡುವ ಧ್ವನಿ ಅಥವಾ ವರ್ಣಸ್ವರೂಪ ಗಳಾದ ಒಂಭತ್ತರ ಸಮಷ್ಟಿ ರೂಪದಿಂದ ಕರೆಯಲ್ಪಡುವ ನಾದವೂ ಸೇರಿ ಹನ್ನೆ ರಡು ವರ್ಣಗಳು ಹೃಲ್ಲೇಖೆಯ ಸ್ವರೂಪವಾಗುವುದು. ಬಿಂದು ಅರ್ಧಚಂದ್ರ ಮುಂತಾದವುಗಳು ಕಕಾರ ಮೊದಲಾದ ವರ್ಣಗಳಂತೆ ಸ್ಪಷ್ಟವಾದ ಉಚ್ಚಾರಣೆ ಯಿಲ್ಲದವುಗಳೂ, ವೀಣೆಯ ಸ್ವರದಂತೆ ಕೇಳಿಸಲ್ಪಡುವುವೂ, ಪ್ರತಿಯೊಂದು ವರ್ಣಕ್ಕೂ ಮುಂದೆ "ಕಾರ" ಎಂಬ ಪ್ರತ್ಯಯವನ್ನು ಹಚ್ಚಿ ಅಕಾರ-ಮುಂತಾದ ವ್ಯವಹಾರ ವಿರುವಂತೆ ಬಿಂದುಕಾರ ಮುಂತಾದ ಕಾರಪ್ರತ್ಯಯಾಂತ ವ್ಯವಹಾರ ವಿಲ್ಲದವುಗಳೂ "ಬೀಜಬಿಂದುಧ್ವನೀನಾಂಚ ತ್ರಿಕೂಟೇಷು ಗ್ರಹಾತ್ಮಿಕಾ" ಮೊದ ಲಾದ ಆಗಮವಚನಗಳಲ್ಲಿ ಧ್ವನಿ ಶಬ್ದದಿಂದಲೇ ವ್ಯವಹರಿಸಲ್ಪಟ್ಟವುಗಳೂ ಆಗಿವೆ. ಈ ವಿಧವಾದ ವೈಲಕ್ಷಣ್ಯವಿದ್ದರೂ "ತ್ರಿಷಷ್ಟಿಶ್ಚತುಃಷಷ್ಟಿರ್ವಾ ವರ್ಣಾಃ ಶಂಭು ಮತೇ ಮತಾಃ" ಎಂದು ಶಿಕ್ಷಾವಚನದಲ್ಲಿ ವರ್ಣಗಳ ಸಂಖ್ಯೆಯನ್ನು ಪ್ರತಿಜ್ಞೆ ಮಾಡಿ ಅನುಸ್ವಾರ ವಿಸರ್ಗಗಳನ್ನು ಸೇರಿಸಿ ವರ್ಣಗಳ ಸಂಖ್ಯೆಯನ್ನು ಪೂರ್ಣ

‘ಬೀಜಬಿಂದುಧ್ವನೀನಾಂ ಚ ತ್ರಿಕೂಟೇಷು ಗ್ರಹಾತ್ಮಿಕಾ’ ಇತ್ಯಾದೌ ಧ್ವನಿಪದೇನೈವ ತಂತ್ರೇಷು ವ್ಯವಹಾರಾಚ್ಚ ನ ವರ್ಣತ್ವಮರ್ಧಚಂದ್ರಾದೇರಿತಿ ವಾಚ್ಯಂ. ಅನುಸ್ವಾರವಿಸರ್ಗಾದಾವುಕ್ತಹೇತುಸತ್ತ್ವೇಽಪಿ ವರ್ಣತ್ವಸ್ಯೇಷ್ಟತ್ವಾತ್, ಕಥಮನ್ಯಥಾ ‘ತ್ರಿಷಷ್ಟಿಶ್ಚತುಃಷಷ್ಟಿರ್ವಾ ವರ್ಣಾಃ ಶಂಭುಮತೇ ಮತಾಃ’ (ಪಾ ಶಿ ೩) ಇತಿ ಪ್ರತಿಜ್ಞಾಯ ‘ಅನುಸ್ವಾರೋ ವಿಸರ್ಗಶ್ಚ’ ಇತಿ ಪರಿಗಣನಂ ಶಿಕ್ಷಾಯಾಂ ಸಂಗಚ್ಛೇತ? ನ ಚ ತಾದೃಶಸಂಖ್ಯಾವಿರೋಧಾದೇವ ನಾತ್ರ ವರ್ಣತ್ವಂ, ತತ್ರ ಸ್ಪಷ್ಟೋಚ್ಚಾರ್ಯಾಣಾಮೇವ ಗಣನಾತ್. ನ ಚ ತಾಲ್ವಾದಿಪರಿಗಣಿತಸ್ಥಾನಾನಭಿವ್ಯಂಗ್ಯತ್ವಾನ್ನ ವರ್ಣತ್ವಂ, ತದನಭಿವ್ಯಂಗ್ಯತ್ವಸ್ಯ ಪಶ್ಯಂತ್ಯಾದಾವವಾಪ್ತೇಃ, ‘ಚತ್ವಾರಿ ವಾಕ್ಪರಿಮಿತಾ ಪದಾನಿ’ (ಋ ೨-೩-೨೨) ಇತಿ ಶ್ರುತ್ಯಾ ವರ್ಣಸಮೂಹಾತ್ಮಕಪದತ್ವಸ್ಯ ಸ್ಪಷ್ಟಮುಕ್ತತ್ವಾಚ್ಚ. ಅತ ಏವ ಚತುಃಶತೀಶಾಸ್ತ್ರೇ ನಾದಸ್ಯಾರ್ಥವರ್ಣನಂ ಸಂಗ

ಮಾಡಿ ತೋರಿಸಿರುವುದರಿಂದ ಅನುಸ್ವಾರ–ವಿಸರ್ಗಗಳಿಗೆ ವರ್ಣಗಳ ರೂಪವನ್ನು ಅಂಗೀಕರಿಸಿರುವಂತೆ ಬಿಂದು ಮುಂತಾದುವುಗಳನ್ನು ವರ್ಣಗಳೆಂದೇ ಹೇಳಬೇಕು. ಹಿಂದೆ ಹೇಳಿರುವ “ತ್ರಿಷಷ್ಟಿಶ್ಚತುಷ್ಷಷ್ಟಿರ್ವಾ” ಎಂಬ ವಚನದಲ್ಲಿ ಸ್ಪಷ್ಟೋಚ್ಚಾರಣೆಯುಳ್ಳ ವರ್ಣಗಳನ್ನು ಮಾತ್ರ ಗಣನೆ ಮಾಡಿರುವುದರಿಂದ ಅಸ್ಪಷ್ಟ ಉಚ್ಚಾರಣೆಯುಳ್ಳ ಇತರ ವರ್ಣಗಳು ಇದ್ದರೂ ವಚನಕ್ಕೆ ವಿರೋಧವಿಲ್ಲವು. ತಾಲು ಮುಂತಾದ ಸ್ಥಾನಗಳಿಂದ ವ್ಯಕ್ತವಾಗುವುದನ್ನೇ ವರ್ಣವೆಂದು ಅಂಗೀಕಾರ ಮಾಡಿದರೆ “ಚತ್ವಾರಿವಾಕ್‌ಪರಿಮಿತಾಪದಾನಿ” ಮುಂತಾದ ಶ್ರುತಿಯಲ್ಲಿ ವರ್ಣಸಮೂಹರೂಪವಾದ ಪದವೆಂದು ಹೇಳಲ್ಪಟ್ಟಿರುವ ಪಶ್ಯಂತೀ ಮುಂತಾದ ವರ್ಣಗಳಲ್ಲಿ ತಾಲ್ವಾದಿ ಸ್ಥಾನಗಳಿಂದ ಅಭಿವ್ಯಕ್ತಿಯಿಲ್ಲದಿರುವುದರಿಂದ ವಿರೋಧಬರುವುದು. ಚತುಃಶತೀಶಾಸ್ತ್ರದಲ್ಲಿ ನಾದಕ್ಕೆ ಅರ್ಥವನ್ನು ಹೇಳಿರುವುದೂ ನಾದವನ್ನು ವರ್ಣಸಮೂಹವೆಂದು ಒಪ್ಪಲು ಸಾಧನವಾಗುವುದು. “ರಥಘೋಷೇಣ ಮಾಹೇಂದ್ರಸ್ಯ ಸ್ತೋತ್ರಮುಪಾಕರೋತಿ” (ರಥದಧ್ವನಿಯನ್ನು ಕೇಳಿದಾಗ ಮಾಹೇಂದ್ರಸ್ತೋತ್ರವನ್ನು ಅನುಷ್ಠಾನ ಮಾಡಬೇಕು ಎಂದು ಅರ್ಥ) ಎಂಬ ವಿಧಿವಾಕ್ಯಾನುಸಾರವಾಗಿ ಅಕ್ಷರವಲ್ಲದೇ ಕೇವಲ ಧ್ವನಿರೂಪವಾದ ರಥಘೋಷದಿಂದ ಮಾಹೇಂದ್ರಸ್ತೋತ್ರ ಉಪಾಕರಣವೆಂಬ ಕರ್ತವ್ಯದ ಸ್ಮರಣವು ಬಂದರೂ ಲೌಕಿಕ ರಥಧ್ವನಿ ಶ್ರವಣಮಾಡುವಾಗಲೆಲ್ಲ ಮಾಹೇಂದ್ರ ಸ್ತೋತ್ರದ ಸ್ಮೃತಿ

ಚ್ಛ್ರುತೇ. ನ ಚ ರಥಘೋಷವತ್ಸದಾರ್ಥಸ್ಮಾರಕತ್ವೋಪಪತ್ತಿಃ; ತತ್ರ ಹಿ ತತ್ಕಾಲಕರಣೀಯತ್ವಸಂಬಂಧೇನ ಮಾಹೇಂದ್ರಸ್ತೋತ್ರೋಪಾಕರಣಸ್ಯ ಸ್ಮೃತಿವಿಷಯತಾಯಾ ವಾಚನಿಕತ್ವೇನ ರಥಘೋಷಸಾಮಾನ್ಯಸ್ಯ ಲೌಕಿಕಾದಿಸಾಧಾರಣಸ್ಯ ಸ್ಮಾರಕತ್ವಾಭಾವೇನ ತಸ್ಯ ತತ್ರ ಶಕ್ತೇರಯೋಗಾತ್, ಪ್ರಕೃತೇ ತು ನ ತಥೇತಿ ವೈಷಮ್ಯಾತ್; 'ಹೃಲ್ಲೇಖಾತ್ರಯಸಂಭೂತ್ಯೈಸ್ತಿಥಿಸಂಖ್ಯೈಸ್ತಥಾಽಕ್ಷರೈಃ' ಇತ್ಯಾದೌ ಪ್ರತಿಹೃಲ್ಲೇಖಂ ಹಕಾರರೇಫೇಕಾರಾನುಸ್ವಾರನಾದಪಂಚಕಮಿತಿ ಪಂಚದಶಾಕ್ಷರಾಣೀತ್ಯುಕ್ತ್ಯಾ ನಾದೇಽಕ್ಷರತ್ವವ್ಯವಹಾರಸ್ಯಾಸಕೃದ್ಯೋಗಿನೀಹೃದಯೇ 'ಭೂಮಿಶ್ಚಂದ್ರಃ ಶಿವೋ ಮಾಯಾ ಶಕ್ತಿಃ ಕೃಷ್ಣಾಧ್ವಮಾದನೌ. ಅರ್ಧಚಂದ್ರಶ್ಚ ಬಿಂದುಶ್ಚ ನವಾರ್ಣೋ ಮೇರುರುಚ್ಯತೇ. ಮಹಾತ್ರಿಪುರಸುಂದರ್ಯಾ ಮಂತ್ರಾ ಮೇರುಸಮುದ್ಭವಾಃ' ಇತಿ ಜ್ಞಾನಾರ್ಣವಾದಾವಪ್ಯಸಕೃದ್ವ್ಯವಹಾರಸ್ಯ ದರ್ಶನಾಚ್ಚ. ಧ್ವನಿಪದೇನ ವ್ಯವಹಾರಸ್ತು ತತ್ತುಲ್ಯತ್ವಾಲ್ಲಕ್ಷಣಯಾ ಧ್ವನಿಪರ್ಯಾಯನಾದಪದವಾಚ್ಯತ್ವಾನ್ನೇಯಾರ್ಥರೂಪಲಕ್ಷಣಯಾ ವಾ ನೇಯ ಇತಿ ದಿಕ್. ಏವಂ ಚ ಪ್ರಥಮತೃತೀಯ ಕೂಟೇ ಅಷ್ಟಾದಶವರ್ಣಾತ್ಮಕೇ, ಮಧ್ಯಮಕೂಟಂ ತು ಚತುರಧಿಕಂ; ಸಂಹತ್ಯಾಷ್ಟಪಂಚಾಶದ್ವರ್ಣಾತ್ಮಿಕಾ ವಿದ್ಯೇತಿ ಸಿದ್ಧಂ. ಯದ್ಯಪಿ ಬಿಂದುವಿನಿರ್ಮುಕ್ತಾನಾಮಷ್ಟಾನಾಮೇವ ನಾದಸಂಜ್ಞಾ ಮಂತ್ರಶಾಸ್ತ್ರೇ;

ಬರುವುದಿಲ್ಲವಾದ್ದರಿಂದ ಧ್ವನಿರೂಪವಾದ ರಥಘೋಷವು ಏಕಕಾಲ ಸಂಬಂಧದಿಂದ (ತನ್ನ ಸಮಯದಲ್ಲಿ ಮಾಡಬೇಕಾಗಿರುವ) ಸ್ತೋತ್ರೋಪಾಕರಣವನ್ನು ಸೂಚಿಸುವುದೇ ಹೊರತು ಧ್ವನಿಗೆ ಸ್ತೋತ್ರೋಪಾಕರಣವನ್ನು ಅರ್ಥವೆಂದು ಹೇಳುವಹಾಗಿಲ್ಲ. "ಹೃಲ್ಲೇಖಾತ್ರಯಸಂಭೂತ್ಯೈಸ್ತಿಥಿಸಂಖ್ಯೈಸ್ತಥಾಕ್ಷರೈಃ" (ಯೋಗಿನೀಹೃದಯ), ಭೂಮಿಶ್ಚಂದ್ರಃ ಶಿವೋಮಾಯಾ ಶಕ್ತಿಃ ಕೃಷ್ಣಾಧ್ವಮಾದನೌ ಅರ್ಧಚಂದ್ರಶ್ಚಬಿಂದುಶ್ಚನವಾರ್ಣೋಮೇರುರುಚ್ಯತೇ ‖ (ಜ್ಞಾನಾರ್ಣವ) ಎಂಬ ವಚನಗಳಲ್ಲಿ ಬಿಂದು ಮುಂತಾದುದನ್ನು ಅಕ್ಷರಗಳೆಂದು ಪುನಃ ಪುನಃ ವ್ಯವಹರಿಸಿರುತ್ತದೆ. ಆದ್ದರಿಂದ ವರ್ಣರೂಪವಾದ ಬಿಂದು ಮುಂತಾದವುಗಳಿಗೆ ಅಸ್ಪಷ್ಟೋಚ್ಚಾರಣವೆಂಬ ಧ್ವನಿಯ ಹೋಲಿಕೆಯಿಂದ ಅಥವಾ ಧ್ವನಿಯನ್ನು ಬೋಧಿಸಲು ರೂಢವಾದ ನಾದವೆಂಬ ಶಬ್ದದ ಸಂಕೇತ ವಿರುವುದರಿಂದ ಧ್ವನಿ ಶಬ್ದದ ವ್ಯವಹಾರವೂ ಅಸಂಗತವಾದುದಲ್ಲ.

ತಥಾಽಪಿ ವ್ಯವಹಾರಸೌಕರ್ಯಾಯ ತತ್ಸಹಿತಾನಾಮೇವ ಸಾಽತ್ರ ಕೃತೇತಿ ಧ್ಯೇಯಮ್ ॥೧೨-೧೩॥

ಮಂತ್ರಶಾಸ್ತ್ರದಲ್ಲಿ ಬಿಂದುವನ್ನು ಹೊರತು ಉಳಿದ ಅರ್ಧಚಂದ್ರ ಮುಂತಾದ ಎಂಟು ವರ್ಣಗಳಿಗೆ ನಾದವೆಂದು ವ್ಯವಹಾರವಿರುವುದು. ಇಲ್ಲಿ ಮಾತ್ರ ವ್ಯವಹಾರದ ಸೌಲಭ್ಯಕ್ಕಾಗಿ ಬಿಂದುವನ್ನೂ ಸೇರಿಸಿ ನಾದವೆಂದು ಹೇಳಲ್ಪಟ್ಟಿದೆ. ||೧೨|| ||೧೩||

೧೪

ಪ್ರಥಮೇಽಷ್ಟಾದಶ ವರ್ಣಾಃ ದ್ವಾವಿಂಶತಿರಕ್ಷರಾಣಿ ಮಧ್ಯೇ ಸ್ಯುಃ |
ಪ್ರಥಮೇನ ತುಲ್ಯಮಂತ್ಯಂ ಸಂಘಾತೇನಾಷ್ಟಪಂಚಾಶತ್ ||೧೪||

ಸಿದ್ಧಮೇವಾಹ ||೧೪||

ವಾಗ್ಭವಕೂಟದಲ್ಲಿ ಕ್–ಅ–ಎ-ಈ–ಲ್–ಅ–ಹ್–ರ್-ಈ--ಬಿಂದು—ಅರ್ಧ ಚಂದ್ರ—ರೊಧಿನೀ–ನಾದ–ನಾದಾಂತ-ಶಕ್ತಿ-ವ್ಯಾಪಿಕಾ–ಸಮನಾ-ಉನ್ಮನೀ ಎಂಬ ಹದಿನೆಂಟು ವರ್ಣಗಳಿರುವುವು. ಎರಡನೆಯದಾದ ಕಾಮರಾಜಕೂಟದಲ್ಲಿ ಹ್-ಅ–ಸ್-ಅ-ಕ್-ಅ–ಹ್-ಅ-ಲ್-ಅ ಮತ್ತು ಬಿಂದು ಮುಂತಾದ ಹನ್ನೆರಡು ವರ್ಣಗಳೂ ಸೇರಿ ಇಪ್ಪತ್ತೆರಡು ವರ್ಣಗಳು ಇರುವುವು. ಮೂರನೆಯ ಶಕ್ತಿ ಕೂಟದಲ್ಲಿ ಸ್-ಅ-ಕ್-ಅ-ಲ್-ಅ ಮತ್ತು ಹಿಂದಿನ ಹನ್ನೆರಡು ವರ್ಣಗಳೂ ಸೇರಿ ಹದಿನೆಂಟು ವರ್ಣಗಳು ಇರುವುವು. ಮೂರು ಕೂಟಗಳಲ್ಲಿ ಒಟ್ಟಾಗಿ ಐವತ್ತೆಂಟು ವರ್ಣಗಳು ಆದಿ ವಿದ್ಯೆಯಲ್ಲಿವೆಯೆಂದು ತಿಳಿಯಬೇಕು ||೧೪||

೧೫-೧೭

ಮಾತ್ರಾದ್ವಿತಯೋಚ್ಚಾರ್ಯಾ ಕಾಮಕಲಾ ಚ ತ್ರಿಕೋಣಾ ಚ ।
ಬಿಂದುರಹಿತಹೃಲ್ಲೇಖಾ ಮಾತ್ರಾಕಾಲತ್ರಯೋಚ್ಚಾರ್ಯಾಃ ॥೧೫॥
ಅನ್ಯೇಷಾಂ ವರ್ಣಾನಾಂ ಮಾತ್ರಾಕಾಲೋಽರ್ಧಮಾತ್ರಯಾ ಸಹಿತಃ ।
ಬಿಂದೋರರ್ಧಂ ಮಾತ್ರಾ ಪರೇ ಪರೇ ಚಾಪಿ ಪೂರ್ವಪೂರ್ವಾರ್ಧಾಃ ॥೧೬॥
ಸಂಹತ್ಯೈಕಲವೋನೋ ಮಾತ್ರಾಕಾಲೋಽಸ್ಯ ನಾದಸ್ಯ ॥

ವರ್ಣಾನಾಂ ಕಾಲಾನಾಹ. ಮಾತ್ರಾ ಲಘ್ವಕ್ಷರಸ್ಯ ಕಾಲಃ. ತದ್ದ್ವಿಗುಣೋ ಗುರ್ವಕ್ಷರಸ್ಯ. ಅತ ಏವ ಕಾಮಕಲಾ ಕಮಲಾ ತ್ರಿಕೋಣಾ ಯೋನಿಶ್ಚ ದ್ವಿಮಾತ್ರಾ । ಹೃಲ್ಲೇಖಾಯಾಂ ದ್ವಯೋರ್ವ್ಯಂಜನಯೋರೇಕಾ ಮಾತ್ರಾ, ಕಾಮಕಲಾಯಾ ದ್ವೇ ಮಾತ್ರೇ ಇತಿ ತಿಸ್ರಃ. ಅನ್ಯೇಷಾ

ಮಂತ್ರದಲ್ಲಿ ಸೇರಿದ ವರ್ಣಗಳ ಉಚ್ಚಾರಣ ಕಾಲವನ್ನು ಈ ಪದ್ಯಗಳು ಬೋಧಿಸುತ್ತವೆ. ಏಕಮಾತ್ರೋಭವೇದ್ಧ್ರಸ್ವೋ ದ್ವಿಮಾತ್ರೋದೀರ್ಘ ಉಚ್ಯತೇ। ತ್ರಿಮಾತ್ರಸ್ತುಪ್ಲುತೋಜ್ಞೇಯಃ ವ್ಯಂಜನಂತ್ವರ್ಧಮಾತ್ರಕಂ॥ ಎಂಬ ವಚನದಿಂದ ವ್ಯಂಜನಕ್ಕೆ ಅರ್ಧಮಾತ್ರಾಕಾಲ, ಹ್ರಸ್ವ ಅಕ್ಷರಕ್ಕೆ ಏಕಮಾತ್ರಾಕಾಲ, ದೀರ್ಘಕ್ಕೆ ದ್ವಿಮಾತ್ರಾಕಾಲ, ಪ್ಲುತಾಕ್ಷರಕ್ಕೆ ತ್ರಿಮಾತ್ರಾಕಾಲವೆಂದು ವ್ಯಕ್ತವಾಗುವುದು. ಮಂತ್ರದಲ್ಲಿರುವ “ಏ, ಈ” ಎಂಬ ವರ್ಣಗಳಿಗೆ ದ್ವಿಮಾತ್ರಾ ಕಾಲವು. ಬಿಂದುವನ್ನು ಬಿಟ್ಟು ಉಳಿದ “ಹ್ರೀ ಎಂಬ” ಹೃಲ್ಲೇಖೆಗೆ ತ್ರಿಮಾತ್ರಾ ಕಾಲವು. ಅಕಾರದಿಂದ ಕೂಡಿದ ಇತರ ವ್ಯಂಜನಗಳಿಗೆ ಒಂದೂವರೆ ಮಾತ್ರಾ ಕಾಲವು. ಬಿಂದುವಿಗೆ ಅರ್ಧ ಮಾತ್ರಾ ಕಾಲವು. ಅರ್ಧಚಂದ್ರಾದಿಗಳೆಲ್ಲವೂ ತನಗಿಂತ ಮೊದಲಿನ ವರ್ಣಕ್ಕೆ ಇರುವ ಕಾಲಪರಿಮಾಣದಲ್ಲಿ ಅರ್ಧಪರಿಮಾಣವುಳ್ಳವುಗಳು, ಕಾಲದ ಪರಮ ಸೂಕ್ಷ್ಮಾವಸ್ಥೆಗೆ “ಲವ” ವೆಂದು ಹೆಸರು “ನಲಿನೀಪತ್ರಸಂಹತ್ಯಾಃ ಸೂಕ್ಷ್ಮಸೂಚ್ಯಭಿವೇಧನೇ। ದಲೇ ದಲೇ ತು ಯಃಕಾಲಃ ನೋಪಲಭ್ಯೋಭೃಗೂದ್ವಹ॥ ಎಂಬಂತೆ ಕಾಲಪರಮಸೂಕ್ಷ್ಮಾಂಶವನ್ನು ಪೃಥಗ್ರೂಪದಿಂದ ಕಾಣಲು ಅಸಾಧ್ಯವು, ಕಮಲದಲಗಳನ್ನು ಜೋಡಿಸಿಟ್ಟು ಚಿಕ್ಕ ಸೂಜಿಯಿಂದ ಒಂದೇಸಲ ಅಷ್ಟು ದಲಗಳಲ್ಲಿಯೂ ರಂಧ್ರವನ್ನು ಮಾಡಿದರೆ ಒಂದೊಂದು ದಳದಲ್ಲಿ ರಂಧ್ರವನ್ನು ಮಾಡಲು ಒಂದೊಂದು ಲವದ ಸೂಕ್ಷ್ಮಕಾಲವು ಬೇಕಾಗುವುದು ಹೀಗೆ ಇನ್ನೂರ

ಮಕಾರಸಹಿತಾನಾಂ ಕಕಾರಾದಿದಶವರ್ಣಾನಾಂ. ಬಿಂದೋರಪಿ ವ್ಯಂಜನತ್ವಾದರ್ಧ ಮಾತ್ರಾ. 'ಏಕಮಾತ್ರೋ ಭವೇದ್ಧ್ರಸ್ವೋ ದ್ವಿಮಾತ್ರೋ ದೀರ್ಘ ಉಚ್ಯತೇ. ತ್ರಿಮಾತ್ರಸ್ತು ಪ್ಲುತೋ ಜ್ಞೇಯೋ ವ್ಯಂಜನಂ ತ್ವರ್ಧಮಾತ್ರಕಂ' ಇತಿ ವಚನಾತ್. ಪರೇ ಪರೇ ಅರ್ಧಚಂದ್ರರೋಧಿನ್ಯಾದಯಃ, ಪೂರ್ವಪೂರ್ವಾರ್ಧಾರ್ಧಾಃ; ಅರ್ಧಚಂದ್ರಸ್ಯಾರ್ಧಕಾಲೋ ರೋಧಿನ್ಯಾಃ, ರೋಧಿನ್ಯರ್ಧಕಾಲೋ ನಾದಸ್ಯೇತ್ಯಾದಿಕ್ರಮೇಣ ಕಾಲವಂತಃ. ಅಯಂ ಭಾವಃ-ಕಾಲಪರಮಾಣುರ್ಲವ ಇತ್ಯುಚ್ಯತೆ, ನಲಿನೀಪತ್ರಸಂಹತ್ಯಾಃ ಸೂಕ್ಷ್ಮಸೂಚ್ಯಭಿವೇಧನೇ. ದಲೇ ದಲೇ ತು ಯಃ ಕಾಲಃ ಸ ಕಾಲೋ ಲವಸಂಜ್ಞಿತಃ. ಅತಃ ಸೂಕ್ಷ್ಮತಮಃ ಕಾಲೋ ನೋಪಲಭ್ಯೋ ಭೃಗೂದ್ವಹ.' ಇತಿ ವಚನಾತ್, ಷಟ್ಪಂಚಾಶದುತ್ತರಶತದ್ವಯಲವೈರೇಕಾ ಮಾತ್ರಾ. ಬಿಂದೋರಷ್ಟಾವಿಂಶತ್ಯುತ್ತರಶತಂ ಲವಾಃ. ಅರ್ಧಚಂದ್ರಸ್ಯಚತುಃಷಷ್ಟಿಃ. ರೋಧಿನ್ಯಾ ದ್ವಾತ್ರಿಂಶತ್. ನಾದಸ್ಯ ಷೋಡಶ. ನಾದಾಂತಸ್ಯಾಷ್ಟೌ. ಶಕ್ತೇಶ್ಚತ್ವಾರಃ. ವ್ಯಾಪಿಕಾಯಾ ದ್ವೌ ಲವೌ. ಸಮನಾಯಾ ಏಕೋ ಲವಃ. ಉನ್ಮನಾಯಾಸ್ತು ನಾಸ್ತ್ಯೇವ ಕಾಲಃ. ಯದ್ಯಪಿ ಯೋಗಿನೀಹೃದಯೇ ಚಕ್ರಸಂಕೇತೇ 'ದೀಪಾಕಾರೋಽರ್ಧ

ಐವತ್ತಾರು ದಲಗಳನ್ನು ಸೇರಿಸಿ ಒಂದೇಸಲ ರಂಧ್ರ ಮಾಡಿದರೆ ಆ ಕಾಲದಲ್ಲಿ ಇನ್ನೂರ ಐವತ್ತಾರು ಲವಾಂಶಗಳಿವೆಯೆಂದು ತಿಳಿಯಬೇಕು. ಈ ಕಾಲವನ್ನು ಒಂದು ಮಾತ್ರಾ ಕಾಲವೆಂದು ಹೇಳುವರು. ಬಿಂದುವಿಗೆ ಅರ್ಧಮಾತ್ರಾ ಕಾಲವಾದ್ದರಿಂದ ಒಂದು ನೂರ ಇಪ್ಪತ್ತೆಂಟು ಲವಕಾಲ, ಅರ್ಧಚಂದ್ರಕ್ಕೆ ಅರವತ್ತನಾಲ್ಕು ಲವ, ರೋಧಿನೀಗೆ ಮೂವತ್ತೆರಡು ಲವ, ನಾದಕ್ಕೆ ಹದಿನಾರು ಲವ, ನಾದಾಂತಕ್ಕೆ ಎಂಟು ಲವ, ಶಕ್ತಿಗೆ ನಾಲ್ಕುಲವ, ವ್ಯಾಪಿಕಾಕ್ಕೆ ಎರಡು ಲವ, ಸಮನಾಕ್ಕೆ ಒಂದು ಲವ, ಉನ್ಮನಾಕ್ಕೆ ಕಾಲಪರಿಚ್ಛೇದವೇ ಇಲ್ಲವು. ಹೀಗೆ ಒಟ್ಟು ಸೇರಿ ನಾದಕ್ಕೆ ಇನ್ನೂರಐವತ್ತೈದು ಲವಗಳು ಆಗುತ್ತವೆ.

"ಚತುಃ ಷಷ್ಟಿಸ್ತದೂರ್ಧ್ವಂತು ದ್ವಿಗುಣಂ ದ್ವಿಗುಣಂತತಃ" ಎಂಬ ಯೋಗಿನೀಹೃದಯದ ವಚನವೂ ಕಾಲಪರಿಮಾಣವನ್ನೇ ಹೇಳುವುದು. ಅಲ್ಲಿ ಬಿಂದುವಿಗೆ ಅರ್ಧ ಮಾತ್ರಾ ಕಾಲವನ್ನೂ ಅರ್ಧಚಂದ್ರ-ರೋಧಿನೀ-ನಾದ-ನಾದಾಂತ-ಶಕ್ತಿ ಇವುಗಳಿಗೆ ಕ್ರಮವಾಗಿ ನಾಲ್ಕು–ಎಂಟು–ಹದಿನಾರು–ಮೂವತ್ತೆರಡು–ಅರವತ್ತನಾಲ್ಕನೆಯ ಒಂದು ಭಾಗ ಮಾತ್ರಾ ಕಾಲವೆಂದು ಹೇಳಿ ಶಕ್ತಿಯಿಂದ ಮುಂದಿರುವ ವ್ಯಾಪಿಕಾ–ಸಮನಾ-ಉನ್ಮನೀ ಎಂಬುವುಗಳಿಗೆ ಪೂರ್ವ ಪೂರ್ವದ ಅರ್ಧಾರ್ಧ ಕಾಲವೆಂದು ಸಾಮಾನ್ಯವಾಗಿ ಹೇಳಿದೆ. ಇದರಿಂದ ಉನ್ಮನೀಗೆ ಒಂದು ಮಾತ್ರಾ ಕಾಲವೆಂದೂ ಅದಕ್ಕೆ ದ್ವಿಗುಣವಾಗುತ್ತಾ ಹೋದಲ್ಲಿ ಐನೂರ ಹನ್ನೆರಡು ಲವ

ಮಾತ್ರಶ್ಚ' ಇತ್ಯನೇನ ಬಿಂದೋಃ ಕಾಲಮುಕ್ತ್ವಾಽರ್ಧಚಂದ್ರಾದೇಃ ಶಕ್ತಿಪರ್ಯಂತಸ್ಯ ಚತುರಂಶಾಷ್ಟಾಂಶಷೋಡಶಾಂಶಾದಿರೂಪಭಾಗ ದ್ವೈಗುಣ್ಯಂ ಕಾಲಸ್ಯೋಕ್ತ್ವಾ ಶಕ್ತ್ಯಾದೀನಾಂ ಪೂರ್ವಪೂರ್ವದ್ವಿಗುಣಾಂಶಕಾಲವತ್ತ್ವಂ ಸಾಮಾನ್ಯೇನೋಕ್ತಂ 'ಚತುಃಷಷ್ಟಿಸ್ತದೂರ್ಧ್ವಂ ತು ದ್ವಿಗುಣಂ ದ್ವಿಗುಣಂ ತತಃ' ಇತಿ. ತೇನ ಚ ವಚನೇನ ಮಾತ್ರಾಯಾ ದ್ವಾದಶೋತ್ತರಪಂಚಶತತಮೋ ಭಾಗ ಉನ್ಮನಾಕಾಲಃ. ಮಾತ್ರಾಸ್ವರೂಪಂ ಚ ದ್ವಾದಶೋತ್ತರಪಂಚಶತಲವಾತ್ಮಕತ್ವಮೇವ ಪ್ರತೀಯತೇ, ಅತ ಏವ ದೇಶಕಾಲಾನವಚ್ಛಿನ್ನಂ ತದೂರ್ಧ್ವಂ ಪರಮಂ ಮಹತ್' ಇತ್ಯುತ್ತರಗ್ರಂಥೇಽಪ್ಯುನ್ಮನಾಯಾಃ ಪರತ ಏವ ಕಾಲಾನವಚ್ಛೇದ ಉಕ್ತ ಇತಿ ವ್ಯಕ್ತಂ ಪ್ರತೀಯತೇ; ತಥಾಽಪಿ 'ಚತುಃಷಷ್ಟಿಃ' ಇತಿ ಶ್ಲೋಕಸ್ಯ ಶಕ್ತೇಶ್ಚತುಃಷಷ್ಟಿತಮೋ ಮಾತ್ರಾಭಾಗಃ ತದೂರ್ಧ್ವಂ ದ್ವಿಗುಣಂ ವ್ಯಾಪಿಕಾಯಾ ಅಷ್ಟಾವಿಂಶತ್ಯುತ್ತರಶತತಮೋ ಭಾಗಃ, ತತೋ ದ್ವಿಗುಣಂ ಸಮನಾಯಾಃ ಷಟ್ಪಂಚಾಶದುತ್ತರಶತದ್ವಯಾತ್ಮಕೋ ಭಾಗ ಇತ್ಯರ್ಥಸ್ತತಸ್ತದೂರ್ಧ್ವಮಿತಿ ಪದಾಭ್ಯಾಂ ದ್ವಿಗುಣಪದದ್ವಯೇನ ಚ ಸ್ಪಷ್ಟಂ ಪ್ರತೀಯತೇ. ಅತ ಏವೋತ್ತರಾರ್ಧೇ 'ಶಕ್ತ್ಯಾದೀನಾಂ ಚ ಮಾತ್ರಾಂಶೋ ಮನೋನ್ಮನ್ಯಾಸ್ತಥೋನ್ಮನೀ ಇತ್ಯತ್ರ "ಮನೋನ್ಮನೀ"ತಿ ಪದಸ್ಯ ಸಮನಾಪರ್ಯಾಯಸ್ಯ ಸಮನಾಪರ್ಯಂತಾನಾಮಿತ್ಯರ್ಥಕತ್ವಮಂಗೀಕೃತ್ಯ ಶಕ್ತ್ಯಾದೀನಾಂ ತಿಸೃಣಾಮಿತ್ಯಮೃತಾನಂದೈರ್ವ್ಯಾಖ್ಯಾತಂ. ನಾದಸ್ಯ ಬಿಂದ್ವಾದಿನವಕಸ್ಯ ॥ ೧೫-೧೬ ॥

ಕಾಲಗಳು ಸೇರಿ ಮಾತ್ರಾಕಾಲ ವಾಗುವುದೆಂದೂ ಉನ್ಮನಾ ಎಂಬುವುದರ ಮುಂದೆ ಕಾಲಪರಿಚ್ಛೇದವಿಲ್ಲವೆಂದೂ ತೋರುತ್ತದೆ. ಆದರೆ "ಚತುಷ್ಷಷ್ಟಿಃ" ಎಂಬ ವಚನದಲ್ಲಿರುವ ಚತುಷ್ಷಷ್ಟಿ ಪದಕ್ಕೆ ಮಾತ್ರೆಯ ಅರವತ್ತನಾಲ್ಕನೆಯ ಒಂದು ಭಾಗವೆಂದೂ ಅದು ಶಕ್ತಿಯ ಕಾಲವೆಂದೂ ಅದಕ್ಕೆ ದ್ವಿಗುಣವಾಗಿ ಒಂದು ನೂರ ಇಪ್ಪತ್ತೆಂಟನೆಯ ಒಂದು ಭಾಗವು ವ್ಯಾಪಿಕಾವರ್ಣಕ್ಕೆಂದೂ, ತದ್ದ್ವಿಗುಣವೆಂದರೆ ಇನ್ನೂರ ಐವತ್ತಾರನೆಯ ಒಂದು ಭಾಗವು ಸಮನಾ ವರ್ಣಕ್ಕೆಂದೂ ಸ್ಪಷ್ಟಪಡುತ್ತದೆ. "ಶಕ್ತ್ಯಾದೀನಾಂಚ ಮಾತ್ರಾಂಶೋಮನೋನ್ಮನ್ಯಾಸ್ತಥೋನ್ಮನೀ" ಎಂಬ ಉತ್ತರಾರ್ಧವಚನದಲ್ಲಿ ಅಮೃತಾನಂದರು ಶಕ್ತ್ಯಾದೀನಾಂ ಎಂಬ ಪದಕ್ಕೆ ಸಮನಾಪರ್ಯಂತವೆಂದು ಅರ್ಥವನ್ನು ವಿವರಿಸಿರುತ್ತಾರೆ. ಆದ್ದರಿಂದ ಉನ್ಮನಾಕ್ಕೆ ಕಾಲಪರಿಚ್ಛೇದವಿಲ್ಲವೆಂದೂ ಮೇಲೆ ಹೇಳಿರುವ ಅರ್ಥವೇ ಸಂಗತವೆಂದೂ ತಿಳಿಯಬೇಕು. ॥೧೫-೧೬॥

೧೭-೧೮

ಏಕಾದಶ ವಾಕ್ಕೂಟೇ ಸಾರ್ಧಾ ಏಕಾದಶೋದಿತಾ ಮಧ್ಯೇ ||೧೭||
ಸಾರ್ಧಾ ಅಷ್ಟೌ ಶಕ್ತೌ ಏಕೈಕಲವೋನಿತಾ ಮಾತ್ರಾಃ |
ಸಂಹತ್ಯೈಕತ್ರಿಂಶನ್ಮಾತ್ರಾ ಮಂತ್ರೇ ಲವತ್ರಯನ್ಯೂನಾಃ ||೧೮||

ಶಕ್ತೌ ತೃತೀಯಕೂಟೇ || ೧೭-೧೮ ||

ವಾಗ್ಭವಕೂಟದಲ್ಲಿ ಸೇರಿ ಹತ್ತು ಮಾತ್ರೆ ಇನ್ನೂರ ಐವತ್ತೈದು ಲವಗಳು, ಕಾಮರಾಜ ಕೂಟದಲ್ಲಿ ಹನ್ನೊಂದು ಮಾತ್ರೆ ಒಂದುನೂರ ಇಪ್ಪತ್ತೇಳು ಲವಗಳು, ಶಕ್ತಿಕೂಟದಲ್ಲಿ ಎಂಟು ಮಾತ್ರೆ ಒಂದುನೂರ ಇಪ್ಪತ್ತೇಳು ಲವಗಳು, ಪೂರ್ಣ ಮಂತ್ರದಲ್ಲಿ ಸೇರಿ ಮೂವತ್ತು ಮಾತ್ರೆ ಮತ್ತು ಇನ್ನೂರ ಐವತ್ತಮೂರು ಲವಗಳು ಇರುತ್ತವೆ. ||೧೭-೧೮||

೧೯

ಕಂಠೇ ಚ ಕಂಠತಾಲುನಿ ತಾಲುನಿ ದಂತೇಷು ಮೂರ್ಧ್ನಿ ನಾಸಾಯಾಮ್ ।
ಸ್ಪೃಷ್ಟವಿವಾರಾದ್ಯಾಂತರಬಾಹ್ಯೈರ್ಯತ್ನೈಸ್ತದಕ್ಷರೋತ್ಪತ್ತಿಃ ॥೧೯॥

ಉತ್ಪತ್ತಿಸ್ಥಾನಯತ್ನಾವಾಹ–ಕಕಾರತ್ರಯಮಕಾರದಶಕಂ ಹಕಾರಪಂಚಕಂ ಚ ಕಂಠೇ. ದ್ವಿತೀಯಮಕ್ಷರಂ ಕಂಠತಾಲುನಿ. ಪ್ರಾಣ್ಯಂ ಗತ್ವಾದೇಕವದ್ಭಾವಃ. ಈಕಾರಚತುಷ್ಟಯಂ ತಾಲುನಿ. ಲಕಾರತ್ರಯಂ ಸಕಾರದ್ವಯಂ ಚ ದಂತೇಷು. ರೇಫತ್ರಯಂ ತು ಮೂರ್ಧ್ನಿ. ಬಿಂದ್ವಾದಿನವಕತ್ರಯಂ ನಾಸಾಯಾಂ. ಸ್ಪೃಷ್ಟೇತಿ. ಕಕಾರಾಃ ಸ್ಪೃಷ್ಟಯತ್ನಾಃ. ಅಕಾರಾಃ ಸಂವೃತಾಃ. ಈಕಾರಾ ಏಕಾರಶ್ಚ ವಿವೃತಾಃ. ರೇಫಾಲಕಾರಾಶ್ಚೇಷತ್ಸ್ಪೃಷ್ಟಾಃ. ಹಕಾರಾಃ ಸಕಾರೌ ಚೇಷದ್ವಿವೃತಾಃ.

ವರ್ಣಗಳ ಉತ್ಪತ್ತಿ ಸ್ಥಾನಗಳು ಮತ್ತು ಪ್ರಯತ್ನಗಳು ಈ ರೀತಿಯಾಗಿವೆ:– ಮಂತ್ರದಲ್ಲಿ ಬರುವ ಎಲ್ಲ ಕಕಾರ-ಅಕಾರ-ಹಕಾರಗಳಿಗೆ ಕಂಠಸ್ಥಾನವು. ಏಕಾರಕ್ಕೆ ಕಂಠತಾಲುಸ್ಥಾನ. ಈ ಕಾರಗಳಿಗೆ ತಾಲುಸ್ಥಾನ. ಎಲ್ಲ ಲಕಾರ, ಸಕಾರಗಳಿಗೆ ದಂತಸ್ಥಾನ, ರವರ್ಣಗಳಿಗೆ ಮೂರ್ಧಸ್ಥಾನ, ಬಿಂದು ಮುಂತಾದ ಒಂಭತ್ತು ವರ್ಣಗಳಿಗೆ ನಾಸಾಸ್ಥಾನವು, ಈ ರೀತಿ ಸ್ಥಾನಗಳು. ಕಕಾರಗಳಿಗೆ ಸ್ಪೃಷ್ಟಪ್ರಯತ್ನ, ಅಕಾರಗಳಿಗೆ ಸಂವೃತ ಪ್ರಯತ್ನ, ಈ–ಏಕಾರಗಳಿಗೆ ವಿವೃತ ಪ್ರಯತ್ನ, ರೇಫ-ಲಕಾರಗಳಿಗೆ ಈಷತ್ ಸ್ಪೃಷ್ಟ ಪ್ರಯತ್ನ, ಹ-ಸಕಾರಗಳಿಗೆ ಈಷದ್ವಿವೃತ, ಬಿಂದು ಮುಂತಾದುವುಗಳಿಗೆ ಸಂವೃತತಮಪ್ರಯತ್ನ, ಈ ರೀತಿ ಆಭ್ಯಂತರ ಪ್ರಯತ್ನಗಳು. ಕಕಾರಗಳಿಗೆ ವಿವಾರ-ಶ್ವಾಸ-ಅಘೋಷ-ಅಲ್ಪಪ್ರಾಣ ಪ್ರಯತ್ನ, ಸಕಾರಗಳಿಗೆ ವಿವಾರ-ಶ್ವಾಸ-ಅಘೋಷ-ಮಹಾಪ್ರಾಣ ಪ್ರಯತ್ನ, ಸ್ವರಗಳಿಗೆ ಉದಾತ್ತ ಪ್ರಯತ್ನ, ರೇಫ ಲಕಾರಗಳಿಗೆ ಸಂವಾರ-ನಾದ-ಘೋಷ ಅಲ್ಪಪ್ರಾಣ ಪ್ರಯತ್ನ, ಹಕಾರಗಳಿಗೆ ಸಂವಾರ-ನಾದ-ಘೋಷ-ಮಹಾಪ್ರಾಣಪ್ರಯತ್ನ, ಬಿಂದು ಮುಂತಾದ ಒಂಭತ್ತಕ್ಕೆ ಆತ್ಯಂತಿಕವಾದ ಸಂವಾರ-ನಾದ-ಘೋಷ-ಮಹಾಪ್ರಾಣ ಪ್ರಯತ್ನ, ಈ ರೀತಿ ಬಾಹ್ಯಪ್ರಯತ್ನಗಳು. ಹೀಗೆ ವರ್ಣಗಳ ಸ್ಥಾನ ಪ್ರಯತ್ನಗಳ ವಿವೇಚನೆಯನ್ನು ಅರಿಯಬೇಕು ॥೧೯॥

೨೦-೨೧

ಪ್ರಲಯಾಗ್ನಿನಿಭಂ ಪ್ರಥಮಂ ಮೂಲಾಧಾರಾದನಾಹತಂ ಸ್ಪೃಶತಿ।
ತಸ್ಮಾದಾಜ್ಞಾ ಚಕ್ರಂ ದ್ವಿತೀಯಕೂಟಂ ತು ಕೋಟಿಸೂರ್ಯಾಭಮ್ ॥೨೦॥
ತಸ್ಮಾಲ್ಲಲಾಟಮಧ್ಯಂ ತಾರ್ತೀಯಂ ಕೋಟಿ ಚಂದ್ರಾಭಮ್ ।
ಮಾಲಾಮಣಿವದ್ವರ್ಣಾಃ ಕ್ರಮೇಣ ಭಾವ್ಯಾ ಉಪರ್ಯುಪರಿ ॥೨೧॥

ಬಿಂದ್ವಾದಯಃ ಸಂವೃತತಮಾಃ. ಇತ್ಯಾಭ್ಯಂತರೋ ಯತ್ನಃ. ಕಕಾರಾ ವಿವಾರಶ್ವಾಸಾಘೋಷವಂತೋಽಲ್ಪಪ್ರಾಣವಂತಶ್ಚ. ಸಕಾರೌ ಮಹಾ ಪ್ರಾಣವಂತೌ ವಿವಾರಾದಿಮಂತೌ ಚ. ಸ್ವರಾಃ ಸರ್ವೇಽಪ್ಯುದಾತ್ತಾಃ. ರೇಫಾ ಲಕಾರಾಶ್ಚ ಸಂವಾರನಾದಘೋಷಾಲ್ಪಪ್ರಾಣವಂತಃ. ಹಕಾ ರಾಸ್ತು ಸಂವಾರಾದಿತ್ರಯವಂತೋ ಮಹಾಪ್ರಾಣವಂತಶ್ಚ. ಬಿಂದ್ವಾದ ಯಸ್ತ್ವಾತ್ಯಂತಿಕಸಂವಾರಾದಿಚತುಷ್ಕವಂತಃ. ಇತಿ ಬಾಹ್ಯಃ ಪ್ರಯತ್ನಃ॥

ಶರೀರ ಮಧ್ಯದಲ್ಲಿ ಗುದಸ್ಥಾನದ ಎರಡು ಅಂಗುಲ ಮೇಲ್ಭಾಗ, ಲಿಂಗ, ನಾಭಿ, ಹೃದಯ, ಕಂಠ, ಭ್ರೂಮಧ್ಯವೆಂಬ ಆರು ಸ್ಥಳಗಳಲ್ಲಿ ಕ್ರಮವಾಗಿ ಮೂಲಾ ಧಾರ, ಸ್ವಾಧಿಷ್ಠಾನ ಮಣಿಪೂರ, ಅನಾಹತ, ವಿಶುದ್ಧಿ, ಆಜ್ಞಾ ಎಂಬ ಆರು ಚಕ್ರಗಳು ಚತುರ್ದಲ-ಷಡ್ದಲ-ದಶದಲ-ದ್ವಾದಶದಲ- ಷೋಡಶದಲ-ದ್ವಿದಲರೂಪ ಗಳಾಗಿ ಎರಡೆರಡು ಗ್ರಂಥಿಗಳ ಮಧ್ಯದಲ್ಲಿ ಬದ್ಧಗಳಾಗಿ ಇವೆ. ವಾಗ್ಭವಕೂಟವು ಪ್ರಲಯ ಕಾಲದ ಅಗ್ನಿಯಂತೆ ಜ್ವಲಿಸುತ್ತಾ ಮೂಲಾಧಾರದಿಂದ ಪ್ರಾರಂಭಿಸಿ ಅನಾಹತ ಚಕ್ರವನ್ನು ಮುಟ್ಟುತ್ತದೆ. ಕಾಮರಾಜಕೂಟವು ಅನಾಹತ ಚಕ್ರ ದಿಂದ ಮೇಲೆ ಒಂದು ಕೋಟಿ ಸೂರ್ಯರಂತೆ ತಪಿಸುತ್ತಾ ಆಜ್ಞಾಚಕ್ರವನ್ನು ಮುಟ್ಟುತ್ತದೆ. ಶಕ್ತಿ ಕೂಟವು ಕೋಟಿ ಚಂದ್ರರ ಕಾಂತಿಯುಳ್ಳದ್ದಾಗಿ ಆಜ್ಞಾ ಚಕ್ರದಿಂದ ಲಲಾಟ ಮಧ್ಯವನ್ನು ಮುಟ್ಟುತ್ತದೆ. ಜಪಮಾಲೆಯಲ್ಲಿರುವ ಮಣಿ ಗಳಂತೆ ವರ್ಣಗಳು ಕ್ರಮವಾಗಿ ಒಂದರ ಮೇಲೊಂದು ಇರುವಂತೆ ಉಚ್ಚರಿಸಿ ಧ್ಯಾನಿಸಬೇಕು. ಇಲ್ಲಿ ಹೇಳಿರುವ ಸ್ಥಾನಗಳಲ್ಲಿ ಬಿಂದ್ವಾದಿಗಳಿಂದ ವರ್ಜಿತವಾದ ಕೂಟಗಳು ಇರುತ್ತವೆಯೆಂದು ತಿಳಿಯಬೇಕು. ಇನ್ನು ಸುಷುಮ್ನಾ ನಾಡಿಯ ಎರಡು ಅಗ್ರಗಳಲ್ಲಿ ಎರಡು ಸಹಸ್ರ ದಳಗಳ ಕಮಲಗಳೂ ಮಧ್ಯದಲ್ಲಿ ಅಷ್ಟದಲ ಷಡ್ದಲಗಳೆಂದು ನಾನಾ ವಿಧವಾದ ಮೂವತ್ತು ಕಮಲಗಳೂ ಇವೆಯೆಂಬೀ

ಅಥ ವರ್ಣಾನಾಂ ಸ್ಥಿತಿ ಸ್ಥಾನಂ ರೂಪಮಾಕಾರಂ ಚಾಹ ಮೂಲಾಧಾರಾದಿತ್ಯಾದಿಪಂಚವಿಾತ್ರಯಂ ಲ್ಯಬ್ಲೋಪೇ. ಮೂಲಾಧಾರ ಮಾರಭ್ಯೇತ್ಯರ್ಥಃ. ತಸ್ಮಾದನಾಹತಮಾರಭ್ಯ ತಸ್ಮಾದಾಜ್ಞಾಚಕ್ರಮಾ ರಭ್ಯ. ಇದಂ ಚ ಸ್ಥಾನತ್ರಯಂ ಬಿಂದ್ವಾದಿರಹಿತಕೂಟತ್ರಯಸ್ಯೈವ, ಸುಷುಮ್ನಾಖ್ಯನಾಡೀ ಮೂಲಾಗ್ರಯೋರ್ದ್ವೇ ಸಹಸ್ರದಲಕಮಲೇ, ಮಧ್ಯೇ ಚಾಷ್ಟದಲಷಡ್ದಲಾದೀನಿ ತ್ರಿಂಶತ್ಪದ್ಮಾನಿ ಸವಿಸ್ತರಂ ಸ್ವಚ್ಛಂದ ಸಂಗ್ರಹಾದೌ ಪ್ರಪಂಚಿತಾನಿ. ತತ್ರ ಗುದೋಪರಿದ್ವ್ಯಂಗುಲೋರ್ಧ್ವೇ ಲಿಂಗೇ ನಾಭೌ ಹೃದಿಕಂಠೇ ಭ್ರೂಮಧ್ಯೇ ಚ ಮೂಲಾಧಾರ-ಸ್ವಾಧಿಷ್ಠಾನ-ಮಣಿಪೂರಾನಾಹತವಿಶುದ್ಧ್ಯಾಜ್ಞಾನಾಮಕಾನಿ ಚತುಃಷಡ್ದಶದ್ವಾದಶ ಷೋಡಶದ್ವಿದಲಾನಿ ದ್ವಿದ್ವಿಗ್ರಂಥಿಮಧ್ಯಸಂದಷ್ಟಾನಿ ಚಕ್ರಪದವಾಚ್ಯಾನ್ಯಪಿ ಷಟ್ಪದ್ಮಾನಿ ಸಂತೀತ್ಯನ್ಯತ್ರ ವಿಸ್ತರಃ ॥ ೨೦-೨೧ ॥

ಮೊದಲಾದ ವಿಶೇಷ ವಿಷಯಗಳನ್ನು ಸ್ವಚ್ಛಂದ ಸಂಗ್ರಹವೇ ಮುಂತಾದ ಗ್ರಂಥ ಗಳಲ್ಲಿ ವಿಸ್ತರಿಸಿದೆ ||೨೦||

ಮೂಲಾಧಾರದಿಂದ ಹೊರಟ ನಾದವು ಪ್ರತಿಯೊಂದು ವರ್ಣಗಳನ್ನು ವ್ಯಾಪಿಸಿ ಮಾಲಾಮಣಿಗಳ ನಡುವೆ ಸೂತ್ರದಂತೆ ತೋರುತ್ತದೆ. ಈ ಶಾಸ್ತ್ರ ಪ್ರಕ್ರಿಯೆಯಂತೆ ಶಬ್ದ ಸೃಷ್ಟಿಯಾಗುವ ಬಗೆಯು ಈ ರೀತಿಯಾದುದು :—ಚಿಕ್ಕ ಆಲದ ಮರದಲ್ಲಿ ಅಂತರ್ಗತವಾಗಿ ಭಾವಿಮಹಾವೃಕ್ಷದ ಸೂಕ್ಷ್ಮರೂಪವಿರುವಂತೆ ಶಬ್ದ ಸೃಷ್ಟಿಯ ಸೂಕ್ಷ್ಮರೂಪವುಳ್ಳ ಬೀಜಸ್ಥಾನೀಯಳಾದ ತ್ರಿಪುರಸುಂದರೀ ದೇವಿಯನ್ನೇ ಸೂಕ್ಷ್ಮರೂಪದಿಂದ ಕೂಡಿರುವುದರಿಂದ "ಪರಾ" ಎಂದು ಹೇಳು ತ್ತಾರೆ. ಇದಕ್ಕೆ ಮಾತಿ=ಅಳೆಯುತ್ತಿದೆ, ತರತಿ = ದಾಟುತ್ತಿದೆ, ಕಾಯತಿ = ಶಬ್ದ ಮಾಡುತ್ತಿದೆ, ಎಂಬ ಅರ್ಥಗಳನ್ನು ಕೊಡುವ ಧಾತುರೂಪಗಳಿಂದ ವ್ಯಂಜನ ಗಳನ್ನು ತೆಗೆದುಕೊಂಡು ಮಾತೃಕಾ ಎಂಬ ಹೆಸರೂ ಬಂದಿದೆ. ನಿರ್ವಿಕಾರವಾದ ಈ ಪರಾಮಾತೃಕೆಯಲ್ಲಿ ಅನಾದಿ ಸಿದ್ಧವಾದ ಪ್ರತಿ ಪ್ರಾಣಿಗಳ ಅದೃಷ್ಟವಶದಿಂದ ತನ್ನಲ್ಲಿ ಅಡಗಿರುವ ಪ್ರಪಂಚವನ್ನು ಸೃಜಿಸಬೇಕೆಂಬ ಇಚ್ಛೆಯು ಪ್ರಾದುರ್ಭವಿಸು ವುದು. ತರುವಾಯ "ತದೈಕ್ಷತ ಬಹುಸ್ಯಾಂಪ್ರಜಾಯೇಯ" ಎಂಬ ಶ್ರುತಿವಾಕ್ಯ ದಲ್ಲಿ ಹೇಳಿರುವಂತೆ ಸೃಜ್ಯಪದಾರ್ಥಗಳನ್ನು ಆಲೋಚಿಸುವಳು. ಅಂತಹ ಈಕ್ಷಣಾ ವಸ್ಥೆಯಲ್ಲಿರುವಾಗ ಅದಕ್ಕೆ ಅನುರೂಪವಾದ ಪಶ್ಯಂತೀ ಎಂಬ ಹೆಸರು ಬರುವುದು.

ಆಧಾರೋತ್ಥಿತನಾದೋ ಗುಣ ಇವ ಪರಿಭಾತಿ ವರ್ಣಮಧ್ಯಗತಃ ॥

ಅತ್ರೇಯಂ ಶಬ್ದಸೃಷ್ಟಿಪ್ರಕ್ರಿಯಾ-ವಟಬೀಜಾಂತರ್ಗತವಟವೃಕ್ಷೀಯ ಸೂಕ್ಷ್ಮರೂಪ ತುಲ್ಯ ಶಬ್ದ ಸೃಷ್ಟಿಸೂಕ್ಷ್ಮರೂಪಶಾಲಿನೀ ಪೂರ್ವೋಕ್ತರೂಪಾ ತ್ರಿಪುರಸುಂದರ್ಯೇವ ತಾದೃಶಸೂಕ್ಷ್ಮರೂಪವತ್ತ್ವಪ್ರವೃತ್ತಿನಿಮಿತ್ತಕಪರಾಪದವಾಚ್ಯಾ. ಸೈವ ಚ ಮಾತಿ ತರತಿ ಕಾಯತೀತಿ ಚ ವ್ಯುತ್ಪತ್ತ್ಯಾ ಮಾತೃಕೇತ್ಯುಚ್ಯತೇ. ತಸ್ಯಾಂ ಚ ನಿರ್ವಿಕಾರಾಯಾಮುಪ್ಯನಾದಿಸಿದ್ಧ ಪ್ರಾಣ್ಯದೃಷ್ಟವಶಾತ್ಸ್ವಾಂತಃಸಂಹೃತ ವಿಶ್ವಸಿಸೃಕ್ಷೋತ್ಪದ್ಯತೇ. ತತಃ ಸ್ರಷ್ಟವ್ಯಪದಾರ್ಥಾನಾಲೋಚಯತಿ. "ತದೈಕ್ಷತ ಬಹು ಸ್ಯಾಂ ಪ್ರಜಾಯೇಯ" (ಛಾಂ ಉ ೬-೨-೩) ತಾದೃಶಮೀಕ್ಷಣಮೇವ ಪ್ರವೃತ್ತಿನಿಮಿತ್ತೀಕೃತ್ಯ ತಸ್ಯಾಂ ಪಶ್ಯಂತೀತಿ ಪದಂ ಪ್ರವರ್ತತೇ. ಸೈವ ಚ ಪಶ್ಯಂತ್ಯಾಖ್ಯಾ ಮಾತೃಕಾ ಕರಣಸರಣಿತ ಉತ್ತೀರ್ಣತ್ವಾದುತ್ತೀರ್ಣೇತ್ಯುಚ್ಯತೇ. ತದವಯವಾಶ್ಚ ವಾಮಾದಯೋಽಷ್ಟೌ ಶಕ್ತಯೋಽನ್ಯತ್ರ ಪ್ರಪಂಚಿತಾಃ. ಅತಃ ಸೈವ ವ್ಯಷ್ಟಿಸಮಷ್ಟಿವೇಷೇಣ ನವವಿಧಾ. ತತೋ ನವ ನಾದಾ ಅವಿಕೃತ ಶೂನ್ಯಾದಯೋ ಜಾತಾಃ. ತತ್ಸಮಷ್ಟಿಶ್ಚ ನಾದಧ್ವನ್ಯಾದಿಪದವಾಚ್ಯಾ ನಾತಿಸೂಕ್ಷ್ಮಾ ಪರಾವನ್ನಾತಿಸ್ಥೂಲಾ ವೈಖರೀವದತೋ ಮಧ್ಯಮಾಽಽಖ್ಯಾ ಮಾತೃಕಾ, ಮಧ್ಯಮಾವಯವರೂಪಮವಿಕೃತಶೂನ್ಯಸ್ಪರ್ಶನಾದಧ್ವನಿಬಿಂದು ಶಕ್ತಿಬೀಜಾಕ್ಷರಾಖ್ಯಂ ನಾದನವಕಂ ಮೂಲಾಧಾರಾದಿಷಟ್ಕೇ ನಾದೇ ನಾದಾಂತೇ ಬ್ರಹ್ಮರಂಧ್ರೇ ಚ ಸ್ಥಿತಂ. ನವಭಿರ್ನಾದೈರಕ

ಈ ಪಶ್ಯಂತೀ ಎಂಬುದನ್ನು ಕರಣಮಾರ್ಗದ ಮೂಲಕ ದಾಟಿ ಹೋಗುವ ನಿಮಿತ್ತದಿಂದ ಉತ್ತೀರ್ಣಾ ಎಂದೂ ಕರೆಯುವುದುಂಟು. ಇದಕ್ಕೆ ವಾಮಾ, ಜ್ಯೇಷ್ಠಾ ಮುಂತಾದ ಎಂಟು ಶಕ್ತಿಗಳು ಅವಯವಗಳಾಗಿವೆಯೆಂಬುದನ್ನು ಇತರ ಗ್ರಂಥಗಳಿಂದ ವಿಸ್ತಾರವಾಗಿ ತಿಳಿಯಬಹುದು. ಆದುದರಿಂದ ವ್ಯಷ್ಟಿ ಮತ್ತು ಸಮಷ್ಟಿ ರೂಪಗಳಿಂದ ಒಂಭತ್ತು ಬಗೆಯಾಗುವುದು. ಅದರಿಂದ ಅವಿಕೃತ, ಶೂನ್ಯ, ಮುಂತಾದ ಒಂಭತ್ತು ನಾದಗಳು ಹುಟ್ಟುತ್ತವೆ. ಅವುಗಳ ಸಮಷ್ಟಿಯು ಪರಾಮಾತೃಕೆಯಂತೆ ಅತಿ ಸೂಕ್ಷ್ಮವೂ ವೈಖರಿಯಂತೆ ಅತಿ ಸ್ಥೂಲವೂ ಅಲ್ಲದ್ದರಿಂದ ಮಧ್ಯಮಾಮಾತೃಕಾ ಎಂದು ಕರೆಯಲ್ಪಡುವುದು. ಇದರ ಅವಯವಗಳಾದ ಅವಿಕೃತ, ಶೂನ್ಯ, ಸ್ಪರ್ಶ, ನಾದ, ಧ್ವನಿ, ಬಿಂದು, ಶಕ್ತಿ, ಬೀಜ, ಅಕ್ಷರ ಎಂಬ ಒಂಭತ್ತು ನಾದಗಳು ಕ್ರಮವಾಗಿ ಮೂಲಾಧಾರಾದಿ ಷಟ್ಚಕ್ರಗಳಲ್ಲಿಯೂ, ನಾದ, ನಾದಾಂತ, ಬ್ರಹ್ಮರಂಧ್ರಗಳಲ್ಲಿಯೂ ಇರುವುವು. ಈ ಒಂಭತ್ತು ನಾದಗಳಿಂದ, ಅ-ಕ-ಚ-ಟ-ತ-ಪ-ಯ-ಶ-ಳ ಎಂಬ ಒಂಭತ್ತು ವರ್ಗಗಳಿಂದ ಕೂಡಿದ ವೈಖರೀ

ಚಟತಪಯಶಳಾಖ್ಯವರ್ಗನವಕವತೀ ವೈಖರ್ಯಾಖ್ಯಾ ಮಾತೃಕಾ ಜಾತಾ, ವೈ ನಿಶ್ಚಯೇನ, ಸ್ಪಷ್ಟತರತ್ವಾತ್ಖಂ ಕರ್ಣವಿವರವರ್ತಿ ನಭೋರೂಪಶ್ರೋತ್ರೇಂದ್ರಿಯಂ ರಾತಿ ಗಚ್ಛತಿ ತಜ್ಜನ್ಯಜ್ಞಾನವಿಷಯೋ ಭವತೀತಿ ವ್ಯುತ್ಪತ್ತೇರಿತ್ಯಾದ್ಯನ್ಯತೋ ವಿಸ್ತರಃ. ಏವಂ ಚ ಕಕಾರಾದೌ ಕತ್ವಾದಿವರ್ಣಧರ್ಮಾಣಾಂ ಷಡ್ಜತ್ವಾದಿ ಧ್ವನಿಧರ್ಮಾಣಾಂ ಚಾನುಭೂಯಮಾನತ್ವಾತ್ಪರಿಣಾಮೇ ಪರಿಣಾಮಿನೋಽನುಸ್ಯೂತತಾಯಾ ಮೃದ್ಘಟೇ ದರ್ಶನಾಚ್ಚ ವರ್ಣೇಷು ನಾದೋಽನುಸ್ಯೂತಃ. ತಂತುವಿಶೇಷಜನ್ಯಃ ಪಟವಿಶೇಷೋ ವರ್ಣಕಪದವಾಚ್ಯಃ. ತತ್ರ ಕಪ್ರತ್ಯಯಪರಿತ್ಯಾಗೇನ ಪ್ರಯೋಗಸ್ತ್ವಕ್ಷರವಾಚಕವರ್ಣಪದೇನ ಶ್ಲೇಷಾರ್ಥಃ. ಗುಣ ಇವ ವರ್ಣಕಾಖ್ಯ ಪಟವಿಶೇಷೋಪಾದಾನಭೂತತಂತುವಿಶೇಷವನ್ಮಾಲಾಮಣ್ಯಾಧಾರ ಸೂತ್ರವಚ್ಚೇತ್ಯರ್ಥಃ. ವರ್ಣಮಧ್ಯಗತ ಇತ್ಯಸ್ಯ ದ್ವಯೋರ್ವರ್ಣಯೋರ್ಮಧ್ಯಭಾಗೇ ವರ್ಣಶರೀರಾಂತರ್ಭಾಗೇ ಚ ಸ್ಥಿತ ಇತ್ಯರ್ಥಃ. ಅಯಂ ಭಾವಃ—ದ್ವಯೋರ್ವರ್ಣಯೋರ್ಮಧ್ಯಭಾಗೇ ಮಣಿದ್ವಯಮಧ್ಯಭಾಗಸ್ಥಶುದ್ಧಸೂತ್ರವಚ್ಛುದ್ಧನಾದಸ್ಯಭಾನಂ, ವರ್ಣಶರೀರಾಂತರ್ಭಾಗೇ ತು ಪಟಾಭೇದೇನ ಸಂವಲಿತ ತಂತುವದ್ಘಟಾಂತರ್ಮೃದ್ವಚ್ಚ ತತ್ತದ್ವರ್ಣಾಭೇದೇನೈವ ನಾದಸ್ಯ ಭಾನಂ ನ ಪುನಸ್ತತ್ರಮಣ್ಯಂತರ್ಗತಸೂತ್ರದೃಷ್ಟಾಂತಃ, ತಸ್ಯ ಮಣಿತೋತ್ಯಂತಭಿನ್ನತ್ವಾದಿತಿ. ‖ ೨೧ ‖

ಎಂಬ ಮಾತೃಕೆಯು ಹುಟ್ಟುತ್ತದೆ. ವೈ = ನಿಶ್ಚಯವಾಗಿ, ಖಂ = ಕಿವಿಯ ರಂಧ್ರವನ್ನು, ರಾತಿ = ಸ್ಪರ್ಶಿಸುತ್ತದೆ ಎಂಬ ಅರ್ಥದಿಂದ ಶ್ರೋತ್ರೇಂದ್ರಿಯಕ್ಕೆ ಗೋಚರವಾಗುವುದರಿಂದ ವೈಖರೀ ಎಂಬ ಹೆಸರು ಬಂದಿರುವುದು. ಹೀಗೆ ಹುಟ್ಟುವ ಕಕಾರ ಮುಂತಾದ ವರ್ಣಗಳಲ್ಲಿ ಕತ್ವ ಮುಂತಾದ ವರ್ಣ ಧರ್ಮಗಳೂ ಷಡ್ಜತ್ವ ಮುಂತಾದ ಧ್ವನಿ ಧರ್ಮಗಳೂ ತೋರುತ್ತಿರುವುದರಿಂದ ಪರಿಣಾಮದಲ್ಲಿ ಕಾರಣ ಧರ್ಮವು ಅನುಗತವಾಗಿಬರುವುದು ಯುಕ್ತವಾದ್ದರಿಂದ ನಾದವು ವರ್ಣಗಳಲ್ಲಿ ಅನುಗತವಾಗಿರುವುದು. ವಸ್ತ್ರವಿಶೇಷದಲ್ಲಿ ತಂತುವು ಸೇರಿಕೊಂಡಿರುವಂತೆ ವರ್ಣಗಳಲ್ಲಿ ಎರಡೆರಡು ವರ್ಣಗಳ ನಡುವೆಯೂ ವರ್ಣ ಸ್ವರೂಪದ ಮಧ್ಯದಲ್ಲಿಯೂ ನಾದವು ಸೇರಿಕೊಂಡಿದೆ. ಎರಡು ವರ್ಣಗಳ ನಡುವೆ ಮಣಿಗಳ ನಡುವೆ ಶುದ್ಧವಾದ ಸೂತ್ರವು ಇರುವಂತೆ ಶುದ್ಧ ನಾದವೂ, ಆಕಾರದ ನಡುವೆ ಪಟಮಧ್ಯದಲ್ಲಿ ತಂತುವು ಇರುವಂತೆ ಆಯಾಯ ವರ್ಣಸಂಕರವನ್ನು ಹೊಂದಿದ ನಾದವೂ ಇರುವುದು ‖೨೧‖

೨೨-೨೬

ಮಧ್ಯೇಫಾಲಂ ಬಿಂದುರ್ದೀಪ ಇವಾಭ್ಯಾತಿ ವರ್ತುಲಾಕಾರಃ ॥೨೨॥
ತದುಪರಿಗತೋಽರ್ಧಚಂದ್ರೋಽನ್ವರ್ಥಃ ಕಾಂತ್ಯಾ ತಥಾಽಽಕೃತ್ಯಾ ।
ಅಥ ರೋಧಿನೀ ತದೂರ್ಧ್ವಂ ತ್ರಿಕೋಣರೂಪಾ ಚ ಚಂದ್ರಿಕಾಕಾಂತಿಃ॥೨೩॥
ನಾದಸ್ತು ಪದ್ಮರಾಗವದಂಡದ್ವಯಮಧ್ಯವರ್ತಿನೀವ ಸಿರಾ ।
ನಾದಾಂತಸ್ತಟಿದಾಭಃ ಸವ್ಯಸ್ಥಿತಬಿಂದುಯುಕ್ತಲಾಂಗಲವತ್ ॥೨೪॥
ತಿರ್ಯಗ್ಬಿಂದುದ್ವಿತಯೇ ನಾದೋದ್ಗಚ್ಛತ್ರಿಸಿರಾಕೃತಿಃ ಶಕ್ತಿಃ ।
ಬಿಂದೂದ್ಗಚ್ಛತ್ರ್ಯಶ್ರಾಕಾರಧರಾ ವ್ಯಾಪಿಕಾ ಪ್ರೋಕ್ತಾ ॥೨೫॥
ಊರ್ಧ್ವಾಧೋಬಿಂದುದ್ವಯಸಂಯುತರೇಖಾಕೃತಿಃ ಸಮನಾ ।
ಸೈವೋರ್ಧ್ವಬಿಂದುಹೀನೋನ್ಮನಾ ತದೂರ್ಧ್ವಂ ಮಹಾಬಿಂದುಃ ॥೨೬॥
ಶಕ್ತ್ಯಾದೀನಾಂ ತು ವಪುಃ ದ್ವಾದಶರವಿಕಾಂತಿಪುಂಜಾಭಮ್ ॥




(ಬಿಂದು)

ಬಿಂದುವು ಲಲಾಟಮಧ್ಯದಲ್ಲಿ ಗುಂಡಾದ ಆಕಾರವನ್ನು ಹೊಂದಿ ದೀಪದಂತೆ ಹೊಳೆಯುತ್ತಿದೆ



(ಅರ್ಧಚಂದ್ರ)

ಕಾಂತಿ ಮತ್ತು ಆಕಾರ ಇವೆರಡರಿಂದಲೂ ಅರ್ಧಚಂದ್ರನಿಗೆ ಸಮಾನವಾಗಿ ಬಿಂದುವಿನ ಮೇಲ್ಗಡೆಯಲ್ಲಿರುವುದು ಅರ್ಧಚಂದ್ರವು. ಈ ಕಾಂತಿ ಆಕಾರಗಳಿಂದಲೇ ಅನ್ವರ್ಥವಾದ ಈ ಹೆಸರು ಬಂದಿರುತ್ತೆ.



(ರೋಧಿನೀ)

ರೋಧಿನೀ ಎಂಬುದು ಅರ್ಧಚಂದ್ರದ ಮೇಲುಭಾಗದಲ್ಲಿ ಬೆಳದಿಂಗಳಿನಂತೆ ಕಾಂತಿಯುಳ್ಳದ್ದಾಗಿಯೂ ತ್ರಿಕೋಣರೂಪವಾಗಿಯೂ ಇರುವುದು.

ಅಥಾವಶಿಷ್ಟಸ್ಯ ಬಿಂದ್ವಾದಿನವಕಸ್ಯ ಸ್ಥಿತಿಸ್ಥಾನರೂಪಾಕಾರಾನಾಹ—ಮಧ್ಯೇಫಾಲಂ ಫಾಲಸ್ಯ ಮಧ್ಯೇ. "ಪಾರೇ ಮಧ್ಯೇ ಷಷ್ಠ್ಯಾ ವಾ" (೨-೧-೧೮) ಇತಿ ಸಮಾಸಃ. ಕಾಂತ್ಯಾ, ಆಕೃತ್ಯಾ ಚಾನ್ವರ್ಥಃ, ಅರ್ಧಚಂದ್ರವತ್ಕಾಂತಿರಾಕಾರಶ್ಚೇತ್ಯರ್ಥಃ. ಅಂಡಸ್ಥಾನೀಯೌ ದ್ವೌ ಬಿಂದೂ ಸಿರಾಸ್ಥಾನೀಯಾ ಮಧ್ಯರೇಖಾ ಚೇತಿ ತ್ರಯಂ ಸಂಹತ್ಯ ನಾದಸ್ಯಾಕಾರಃ "ಬಿಂದುದ್ವಯಾಂತರೇ ದಂಡಃ ಶಿವರೂಪೋ ಮಣಿಪ್ರಭಃ" ಇತಿ ಚಕ್ರಸಂಕೇತೋಕ್ತೇಃ. ಶಿವೋ ಮುಷ್ಕದ್ವಯಮಧ್ಯವರ್ತಿನೀ ನಾಡೀ, ಮಣಿಃ ಪದ್ಮರಾಗ ಇತಿ ತು ಸಾಂಪ್ರದಾಯಿಕೀ ವ್ಯಾಖ್ಯಾ. ದಂಡಸ್ಯ ಶಿವರೂಪತ್ವವಿಶೇಷಣಂ ಘನತಾದಾರ್ಢ್ಯಯೋರ್ನಿರಾಸಾಯ, ಕೇಶತುಲ್ಯಪಿಷ್ಟವಿಕಾರೇಷು ಪಾಯಸೋಪಯುಕ್ತೇಷು ಶಿವಪದಪ್ರಯೋಗಾದಿತ್ಯಪಿ ವ್ಯಾಖ್ಯಾ ನಾತೀವವಿರುದ್ಧಾ. ಊರ್ಧ್ವಾಗ್ರಂ ದಕ್ಷಿಣಾರಂ ಲಾಂಗಲಂ, ವಾಮಭಾಗೇ ಬಿಂದುರೇಕ ಇತಿ ನಾದಾಂತಾ



(ನಾದ)

ನಾದ ಎಂಬುದು ಅಂಡಕೋಶಗಳ ನಡುವೆ ಸೂಕ್ಷ್ಮವಾದ ನಾಡಿಯಿರುವಂತೆ ಎರಡು ಬಿಂದುಗಳ ನಡುವೆ ಒಂದು ರೇಖೆಯ ಆಕಾರವುಳ್ಳದ್ದಾಗಿರುತ್ತದೆ. "ಬಿಂದುದ್ವಯಾಂತರೇ ದಂಡಃ ಶಿವರೂಪಃ ಮಣಿಪ್ರಭಃ" ಎಂಬ ಚಕ್ರಸಂಕೇತ ವಚನವು ಅದಕ್ಕೆ ಪ್ರಮಾಣವು. ಶಿವವೆಂದರೆ ಅಂಡಕೋಶವೆಂದು ಅರ್ಥವು. ಆ ವಚನದಲ್ಲಿ ದಂಡ ಎಂಬ ವಿಶೇಷಣವಿದ್ದರೂ ದಂಡದಲ್ಲಿರುವ ಘನತ್ವ ಕಠಿನತ್ವಗಳನ್ನು ವ್ಯಾವೃತ್ತಿಮಾಡುವುದಕ್ಕೋಸ್ಕರ ಪುನಃ ಶಿವ ಎಂದು ವಿಶೇಷಣವನ್ನು ಕೊಟ್ಟಿರುವುದು. ಪಾಯಸಕ್ಕೆ ಉಪಯೋಗಿಸುವ ಶ್ಯಾವಿಗೆಯ ಆಕಾರವುಳ್ಳದ್ದು ಎಂದು ಶಿವಪದದಿಂದ ಅರ್ಥಮಾಡಬಹುದು.



(ನಾದಾಂತ)

ನಾದಾಂತವು ಊರ್ಧ್ವಮುಖವಾಗಿ ನಿಲ್ಲಿಸಿದ, ಕೆಳಗಡೆ ಬಲಭಾಗದಲ್ಲಿಮಾತ್ರ

ಕಾರಃ. ವಿಸರ್ಜನೀಯವದೂರ್ಧ್ವಾರ್ಥೋ ಬಿಂದುದ್ವಯಮಿತಿ ಭ್ರಮನಿರಾಸಾಯಾಹ—ತಿರ್ಯಗಿತಿ. ವಾಮಾದ್ವಾಮಭಾಗಸ್ಥಬಿಂದುಮಾರಭ್ಯೋರ್ಧ್ವಂಗಚ್ಛಂತೀನಿಸ್ಸರಂತೀ ಯಾ ಸಿರಾ ರೇಖಾ ತದಾಕಾರೇತ್ಯರ್ಥಃ. 'ಶಕ್ತಿರ್ವಾಮಸ್ಥಬಿಂದೂದ್ಯತ್ಸಿರಾಕಾರಾ' ಇತಿ ಚಕ್ರಸಂಕೇತೇ. ಆರ್ಷತ್ವಾತ್ಸಮಸ್ತಸ್ಯಾಪಿ ಬಿಂದುಪದಸ್ಯ ಪೂರ್ವಪದೇನ ಸಹ ಬಹುವ್ರೀಹ್ಯವಯವತ್ವೇನ, ಉತ್ತರಪದೇನ ಸಹ ಪಂಚಮೀತತ್ಪುರುಷತ್ವೇನಾಪಿ ಕಾಕಾಕ್ಷಿನ್ಯಾಯೇನಾನ್ವಯ ಇತಿ ಸಾಂಪ್ರದಾಯಿಕವ್ಯಾಖ್ಯಾನಾತ್. ಉದ್ಯತ್ಪದಸ್ಯ ಸಾಮಾನ್ಯವಾಚಕಸ್ಯಾಪಿ ಬಿಂದೂದ್ಯದಿತಿ ವಿಶೇಷೇ ಲಕ್ಷಣಾಯಾಂ ವಾಮಸ್ಥಾದ್ಬಿಂದೋರುದ್ಯತ್ಯಾಃ ಸಿರಾಯಾ ಆಕಾರೋ ಯಸ್ಯಾ ಇತ್ಯೇವ ವಿಗೃಹ್ಯ ಬಿಂದೋರ್ವಾಮಸ್ಥತ್ವವಿಶೇಷಣಬಲಾದೇವ ದಕ್ಷಿಣದಿಗ್ಭಾಗೇ ನಿಸ್ಸಿರಾಕ ಏಕೋ ಬಿಂದುರಸ್ತೀತಿ ಗಮ್ಯತ ಇತಿ ವ್ಯಾಖ್ಯಾಯಾಂ ವಾ ನ ಕೋಽಪಿ ಕ್ಲೇಶಃ,

ವಕ್ರರೇಖೆಯ ಆಕಾರವುಳ್ಳ ನೇಗಲಿನಂತೆ ಆಕೃತಿಯನ್ನೂ ಎಡಗಡೆಯಲ್ಲಿ ಒಂದು ಬಿಂದುವನ್ನೂ ಹೊಂದಿರುವುದು.



(ಶಕ್ತಿ)

ಶಕ್ತಿಯು "ಶಕ್ತಿರ್ವಾಮಸ್ಥಬಿಂದೂದ್ಯತ್ಸಿರಾಕಾರಾ" ಎಂಬ ಚಕ್ರಸಂಕೇತ ವಚನ ಪ್ರಮಾಣದಂತೆ ಮಧ್ಯ ಭಾಗದಲ್ಲಿರುವ ಎರಡು ಬಿಂದುಗಳಲ್ಲಿ ಎಡಭಾಗದ ಬಿಂದುವಿನ ಮೇಲ್ಗಡೆಯಲ್ಲಿ ಮಾತ್ರ ಊರ್ಧ್ವಾಗ್ರವಾಗಿ ನಾಡೀ ಆಕಾರದ ರೇಖೆಯನ್ನೆಳೆದರೆ ಅಂತಹ ಆಕಾರವನ್ನು ಹೊಂದಿರುವುದು, "ತಿರ್ಯಗ್ಬಿಂದುದ್ವಿತಯೇ ವಾಮೋದ್ಗಚ್ಛತ್" ಎಂಬ ಮೂಲವಾಕ್ಯದಿಂದ ಅಡ್ಡಲಾಗಿರುವ ಎರಡು ಬಿಂದುಗಳ ನಡುವೆ ಎಡಭಾಗದ ಬಿಂದುವಿನಿಂದ ಮೇಲ್ಗಡೆಗೆ ಹೊರಟ ರೇಖೆಯೆಂದು ಅರ್ಥವಾಗಬೇಕಾದರೆ ಸಮಾಸ ಪದದಲ್ಲಿರುವ ಬಿಂದು ಪದವನ್ನು ಎರಡುಸಲ ಆವೃತ್ತಿಮಾಡಿಕೊಳ್ಳಬೇಕು. ಬಹುವ್ರೀಹಿಸಮಾಸ ತತ್ಪುರುಷ ಸಮಾಸ ಇವೆರಡರಲ್ಲಿಯೂ ಬಿಂದುಪದವನ್ನು ಅನ್ವಯಿಸಬೇಕು, ಆರ್ಷ ವಚನಗಳಲ್ಲಿ ಹೀಗಿರುವುದು ದೋಷವೆಂದು ಭಾವಿಸಲಾಗದು.

ಬಿಂದುಸಂಸ್ಪೃಷ್ಟಾಗ್ರಕ ತ್ರಿಕೋಣಾಕಾರಾ ವ್ಯಾಪಿಕಾ "ಬಿಂದುದ್ವ
ಯಾಂತರಾಲಸ್ಥ ಋಜುರೇಖಾಮಯೀ ಪುನಃ,ಸಮನಾ" ಇತಿ ವಚನೇ
ಶಕ್ತಿವದ್ಬಿಂದುದ್ವಯಂ ತಿರ್ಯಗ್ರೂಪಂ ಮಾ ಭೂದಿತ್ಯತಃ ಸಂಪ್ರದಾಯ
ಮನುಸರನ್ನಾಹ—ಊರ್ಧ್ವಾರ್ಧ ಇತಿ. ಸಂಯುತಾಗ್ರಮೂಲಭಾ
ಗಯೋಃ ಸಂಶ್ಲಿಷ್ಟಾ- ನ ತ್ವಸ್ಪೃಶಂತೀ ಸ್ಥಿತಾ. ಇಯಂ ಚ ಬ್ರಹ್ಮ
ರಂಧ್ರಸಂಸ್ಥಾನಾ. ಇಯ ಮೇವ ಚ ಮನೋನ್ಮನೀತ್ಯಪಿ ವ್ಯವ
ಹ್ರಿಯತೇ. ಮನಸೋ ಯಥಾವಸ್ಥಿತರೂಪಸ್ಯೈವಾಭ್ಯಾಸವಿಶೇಷೇಣೈ
ತಾವತ್ಪರ್ಯಂತವೃತ್ತ್ಯುದ್ಗಮಃ ಸುಸಾಧ ಇತ್ಯತಃ ಸಮನೇತ್ಯುಚ್ಯತೇ.
ಏತದುಪರಿ ತು ರೂಪಾಂತರಂ ಪ್ರಾಪ್ತಸ್ಯೈವ ಮನಸೋ ಧೃತಿವಿಷಯ
ತೇತ್ಯತ ಉತ್ಕ್ರಾಂತಮನಸ್ಕತ್ವಾದುನ್ಮನಾ, ಪ್ರಕೃತಾನುಪಯುಕ್ತ
ಮಪ್ಯುನ್ಮನೋಪರಿಸ್ಥಾನಂ ಚಕ್ರರಾಜಸ್ಯ ತ್ರಿವಿಧಭಾವನಾಂತರ್ಗತ
ನಿಷ್ಕಲಭಾವನಾಯಾಮುಪಯುಕ್ತತ್ವೇನ ಪ್ರಸಂಗಾದಾಹ-ತದೂರ್ಧ್ವಂ

ವಾಮಭಾಗದಲ್ಲಿ ಬಿಂದುವನ್ನು ಹೇಳಿದುದರಿಂದಲೇ ದಕ್ಷಿಣ ಭಾಗದಲ್ಲಿ ಮತ್ತೊಂದು ಬಿಂದುವಿದೆಯೆಂದು ವ್ಯಕ್ತವಾಗುವುದರಿಂದ ಎರಡುಸಲ ಬಿಂದು ಪದದ ಆವೃತ್ತಿಯನ್ನು ಮಾಡಬೇಕಾದುದೂ ಇಲ್ಲ.



(ವ್ಯಾಪಿಕಾ)

ವ್ಯಾಪಿಕಾ ಎಂಬುದು ಬಿಂದುವಿಗೆ ಸ್ಪರ್ಶಿಸಿದ ತ್ರಿಕೋಣಾಕಾರವನ್ನು ಹೊಂದಿರುವುದು



(ಸಮನಾ)

ಸಮನಾ ಎಂಬುವುದು "ಬಿಂದುದ್ವಯಾಂತರಾಲಸ್ಥ ಋಜುರೇಖಾ ಮಯೀ ಪುನಃ" ಎಂಬ ಪ್ರಮಾಣ ವಚನದಿಂದ ಎರಡು ಅಗ್ರಗಳಲ್ಲಿ ಬಿಂದುದ್ವಯದಿಂದ ಕೂಡಿದ ಋಜುವಾದ ರೇಖೆಯ ಆಕಾರವನ್ನು ಹೊಂದಿದೆ ಯೆಂದು ತಿಳಿಯುವದು. ಆ ರೇಖೆಯು ಬಿಂದುಗಳನ್ನು ಮುಟ್ಟಿರುವುದಾಗಿಯೂ ಊರ್ಧ್ವಾಗ್ರವಾಗಿಯೂ ಇರಬೇಕೆಂದೂ ಇಂತಹ ಸಮನಾನಾದವು ಬ್ರಹ್ಮರಂಧ್ರ ಸ್ಥಾನದಲ್ಲಿರುವುದೆಂದೂ ತಿಳಿಯಬೇಕು. ಇದಕ್ಕೆ ಮನೋನ್ಮನೀ ಎಂದೂ

ಮಹಾಬಿಂದುರಿತಿ. ಶಕ್ತ್ಯಾದೀನಾಮಿತಿ. ಸಮನಾಂತಾನಾಂ ತಿಸೃಣಾಮಿತಿ ಸಂಪ್ರದಾಯಃ. 'ಶಕ್ತ್ಯಾದೀನಾಂ ತಿಸೃಣಾಂ ದ್ವಾದಶರವಿತುಲ್ಯಕಾಂತಯಸ್ತನವಃ' ಇತಿ ಪಾಠೋ ಯುಕ್ತಃ. ಬಿಂದ್ವಾದಿಸ್ವರೂಪಾಂಗವಿಸ್ತರಃ ಸ್ವಚ್ಛಂದಸಂಗ್ರಹೇ ದ್ರಷ್ಟವ್ಯಃ ॥ ೨೨-೨೩-೨೪-೨೫-೨೬ ॥

ಹೆಸರುಂಟು. ತನ್ನ ನೈಜರೂಪದಿಂದಿರುವ ಮನಸ್ಸು ಅಭ್ಯಾಸಪಾಟವದಿಂದ ಈ ವಿಧವೃತ್ತಿಯನ್ನು ಹೊಂದಬಲ್ಲದು ಎಂಬ ಕಾರಣದಿಂದ ಸಮನಾ ಎಂದು ಹೆಸರುಬಂದಿರುವುದು.

|
●
(ಉನ್ಮನಾ)

ಉನ್ಮನಾ ಎಂಬುದು ಊರ್ಧ್ವ ಬಿಂದು ವಿಲ್ಲದ ಸಮನಾ ಆಕಾರವನ್ನು ಹೊಂದಿದೆ, ಸಮನಾಸ್ವರೂಪದ ಮುಂದೆ ರೂಪಾಂತರವನ್ನು ಅತಿಕ್ರಮಿಸಿರುವ ಮನಸ್ಸು ಮಾತ್ರ ಪ್ರವರ್ತಿಸುವುದಾದ್ದರಿಂದ ಉನ್ಮನಾ=ಮನಸ್ಸನ್ನು ಅತಿಕ್ರಮಿಸಿದುದು, ಎಂದು ಪ್ರಸಿದ್ಧ ವಾಗಿರುವುದು.

●
(ಮಹಾಬಿಂದು)

ಉನ್ಮನಾ ಮೇಲುಭಾಗದಲ್ಲಿ ಮಹಾ ಬಿಂದುವು ಇರುವುದು. ಇದರ ವರ್ಣನೆಯು ಇಲ್ಲಿ ಉಪಯುಕ್ತವಲ್ಲದುದಾದರೂ ಚಕ್ರರಾಜದ ತ್ರಿವಿಧ ಭಾವನಾಂಗವಾಗಿ ನಿಷ್ಕಲಭಾವನೆಯಲ್ಲಿ ಉಪಯೋಗವಿರುವುದರಿಂದ ಇಷ್ಟು ಮಾತ್ರ ಹೇಳಲ್ಪಟ್ಟಿದೆ.

ಶಕ್ತಿ–ವ್ಯಾಪಿಕಾ–ಸಮನಾ–ಇವುಗಳ ಆಕಾರವು ದ್ವಾದಶಾದಿತ್ಯರಂತೆ ಉಜ್ಜ್ವಲ ಕಾಂತಿಯಿಂದ ಥಳ ಥಳಿಸುವುದು, ಇಲ್ಲಿ "ಶಕ್ತ್ಯಾದೀನಾಂ ತಿಸೃಣಾಂ ದ್ವಾದಶರವಿತುಲ್ಯಕಾಂತಯಸ್ತನವಃ" ಎಂದು ಪಾಠಾಂತರವು ಒಪ್ಪುತ್ತದೆ. ಬಿಂದು ಮುಂತಾದುವುಗಳ ಸ್ವರೂಪ, ಅಂಗ, ಇವುಗಳ ವಿಸ್ತಾರವನ್ನು ಸ್ವಚ್ಛಂದ ಸಂಗ್ರಹವೆಂಬ ಗ್ರಂಥದಲ್ಲಿ ನೋಡಿ ತಿಳಿಯಬೇಕು. ॥ ೨೨-೨೬ ॥

೨೭-೩೦

ಇತ್ಯೇವಂ ವರ್ಣಾನಾಂ ಸ್ಥಾನಂ ಜ್ಞಾತ್ವೋಚ್ಚರೇದ್ಯತ್ನಾತ್ ||೨೭||
ನಾದಃ ಪ್ರಾಥಮಿಕಸ್ತು ದ್ವಿತೀಯಕೂಟೇನ ಸಾಕಮುಚ್ಚಾರ್ಯಃ |
ದ್ವೈತೀಯಿಕಂ ನಾದಂ ತಾರ್ತೀಯೇನೋಚ್ಚರೇನ್ನ ಪೃಥಕ್ ||೨೮||
ಬಿಂದ್ವಾದಿನವಕಯೋಸ್ತು ಪ್ರಾಕ್ತನಕೂಟಸ್ಥಯೋರನಯೋಃ |
ಸಮ್ಮೇಲನೇನ ಸದೃಶಂ ತಾರ್ತೀಯಿಕಂ ವಿಭಾವಯೇತ್ಕೂಟೇ ||೨೯||
ಬಿಂದ್ವಾದಿಕಸಮನಾಂತಂ ಕ್ರಮೇಣ ತಾರ್ತೀಯಮುಚ್ಚರೇನ್ನಾದಮ್ |
ಉನ್ಮನ್ಯಂತರ್ಲೀನಂ ವಿಭಾವಯೇದೇತದುಚ್ಚರಣಮ್ ||೩೦||

ಅಥ ವರ್ಣಾನಾಮುಚ್ಚಾರಣಪ್ರಕಾರಮಾಹ-ಸ್ಥಾನಂ ಕಂಠಾದ್ಯುತ್ಪತ್ತಿ ಸ್ಥಾನಂ ಮೂಲಾಧಾರಾದಿ ಸ್ಥಿತಿಸ್ಥಾನಂ ಚ. ಯತ್ನಾದಾಂತರ

ಮೇಲೆ ಹೇಳಿರುವ ಕ್ರಮದಂತೆ ವರ್ಣಗಳ ಕಂಠ ಮೊದಲಾದ ಉತ್ಪತ್ತಿ ಸ್ಥಾನಗಳನ್ನೂ ಮೂಲಾಧಾರಾದಿ ಸ್ಥಿತಿ ಸ್ಥಾನಗಳನ್ನೂ ಅರಿತು ಮಾನಸ ಜಪವಲ್ಲದ ಇತರ ಉಚ್ಚಾರಣ ಸಂದರ್ಭಗಳಲ್ಲಿ ಆಂತರ ಬಾಹ್ಯ ಪ್ರಯತ್ನಗಳ ಮೂಲಕ ಚನ್ನಾಗಿ ಉಚ್ಚರಿಸಬೇಕು. ಜಪದಲ್ಲಿ ಸ್ಥಾನ--ಪ್ರಯತ್ನಗಳನ್ನು ಈ ಕ್ರಮದಂತೆ ಧ್ಯಾನಿಸಬೇಕು ||೨೭||

ಮಂತ್ರವನ್ನು ಉಚ್ಚರಿಸುವಾಗ ಪ್ರಥಮ ಕೂಟಕ್ಕೆ ಸೇರಿದ ಬಿಂದುವೇ ಮುಂತಾದ ನಾದವು ದ್ವಿತೀಯ ಕೂಟದ ಉಚ್ಚಾರಣೆಯಲ್ಲಿ ಸೇರಿ ಉಚ್ಚರಿಸಲ್ಪಡಬೇಕು. ಬೇರೆಯಾಗಿ ಉಚ್ಚಾರಣೆಯಿಲ್ಲ. ಹೀಗೆ ದ್ವಿತೀಯ ಕೂಟದ ನಾದವನ್ನು ತೃತೀಯ ಕೂಟದ ಉಚ್ಚಾರಣೆಯಲ್ಲಿ ಸೇರಿಸಬೇಕು. ಮುಂದಿನ ಕೂಟಗಳ ಉಚ್ಚಾರಣೆಯಿಂದಲೇ ಮೊದಲಿರುವ ನಾದದ ಉಚ್ಚಾರಣೆಯೂ ಚರಿತಾರ್ಥವಾದ್ದರಿಂದ ಅದಕ್ಕಾಗಿ ಬೇರೆಯಾದ ಪ್ರಯತ್ನ ಕಾಲವಿಲಂಬಗಳು ಆವಶ್ಯಕವಲ್ಲ. ||೨೮||

ಹಿಂದಿನ ಎರಡು ಕೂಟಗಳಲ್ಲಿರುವ ಬಿಂದು ಮೊದಲಾದ ನಾದಗಳು ಮಿಳಿತವಾಗಿರುವಂತೆ ತೃತೀಯ ಕೂಟದ ನಾದವನ್ನು ಭಾವಿಸಬೇಕು ||೨೯||

ತೃತೀಯ ಕೂಟದ ನಾದದಲ್ಲಿ ಬಿಂದು ಮೊದಲಾಗಿ ಸಮನಾಪರ್ಯಂತವನ್ನೂ ಬೇರೆಯಾಗಿ ಉಚ್ಚರಿಸಿ ಪೂರ್ಣವಾದ ನಾದವನ್ನು ಉನ್ಮನಿಯಲ್ಲಿ ಅಂತ

ಬಾಹ್ಯಯತ್ನಪೂರ್ವಕಂ. ಇದಂ ಚ ಮಾನಸಜಪಾತಿರಿಕ್ತವಿಷಯಂ ಕತ್ರ ತತ್ತತ್ಸ್ಥಾನಯತ್ನವಿಭಾವನಮಾತ್ರಸ್ಯೋಪಯೋಗ ಇತಿ ದ್ರಷ್ಟವ್ಯಂ. ನಾದೋ ಬಿಂದ್ವಾದಿನವಕಂ. ಪೂರ್ವಪೂರ್ವಕೂಟಸ್ಥನಾದಸ್ಯೋತ್ತರೋತ್ತರಕೂಟೋಚ್ಚಾರಣೇನೈವೋಚ್ಚರಿತಪ್ರಾಯತ್ವಾನ್ನ ತತ್ರ ಪಾರ್ಥಕ್ಯೇನ ಯತ್ನಃ ಕಾಲವಿಲಂಬೋ ವಾ ಕಾರ್ಯ ಇತ್ಯರ್ಥಃ. ತೃತೀಯಕೂಟೇ ತೂತ್ತರಕೂಟಾಭಾವಾತ್ತದುಭಯಮಪೇಕ್ಷಿತಮಿತ್ಯಾಹ— ಬಿಂದ್ವಾದಿಕೇತಿ ‖ ೨೭-೨೮-೨೯-೩೦ ‖

ರ್ಳಯ ಹೊಂದಿರುವುವನ್ನಾಗಿ ಭಾವಿಸಬೇಕು. ಈ ವಿಧವಾದ ವಿಶಿಷ್ಟವಾದ ಉಚ್ಚಾರಣ ಕ್ರಮವನ್ನು ಈ ವಿದ್ಯೆಯು ಹೊಂದಿರುವುದು ||೩೦||

೩೧

ಆದ್ಯೇ ದಶ ಮಧ್ಯೇ ತಾಃ ಸಾರ್ಧಾಸ್ತಾರ್ತೀಯಕೂಟೇಽಷ್ಟೌ ।
ಏಕಲವೋನಾ ಊನತ್ರಿಂಶನ್ಮಾತ್ರಾ ಮನೋರ್ಜಪೇ ಕಾಲಃ ॥೩೧॥

ಪೂರ್ವಂ ವಿದ್ಯಾಸ್ವರೂಪಸ್ಯ ಕಾಲ ಉಕ್ತಃ, ಇದಾನೀ ಮುಚ್ಚಾರಣಕಾಲಂ ನಿಷ್ಕೃಷ್ಯಾಹ—ಆದ್ಯೇ ಕೂಟೇ ದಶ ಮಾತ್ರಾಃ. ಮಧ್ಯೇ ಕಾಮರಾಜ ಕೂಟೇ ತಾ ದಶ ಸಾರ್ಧಾ ಮಾತ್ರಾಃ. ತಾರ್ತೀಯ ಕೂಟೇಽಷ್ಟಾವಿತಿ. ಅಸ್ಯ ಪೂರ್ವಪರವರ್ತಿ ಪದದ್ವಯಂ ಕಾಕಾಕ್ಷಿನ್ಯಾಯೇನ ದ್ವಿರ್ದ್ವಿರನ್ವಯಿತವ್ಯಂ. ತೇನೈಕಲವೋನಾಃ ಸಾರ್ಧಾ ಅಷ್ಟೌ ಮಾತ್ರಾಸ್ತೃತೀಯಕೂಟೇ ಯಥಾಪೂರ್ವಮವಸ್ಥಿತಾ ಇತ್ಯರ್ಥಃ. ಸಂಹತ್ಯಾಹ—ಏಕಲವೋನಾ ಇತಿ. ಊನತ್ರಿಂಶದೇಕೋನತ್ರಿಂಶತ್. ಜಪೇ ವಾಚಿಕೇ. ನ ತು ಮಾನಸೇ ಪೂರ್ವೋಕ್ತ ಕಾಲಾದಯಃ. ಪ್ರಥಮದ್ವಿತೀಯಕೂಟಸ್ಥಾಸ್ತು ಯತ್ರ ನ್ಯಾಸಾದೌ ಸಂಧ್ಯಾಂಗಭೂತೈಕೈಕಕೂಟಮಾತ್ರಜಪೇ ಚ ಪ್ರಾತಿಸ್ವಿಕಮುಚ್ಚಾರಣೇನ ಕೂಟಾನಾಂ ವಿನಿಯೋಗವಿಧಿಸ್ತತ್ರೈವ ಸಾರ್ಥಕಾ ಇತಿ ವಿಜ್ಞೇಯಂ ॥ ೩೧ ॥

ಮಾನಸ ಜಪ ಕಾಲದಲ್ಲಿ ಪ್ರಥಮ ದ್ವಿತೀಯ ಕೂಟಗಳ ನಾದವು ಮುಂದಿನ ಕೂಟೋಚ್ಚಾರಣೆಯಲ್ಲಿ ಸೇರುವುದರಿಂದ ಆ ನಾದದ ಉಚ್ಚಾರಣಕಾಲವು ನ್ಯೂನವಾಗುವುದು. ಆದ್ದರಿಂದ ಪ್ರಥಮ ಕೂಟದಲ್ಲಿ ಹತ್ತು ಮಾತ್ರಾ ಒಂದುನೂರ ಇಪ್ಪತ್ತೆಂಟು ಲವ ಕಾಲವು. ತೃತೀಯ ಕೂಟದಲ್ಲಿ ಕಾಲವು ನ್ಯೂನವಾಗುವುದಿಲ್ಲವಾದ್ದರಿಂದ ಎಂಟು ಮಾತ್ರಾ ಒಂದುನೂರ ಇಪ್ಪತ್ತೇಳು ಲವಕಾಲವೆಂಬ ಮೊದಲಿನ ಪೂರ್ಣಕಾಲವು. ಒಟ್ಟಾಗಿ ಸೇರಿ ವಾಚಿಕವಾದ ಮಂತ್ರಜಪದಲ್ಲಿ ಇಪ್ಪತ್ತೆಂಟು ಮಾತ್ರಾ ಎರಡುನೂರ ಐವತ್ತೈದು ಲವ ಕಾಲವು. ಪ್ರಥಮ ದ್ವಿತೀಯ ಕೂಟಗಳ ನಾದಕಾಲ ಪರಿಮಾಣವು ನ್ಯಾಸ ಮುಂತಾದ್ದರಲ್ಲಿಯೂ ಸಂಧ್ಯಾಂಗವಾದ ಪ್ರತ್ಯೇಕವಾದ ಕೂಟಗಳ ಜಪ ಪ್ರಸಂಗದಲ್ಲಿಯೂ ಸಾರ್ಥಕವಾಗುವುದು ॥೩೧॥

೨೨-೨೩

ವ್ಯಷ್ಟಿಸಮಷ್ಟಿವಿಭೇದಾದಸ್ಯಾಂ ಚತ್ವಾರಿ ಬೀಜಾನಿ ।
ಸೃಷ್ಟಿಸ್ಥಿತಿ ಸಂಹಾರಾನಾಖ್ಯಾರೂಪಾಣಿ ಭಾವನೀಯಾನಿ ॥೩೨॥
ಪುಟಧಾಮತತ್ತ್ವಪೀಠಾನ್ವಯಲಿಂಗಕವಮಾತೃ ತತ್ಸಮಷ್ಟೀನಾಮ್ ।
ರೂಪಾಂತರಾಣಿ ಬೀಜಾನ್ಯಮೂನಿ ಚತ್ವಾರಿ ಚಿಂತನೀಯಾನಿ ॥೩೩॥

ಅಥ ಕೂಟಾನಾಂ ವ್ಯಷ್ಟಿಸಮಷ್ಟಿಭೇದೇನ ಚತುರ್ಧಾ ಭಿನ್ನಾನಾಂ ಸ್ವರೂಪವಿಶೇಷಾನಾಹ—ಅನಾಖ್ಯಾ ತಿರೋಧಾನಾನುಗ್ರಹಯೋಃ ಸಮಷ್ಟಿಃ, ಕೃತ್ಯಪಂಚಕೇಷ್ವಪ್ಯೌದಾಸೀನ್ಯಾವಲಂಬನರೂಪಾವಸ್ಥಾನ ವಿಶೇಷೋ ವಾ. ಪುಟಾದಿಷಟ್ಕಂ, ಧಾಮುಸಪ್ತಕಂ ಚ ತ್ರಿತ್ರಿರೂಪಂ ಪೃಥಕ್ಪೃಥಕ್, ತತ್ಸಮಷ್ಟಿರೇಕೈಕೇತ್ಯೇವಂ ಚತ್ವಾರಿ ಚತ್ವಾರಿ. ಯಥಾ ಪುಟಾನಿ ಜ್ಞಾತೃಜ್ಞಾನಜ್ಞೇಯಾನಿ, ತತ್ಸಾಮರಸ್ಯಂ ಚ. ಧಾಮಾನಿ ಚಕ್ರನಾಥದಶಾಶಕ್ತಿತ್ರಯಾತ್ಮರೂಪಾಣಿ ಸಪ್ತ. ತತ್ರ ಚಕ್ರಾಣ್ಯಗ್ನಿಚಕ್ರ ಸೂರ್ಯಚಕ್ರಸೋಮಚಕ್ರಾಣಿ ಬ್ರಹ್ಮಚಕ್ರಂ ಚ. ನಾಥಾ ಮಿತ್ರೇಶನಾ

ಈ ವಿದ್ಯೆಯಲ್ಲಿ ವ್ಯಷ್ಟಿ-ಸಮಷ್ಟಿ ಎಂಬ ಭೇದದಿಂದ ಸೃಷ್ಟಿ-ಸ್ಥಿತಿ-ಸಂಹಾರ ಅನಾಖ್ಯಾ ಎಂಬ ನಾಲ್ಕು ಕೃತ್ಯರೂಪವಾದ ಬೀಜಗಳನ್ನು ಪೃಥಗ್ರೂಪದಿಂದ ಮೂರು ಕೂಟಗಳಲ್ಲಿ ಭಾವಿಸಬೇಕು. ಅನಾಖ್ಯಾ ಎಂಬುದು ತಿರೋಧಾನಾನುಗ್ರಹ ಗಳ ಸಮಷ್ಟಿ ಅಥವಾ ಪಂಚಕೃತ್ಯಗಳಲ್ಲಿ ಔದಾಸೀನ್ಯವೆಂಬ ಅವಸ್ಥೆಯನ್ನು ಹೇಳು ವುದು ॥೩೨॥

ಮತ್ತು ಹಿಂದೆ ಹೇಳಿರುವ ಕ್ರಮದಂತೆ ಮೂರು ಕೂಟಗಳಲ್ಲಿಯೂ ವ್ಯಷ್ಟಿ ಸಮಷ್ಟಿ ಎಂಬ ಭೇದಗಳಿಂದ ಪ್ರತಿಯೊಂದರಲ್ಲೂ ನಾಲ್ಕು ವಿಂಗಡಗಳುಳ್ಳ ಪುಟ ಧಾಮ-ತತ್ತ್ವ-ಪೀಠ-ಅನ್ವಯ-ಲಿಂಗ-ಮಾತೃ ರೂಪಗಳು ಮತ್ತು ತತ್ಸಮಷ್ಟಿ ಎಂಬ ರೂಪ ಇವುಗಳ ಬೀಜಗಳನ್ನೂ ಧ್ಯಾನಿಸಬೇಕು. ಇವುಗಳಲ್ಲಿ ಧಾಮ ಎಂಬುದು ಏಳು ಪ್ರಭೇದಗಳನ್ನು ಒಳಗೊಂಡಿದೆ. ಆ ಪ್ರಭೇದಗಳಿಗೂ ಪ್ರತ್ಯೇಕವಾಗಿ ವ್ಯಷ್ಟಿ, ಸಮಷ್ಟಿಗಳಿಂದ ಆಗುವ ನಾಲ್ಕು ಬೀಜಗಳು ಸಮಾನವಾಗಿದೆ. ಈ ಮೂರು ಕೂಟಗಳಿಗೆ ಇರುವ ಬೀಜಗಳು :—

	ವಾಗ್ಭವಕೂಟ	ಕಾಮರಾಜಕೂಟ	ಶಕ್ತಿಕೂಟ	ಕೂಟಸಮಷ್ಟಿ
	ವ್ಯಷ್ಟಿ	ವ್ಯಷ್ಟಿ	ವ್ಯಷ್ಟಿ	ಸಮಷ್ಟಿ
ತೃತೀಯಗಳು	ಸೃಷ್ಟಿ	ಸ್ಥಿತಿ	ಸಂಹಾರ	ಅನಾಖ್ಯಾ

ಥಷಷ್ಠೀಶನಾಥೋಡ್ಡೀಶನಾಥಾಶ್ಚರ್ಯಾನಂದನಾಥಶ್ಚ. ದಶಾ ಜಾಗ್ರತ್ಸ್ವಪ್ನಸುಷುಪ್ತಯಸ್ತುರೀಯಾ ಚ. ಶಕ್ತಯಃ—ವಾಮಾಜ್ಯೇಷ್ಠಾರೌದ್ರ್ಯಃ ಶಾಂತಾ ಚ; ಇಚ್ಛಾಜ್ಞಾನಕ್ರಿಯಾ ಅಂಬಿಕಾ ಚ; ಕಾಮೇಶ್ವರೀವಜ್ರೇಶ್ವರೀಭಗಮಾಲಿನ್ಯೋ ಮಹಾತ್ರಿಪುರಸುಂರೀ ಚ. ಆತ್ಮಾನ ಆತ್ಮಾಂತರಾತ್ಮಪರಮಾತ್ಮಾನೋ ಜ್ಞಾನಾತ್ಮಾ ಚ. ತತ್ತ್ವಾನ್ಯಾತ್ಮತತ್ತ್ವ ವಿದ್ಯಾತತ್ತ್ವ ಶಿವತತ್ತ್ವಾನಿ ಸರ್ವತತ್ತ್ವಂ ಚ. ಪೀಠಾನಿ ಕಾಮರೂಪ ಪೂರ್ಣಗಿರಿಜಾಲಂಧರಾಣ್ಯೋಡ್ಯಾಣಪೀಠಂ ಚ. ಅನ್ವಯಾಃ ಪ್ರಾಗ್ದಕ್ಷಿಣ ಪಶ್ಚಿಮಾನ್ವಯಾ ಉತ್ತರಾನ್ವಯಶ್ಚ. ಏತ ಏವ ಸಮಯಪದೇ ನಾಮ್ನಾಯಪದೇನ ಚ ಕಥ್ಯಂತೇ. ಲಿಂಗಾನಿ ಸ್ವಯಂಭೂಬಾಣೇತರಾಣಿಪರಂ ಚ. ಮಾತೃಕಾಃ ಪಶ್ಯಂತೀಮಧ್ಯಮಾವೈಖರ್ಯಃ ಪರಾ ಚ. ಧಾಮ ಪದಾರ್ಥತ್ವೇನೋಕ್ತಂ ಶಕ್ತಿತ್ರಯಂ ಮಾತೃಪದಸ್ಯ ವಾಽರ್ಥಃ॥೩೨-೩೩॥

ಪುಟಗಳು	ಜ್ಞಾತಾ	ಜ್ಞಾನ	ಜ್ಞೇಯ	ಸಾಮರಸ್ಯ
ಚಕ್ರಗಳು	ಅಗ್ನಿಚಕ್ರ	ಸೂರ್ಯಚಕ್ರ	ಸೋಮಚಕ್ರ	ಬ್ರಹ್ಮಚಕ್ರ
ನಾಥರು	ಮಿತ್ರೇಶ	ಷಷ್ಠೀಶ	ಉಡ್ಡೀಶ	ಚರ್ಯಾನಂದ
ದಶೆಗಳು	ಜಾಗರ	ಸ್ವಪ್ನ	ಸುಷುಪ್ತಿ	ತುರ್ಯಾ
ಶಕ್ತಿತ್ರಯ ಗಳು	ವಾಮಾ	ಜ್ಯೇಷ್ಠಾ	ರೌದ್ರೀ	ಶಾಂತಾ
	ಇಚ್ಛಾ	ಜ್ಞಾನ	ಕ್ರಿಯಾ	ಅಂಬಿಕಾ
	ಕಾಮೇಶ್ವರೀ	ವಜ್ರೇಶ್ವರೀ	ಭಗಮಾಲಿನೀ	ಮಹಾತ್ರಿಪುರ ಸುಂದರೀ
ಆತ್ಮರು	ಆತ್ಮಾ	ಅಂತರಾತ್ಮಾ	ಪರಮಾತ್ಮಾ	ಜ್ಞಾನಾತ್ಮಾ
ತತ್ತ್ವಗಳು	ಆತ್ಮತತ್ತ್ವ	ವಿದ್ಯಾತತ್ತ್ವ	ಶಿವತತ್ತ್ವ	ಸರ್ವತತ್ತ್ವ
ಪೀಠಗಳು	ಕಾಮರೂಪ	ಪೂರ್ಣಗಿರಿ	ಜಾಲಂಧರ	ಓಡ್ಯಾಣ
ಅನ್ವಯ ಗಳು	ಪ್ರಾಗನ್ವಯ	ದಕ್ಷಿಣಾನ್ವಯ	ಪಶ್ಚಿಮಾನ್ವಯ	ಉತ್ತರಾನ್ವಯ
ಲಿಂಗಗಳು	ಸ್ವಯಂಭೂ ಲಿಂಗ	ಬಾಣಲಿಂಗ	ಇತರ ಲಿಂಗ	ಪರಲಿಂಗ
ಮಾತೃಕೆ ಗಳು	ಪರಾ	ಪಶ್ಯಂತೀ	ಮಧ್ಯಮಾ	ವೈಖರೀ

ಇಲ್ಲಿ ಧಾಮ ಪದಾರ್ಥದಲ್ಲಿ ಕೂಡಿರುವ ಶಕ್ತಿತ್ರಯ ತತ್ಸಮಷ್ಟಿಗಳನ್ನು ಮಾತೃಕಾ ಶಬ್ದದಿಂದ ತೆಗೆದುಕೊಳ್ಳಬಹುದು. ಈ ರೀತಿ ಬೀಜಗಳನ್ನು ಧ್ಯಾನಿಸಬೇಕು.

೨೪-೨೫

ಏಕೈಕಸ್ಮಿನ್ ಕರ್ಮಣಿ ಸೃಷ್ಟ್ಯಾದಿವಿಭೇದತಸ್ತ್ರಿವಿಧೇ ।
ಬ್ರಹ್ಮಾದ್ಯಾ ಅಧಿಪತಯೋ ಭಾರತ್ಯಾದಿಸ್ವಶಕ್ತಿಭಿಃ ಸಹಿತಾಃ ॥೨೪॥
ಬ್ರಹ್ಮಾದಯಸ್ತ್ರಯೋಽಮೀ ಭಾರತ್ಯಾದ್ಯಾಶ್ಚ ಶಕ್ತಯಸ್ತಿಸ್ರಃ ।
ಪ್ರತ್ಯಕ್ಷರಸ್ವರೂಪಾಃ ಶಾಕ್ತಾರ್ಥೇ ವಕ್ಷ್ಯಮಾಣಯಾ ರೀತ್ಯಾ ॥೨೫॥

ಅಥ ಪ್ರತ್ಯಕ್ಷರಂ ಸ್ವರೂಪಮಾಹ—ಸೃಷ್ಟಿಕರ್ಮ ತ್ರಿವಿಧಂ ಸೃಷ್ಟಿಸೃಷ್ಟಿಃ ಸೃಷ್ಟಿಸ್ಥಿತಿಃ ಸೃಷ್ಟಿಸಂಹೃತಿಶ್ಚೇತಿ. ಏವಂ ಸ್ಥಿತಿಕರ್ಮ ಸ್ಥಿತಿಸೃಷ್ಟಿಃ ಸ್ಥಿತಿಸ್ಥಿತಿಃ ಸ್ಥಿತಿಸಂಹೃತಿಶ್ಚೇತಿ. ಏವಂ ಸಂಹೃತಿಕರ್ಮಾಪಿ ಸಂಹೃತಿಸೃಷ್ಟಿಃ ಸಂಹೃತಿಸ್ಥಿತಿಃ ಸಂಹೃತಿಸಂಹೃತಿಶ್ಚೇತಿ. ಅತ್ರ ಪ್ರತಿತ್ರಿಕಂ ಬಹ್ಮಾದಯಸ್ತ್ರಯೋ ಬ್ರಹ್ಮವಿಷ್ಣುರುದ್ರಾ ಭಾರತೀಪೃಥಿವೀರುದ್ರಾಣೀಸಹಿತಾ ಅಧಿಪತಯಃ. ಏವಂ ಚ ಪ್ರಥಮಕೂಟೇ-ಕಕಾರೋ

ಸೃಷ್ಟಿ-ಸ್ಥಿತಿ-ಸಂಹಾರಗಳೆಂಬ ಕೃತ್ಯಗಳಲ್ಲಿ ಸೃಷ್ಟಿಯು ಸೃಷ್ಟಿಸೃಷ್ಟಿ, ಸೃಷ್ಟಿ-ಸ್ಥಿತಿ, ಸೃಷ್ಟಿಸಂಹೃತಿಗಳೆಂದು ಮೂರು ವಿಧವಾಗಿರುವುದು. ಇದರಂತೆ ಸ್ಥಿತಿಯು ಸ್ಥಿತಿಸೃಷ್ಟಿ, ಸ್ಥಿತಿಸ್ಥಿತಿ, ಸ್ಥಿತಿಸಂಹೃತಿಯೆಂದೂ ಸಂಹೃತಿಯು ಸಂಹೃತಿಸೃಷ್ಟಿ-ಸಂಹೃತಿಸ್ಥಿತಿ, ಸಂಹೃತಿಸಂಹೃತಿಯೆಂದೂ ಮೂರು ಬಗೆಯಾಗಿದೆ. ಇಂತಹ ವಿಧಗಳಿಂದ ಒಳಗೊಂಡಿರುವ ಪ್ರತಿಯೊಂದರ ಗುಂಪಿಗೆ ಕ್ರಮವಾಗಿಯೂ ಪ್ರತ್ಯೇಕವಾಗಿಯೂ ಭಾರತೀ ಎಂಬ ತನ್ನ ಶಕ್ತಿ ಸಹಿತನಾದ ಬ್ರಹ್ಮನೂ, ಭೂಮಿ ಶಕ್ತಿ ಸಹಿತನಾದ ವಿಷ್ಣುವೂ, ರುದ್ರಾಣೀಶಕ್ತಿಸಹಿತನಾದ ರುದ್ರನೂ ಅಧಿಪತಿಗಳು. ||೨೪||

ಬ್ರಹ್ಮ ವಿಷ್ಣು ರುದ್ರರೂ, ಭಾರತೀ ಭೂಮಿ ರುದ್ರಾಣೀ ಶಕ್ತಿಗಳೂ ಮುಂದೆ ಶಾಕ್ತಾರ್ಥದಲ್ಲಿ ಹೇಳುವ ರೀತಿಯಲ್ಲಿ ಆದಿವಿದ್ಯೆಯ ಅಕ್ಷರ ಸ್ವರೂಪರಾಗಿರುವರು.

ಶಕ್ತಿಸಹಿತರಾದ ಬ್ರಹ್ಮಾದಿಗಳ ಅಕ್ಷರಸ್ವರೂಪಗಳು :—

ಪ್ರಥಮಕೂಟ		ದ್ವಿತೀಯಕೂಟ		ತೃತೀಯಕೂಟ	
ಕ	ಬ್ರಹ್ಮ	ಹ	ಬ್ರಹ್ಮ	ಸ	ಭಾರತೀ
ಏ	ಭಾರತೀ	ಸ	ಭಾರತೀ	ಕ	ವಿಷ್ಣು
ಈ	ವಿಷ್ಣು	ಕ	ವಿಷ್ಣು	ಲ	ಭೂಮಿ
ಲ	ಭೂಮಿ	ಹ	ಬ್ರಹ್ಮ	ಹ್	ರುದ್ರ

ಬ್ರಹ್ಮಣ ಏವ ರೂಪಾಂತರಂ ತ್ರಿಕೋಣಾ ತು ಭಾರತೀಸ್ವರೂಪಾ, ತುರ್ಯಃ ಸ್ವರೋ ವಿಷ್ಣುಸ್ವರೂಪಃ, ಲಕಾರಃ ಪೃಥಿವೀಸ್ವರೂಪಃ, ಹಕಾರೋ ರುದ್ರಸ್ವರೂಪಃ, ರೇಫೋ ರುದ್ರಾಣೀಸ್ವರೂಪಃ, ತುರ್ಯಃ ಸ್ವರಸ್ತು ಶಾಂತಾಂಬಿಕಾತ್ಮಕ ಮಿಥುನಸ್ವರೂಪಃ. ದ್ವಿತೀಯಕೂಟೇ ಮಧ್ಯಮಹಕಾರಂ ಪರಿತ್ಯಜ್ಯಾವಶಿಷ್ಟಾಕ್ಷರೇಷ್ವೇಷೈವ ರೀತಿಃ. ತೃತೀಯ ಕೂಟೇ ತು ದ್ವಿತೀಯಕೂಟಸ್ಥ ಪರಿತ್ಯಕ್ತಹಕಾರಸ್ಯ ಬ್ರಹ್ಮಸ್ವರೂಪ ತ್ವಾದ್ಭಾರತೀಮಾರಭ್ಯೈವ ಸಕಾರೇಣಾರಂಭಃ. ಶಕ್ತಿಕೂಟತ್ವೇನ ಶಕ್ತೇಃ ಪ್ರಾಧಾನ್ಯೇನ ಪ್ರಥಮನಿರ್ದೇಶಃ. ತದೇತದಾಹ—ಶಾಕ್ತಾರ್ಥೇ ವಕ್ಷ್ಯಮಾಣಯೇತಿ ‖ ೩೪-೩೫ ‖

ಹ್ ರುದ್ರ	ಲ ಭೂಮಿ	ರ್ ರುದ್ರಾಣೀ
ರ್ ರುದಾಣೀ	ಹ್ ರುದ್ರ	ಈ ಮಿಥುನ
ಈ ಶಾಂತಾಂಬಿಕಾಮಿಥುನ	ರ್ ರುದ್ರಾಣೀ	
	ಈ ಮಿಥುನ	

ದ್ವಿತೀಯ ಕೂಟವಲ್ಲಿ ಮಧ್ಯದ ಹಕಾರಾರ್ಥವಾದ ಬ್ರಹ್ಮನನ್ನು ತೃತೀಯ ಕೂಟಕ್ಕೆ ಸೇರಿರುವುದಾದಿ ತಿಳಿಯಬೇಕು ||೩೫||

೩೬

ಹೃಲ್ಲೇಖಾಕಾಮಕಲಾಸಪರಾರ್ಧಕಲಾಖ್ಯಕುಂಡಲಿನ್ಯುತ್ಥಾಃ ।
ನಾದಾಶ್ಚಕ್ರತ್ರಿತಯಾತ್ಮಾನೋ ವಿಭಾವನೀಯಾಃ ಸ್ಯುಃ ॥೩೬॥

ಅಥಾವಶಿಷ್ಟಾನಾಂ ಬಿಂದ್ವಾದೀನಾಂ ಸ್ವರೂಪಮಾಹ—ಅತ್ರ ಪ್ರಥಮಕೂಟೇ ಯಾ ಹೃಲ್ಲೇಖಾ, ತದಂತರ್ಗತಾ ಯಾ ಕಾಮಕಲಾ ತಸ್ಯಾಂ ಗುರುಮುಖೈಕವೇದ್ಯಾ ಯಾ ಸಪರಾರ್ಧಕಲಾ ಸಾ ವಹ್ನಿ ಕುಂಡಲಿನೀತ್ಯುಚ್ಯತೇ. ಸೈವ ದ್ವಿತೀಯಕೂಟೇ ಸೂರ್ಯಕುಂಡಲಿನೀತಿ, ತೃತೀಯಕೂಟೇ ಸೋಮಕುಂಡಲಿನೀತಿ ಚ ಕಥ್ಯತೇ. ಬಿಂದ್ವಾದಿ ಸಮಷ್ಟಿರೂಪೋ ನಾದಸ್ತು ತತ ಏವೋತ್ಪನ್ನೋ ದೀಪಶಿಖಾಗ್ರವರ್ತಿ ಕಜ್ಜಲಲೇಖಾವತ್. ಏವಂ ಚಾನಾಹತಮಾರಭ್ಯೋತ್ಥಿತೋ ನಾದಸ್ತ್ರೈಲೋಕ್ಯಮೋಹನ ಸರ್ವಾಶಾಪರಿಪೂರಕ ಸರ್ವಸಂಕ್ಷೋಭಣಚಕ್ರತ್ರಯಸ್ಯ ತ್ರಿವಿಧ ಸೃಷ್ಟಿರೂಪಸ್ಯಾಪರಂ ರೂಪಂ. ಭ್ರೂಮಧ್ಯಮಾರಭ್ಯೋತ್ಥಿತೋ ನಾದಃ ಸರ್ವಸೌಭಾಗ್ಯದಾಯಕ ಸರ್ವಾರ್ಥಸಾಧಕ ಸರ್ವರಕ್ಷಾಕರಚಕ್ರತ್ರಯಸ್ಯ ತ್ರಿವಿಧಸ್ಥಿತಿರೂಪಸ್ಯಾಪರಂ ರೂಪಂ. ಬಿಂದುಸ್ಥಾನಮಾರಭ್ಯೋತ್ಥಿತೋ ನಾದಃ ಸರ್ವರೋಗಹರ ಸರ್ವಸಿದ್ಧಿಪ್ರದ ಸರ್ವಾನಂದಮಯಚಕ್ರತ್ರಯಸ್ಯ ಸಂಹೃತಿತ್ರಯರೂಪಸ್ಯಾಪರಂ ರೂಪಮಿತಿ ವಿಭಾವನೀಯಾಃ ॥ ೩೬ ॥

ಪ್ರಥಮಕೂಟದ ಹ್ರೀಂಕಾರದಲ್ಲಿರುವ ಈ ಎಂಬ ವರ್ಣದಲ್ಲಿ ಗುರೂಪದೇಶದಿಂದಲೇ ತಿಳಿಯುವ ಸಪರಾರ್ಧಕಲಾ ಎಂಬ ಒಂದು ಕಲಾ ವಿಶೇಷವು ಇದೆ. ಅದು ವಹ್ನಿ ಕುಂಡಲಿನೀ ಎಂದು ಕರೆಯಲ್ಪಡುತ್ತದೆ. ದ್ವಿತೀಯ ಕೂಟದ ಹೃಲ್ಲೇಖಾ ಈಕಾರದಲ್ಲಿರುವ ಕಲೆಯು ಸೂರ್ಯ ಕುಂಡಲಿನೀ ಎಂದೂ ತೃತೀಯ ಕೂಟದ ಆ ಕಲೆಯು ಸೋಮ ಕುಂಡಲಿನೀ ಎಂದೂ ಕರೆಯಲ್ಪಡುವುವು. ದೀಪಜ್ವಾಲೆಯ ಅಗ್ರದಿಂದ ಕಾಡಿಗೆಯ ರೇಖೆಯು ಹುಟ್ಟುವಂತೆ ಬಿಂದು ಮುಂತಾದುವುಗಳ ಸಮಷ್ಟಿಯೆಂಬ ನಾದವು ಆ ಕುಂಡಲಿನೀ ಕಲೆಗಳಿಂದ ಹುಟ್ಟುತ್ತದೆ. ಅನಾಹತ ಚಕ್ರದಿಂದ ಹುಟ್ಟಿರುವ ನಾದವು ತ್ರೈಲೋಕ್ಯ ಮೋಹನ, ಸರ್ವಾಶಾಪರಿಪೂರಕ, ಸರ್ವಸಂಕ್ಷೋಭಣವೆಂಬ ಚಕ್ರತ್ರಯ ರೂಪವಾದ ತ್ರಿವಿಧ ಸೃಷ್ಟಿಯ ಅಪರ ರೂಪವು. ಭ್ರೂಮಧ್ಯದಿಂದ ಹುಟ್ಟಿದ ನಾದವು ಸರ್ವಸೌಭಾಗ್ಯದಾಯಕ ಸರ್ವಾರ್ಥ ಸಾಧಕ ಸರ್ವರಕ್ಷಾಕರ ಎಂಬ ಚಕ್ರತ್ರಯರೂಪವಾದ ತ್ರಿವಿಧ ಸ್ಥಿತಿ ಕೃತ್ಯದ ಮತ್ತೊಂದು ರೂಪವು. ಇದರಂತೆ ತೃತೀಯ ಕೂಟದ ನಾದವು ಸರ್ವ ರೋಗಹರ, ಸರ್ವ ಸಿದ್ಧಿಪ್ರದ, ಸರ್ವಾನಂದಮಯವೆಂಬ ಚಕ್ರತ್ರಯ ರೂಪವಾದ ತ್ರಿವಿಧ ಸಂಹೃತಿ ಕೃತ್ಯದ ಅಪರರೂಪವೆಂದು ಭಾವಿಸಬೇಕು ॥೩೬॥

೩೭

ಇಂದ್ರಿಯದಶಕವ್ಯವಹೃತಿರೂಪಾ ಯಾ ಜಾಗರಾವಸ್ಥಾ ।
ತತ್ರ ಪ್ರಕಾಶರೂಪೋ ಹೇತುರ್ಭಾವ್ಯಸ್ತೃತೀಯಗೇ ರೇಫೇ ॥೩೭

ಅವಸ್ಥಾಪಂಚಕಂ ಶೂನ್ಯಷಟ್ಕಂ ವಿಷುವತ್ಸಪ್ತಕಂ ಚ ಜಪಕಾಲೇ ವಿಭಾವ್ಯಮಾಹ—ಇಂದ್ರಿಯದಶಕೇತ್ಯಾದಿನಾ, ಏವಮುವಸ್ಥೇತ್ಯಂತೇನ ಶ್ಲೋಕಷೋಡಶಕೇನ. ಕರ್ಮೇಂದ್ರಿಯಾಣಿ ಪಂಚ ವಾಕ್ಪಾಣಿಪಾದಪಾಯೂಪಸ್ಥಾನಿ, ಜ್ಞಾನೇಂದ್ರಿಯಾಣ್ಯಪಿ ಪಂಚ ಘ್ರಾಣರಸನಚಕ್ಷುಸ್ತ್ವಕ್ಶ್ರೋತ್ರಾಣಿ, ಏತೇಷಾಂ ದಶಾನಾಂ ಸ್ವಸ್ವವಿಷಯೋತ್ಪಾದಕತ್ವಂ ವ್ಯವಹಾರಃ, ಸ ಏವ ಜಾಗರಾವಸ್ಥಾ. ತತ್ರ ಹೇತುರೂಪಂ ಜ್ಞಾನಮರೂಪತ್ವಾದ್ಭಾವನಾದಶಾಯಾಂ ಪ್ರಕಾಶರೂಪತ್ವೇನ ತೃತೀಯಕೂಟಸ್ಥರೇಫಸ್ಥಾನೇ ವಿಭಾವನೀಯಂ ॥ ೩೭ ॥

ಜಪಕಾಲದಲ್ಲಿ ಧ್ಯಾನಮಾಡಬೇಕಾದ ಅವಸ್ಥಾಪಂಚಕ–ಶೂನ್ಯಷಟ್ಕ-ವಿಷುವತ್ಸಪ್ತಕಗಳನ್ನು "ಇಂದ್ರಿಯದಶಕ" ಎಂಬ ಈ ಶ್ಲೋಕವನ್ನು ಪ್ರಾರಂಭಿಸಿ "ಏವಮುವಸ್ಥಾ" ಎಂಬ ಶ್ಲೋಕದವರೆಗೆ ಇರುವ ಹದಿನಾರು ಶ್ಲೋಕಗಳು ವಿವರಿಸುತ್ತವೆ. ವಾಕ್-ಪಾಣಿ-ಪಾದ ಪಾಯು-ಉಪಸ್ಥಗಳೆಂಬ ಐದು ಕರ್ಮೇಂದ್ರಿಯಗಳೂ, ಘ್ರಾಣ-ರಸನ-ಚಕ್ಷು:—ತ್ವಕ್.ಶ್ರೋತ್ರಗಳೆಂಬ ಐದು ಜ್ಞಾನೇಂದ್ರಿಯಗಳೂ ತಮ್ಮ ತಮ್ಮ ವಿಷಯಗಳನ್ನು ನಿರ್ಮಿಸಿ ಅವುಗಳನ್ನು ತಿಳಿಯಪಡಿಸುವುದೆಂಬ ವ್ಯವಹಾರವನ್ನು ನಡೆಸುತ್ತಿರುವುದು ಜಾಗರಾವಸ್ಥೆಯು, ಇದಕ್ಕೆ ಕಾರಣವಾದ ಜ್ಞಾನವು ನೀರೂಪವಾದುದರಿಂದ ಚಿಂತನ ಕಾಲದಲ್ಲಿ ತೃತೀಯ ಕೂಟದ ರೇಫಸ್ಥಾನದಲ್ಲಿ ಪ್ರಕಾಶರೂಪವಾಗಿದೆಯೆಂದು ಭಾವಿಸಬೇಕು ||೩೭||

೨೮

ಅಂತಃಕರಣಚತುಷ್ಕವ್ಯವಹಾರಃ ಸ್ವಾಪ್ನಿಕಾವಸ್ಥಾ ।
ಸಾ ತಾರ್ತೀಯೇಕಾರಾದ್ಬೋಧ್ಯಾಪಿ ಗಲಸ್ಥಲೇ ಚಿಂತ್ಯಾ ॥೨೮॥

ಮನೋ ಬುದ್ಧಿರಹಂಕಾರಶ್ಚಿತ್ತಂ ಚೇತ್ಯಂತಃಕರಣಾನಿ ಚತ್ವಾರಿ. ತೈರೇವ ವ್ಯವಹಾರಃ ಸ್ವಪ್ನಃ. ತಜ್ಜನಕಃ ಪ್ರಕಾಶಸ್ತೃತೀಯಹೃಲ್ಲೇಖಾಸ್ಥಕಾಮಕಲಯಾ ಬೋಧ್ಯಃ. ಅಥಾಪಿ ಗಲಸ್ಥಲೇ ದ್ವೈತೀಯಿಕಾಕಲಕಾರೇ ಚಿಂತ್ಯಃ. ಗಲಸ್ಥಶ್ಚಾಸೌ ಲಶ್ಚೇತಿ ವಿಗ್ರಹಃ ॥ ೨೮ ॥

ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಎಂಬ ನಾಲ್ಕು ವಿಧದ ಅಂತಃಕರಣದಿಂದ ನಡೆಯುವ ವ್ಯವಹಾರ ಕಾಲವು ಸ್ವಪ್ನಾವಸ್ಥೆಯು. ಇದಕ್ಕೆ ಕಾರಣವಾದ ಪ್ರಕಾಶವು ತೃತೀಯ ಕೂಟದ ಈಕಾರದಲ್ಲಿರುವುದು. ಆದರೆ ಧ್ಯಾನದಲ್ಲಿ ದ್ವಿತೀಯ ಕೂಟದ ಲಕಾರದಲ್ಲಿರುವಂತೆ ಧ್ಯಾನಿಸಬೇಕೆಂಬ ವಚನ ಪ್ರಮಾಣದಿಂದ ಲಕಾರದಲ್ಲಿರುವುದಾಗಿ ಧ್ಯಾನಿಸಬೇಕು ||೨೮||

೩೯

ಅಂತರವೃತ್ತೇರ್ಲಯತೋ ಲೀನಪ್ರಾಯಸ್ಯ ಜೀವಸ್ಯ ।
ವೇದನಮೇವ ಸುಷುಪ್ತಿಶ್ಚಿಂತ್ಯಾ ತಾರ್ತೀಯಬಿಂದೌ ಸಾ ॥೩೯॥

ವಿವರಣಮತ ಆತ್ಮಸುಖಾಜ್ಞಾನವಿಷಯಿಕಾಸ್ತಿಸ್ರೋಽವಿದ್ಯಾವೃತ್ತಯಃ ಸ್ವೀಕೃತಾ ಇತ್ಯತ ಆಹ—ಅಂತರವೃತ್ತೇರಿತಿ. ಅಂತಃಕರಣಪರಿಣಾಮರೂಪವೃತ್ತೇರಿತ್ಯರ್ಥಃ. ವಾರ್ತಿಕಮತೇ ವೃತ್ತಿಸಾಮಾನ್ಯಾಭಾವ ಏವ ಸುಷುಪ್ತಿಃ. ತಾರ್ತೀಯಬಿಂದೌ ಲಲಾಟಸ್ಥಾನೇ ॥ ೩೯ ॥

ಅಂತಃಕರಣದ ಪರಿಣಾಮುಗಳಾದ ನಿಖಿಲವೃತ್ತಿಗಳೂ ಲಯವಾಗಿ ವಿವರಣಕಾರಮತದಂತೆ ಆತ್ಮ-ಸುಖ-ಅಜ್ಞಾನಾಕಾರಗಳಾದ ಅವಿದ್ಯಾವೃತ್ತಿಗಳು ಮಾತ್ರವಿರುವುದರಿಂದ ಜೀವಾತ್ಮನೇ ಲೀನನಾಗಿರುವಂತೆ ಇರುವ ಆತ್ಮವೇದನವು ಸುಷುಪ್ತ್ಯವಸ್ಥೆಯು. ವಾರ್ತಿಕಕಾರ ಮತದಲ್ಲಿ ಯಾವ ವೃತ್ತಿಗಳೂ ಇರುವುದಿಲ್ಲ. ಅಂತಹ ಜೀವಾತ್ಮ ಅನುಭವವೆಂಬ ಸುಷುಪ್ತ್ಯವಸ್ಥೆಯು ತೃತೀಯ ಕೂಟದ ಬಿಂದುಸ್ಥಾನ ಅಥವಾ ಲಲಾಟಸ್ಥಾನದಲ್ಲಿರುವುದು ||೩೯||

೪೦-೪೧

ತುರ್ಯಾವಸ್ಥಾ ಚಿದಭಿವ್ಯಂಜಕನಾದಸ್ಯ ವೇದನಂ ಪ್ರೋಕ್ತಮ್ ।
ತದ್ಭಾವನಾರ್ಧಚಂದ್ರಾದಿಕಂ ತ್ರಯಂ ವ್ಯಾಪ್ಯ ಕರ್ತವ್ಯಾ ॥೪೦॥
ಆನಂದೈಕಘನತ್ವಂ ಯದ್ವಾಚಾಮಪಿ ನ ಗೋಚರೋ ನ್ಯಾಣಾಮ್ ।
ತುರ್ಯಾತೀತಾವಸ್ಥಾ ಸಾ ನಾದಾಂತಾದಿಪಂಚಕೇ ಭಾವ್ಯಾ ॥೪೧॥

ಅರ್ಧಚಂದ್ರರೋಧಿನೀನಾದೇಷು ವ್ಯಾಪ್ತಸ್ತುರ್ಯಾವಸ್ಥಾಪ್ರಕಾಶೋ ಭಾವ್ಯಃ ॥ ೪೦-೪೧ ॥

ಚೈತನ್ಯಕ್ಕೆ ಅಭಿವ್ಯಂಜಕವಾದ ನಾದದ ಪ್ರಕಾಶವು ತುರ್ಯಾವಸ್ಥೆಯು. ಇದು ಅರ್ಧಚಂದ್ರ-ರೋಧಿನೀ-ನಾದಗಳೆಂಬ ನಾದಾಂಶಗಳನ್ನು ವ್ಯಾಪಿಸಿ ಪ್ರಕಾಶಿಸುವುದು ಎಂದು ಧ್ಯಾನ ಮಾಡಬೇಕು ॥೪೦॥

ವರ್ಣನಾತೀತವಾದ್ದರಿಂದ ವಾಗಿಂದ್ರಿಯಕ್ಕೆ ಅಗೋಚರವಾದ ಆನಂದ ಘನತ್ವವು ತುರ್ಯಾತೀತಾವಸ್ಥೆಯು. ಇದು ನಾದಾಂತ-ಶಕ್ತಿ-ವ್ಯಾಪಿಕಾ-ಸಮನಾ-ಉನ್ಮನೀ ಎಂಬ ಐದು ನಾದಾಂಶಗಳಲ್ಲಿ ವ್ಯಾಪಿಸಿರುವುದಾಗಿ ಧ್ಯೇಯವಾಗಿರುವುದು. ಹೀಗೆ ಜಾಗರ-ಸ್ವಪ್ನ-ಸುಷುಪ್ತಿ-ತುರ್ಯಾ-ತುರ್ಯಾತೀತಗಳೆಂಬ ಐದು ಅವಸ್ಥೆಗಳು ಧ್ಯಾನಿಸಲ್ಪಡಬೇಕು ॥೪೧॥

೪೨

ತಾರ್ತೀಯೀಕೇ ರೇಫಸ್ಥಾನೇ ಬಿಂದೌ ಚ ರೋಧಿನ್ಯಾಮ್ ।
ನಾದಾಂತವ್ಯಾಪಿಕಯೋಶ್ಚಂದ್ರಕತುಲ್ಯಾನಿ ಪಂಚ ಶೂನ್ಯಾನಿ ||೪೨||
ಉನ್ಮನ್ಯಾಂ ನೀರೂಪಂ ಷಷ್ಠಂ ಚಿಂತ್ಯಂ ಮಹಾಶೂನ್ಯಮ್ ||

ಅವಸ್ಥಾಪಂಚಕಂ ನಿರೂಪ್ಯ ಶೂನ್ಯಷಟ್ಕಂ ನಿರೂಪಯತಿ. ಚಂದ್ರಕೋ ಮಯೂರಪಿಚ್ಛಾಗ್ರಗತಂ ಚಂದ್ರಾಕಾರಂ ಶೂನ್ಯಂ. ತದುಕ್ತಂ ಸ್ವಚ್ಛಂದಸಂಗ್ರಹೇ—“ ಶಿಖಿಪಕ್ಷಚಿತ್ರರೂಪೈರ್ಮಂಡಲೈಃ ಶೂನ್ಯಪಂಚಕಂ. ಧ್ಯಾಯತೋಽನುತ್ತರೇ ಶೂನ್ಯಂ ಪರಂ ವ್ಯೋಮತನುರ್ಭವೇತ್.” ಇತಿ. ಯದ್ಯಪಿ “ ಅಗ್ನ್ಯಾದಿದ್ವಾದಶಾಂತೇಷು ತ್ರೀಂಸ್ತ್ರೀಂಸ್ತ್ಯಕ್ತ್ವಾ ವರಾನನೇ. ಶೂನ್ಯತ್ರಯಂ ವಿಜಾನೀಯಾದೇಕೈಕಾಂತರಿತಂ ಪ್ರಿಯೇ. ಶೂನ್ಯತ್ರಯಾತ್ಪರೇ ಸ್ಥಾನೇ ಮಹಾಶೂನ್ಯಂ ವಿಭಾವಯೇತ್.” ಇತಿ ಪೂಜಾಸಂಕೇತೇ ರೇಫಾದಿ ಮಹಾಬಿಂದ್ವಂತೇಷು

ಶೂನ್ಯ ಷಟ್ಕಗಳನ್ನು ಈ ಪದ್ಯವು ಹೇಳುತ್ತದೆ. ಶೂನ್ಯವೆಂದರೆ ನವಿಲು ಗರಿಯಲ್ಲಿ ಕಾಣಿಸುವ ವರ್ಣರಂಜಿತವಾದ ಚಂದ್ರಾಕಾರದ ಚಿಹ್ನವು. “ ಶಿಖಿಪಿಚ್ಛಚಿತ್ರರೂಪೈರ್ಮಂಡಲೈಃ ಶೂನ್ಯಪಂಚಕಂ | ಧ್ಯಾಯತೋಽನುತ್ತರೇ ಶೂನ್ಯಂಪರಂ ವ್ಯೋಮತನುರ್ಭವೇತ್ ” ಎಂಬ ಸ್ವಚ್ಛಂದ ಸಂಗ್ರಹ ವಚನವು ಮೊದಲಿನ ಐದು ಶೂನ್ಯಗಳ ಆಕೃತಿಯನ್ನು ನವಿಲುಗರಿಯ ಅಗ್ರದ ಚಂದ್ರಾಕಾರವೆಂದೂ ಅಂತ್ಯ ಶೂನ್ಯದ ಆಕೃತಿಯನ್ನು ವ್ಯೋಮ (ಆಕಾಶ)ಆಕಾರವೆಂದೂ ಹೇಳುವುದು. ಇಂತಹ ಶೂನ್ಯಗಳು ಆರು ಸಂಖ್ಯೆಯಾಗಿವೆ. ಅವುಗಳಲ್ಲಿ ತೃತೀಯಕೂಟದ ರೇಫಸ್ಥಾನ, ಬಿಂದು, ರೋಧಿನೀ, ನಾದಾಂತ, ವ್ಯಾಪಿಕಾ ಎಂಬ ಸ್ಥಾನಗಳಲ್ಲಿ ಕ್ರಮವಾಗಿ ಐದು ಶೂನ್ಯಗಳೂ ಉನ್ಮನೀ ಸಂನಿಧಿಯಲ್ಲಿ ನೀರೂಪವಾದ ಆರನೆಯ ಮಹಾಶೂನ್ಯವೂ ಇದೆಯೆಂದು ಭಾವಿಸಬೇಕು. ಈ ಶೂನ್ಯಗಳ ವಿವರಣೆಯಲ್ಲಿ “ ಅಗ್ನ್ಯಾದಿ ದ್ವಾದಶಾಂತೇಷು ತ್ರೀಂಸ್ತ್ರೀಂಸ್ತ್ಯಕ್ತ್ವಾವರಾನನೇ| ಶೂನ್ಯತ್ರಯಂ ವಿಜಾನೀಯಾದೇಕೈಕಾಂತರಿತಂ ಪ್ರಿಯೇ | ಶೂನ್ಯತ್ರಯಾತ್ಪರೇ ಸ್ಥಾನೇ ಮಹಾಶೂನ್ಯಂ ವಿಭಾವಯೇತ್ || ” ಎಂದು ಪೂಜಾಸಂಕೇತ ವಚನವು ಇರುವುದು. ಇದರಿಂದ ರೇಫ ಮೊದಲಾಗಿ ಮಹಾ ಬಿಂದು ಪರ್ಯಂತ ಹನ್ನೆರಡು ಸ್ಥಾನಗಳಲ್ಲಿ ಮಧ್ಯದ

ದ್ವಾದಶಸು ಸ್ಥಾನೇಷು ಮಧ್ಯೇ ತ್ರಯಂ ತ್ರಯಂ ತ್ಯಕ್ತ್ವಾ, ಏಕೈಕ ಮಂತರಿತಂ ಮಧ್ಯಸ್ಥಿತಂ ಶೂನ್ಯತ್ರಯಂ ವಿಜಾನೀಯಾದಿತ್ಯರ್ಥಾದರ್ಧ ಚಂದ್ರಶಕ್ತಿಮಹಾಬಿಂದುಷು ಶೂನ್ಯತ್ರಯಂ ತದೂರ್ಧ್ವಂ ಚತುರ್ಥ ಮಿತ್ಯರ್ಥಃ. ಅಥ ವಾ ಆದಾವಂತೇ ಚ ತ್ರಯಂ ತ್ರಯಂ ತ್ಯಕ್ತ್ವಾ ಮಧ್ಯಸ್ಥೇಽರ್ಧಚಂದ್ರಾದಿವ್ಯಾಪಿಕಾಂತಷಟ್ಕ ಏಕೈಕವ್ಯವಧಾನೇನ ಶೂನ್ಯ ತ್ರಯಂ ತತ್ಪರೇ ಚತುರ್ಥಮಿತ್ಯರ್ಧಚಂದ್ರನಾದಶಕ್ತಿಷು ತ್ರೀಣಿ ಶೂನ್ಯಾನಿ ವ್ಯಾಪಿಕಾಯಾಂ ಮಹಾಶೂನ್ಯಮಿತಿವಾಽರ್ಥಃ ಸ್ಪಷ್ಟಂ ಪ್ರತೀಯತೇ ; ತಥಾಪಿ "ಶೂನ್ಯಷಟ್ಕಂ ಸುರೇಶಾನಿ ಅವಸ್ಥಾಪಂಚಕಂ ಪುನಃ. ವಿಷುವತ್ಸಪ್ತರೂಪಂ ಚ ಭಾವಯನ್ಮನಸಾಜಪೇತ್.' ಇತ್ಯು ಪಕ್ರಮವಿರೋಧಾದನ್ಯಥಾಽರ್ಥಃ. ತಥಾ ಹಿ–ಅಗ್ನ್ಯಾದೀತಿ ಭಿನ್ನಂ ಪದಂ ಶೂನ್ಯತ್ರಯೇಽನ್ವೇತಿ. ಅಂತಶಬ್ದಶ್ಚರಮಾವಯವಾಚೀ. ಅರ್ಥಾ ಚ್ಚರಮಹೃಲ್ಲೇಖಾಸಂಬಂಧಿಷು ದ್ವಾದಶಸ್ವವಯವೇಷು ಹಕಾರಾದ್ಯುನ್ಮ

ಮೂರು ಮೂರರ ಗುಂಪನ್ನು ತ್ಯಜಿಸಿ ಒಂದೊಂದರಲ್ಲಿ ವ್ಯವಧಾನದಿಂದ ಕೂಡಿದ ಒಂದೊಂದು ಶೂನ್ಯವೆಂಬುದಾಗಿ ಶೂನ್ಯತ್ರಯವನ್ನು ಭಾವಿಸಬೇಕೆಂದು ಅರ್ಥ ವಾಗುವುದು. ಇದರಿಂದ ಅರ್ಧ ಚಂದ್ರ-ಶಕ್ತಿ-ಮಹಾ ಬಿಂದು ಇವುಗಳಲ್ಲಿ ಕ್ರಮ ವಾಗಿ ಶೂನ್ಯತ್ರಯವೂ ಕಡೆಯಲ್ಲಿ ನಾಲ್ಕನೆಯ ಶೂನ್ಯವೂ ಇರುವುವೆಂದು ವ್ಯಕ್ತ ವಾಗುವುದು. ಅಥವಾ ಅದೇ ವಚನಕ್ಕೆ ರೇಫ ಆದಿಯಾಗಿ ಮಹಾ ಬಿಂದು ಪರ್ಯಂತ ಸ್ಥಾನಗಳಲ್ಲಿ ಆದಿ ಅಂತದ ಮೂರು ಮೂರು ಸ್ಥಾನಗಳನ್ನು ಬಿಟ್ಟು ಮಧ್ಯಸ್ಥ ಆರು ಸ್ಥಾನಗಳಲ್ಲಿ ಒಂದು ಬಿಟ್ಟು ಮತ್ತೊಂದೆಂಬ ಕ್ರಮದಿಂದ ಶೂನ್ಯ ತ್ರಯವೂ ಮುಂದಿನ ಸ್ಥಾನದಲ್ಲಿ ಚತುರ್ಥ ಶೂನ್ಯವೂ ಇವೆಯೆಂದು ಅರ್ಥಮಾಡಿ ದರೆ ಅರ್ಧಚಂದ್ರ-ನಾದ–ಶಕ್ತಿಗಳಲ್ಲಿ ಶೂನ್ಯತ್ರಯ, ವ್ಯಾಪಿಕೆಯಲ್ಲಿ ನಾಲ್ಕನೆಯ ಮಹಾಶೂನ್ಯವಿದೆಯೆಂದು ಅರ್ಥವಾಗುವುದು. ಈ ಎರಡು ಅರ್ಥಗಳೂ ಮೇಲೆ ವಿವರಿಸಿದ ಅರ್ಥಕ್ಕೆ ವಿರುದ್ಧವಾಗಿವೆ. ಆದರೆ ಅದೇ ಪೂಜಾ ಸಂಕೇತದಲ್ಲಿ ಉಪಕ್ರಮದಲ್ಲಿ "ಶೂನ್ಯಷಟ್ಕಂ ಸುರೇಶಾನಿ ಅವಸ್ಥಾಪಂಚಕಂ ಪುನಃ. ವಿಷು ವತ್ಸಪ್ತರೂಪಂ ಚ ಭಾವಯನ್ಮನಸಾ ಜಪೇತ್" ಎಂದು ಹೇಳಿರುವ ಶೂನ್ಯ ಷಟ್ಕವೆಂಬ ಅರ್ಥಕ್ಕೆ ವಿರೋಧ ಬಾರದಂತೆ ಮೇಲಿನ ವಚನಕ್ಕೆ ಅರ್ಥಮಾಡು ವುದು ಆವಶ್ಯಕವು. ವಿರೋಧವಿಲ್ಲದಂತೆ ವ್ಯಾಖ್ಯಾನವನ್ನು ಈ ರೀತಿಯಾಗಿ ಮಾಡಲು ಅವಕಾಶವಿರುವುದು. ಅಗ್ನ್ಯಾದಿ ಎಂಬುದು ಬೇರೆಯಾದ ಪದವು

ನಾಂತೇಷು, ಅಗ್ನ್ಯಾದಿ ರೇಫಮಾರಭ್ಯ ಶೂನ್ಯಯೋಸ್ತ್ರಯಂ ಶೂನ್ಯ ಷಟ್ಕಂ ವಿಜಾನೀಯಾತ್. ತಚ್ಚ ನ ರೇಫಾದಿಸಾಂತತ್ವೇನ, ಕಿಂ ತ್ವೇಕೈಕವ್ಯವಧಾನೇನೇತಿ. ಅತ ಆಹ—ಏಕೈಕಾಂತರಿತಮಿತಿ. ಪ್ರಥಮ ಶೂನ್ಯಸ್ಯ ರೇಫಸ್ಥಾನೀಯತ್ವೇ ಕಥಿತೇ ವ್ಯವಧಾನಮರ್ಥಾದ್ಧಕಾರೇರ್ಧ ಚಂದ್ರನಾದಶಕ್ತಿ ಸಮನಾಭಿಃ ಷಡ್ಭಿರಿತಿ ಸಿದ್ಧ್ಯತಿ. ತದೇವಾಹ–ತ್ರೀಂಸ್ತ್ರೀನಿತಿ. ದ್ವಿಗುಣಿತಾಂಸ್ತ್ರೀಂಸ್ತ್ಯಕ್ತ್ವೇತ್ಯರ್ಥಃ, ಶೂನ್ಯತ್ರಯಾತ್ ಶೂನ್ಯಯೋಸ್ತ್ರಯಸ್ಯ, ತತ್ಷಟ್ಕಸ್ಯೇತ್ಯರ್ಥಃ. 'ಸುಪಾಂ ಸು–(೭-೧-೩೯) ಇತಿ ಸುಪೋ ಜಸ ಆದಾದೇಶಃ. ನಿರ್ಧಾರಣೇ ಷಷ್ಠೀ. ತೇಷಾಂ ಮಧ್ಯೇ ಪರೇ ಚರಮ ಉನ್ಮನ್ಯಾಂ ಮಹಾಶೂನ್ಯಮಿತಿ. ಏತದ್ಭಾವನಸ್ಯ ಪರಮರಹಸ್ಯತ್ವಾದಿತ್ಥಂ ಕ್ಲೇಶೇನೋಕ್ತಿರಿತ್ಯನ್ವಯಿತವ್ಯಂ ॥ ೪೨ ॥

ಅಂತವೆಂದರೆ ಕಡೆಯ ಭಾಗವೆಂದರ್ಥ. ತೃತೀಯ ಕೂಟದ ಹೃಲ್ಲೇಖಾ ಸಂಬಂಧವಾದ ಹಕಾರ ಮೊದಲಾಗಿ ಉನ್ಮನೀ ಪರ್ಯಂತವಾದ ಹನ್ನೆರಡು ಅವಯವಗಳಲ್ಲಿ ರೇಫ ಮೊದಲಾದ ಸ್ಥಾನಗಳಲ್ಲಿ ಒಂದೊಂದನ್ನು ಬಿಟ್ಟು ಕ್ರಮವಾಗಿ ಶೂನ್ಯಷಟ್ಕವನ್ನು ಅರಿಯಬೇಕು. ಮೊದಲನೆಯ ಶೂನ್ಯಕ್ಕೆ ರೇಫಸ್ಥಾನವನ್ನು ನಿರ್ದೇಶ ಮಾಡಿರುವುದರಿಂದ ಹ-ಈ-ಅರ್ಧಚಂದ್ರ-ನಾದ-ಶಕ್ತಿ-ಸಮನಾ ಈ ಸ್ಥಾನಗಳಿಂದ ವ್ಯವಧಾನವೆಂದು ಅರ್ಥವಾಗುತ್ತದೆ. ವಚನದಲ್ಲಿ "ತ್ರೀನ್, ತ್ರೀನ್ ತ್ಯಕ್ತ್ವಾ" ಎಂಬುದಕ್ಕೆ ದ್ವಿಗುಣಿತವಾದ ಮೂರು ಎಂದರೆ ಮಧ್ಯದ ಆರು ಸ್ಥಾನಗಳನ್ನು ಬಿಟ್ಟು ಎಂದು ಅರ್ಥವಾಗುವುದು. "ಶೂನ್ಯತ್ರಯಾತ್" ಎಂಬುದು ಸುಪಾಂ ಸುಲುಕ್ ಎಂಬ ವ್ಯಾಕರಣ ಸೂತ್ರಾನುಸಾರವಾಗಿ ಷಷ್ಠೀ ಅರ್ಥದಲ್ಲಿ ಆತ್ ಎಂಬ ಆದೇಶ ಪ್ರತ್ಯಯಾಂತವಾಗಿರುವುದರಿಂದ ಶೂನ್ಯಷಟ್ಕಗಳಲ್ಲಿ ಕಡೆಯ ಉನ್ಮನೀ ಸ್ಥಾನದಲ್ಲಿ ಅಂತ್ಯವಾದ ಮಹಾಶೂನ್ಯವಿದೆಯೆಂಬ ವ್ಯಾಖ್ಯಾನವು ಸಮಂಜಸವಾಗುವುದು ||೪೨||

೪೩

ಪ್ರಾಣಾತ್ಮಮಾನಸಾನಾಂ ಸಂಯೋಗಃ ಪ್ರಾಣವಿಷುವಾಖ್ಯಃ ||೪೩||

ಕ್ರಮಾತ್ಪ್ರಾಪ್ತಾನಿ ಸಪ್ತ ವಿಷುವಂತ್ಯಾಹ-ಕಕಾರಾತ್ಮಕವಾಯುಃ ಪ್ರಾಣಃ ಆತ್ಮಾ ಮನಶ್ಚೇತ್ಯೇತೇಷಾಮೈಕ್ಯಂ ಪ್ರಾಣವಿಷುವತ್ಸಂಜ್ಞಮಿತಿ ಕೇಚಿತ್. ಯಥಾಶ್ರುತಮನ್ಯೇ || ೪೩ ||

ಮಂತ್ರವಿಷುವಮಾಹ—ಪ್ರಾಥಮಿಕಕೂಟನಾದೇ ಬೀಜಚತುಷ್ಕಸ್ಯೈಕ್ಯಂ, ಸ್ವಸ್ಯಾತ್ಮನಸ್ತ್ವಾಧಾರೋತ್ಥಿತನಾದೇನ ಸಹೈಕ್ಯಂ ನ ಪ್ರಾಥಮಿಕೇನಾನಾಹತಾದಾರಬ್ಧೇನ ಸಹ, ' ಆಧಾರೋತ್ಥಿತನಾದೇ ತು

ಸಪ್ತವಿಷುವತ್‌ಗಳಲ್ಲಿ ಮೊದಲನೆಯದು ಪ್ರಾಣವಿಷುವತ್ ಎಂಬುದಾಗಿದೆ. ಪ್ರಾಣ-ಆತ್ಮ ಮನಸ್ಸು ಇವುಗಳ ಸಂಯೋಗವೇ ಅದರ ಸ್ವರೂಪವು. ಅಥವಾ ಕಕಾರ ರೂಪವಾದ ವಾಯುವೆಂಬ ಪ್ರಾಣವೂ ಆತ್ಮವೂ ಮನಸ್ಸೂ ಸೇರಿದ ಗುಂಪನ್ನು ಪ್ರಾಣವಿಷುವವೆಂದು ಕೆಲವರು ಕರೆಯುವರು ||೪೩||

೪೪

ಪ್ರಾಥಮಿಕಕೂಟನಾದೇ ತ್ವನಾಹತಾದ್ಬ್ರಹ್ಮರಂಧ್ರಾಂತೇ।
ವ್ಯಷ್ಟಿಸಮಷ್ಟಿವಿಭೇದಾದ್ಬೀಜಚತುಷ್ಕಸ್ಯ ಚ ಸ್ವಸ್ಯ ॥೪೪॥
ಐಕ್ಯೇನ ನಾದಮಯತಾವಿಭಾವನಂ ಮಂತ್ರವಿಷುವಾಖ್ಯಮ್ ॥

ಲೀನಂ ಬುದ್ಧ್ವಾಽಽತ್ಮರೂಪಕಂ- ಸಂಯೋಗೇನ ವಿಯೋಗೇನ ಮಂತ್ರಾರ್ಣಾನಾಂ ಮಹೇಶ್ವರಿ. ಅನಾಹತಾದ್ಯಾಧಾರಾಂತಂ ನಾದಾತ್ಮತ್ವವಿಚಿಂತನಂ. ವಿಷುವಂ ' ಇತಿ ಕಾದಿಮತೀಯವಚನಾತ್. ಸಂಯೋಗೇನ ಸಮಷ್ಟ್ಯಾ. ವಿಯೋಗೇನ ವ್ಯಷ್ಟ್ಯಾ. ಚತುರ್ವಿಧಾನಾಮಿತಿ ಶೇಷಃ. ಆಧಾರಾಣಾಮಂತೋ ಬ್ರಹ್ಮರಂಧ್ರಂ. ಆಧಾರಾಂತಾಂತಮಿತಿ ತಂತ್ರೇಣಾಂತಪದದ್ವಯಸತ್ತ್ವಾದ್ಬ್ರಹ್ಮರಂಧ್ರಾಂತಮಿತ್ಯರ್ಥಕತ್ವೇನ ವ್ಯಾಚಕ್ಷತೇ. ಆಽಽಧಾರಾಂತಾದಿತ್ಯರ್ಥಕ ಆಙ್ ಪ್ರಶ್ಲೇಷೆ ತು ಸರ್ವಂ ಸುಸ್ಥಂ ॥ ೪೪ ॥

ಅನಾಹತ ಚಕ್ರದಿಂದ ಬ್ರಹ್ಮರಂಧ್ರವನ್ನು ಮುಟ್ಟುವ ವಾಗ್ಭವಕೂಟದ ನಾದದಲ್ಲಿ ಮೊದಲು ಹೇಳಿದ ವ್ಯಷ್ಟಿ-ಸಮಷ್ಟಿ ಭೇದಗಳಿಂದ ಕೂಡಿದ ನಾಲ್ಕು ವಿಧದ ಮಂತ್ರಾಕ್ಷರ ಬೀಜಗಳನ್ನೂ ಸ್ವಾತ್ಮವನ್ನೂ ಐಕ್ಯರೂಪದಿಂದ ಸರ್ವವೂ ನಾದಮಯವೆಂದು ಭಾವಿಸುವುದು ಮಂತ್ರವಿಷುವವೆಂದು ಹೇಳಲ್ಪಡುವುದು. ಸ್ವಾತ್ಮವಸ್ತುವನ್ನು ಮಾತ್ರ ಮೂಲಾಧಾರದಿಂದ ಹುಟ್ಟಿದ ನಾದದೊಡನೆ ಐಕ್ಯದಿಂದ ಭಾವಿಸಬೇಕು "ಆಧಾರೋತ್ಥಿತನಾದೇ ತುಲೀನಂ ಬುದ್ಧ್ವಾಽತ್ಮರೂಪಕಂ| ಸಂಯೋಗೇನ ವಿಯೋಗೇನ ಮಂತ್ರಾರ್ಣಾನಾಂ ಮಹೇಶ್ವರಿ | ಅನಾಹತಾದ್ಯಾಧಾರಾಂತಂ ನಾದಾತ್ಮತ್ವವಿಚಿಂತನಂ | ವಿಷುವಂ" ಎಂಬ ವಚನವು ಇದಕ್ಕೆ ಪ್ರಮಾಣವು. ಈ ವಚನದಲ್ಲಿ ನಾಲ್ಕು ವಿಧವಾದ ಎಂಬ ಅರ್ಥದ "ಚತುರ್ವಿಧಾನಾಂ" ಎಂಬ ಪದವನ್ನು ಅಧ್ಯಾಹಾರವಿಟ್ಟುಕೊಳ್ಳಬೇಕು. ಆಧಾರಾಂತ,ಎಂಬ ಪದದಲ್ಲಿ ಅಂತ ಪದಗಳು ಎರಡು ತಂತ್ರದಿಂದ (ಏಕೋಕ್ತಿಯಿಂದ) ಹೇಳಲ್ಪಟ್ಟಿದ್ದರಿಂದ, ಅಥವಾ ಆ-ಆಧಾರಾಂತಂ ಎಂದು "ಆ" ಎಂಬ ಪದವನ್ನು ಇಟ್ಟುಕೊಳ್ಳುವುದರಿಂದ ಬ್ರಹ್ಮರಂಧ್ರಾಂತಸ್ಥಾನವೆಂದು ಅರ್ಥವಾಗುವುದು ||೪೪||

೪೫-೪೬

ಆಧಾರೋತ್ಥಿತನಾದಸ್ಯೋಚ್ಚಾರಾದ್ಬ್ರಹ್ಮರಂಧ್ರಾಂತಮ್ ||೪೫||
ಷಟ್ಚಕ್ರಾಣಾಂ ಗ್ರಂಥೀನ್ ದ್ವಾದಶ ಭಿಂದನ್ ಸುಷುಮ್ನಯೈವ ಪಥಾ |
ನಾಡೀನಾದಾರ್ಣಾನಾಂ ಸಂಯೋಗೋ ನಾಡಿಕಾವಿಷುವಮ್ ||೪೬||

ನಾಡೀವಿಷುವಮಾಹ—ಮೂಲಾಧಾರಾದಿಚಕ್ರಷಟ್ಕಸ್ಯಾಪ್ಯಧ ಊರ್ಧ್ವಂ ಚೈಕೈಕೋ ಗ್ರಂಥಿರಿತಿ ದ್ವಾದಶ ಗ್ರಂಥಯಃ. ತದ್ಭೇದನ ಮಾರ್ಗೇಣೈವ ಸುಷುಮ್ನಾನಾಡೀ ಮೂಲಾಧಾರಾದ್ಬ್ರಹ್ಮರಂಧ್ರಂ ವ್ಯಾಪ್ನೋತಿ; ತೇನೈವ ಮಾರ್ಗೇಣ ನಾದಸ್ಯ ವರ್ಣಪಂಕ್ತೇಶ್ಚ ನಾಡೀ ಸಂಯುಕ್ತತ್ವೇನ ಭಾವನಯೋಚ್ಚಾರಣಂ ನಾಡೀವಿಷುವಮಿತ್ಯರ್ಥಃ || ೪೫.೪೬ ||

ಮೂಲಾಧಾರ ಮೊದಲ್ಗೊಂಡು ಆಜ್ಞಾಚಕ್ರದವರೆಗೂ ಪ್ರತಿಯೊಂದು ಚಕ್ರದ ಊರ್ಧ್ವ ಅಧೋಭಾಗಗಳಲ್ಲಿ ಒಂದೊಂದು ಗ್ರಂಥಿಯಿದೆ. ಈ ರೀತಿ ಹನ್ನೆರಡು ಗ್ರಂಥಿಗಳನ್ನು ಭೇದಿಸಿ ಸುಷುಮ್ನಾನಾಡಿಯು ಮೂಲಾಧಾರದಿಂದ ಬ್ರಹ್ಮರಂಧ್ರವನ್ನು ವ್ಯಾಪಿಸಿದೆ. ಅದೇ ಮಾರ್ಗದಿಂದ ನಾದ, ವರ್ಣಪಂಕ್ತಿಗಳನ್ನು ನಾಡೀ ಸಂಯುಕ್ತವಾಗಿವೆಯೆಂಬ ಭಾವನಾಪೂರ್ವಕವಾಗಿ ಉಚ್ಚರಿಸುವುದು ನಾಡೀ ವಿಷುವವೆನ್ನಲ್ಪಡುವುದು ||೪೫-೪೬||

೪೭

ರೇಫೇ ಕಾಮಕಲಾರ್ಣೇ ಹಾರ್ದಕಲಾಯಾಂ ಚ ಬಿಂದ್ವಾದೌ।
ನಾದಾಂತಾವಧಿನಾದಃ ಸೂಕ್ಷ್ಮತರೋ ಜಾಯತೇ ತತ್ರ ॥೪೭॥
ಶಕ್ತೇರ್ಮಧ್ಯೇ ತಲ್ಲಯಚಿಂತನಮುದಿತಂ ಪ್ರಶಾಂತವಿಷುವಾಖ್ಯಮ್ ।

ಪ್ರಶಾಂತವಿಷುವಮಾಹ-ತೃತೀಯಕೂಟಸ್ಥರೇಫಾದಿಷು ಸಪ್ತಸು ಸ್ಥಾನೇಷ್ವಾಧಾರಾದಾರಬ್ಧಸ್ಯ ನಾದಸ್ಯ ತತ್ರ ಸೂಕ್ಷ್ಮತರತಾದಶಾ, ಅಭಿಘಾತಾದುತ್ತರೋತ್ತರಕ್ಷಣೇಷು ಕಾಂಸ್ಯತಾಲಧ್ವನಿವತ್. ತಸ್ಯ ಶಕ್ತೌ ಲಯೋ ಭಾವ್ಯ ಇತ್ಯರ್ಥಃ ॥ ೪೭ ॥

ಶಕ್ತಿಕೂಟದ ರೇಫ ಈಕಾರ, ಹಾರ್ದಕಲೆಯೆನಿಸಲ್ಪಟ್ಟ ಬಿಂದು, ಅರ್ಧಚಂದ್ರ, ರೋಧಿನೀ, ನಾದ, ನಾದಾಂತಗಳೆಂಬ ನಾದಾಂತಪರ್ಯಂತವಾದ ಏಳು ಸ್ಥಾನಗಳಲ್ಲಿ ಕಂಚಿನ ತಾಳವನ್ನು ಹೊಡೆದು ಶಬ್ದಮಾಡಿದನಂತರ ಅದೇ ತಾಳದ ಸೂಕ್ಷ್ಮಶಬ್ದವು ಇರುವಂತೆ ಆಧಾರ ಚಕ್ರದಿಂದ ಹುಟ್ಟಿದ ನಾದವು ಅತಿ ಸೂಕ್ಷ್ಮ ಅವಸ್ಥೆಯನ್ನು ಹೊಂದುವುದು. ಅದಕ್ಕೆ ಶಕ್ತಿಯ ಮಧ್ಯದಲ್ಲಿ ಲಯವನ್ನು ಧ್ಯಾನಿಸಿದರೆ ಅದಕ್ಕೆ ಪ್ರಶಾಂತ ವಿಷುವವೆಂದು ಹೆಸರು ॥೪೭॥

೪೮

ಶಕ್ತ್ಯಂತರ್ಗತನಾದಂ ಸಮನಾಯಾಂ ಭಾವಯೇಲ್ಲೀನಮ್ ॥೪೮॥

ಶಕ್ತಿವಿಷುವಮಾಹ—ಶಕ್ತಿಸ್ಥಾನಾದೂರ್ಧ್ವಂ ಪುನರುಜ್ಜೀವಿತಸ್ಯ ನಾದಸ್ಯ ಸೂಕ್ಷ್ಮತಮಸ್ಯ ವ್ಯಾಪಿಕಾಮುಲ್ಲಂಘ್ಯ ಸಮನಾಯಾಂ ಲಯಃ ಶಕ್ತಿ ವಿಷುವಮಿತ್ಯರ್ಥಃ ॥ ೪೮ ॥

ಶಕ್ತಿಯಲ್ಲಿ ಲಯಹೊಂದಿ ಪುನರುಜ್ಜೀವನವನ್ನು ಹೊಂದಿ ಅದಕ್ಕೂ ಸೂಕ್ಷ್ಮವಾದ ಅವಸ್ಥೆಯುಳ್ಳ ನಾದವು ವ್ಯಾಪಿಕೆಯನ್ನು ಉಲ್ಲಂಘಿಸಿ ಸಮನಾಸ್ಥಾನದಲ್ಲಿ ಲಯಹೊಂದುವುದೆಂಬ ಧ್ಯಾನವು ಶಕ್ತಿ ವಿಷುವವು || ೪೮ ||

೪೯-೫೧

ಸಮನಾಗತಮುನ್ಮನ್ಯಾಮೇತೇ ದ್ವೇ ಶಕ್ತಿಕಾಲವಿಷುವಾಖ್ಯೇ ।
ಶ್ರೀವಿದ್ಯಾಕೂಟಾವಯವೇಷು ಕಕಾರಾದಿಷೂನ್ಮನಾಂತೇಷು ॥ ೪೯ ॥
ಅಕುಲಾದಿಕೋನ್ಮನಾಂತಪ್ರದೇಶಸಂಸ್ಥೇಷು ಸಕಲೇಷು ।
ಅಧ್ಯುಷ್ಟನಿಮೇಷೋತ್ತರಸಪ್ತದಶಾಧಿಕ ಶತತ್ರಯತ್ರುಟಿಭಿಃ ॥ ೫೦ ॥
ಉಚ್ಚರಿತೇ ನಾದೇ ಸತಿ ತಸ್ಯಾಂತೇ ತತ್ತ್ವವೇದನಂ ಭವತಿ ।
ತದಿದಂ ಚೈತನ್ಯಾಭಿವ್ಯಕ್ತಿನಿದಾನಂ ತು ತತ್ತ್ವವಿಷುವಾಖ್ಯಮ್ ॥ ೫೧ ॥

ಸಮನೋರ್ಧ್ವಂ ಪುನರುಜ್ಜೀವಿತಸ್ಯಾತ್ಯಂತಂ ಸೂಕ್ಷ್ಮತಮಸ್ಯ ನಾದಸ್ಯೋನ್ಮನ್ಯಾಂ ಲಯಃ ಕಾಲವಿಷುವಮಿತ್ಯಾಹ— [illegible]

ಸಮನಾಸ್ಥಾನದಲ್ಲಿ ಪುನಃ ಅಭಿವ್ಯಕ್ತಿಹೊಂದಿ ಇನ್ನೂ ಸೂಕ್ಷ್ಮತಮಾವಸ್ಥೆಯಲ್ಲಿರುವ ನಾದವು ಉನ್ಮನಿಯಲ್ಲಿ ಲಯಹೊಂದುವುದೆಂಬ ಚಿಂತನವು ಕಾಲವಿಷುವವು ಎಂದು ಹೇಳಲ್ಪಡುವುದು.

ಸುಷುಮ್ನಾನಾಡಿಯ ಮೂಲ-ಅಗ್ರಭಾಗಗಳಲ್ಲಿ ಒಂದೊಂದು ಸಹಸ್ರದಳಕಮಲವೂ ಮಧ್ಯದಲ್ಲಿ ಅಷ್ಟದಲ, ಷಡ್ದಲ ಮುಂತಾದ ಮೂವತ್ತು ಪದ್ಮಗಳೂ ಇವೆ. ಒಟ್ಟಾಗಿ ಇರುವ ಮೂವತ್ತೆರಡು ಪದ್ಮಗಳಲ್ಲಿ ಕೆಳಭಾಗದ ಎರಡು ಪದ್ಮಗಳೂ ಅಗ್ರಭಾಗದ ಒಂದು ಪದ್ಮವೂ ಅಕುಲವೆಂದು ಸಂಕೇತಿತಗಳಾಗಿವೆ. ಮಿಕ್ಕ ಪದ್ಮಗಳೆಲ್ಲವೂ ಕುಲಪದ್ಮಗಳು. ಅಕುಲವೆಂಬ ಆದಿ ಪದ್ಮದಿಂದ ಉನ್ಮನಾಂತಸ್ಥಾನಗಳಲ್ಲಿರುವ ಶ್ರೀವಿದ್ಯಾ ಕೂಟಗಳಲ್ಲಿ ಅಡಗಿರುವ ಕಕಾರ ಮೊದಲಾಗಿ ಉನ್ಮನಾಂತವರ್ಣಗಳಲ್ಲಿ ನಾದವು ಅಭೇದದಿಂದ ವ್ಯಾಪಿಸಿರುವುದೆಂಬ ಭಾವನಾ ಪೂರ್ವಕವಾಗಿ ಹತ್ತು ಸಾವಿರದ ಎಂಟುನೂರ ಹದಿನೇಳು ತ್ರುಟಿಗಳ ಕಾಲದಲ್ಲಿ ನಾದೋಚ್ಚಾರಣವನ್ನು ಮಾಡಬೇಕು. ವಿದ್ಯಾ ಅಕ್ಷರಗಳು ಕುಲಪದ್ಮದಿಂದಲೇ ಆರಂಭವಾಗುವುವಾದರೂ ಚಕ್ರರಾಜದ ಸಕಲ ಭಾವನೆಯು ಕೆಳಗಿನ ಅಕುಲ ಪದ್ಮದಲ್ಲಿ ಆರಂಭಿಸುವುದಾಗಿ "ಅಕುಲೇವಿಷುಸಂಜ್ಞೇಚ" ಎಂಬ ಚತುಃಶತೀಗ್ರಂಥದಲ್ಲಿ ಹೇಳಿರುವುದರಿಂದಲೂ ಕುಲಾಕುಲವಿದ್ಯೆಗಳು ಅಭಿನ್ನ ಸ್ವರೂಪವಾಗಿರುವುದರಿಂದಲೂ ಶ್ರೀವಿದ್ಯೆಯನ್ನು ಅಕುಲಪದ್ಮದಿಂದ ಪ್ರಾರಂಭವಾಗಿರುವುದಾಗಿ ತೋರಿಸಿದೆ. "ಸ್ವಸ್ಥೇ

ತತ್ತ್ವವಿಷುವಮಾಹ—

ಉಕ್ತೇಷು ದ್ವಾತ್ರಿಂಶತ್ಪದ್ಮೇಷ್ವಧಸ್ತನದ್ವಯಂ ಚರಮಂ ಚಾಕುಲಪದ್ಮಾನಿ. ಶೇಷಾಣಿ ಕುಲಪದ್ಮಾನಿ. ತೇಷು ಯದ್ಯಪಿ ಮೂಲಾಧಾರಾಖ್ಯಾತ್ಕುಲಪದ್ಮಾದೇವ ವಿದ್ಯಾಽಕ್ಷರಾಣಾಮಾರಂಭಃ. ತಥಾಽಪಿ ಚಕ್ರರಾಜಸ್ಯ ಸಕಲಾಖ್ಯಭಾವನಾಯಾ ಅಧಸ್ತನಸಹಸ್ರದಲಕಮಲಮಾರಭ್ಯೈವ 'ಅಕುಲೇ ವಿಷುಸಂಜ್ಞೇ ಚ' ಇತ್ಯಾದಿನಾ ಚತುಃ ಶತ್ಯಾಮುಕ್ತತ್ವಾತ್ಕುಲಾಕುಲವಿದ್ಯಯೋರಭೇದೇನ ಶ್ರೀವಿದ್ಯಾಯಾ ಅಪಿ ತತ ಆರಂಭೋಕ್ತಿಸ್ತಂತ್ರೇಷು. ಅಧ್ಯುಷ್ಟಂ ಸಾರ್ಧತ್ರಯಂ. ನಿಮೇಷೋ ಲೋಚನಸ್ಪಂದಕಾಲಃ. ತಸ್ಯ ತ್ರಿಸಹಸ್ರತಮೋಽಂಶಸ್ತ್ರುಟಿಃ. ಸ್ವಸ್ಥೇ ನರೇ ಸಮಾಸೀನೇ ಯಾವತ್ಸ್ಪಂದತಿ ಲೋಚನಂ. ತಸ್ಯ ತ್ರಿಂಶತ್ತಮೋ ಭಾಗಸ್ತತ್ಪರಃ ಪರಿಕೀರ್ತಿತಃ. ತತ್ಪರಸ್ಯ ಶತಾಂಶಸ್ತು ತ್ರುಟಿರಿತ್ಯಭಿಧೀಯತೇ. ಇತಿ ವಚನಾತ್. ಏವಂ ಚ (೧೦೭೧೭) ಅಯುತೋತ್ತರಾಷ್ಟಶತೋತ್ತರಸಪ್ತದಶತ್ರುಟಪರ್ಯಂತಂ ವಿದ್ಯಾಽವಯವಸ್ಥಾನಸಂಲಗ್ನತಾಪೂರ್ವಕಂ ನಾದೋಚ್ಚಾರಣೇ ಕೃತೇ ಸತಿ ತತ್ತ್ವಸ್ಯ ಸ್ವಸಂವಿದಭೇದಸ್ಯ ಬೋಧೋ ಭವತಿ. ತದಿದಮುಚ್ಚಾರಣಂ ತತ್ತ್ವವಿಷುವಂ ॥ ೪೯-೫೦-೫೧ ॥

ನರೇ ಸಮಾಸೀನೇ ಯಾವತ್‌ಸ್ಪಂದತಿಲೋಚನಂ | ತಸ್ಯತ್ರಿಂಶತ್ತಮೋಭಾಗಸ್ತತ್ಪರಃ ಪರಿಕೀರ್ತಿತಃ | ತತ್ಪರಸ್ಯ ಶತಾಂಶಸ್ತು ತ್ರುಟಿರಿತ್ಯಭಿಧೀಯತೇ" ಎಂಬ ವಚನದಿಂದ ಸ್ವಸ್ಥವಾಗಿರುವ ಮನುಷ್ಯನು ರೆಪ್ಪೆಯನ್ನು ಒಂದುಸಲ ಹೊಡೆಯಲು ಎಷ್ಟು ಅಂತರ ಕಾಲವಿದೆಯೋ ಅದರ ಮೂವತ್ತನೇ ಒಂದು ಭಾಗವು ತತ್ಪರವೆಂದೂ ಅದರ ನೂರನೇ ಒಂದು ಭಾಗ ಕಾಲವು ತ್ರುಟಿಯೆಂದೂ ಕರೆಯಲ್ಪಡುವುವು. ಅಧ್ಯುಷ್ಟಂ=ಮೂರೂವರೆ. ಅಷ್ಟುಸಲ ರೆಪ್ಪೆ ಹೊಡೆಯಲು ಬೇಕಾದ ತ್ರುಟಿಗಳು ಮತ್ತು ಮೂರುನೂರ ಹದಿನೇಳು ತ್ರುಟಿಗಳು ಸೇರಿ ಹತ್ತು ಸಾವಿರದ ಎಂಟುನೂರ ಹದಿನೇಳು ತ್ರುಟಿಗಳವರೆಗೆ ವಿದ್ಯಾವಯವಗಳಲ್ಲಿ ನಾದವು ಅಂಟಿಕೊಂಡಿದೆಯೆಂದು ಭಾವಿಸಿ ನಾದೋಚ್ಚಾರಣೆ ಮಾಡಲು ಸ್ವಾತ್ಮಸ್ವರೂಪವಾದ ಸಂವಿತ್ತಿಯ ಅಭೇದಸಾಕ್ಷಾತ್ಕಾರವು ಲಭಿಸುವುದು. ಇದು ತತ್ತ್ವವಿಷುವವೆಂದು ಹೇಳಲ್ಪಡುವುದು || ೪೯—೫೦—೫೧ ||

೫೨-೫೩

ಏವಮುವಸ್ಥಾ ಶೂನ್ಯವಿಷುವಂತಿ ಚಕ್ರಾಣಿ ಪಂಚ ಷಟ್ ಸಪ್ತ ।
ನವ ಚ ಮನೋ ರರ್ಥಾಂಶ್ಚ ಸ್ಮರತೋಽರ್ಣೋಚ್ಚಾರಣಂ ತು ಜಪಃ॥೫೨॥
ಭಾಸ್ಕರರಾಯೇಣ ಗುರೋಃ ಕರುಣಾವಶತಃ ಸಮುನ್ಮಿಷಿತೇ ।
ವರಿವಸ್ಯಾಽತಿರಹಸ್ಯೇ ಪೂರ್ವಾಂಶಃ ಪೂರ್ಣತಾಮಗಮತ್ ॥ ೫೩ ॥

ಉಪಸಂಹಾರಪೂರ್ವಕಂ ಜಪಂ ಲಕ್ಷಯತಿ. ಅವಸ್ಥಾಽಽದಿಚತುಷ್ಟಯೇ ಸಂಖ್ಯಾಚತುಷ್ಟಯಸ್ಯ ಕ್ರಮಾದನ್ವಯಃ, ನಾದತ್ರಯಸ್ಯ ಚಕ್ರತ್ರಯಾತ್ಮಕತ್ವಭಾವನಂ ಪ್ರಾಗುಕ್ತಂ- ಚಕ್ರಸಂಕೇತೇ ತ್ವನ್ಯದಪಿ ತ್ರಯಮುಕ್ತಂ. ಚಕ್ರಭಾವನಂ ತ್ರಿವಿಧಂ ಸಕಲಂ ನಿಷ್ಕಲಂ ಸಕಲನಿಷ್ಕಲಂ ಚೇತಿ. ಅಕುಲಸಹಸ್ರಾರಂ ಮೂಲಾಧಾರಾದಿಪಂಚಕಂ ಸೂಕ್ಷ್ಮಜಿಹ್ವಾ ಭ್ರೂಮಧ್ಯಂ ಬಿಂದುಸ್ಥಾನಂ ಚೇತಿ ನವಸು ಸ್ಥಾನೇಷು ತ್ರೈಲೋಕ್ಯಮೋಹನಾದಿಚಕ್ರನವಕಭಾವನಂ ಸಕಲಂ, ಬಿಂದ್ವಾದ್ಯುನ್ಮನ್ಯಂತಂ ತದ್ಭಾವನಂ ದ್ವಿತೀಯಂ, ಮಹಾಬಿಂದಾವೇವ ತದ್ಭಾವನಂ ತೃತೀಯಮಿತಿ. ಮನೋರ್ಮಂತ್ರಸ್ಯಾರ್ಥಾನನುಸಂದಧಾನಸ್ಯ ವಿದ್ಯಾಯಾ ಅರ್ಣಾನಾಮಕ್ಷರಾಣಾಮುಷ್ಟಪಂಚಾಶತೋ ಮಧ್ಯ ಆದ್ಯಕೂಟದ್ವಿತಯಬಿಂದ್ವಾದಿನವಕದ್ವಯಪ್ರಹಾಣೇನಾವಶಿಷ್ಟಾನಾಂ ಚತ್ವಾರಿಂಶತೋಽಕ್ಷರಾಣಾಮುಚ್ಚಾರಣಂ ಜಪೋ ಜಪಪದವಾಚ್ಯಮಿತ್ಯರ್ಥಃ ॥ ೫೨-೫೩ ॥

ಹೀಗೆ ಕ್ರಮವಾಗಿ ಐದು ಅವಸ್ಥೆಗಳನ್ನೂ ಆರು ಶೂನ್ಯಗಳನ್ನೂ ಏಳು ವಿಷುವಗಳನ್ನೂ ಒಂಭತ್ತು ಚಕ್ರಗಳನ್ನೂ ಧ್ಯಾನಿಸುತ್ತಾ ಹಿಂದೆ ಹೇಳಿರುವಂತೆ ನಾದತ್ರಯವನ್ನು ಚಕ್ರತ್ರಯಾತ್ಮಕವೆಂದು ಭಾವಿಸುತ್ತಾ ಪ್ರಥಮ ದ್ವಿತೀಯ ಕೂಟಗಳ ಬಿಂದ್ವಾದಿ ನಾದಗಳನ್ನು ವರ್ಜಿಸಿ ಮಿಕ್ಕ ನಲವತ್ತು ಅಕ್ಷರಗಳನ್ನು ಅರ್ಥಾನುಸಂಧಾನ ಪೂರ್ವಕವಾಗಿ ಉಚ್ಚರಿಸುವುದೇ ಜಪವು. ಚಕ್ರಸಂಕೇತ ಗ್ರಂಥದಲ್ಲಿ ಕೆಲವು ವಿಶೇಷಗಳು ಹೇಳಲ್ಪಟ್ಟಿವೆ :—ಚಕ್ರಭಾವನೆಯು ಸಕಲ-ನಿಷ್ಕಲ-ಸಕಲನಿಷ್ಕಲವೆಂದು ಮೂರು ವಿಧವಾಗಿದೆ. ಅಕುಲಸಹಸ್ರಾರ, ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧಿ, ಸೂಕ್ಷ್ಮಜಿಹ್ವಾ, ಭ್ರೂಮಧ್ಯ, ಬಿಂದುಸ್ಥಾನವೆಂಬ ಒಂಭತ್ತು ಸ್ಥಾನಗಳಲ್ಲಿ ತ್ರೈಲೋಕ್ಯ ಮೋಹನಾದಿ ಒಂಭತ್ತು ಚಕ್ರಗಳನ್ನು ಧ್ಯಾನಿಸುವುದು ಸಕಲ ಭಾವನೆಯು, ಬಿಂದು ಮೊದಲಾದ ಉನ್ಮ

ಇತಿ ಶ್ರೀ ನೃಸಿಂಹಾನಂದನಾಥಚರಣಾರಾಧಕೇನ ಭಾಸ್ಕರರಾಯಾಪರನಾಮ್ನಾ ಭಾಸುರಾನಂದನಾಥೇನೋನ್ನೀತೇ ವರಿವಸ್ಯಾರಹಸ್ಯೇ ತತ್ಪ್ರಕಾಶೇ ಚ ಪ್ರಥಮೋಽಂಶಃ.

ನ್ಯಂತ ಒಂಭತ್ತು ಸ್ಥಾನಗಳಲ್ಲಿ ಭಾವಿಸುವುದು ನಿಷ್ಕಲಭಾವನೆಯು, ಮಹಾ ಬಿಂದುವಿನಲ್ಲಿಯೇ ಚಕ್ರಭಾವನೆಯು ಸಕಲ ನಿಷ್ಕಲಭಾವನೆಯು, ಈ ಮೂರು ಭಾವನೆಗಳು ಹೆಚ್ಚಾಗಿ ಹೇಳಲ್ಪಟ್ಟವೆ. || ೫೨ ||

ಪೂಜ್ಯರಾದ ವಿದ್ಯಾಗುರುಗಳ ಕರುಣಾವಲಂಬನದಿಂದ ಭಾಸ್ಕರ ರಾಯನು ರಚಿಸಿದ ವರಿವಸ್ಯಾ ರಹಸ್ಯವೆಂಬ ಗ್ರಂಥದ ಮೊದಲನೆಯ ಅಂಶವು ಸಂಪೂರ್ಣವು. || ೫೩ ||

ದ್ವಿತೀಯಾಂಶವು

೫೪-೫೫

ನಾರ್ಥಜ್ಞಾನವಿಹೀನಂ ಶಬ್ದಸ್ಯೋಚ್ಚಾರಣಂ ಫಲತಿ ।
ಭಸ್ಮನಿ ವಹ್ನಿವಿಹೀನೇ ನ ಪ್ರಕ್ಷಿಪ್ತಂ ಹವಿರ್ಜ್ವಲತಿ ॥ ೫೪ ॥
ಅರ್ಥಮಜಾನಾನಾನಾಂ ನಾನಾವಿಧಶಬ್ದಮಾತ್ರಪಾಠವತಾಮ್ ।
ಉಪಮೇಯಶ್ಚಕ್ರೀವಾನ್ ಮಲಯಜಭಾರಸ್ಯ ವೋಢೈವ ॥ ೫೫ ॥

ಜಪಲಕ್ಷಣಶರೀರಘಟಕತ್ವೇನ ‘ ಯದಧೀತಮವಿಜ್ಞಾತಂ ನಿಗದೇನೈವಶಬ್ದ್ಯತೇ. ಅನಗ್ನಾವಿವ ಶುಷ್ಕೈಧೋ ನ ತಜ್ಜ್ವಲತಿ ಕರ್ಹಿಚಿತ್ ’ । ಇತ್ಯರ್ಥಜ್ಞಾನರಹಿತಶಬ್ದೋಚ್ಚಾರಣಸ್ಯ ನಿಂದಯಾ ಪಾಪಾನುಮಾನಾಚ್ಚಾರ್ಥಜ್ಞಾನಮಾವಶ್ಯಕಮಿತ್ಯಾಹ—ಚಕ್ರೀವಾ್ ಗರ್ದಭಃ. ಯದ್ಯಪಿ ‘ ಯಥಾ ಖರಶ್ಚಂದನಭಾರವಾಹೀ ’ ಇತಿ ಶ್ರುತೌ ಖರಸ್ಯೈವೋಪಮಾನತಾ. ತಥಾಽಪಿ ಸಾದೃಶ್ಯನಿರೂಪಕಗುಣಾಧಿಕ್ಯವತ ಏವೋ

ಯದಧೀತಮವಿಜ್ಞಾತಂ ನಿಗದೇನೈವ ಶಬ್ದ್ಯತೇ । ಅನಗ್ನಾವಿವಶುಷ್ಕೈಧೋ ನತಜ್ಜ್ವಲತಿ ಕರ್ಹಿ ಚಿತ್ ॥ ಎಂಬ ವಚನವು ಅರ್ಥಜ್ಞಾನ ಶೂನ್ಯನಾಗಿ ಶಬ್ದ ರಾಶಿಯನ್ನು ಮಾತ್ರ ಅಧ್ಯಯನಮಾಡಿ ಶಬ್ದೋಚ್ಚಾರಣೆಯನ್ನು ಮಾತ್ರ ಮಾಡಿದರೆ ಅದು ಅಗ್ನಿಯಿಲ್ಲದ ಸ್ಥಳದಲ್ಲಿ ಶುಷ್ಕವಾದ ಸಮಿತ್ತು ಮುಂತಾದುವು ಗಳನ್ನು ಹೋಮಮಾಡಿದರೆ ಅದು ಜ್ವಲಿಸದೇ ಇರುವಂತೆ ಮಾಡಿದ ಅನುಷ್ಠಾನವು ವೀರ್ಯವತ್ತಾಗುವುದಿಲ್ಲವೆಂದು ಹೇಳಿದೆ. ಅದರಂತೆ ಈ ಪದ್ಯವೂ ಅಗ್ನಿರಹಿತ ವಾದ ಭಸ್ಮಮಾತ್ರದಲ್ಲಿ ಹವಿಸ್ಸನ್ನು ಹಾಕಿದರೂ ಅದು ಜ್ವಲಿಸಿ ಕರ್ಮಸಾದ್ಗುಣ್ಯ ವನ್ನು ಹೇಗೆ ಸಂಪಾದಿಸಲಾರದೋ ಹಾಗೆಯೇ ಅರ್ಥಜ್ಞಾನ ಶೂನ್ಯವಾದ ಶಬ್ದೋಚ್ಚಾರಣೆಯು ನಿಷ್ಫಲವಾದುದೆಂದು ಹೇಳುತ್ತದೆ ॥ ೫೪ ॥

ಪಮಾನತ್ವಾತ್ತದಾಧಿಕ್ಯವ್ಯಂಜನಾಯ ಪ್ರತೀಪಾಲಂಕಾರ ಇವೋಪಮಾನೋಪಮೇಯಯೋರ್ವ್ಯತ್ಯಾಸಃ ‖ ೫೪-೫೫ ‖

ಶಬ್ದಾಧ್ಯಯನ ಮಾತ್ರದಲ್ಲಿ ಪಾಟವವನ್ನು ಗಳಿಸಿ ಅರ್ಥವನ್ನು ಅಸಡ್ಡೆಯಿಂದ ತಿಳಿಯದವರಿಗೆ ಮಲಯಾಚಲದಲ್ಲಿ ಹುಟ್ಟಿದ ದಿವ್ಯ ಚಂದನ ಕಾಷ್ಠಭಾರವನ್ನು ಹೊತ್ತ ಕತ್ತೆಯು ಸಮವಾದುದು. ಉಪಮೇಯಕ್ಕಿಂತ ಉಪಮಾನದಲ್ಲಿ ಗುಣಾತಿಶಯವಿರುವುದೆಂದು ಆಲಂಕಾರಿಕರು ಒಪ್ಪಿರುವ ಸರಣಿಯಂತೆ ಕತ್ತೆಯು ಉಪಮೇಯವೆಂದೂ ಅದಕ್ಕೆ ಅರ್ಥಜ್ಞಾನ ಹೀನಪುರುಷರು ಉಪಮಾನವೆಂದೂ ಕಲ್ಪಿಸಿರುವುದರಿಂದ ಮೂಢತ್ವ ಗುಣಾಧಿಕ್ಯವು ಸ್ವರಸವಾಗಿ ತೋರುವುದು ‖ ೫೫ ‖

ಪುರುಷಾರ್ಥಾನಿಚ್ಛದ್ಭಿಃ ಪುರುಷೈರರ್ಥಾಃ ಪರಿಜ್ಞೇಯಾಃ |
ಅರ್ಥಾನಾದರಭಾಜಾಂ ನೈವಾರ್ಥಾಃ ಪ್ರತ್ಯುತಾನರ್ಥಃ || ೫೬ ||

ಏತೇನಾರ್ಥಜ್ಞಾನಸ್ಯ ನಿತ್ಯತ್ವಮುಕ್ತಂ ಭವತಿ || ೫೬ ||

ಪುರುಷಾರ್ಥಗಳನ್ನು ಕೋರುವ ಜನರು ತದುಪಾಯವಾಗಿ ತಾವು ಪ್ರಯೋಗಿಸುವ ಮಂತ್ರಗಳ ಅರ್ಥಗಳನ್ನು ತಿಳಿಯುವುದು ಅವಶ್ಯವು. ಅದರಲ್ಲಿ ಮಾತ್ರ ಅನಾದರ ತೋರಿಸಿದರೆ ಚಿಂತಿತ ಫಲಗಳು ಲಭಿಸದಿರುವುದು ಮಾತ್ರವಲ್ಲದೇ ಅನರ್ಥಕ್ಕೂ ಕಾರಣವಾಗುವುದು || ೫೬ ||

೫೭-೫೯

ಅಥಾತಃ ಪೂರ್ಣಗಾಯತ್ರ್ಯಾಃ ಪ್ರತಿಪಾದ್ಯೋಽರ್ಥ ಆದಿಮಃ |
ಭಾವಾರ್ಥಃ ಸಂಪ್ರದಾಯಾರ್ಥೋ ನಿಗರ್ಭಾರ್ಥಸ್ತುರೀಯಕಃ || ೫೭ ||
ಕೌಲಿಕಾರ್ಥೋ ರಹಸ್ಯಾರ್ಥೋ ಮಹಾತತ್ತ್ವಾರ್ಥ ಏವ ಚ |
ನಾಮಾರ್ಥಃ ಶಬ್ದರೂಪಾರ್ಥಶ್ಚಾರ್ಥೋ ನಾಮೈಕದೇಶಗಃ || ೫೮ ||
ಶಾಕ್ತಾರ್ಥಃ ಸಾಮರಸ್ಯಾರ್ಥಃ ಸಮಸ್ತಸಗುಣಾರ್ಥಕೌ |
ಮಹಾವಾಕ್ಯಾರ್ಥ ಇತ್ಯರ್ಥಾಃ ಪಂಚದಶ್ಯಾಃ ಸ್ವಸಂಮಿತಾಃ || ೫೯ ||

ತೇ ಚಾರ್ಥಾಸ್ತಂತ್ರೋಪನಿಷದ್ಗ್ರಂಥಭೇದೇನ ನಾನಾವಿಧಾಃ ಶಿವೇನೋಕ್ತಾಃ. ತಾಂಶ್ಚ ಸಂಜಿಘೃಕ್ಷುರುದ್ದಿಶತಿ—ಅಥಾನಂತರಂ, ಅತ ಉಕ್ತರೀತ್ಯಾಽರ್ಥಜ್ಞಾನಸ್ಯಾವಶ್ಯಕತ್ವಾತ್, ಅರ್ಥಾಃ ಕಥ್ಯಂತ ಇತಿ ಶೇಷಃ. ಪೂರ್ಣಗಾಯತ್ರ್ಯಾಶ್ಚತುರ್ಥಚರಣಸಹಿತಾಯಾಃ. ಸ್ವ ಆತ್ಮೀಯಾ ವರ್ಣಾಃ. ತೈಃ ಸಂಮಿತಾಃ, ತತ್ಸಂಖ್ಯಾಸಮಾನಸಂಖ್ಯಾಕಾಃ. ಪಂಚದಶೇತಿ ಯಾವತ್. ಅಥ ವಾ ಸಂಪ್ರದಾಯಾರ್ಥಪ್ರಕರಣೇ ಕಾದಿವಿದ್ಯಾಯಾಂ ಸಪ್ತತ್ರಿಂಶದ್ವರ್ಣಾಃ ಸ್ಫುಟೀಕರಿಷ್ಯಂತೇ. ತತ್ಸಂಮಿತಾ ಅರ್ಥಾ ಇತ್ಯರ್ಥಃ || ೫೭-೫೮-೫೯ ||

ಮಂತ್ರಾರ್ಥಗಳನ್ನು ಶಿವನು ತಂತ್ರ, ಉಪನಿಷತ್ ಮುಂತಾದ ಅನೇಕ ಗ್ರಂಥಗಳಲ್ಲಿ ವಿವಿಧವಾಗಿ ಉಪದೇಶಿಸಿರುವುದರಿಂದ ಅವುಗಳ ಸಂಗ್ರಹವನ್ನು ಮುಂದೆ ತೋರಿಸಲು ಅರ್ಥಗಳು ಎಷ್ಟಿವೆಯೆಂಬುದನ್ನು ಈ ಪದ್ಯಗಳು ಕ್ರಮವಾಗಿ ತೋರಿಸುತ್ತವೆ. ಅರ್ಥಜ್ಞಾನವು ಆವಶ್ಯಕವಾದುದರಿಂದ ಈಗ ಅರ್ಥಗಳು ಕ್ರಮವಾಗಿ ಹೇಳಲ್ಪಡುತ್ತವೆ. "ಪರೋರಜಸೇ" ಮುಂತಾದ ನಾಲ್ಕು ಪಾದಗಳಿಂದ ಕೂಡಿದ ಪೂರ್ಣಗಾಯತ್ರಿಯ ಅರ್ಥ, ಭಾವಾರ್ಥ, ಸಂಪ್ರದಾಯಾರ್ಥ, ನಿಗರ್ಭಾರ್ಥ, ಕೌಲಿಕಾರ್ಥ, ರಹಸ್ಯಾರ್ಥ, ಮಹಾತತ್ವಾರ್ಥ, ನಾಮಾರ್ಥ, ಶಬ್ದರೂಪಾರ್ಥ, ನಾಮೈಕದೇಶಾರ್ಥ, ಶಾಕ್ತಾರ್ಥ, ಸಾಮರಸ್ಯಾರ್ಥ, ಸಮಸ್ತಾರ್ಥ, ಸಗುಣಾರ್ಥ, ಮಹಾವಾಕ್ಯಾರ್ಥ ಹೀಗೆ ಮಂತ್ರದ ಅಕ್ಷರಗಳ ಸಂಖ್ಯೆಯು ಹದಿನೈದು ಇರುವಂತೆ ಅರ್ಥಗಳು ಹದಿನೈದು ಸಂಖ್ಯೆಯುಳ್ಳವುಗಳಾಗಿವೆ. ಅಥವಾ ಕಾದಿವಿದ್ಯೆಯಲ್ಲಿ ಸಂಪ್ರದಾಯಾರ್ಥ ನಿರ್ಣಯ ಪ್ರಕರಣದಲ್ಲಿ ಹೇಳುವಂತೆ ಮೂವತ್ತೇಳು ವರ್ಣಗಳು ಇರುವುದರಿಂದ ಅದಕ್ಕೆ ಸಮವಾಗಿ ಅಷ್ಟು ಅರ್ಥಗಳೂ ಇವೆಯೆಂದು ಹೇಳಬಹುದು || ೫೭-೫೮-೫೯ ||

೬೦-೬೧

ಕಾಮಯತೇ ಸ ಕಕಾರಃ ಕಾಮೋ ಬ್ರಹ್ಮೈವ ತತ್ಪದಸ್ಯಾರ್ಥಃ ।
ಸವಿತುರ್ವರೇಣ್ಯಮಿತಿ ವೈ ಸವಿತುಃ ಶ್ರೇಷ್ಠಂ ದ್ವಿತೀಯವರ್ಣಾರ್ಥಃ ॥ ೬೦ ॥
ಸರ್ವಾಂತರ್ಯಾಮಿ ದಧದ್ಭರ್ಗೋ ದೇವಸ್ಯ ಧೀತಿ ತುರ್ಯಾರ್ಥಃ ।
ಪೃಥ್ವೀ ಮಹೀ ಲಕಾರಸ್ತೃತೀಯತುರ್ಯಾಂಘ್ರಿಬೋಧಿಕಾ ಮಾಯಾ॥೬೧॥

ತ್ರಿಪುರೋಪನಿಷದಿ ಪ್ರತಿಪಾದಿತಂ ಗಾಯತ್ರ್ಯರ್ಥಮಾಹ—'ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃಸ್ಮೃತಃ' ಇತಿ ಸ್ಮೃತೇಃ, 'ತದಿತಿ ಬ್ರಹ್ಮ ಶಾಶ್ವತಂ' ಇತಿ ಶ್ರುತೇಶ್ಚ ತತ್ಪದಾರ್ಥೋ ಬ್ರಹ್ಮ. ತದೇವ ಚ ಕಕಾರಾರ್ಥಃ, 'ಕಂ ಬ್ರಹ್ಮ ಇತಿ ಶ್ರುತೇಃ.' ಕಾಮಯತ ಇತ್ಯರ್ಥೋ ವಾ. ಕಮೇರೌಣಾದಿಕೋ ಡಃ. 'ಕಾಮಯತೇ ಕಾಮಿಜಾಯತೇ ಸ ಏವ ನಿರಂಜನೋಽಕಾಮತ್ವೇನೋಜ್ಜೃಂಭತೇ . . . . . ಕಾಮೋಽಭಿಧೀಯತೇ, ತತ್ಪರಿಭಾಷಯಾ ಕಾಮಃ ಕಕಾರಂ ವ್ಯಾಪ್ನೋತಿ' ಇತಿ ಶ್ರುತೇಃ. ಕಾಮೇಶ್ವರ ಇತಿ ತು ಪರ್ಯವಸಿತಂ. ಸವಿತುರಿತಿ ತುಪ್ರತ್ಯಯಾಂತಂ 'ಪುರಾ ವತ್ಸಾನಾಮುಪಾಕರ್ತೋಃ'

"ಓಂತತ್ಸದಿತಿನಿರ್ದೇಶೋ ಬ್ರಹ್ಮಣಸ್ತ್ರಿವಿಧಃಸ್ಮೃತಃ" ಎಂಬ ಸ್ಮೃತಿಯ "ತದಿತಿ ಬ್ರಹ್ಮಶಾಶ್ವತಂ" ಎಂಬ ಶ್ರುತಿಯವಚನಗಳಿಂದ ಗಾಯತ್ರೀ ಮಂತ್ರದ "ತತ್" ಎಂಬ ಪದಕ್ಕೆ ಪರಬ್ರಹ್ಮ ಎಂದು ಅರ್ಥವು. ಆದಿ ಮೂಲ ವಿದ್ಯೆಯ "ಕ" ವರ್ಣಕ್ಕೂ "ಕಂ ಬ್ರಹ್ಮ" ಎಂಬ ಶ್ರುತಿ ಪ್ರಮಾಣದಿಂದ ಬ್ರಹ್ಮವೆಂದು ಅರ್ಥವು. "ಕಾಮಯತೇ ಕಾಮಿಜಾಯತೇ ಸಏವನಿರಂಜನೋಽಕಾಮತ್ವೇನೋಜ್ಜೃಂಭತೇ........ಕಾಮೋಽಭಿಧೀಯತೇ, ತತ್ಪರಿಭಾಷಯಾಕಾಮಃ ಕಕಾರಂ ವ್ಯಾಪ್ನೋತಿ" ಈ ಶ್ರುತಿವಾಕ್ಯಾನುಸಾರವಾಗಿ ಉಣಾದಿಸೂತ್ರವಿಹಿತಡಪ್ರತ್ಯಯಾಂತವಾದ ಕಮಿಧಾತುವಿನಿಂದ "ಕ" ಎಂಬ ಶಬ್ದವು ರೂಪಹೊಂದಿರುವುದರಿಂದ ಕಾಮಿಸುವವನು ಎಂಬ ಅರ್ಥವೂ ಕಕಾರಕ್ಕೆ ಸಂಗತವಾಗುವುದು, ಕಾಮೇಶ್ವರನು ಎಂದು ತಾತ್ಪರ್ಯಾರ್ಥ. ಸವಿತುಃ ಎಂಬ ಶಬ್ದವು "ಪುರಾವತ್ಸಾನಾಮುಪಾಕರ್ತೋಃ" ಎಂಬ ಕಲ್ಪಸೂತ್ರ ವಚನದಂತೆ "ತು" ಎಂಬ ಪ್ರತ್ಯಯವುಳ್ಳಷೂಞ್ ಧಾತುವಿನ ರೂಪವು, ಪ್ರಾಣಿಗಳ ಉತ್ಪತ್ತಿಗೆ ಕಾರಣವೆಂಬ ಅರ್ಥವನ್ನು ಬೋಧಿಸು

ಇತ್ಯಾದಿ ಕಲ್ಪಸೂತ್ರೀಯಪ್ರಯೋಗವತ್. ಪ್ರಾಣಿಪ್ರಸವಕಾರಣಂ. ಯೋನಿರಿತಿ ಯಾವತ್. ತಚ್ಚ ನಾನ್ಯಸಾಧಾರಣ ಮಿತ್ಯತೋ ವರೇಣ್ಯ ಮಿತಿ ಶ್ರೇಷ್ಠ ಭಜನೀಯಮಿತ್ಯರ್ಥಃ. ತೇನ ಪದದ್ವಯೇನಾಪಿ ಜಗದ್ಯೋನಿತ್ವಂ ಲಬ್ಧಂ. ತೇನ ಚ ಕಾಮೇಶ್ವರೀತ್ಯರ್ಥಃ. ಸ ಏವಚಾರ್ಥ ಏಕಾರಸ್ಯ. ತಸ್ಯ ತ್ರಿಕೋಣತ್ವಾತ್. ತಥಾ ಚ ಶ್ರುತಿಃ—'ಸವಿತುರ್ವರೇಣ್ಯಮಿತಿ ಷೂಙ್ ಪ್ರಾಣಿಪ್ರಸವೇ, ಸವಿತಾ ಪ್ರಾಣಿನಃ ಸೂತೇ' ಇತ್ಯುಪಕ್ರಮ್ಯ 'ತ್ರಿಕೋಣಾ-ಶಕ್ತಿರೇಕಾರೇಣ ಮಹಾಭಾಗೇನ ಪ್ರಸೂತೇ ತಸ್ಮಾದೇಕಾರ ಏವ ಗೃಹ್ಯತೇ' ಇತ್ಯಾದಿ. 'ಯದೇಕಾದಶಮಾಧಾರಂ ಬೀಜಂ ಕೋಣತ್ರಯಾತ್ಮಕಂ. ಬ್ರಹ್ಮಾಂಡಾದಿ ಕಟಾಹಾಂತಂ ಜಗದದ್ಯಾಪಿ ದೃಶ್ಯತೇ.' ಇತಿ ವಾಮಕೇಶ್ವರತಂತ್ರೇ ಸ್ಪಷ್ಟಂ ದೃಶ್ಯತೇ. ಸರ್ವೇತಿ. ಸರ್ವಾಂತರ್ಯಾಮಿತ್ವಂ ದೇವಪದಸ್ಯಾರ್ಥಃ, "ದೇವೋ ಮಧ್ಯವರ್ತೀ" ಇತಿ ಶ್ರುತೇಃ. ಸೋರ್ಜಸ್. ಧತ್ತ ಇತಿ ಧೀಃ. ದಧತ್.

ವುದು. ಕಾರಣತ್ವವು ಅನ್ಯವಸ್ತುಗಳಲ್ಲಿ ಸಾಧಾರಣವಾಗಿ ಇರುವುದಿಲ್ಲವಾದ್ದರಿಂದ ಕಾರಣವಾದ ವಸ್ತುವು ವರೇಣ್ಯಂ ಎಂದರೆ ಶ್ರೇಷ್ಠವಾಗಿರುವುದು. ಸವಿತುರ್ವರೇಣ್ಯಂ ಎಂಬ ಪದದ್ವಯವು ಜಗದ್ಯೋನಿಯೆಂಬ ಅರ್ಥವನ್ನು ಹೇಳುವುದು. ಕಾಮೇಶ್ವರೀ ಎಂದು ತಾತ್ಪರ್ಯವು. ತ್ರಿಕೋಣ ರೂಪವಾದ ಏಕಾರಕ್ಕೆ ಅದೇ ಅರ್ಥವು. "ಸವಿತುರ್ವರೇಣ್ಯ ಮಿತಿಷೂಙ್ ಪಾಣಿ ಪ್ರಸವೇ, ಸವಿತಾ ಪ್ರಾಣಿನಃ ಸೂತೇ" ಎಂದುಪಕ್ರಮಿಸಿ ಇರುವ "ತ್ರಿಕೋಣಾಶಕ್ತಿ ರೇಕಾರೇಣಮಹಾಭಾಗೇನ ಪ್ರಸೂತೇ ತಸ್ಮಾದೇಕಾರ ಏವಗೃಹ್ಯತೇ" ಎಂಬ ಶ್ರುತಿ, "ಯದೇಕಾದಶಮಾಧಾರಂ ಬೀಜಂ ಕೋಣತ್ರಯಾತ್ಮಕಂ| ಬ್ರಹ್ಮಾಂಡಾದಿಕಟಾಹಾಂತಂ ಜಗದದ್ಯಾಪಿದೃಶ್ಯತೇ" ಎಂಬ ವಾಮಕೇಶ್ವರ ತಂತ್ರ ಪ್ರಮಾಣಗಳಿಂದ ತ್ರಿಕೋಣ ರೂಪವಾದ ಏಕಾರವು ಜಗದ್ಯೋನಿಯೆಂದು ಸ್ಪಷ್ಟವಾಗುವುದು ||೬೦||

ದೇವ=ಸರ್ವಾಂತರ್ಯಾಮಿ ಎಂದು ಅರ್ಥ. ದೇವೋಮಧ್ಯವರ್ತಿ ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. ದೇವಸ್ಯ ಎಂಬ ಶಬ್ದವು ಪ್ರಥಮಾ ಏಕವಚನ ಸು ಎಂಬ ಪ್ರತ್ಯಯಕ್ಕೆ ಙಸ್ ಎಂಬ ಷಷ್ಠೀ ಏಕವಚನ ಪ್ರತ್ಯಯವು ಆದೇಶವಾಗಿ ಬಂದಿರುವುದರಿಂದ ಪ್ರಥಮಾ ವಿಭಕ್ತ್ಯರ್ಥವನ್ನೇ ಬೋಧಿಸುತ್ತದೆ. ಧೀ= ಧರಿಸುವುದು, ಇದು ಧತ್ತೇ ಎಂಬ ಧಾತ್ವರ್ಥವನ್ನನುಸರಿಸಿ ಜಗದಾಧಾರವೆಂಬರ್ಥವನ್ನು ಹೇಳುವುದು "ಧರೋ ಧೀತ್ಯೇವಂ ಧಾರ್ಯತೇ" ಎಂಬ ಶ್ರುತಿವಾಕ್ಯಕ್ಕೂ

ಜಗದಾಧಾರ ಇತ್ಯರ್ಥಃ, 'ಧರೋಧೀತ್ಯೇವಂ ಧಾರ್ಯತೇ' ಇತಿ ಶ್ರುತೇಃ. ಭರ್ಗ ಇತಿ ಸ್ಪಷ್ಟಾರ್ಥಃ. ಸರ್ವಾಂತರ್ಯಾಮೀ ಸರ್ವಾಧಾರಃ ಶಿವ ಇತಿ ಪರ್ಯವಸಿತಂ. ಈಕಾರಸ್ಯಾಪ್ಯೇತಾವಾನರ್ಥಃ. 'ಭರ್ಗೋ ದೇವಸ್ಯ' ಇತ್ಯಾದ್ಯುಪಕ್ರಮ್ಯ "ತುರೀಯಮಕ್ಷರಂ ಸರ್ವಾಂತ ರ್ಭೂತಂ. ತುರೀಯಾಕ್ಷರಂ ಪದಾನಾಂ ಮಧ್ಯವರ್ತಿತ್ವೇನ ವ್ಯಾ ಖ್ಯಾತಂ, ತಸ್ಮಾದ್ಭರ್ಗೋ ದೇವಸ್ಯ ಧೀತ್ಯೇವ ಮಾಕಾರಃ" ಇತಿ ಶ್ರುತೇಃ. ತುರ್ಯಾರ್ಥಃ, ಮಂತ್ರೇ ತು ತೃತೀಯಸ್ಯಾಪಿ ಮಾತೃ ಕಾಕ್ರಮೇ ತುರೀಯತ್ವಾದೀಕಾರಸ್ಯಾರ್ಥ ಇತ್ಯರ್ಥಃ. ಮಹೀ ಪೃಥ್ವೀ ಮಹತ್ತ್ವಾತ್ಕಾಠಿನ್ಯಾಚ್ಚ. ಪಂಚಮಹಾಭೂತಾನಾ ಮುಪಲಕ್ಷಣ ಮೇತತ್. 'ಮೃದ್ಘಟಃ' ಇತಿ ವದೇಕವಿಭಕ್ತಿಮತ್ತ್ವರೂಪಸಾಮಾ ನಾಧಿಕರಣ್ಯಸ್ಯ ತದಾತ್ಮನಾ ಪರಿಣತತ್ವರ್ಥಃ. ಅಯಮೇವ ಚ ಪೃಥಿವೀಬೀಜಸ್ಯ ಲಕಾರಸ್ಯಾರ್ಥಃ, ಮಹೀತ್ಯಸ್ಯ ವ್ಯಾಖ್ಯಾನಮುಪ

ಇದೇ ಅರ್ಥವು, ಭರ್ಗಃ=ಪಾಪಬೀಜಗಳನ್ನು ಸುಡುವ ಶಕ್ತಿಯುಳ್ಳದ್ದು ಎಂದರ್ಥವು ಸ್ಪಷ್ಟವಾದುದು. ಮೂರು ಪದಗಳು ಒಟ್ಟು ಸೇರಿ ಸರ್ವಾಂತರ್ಯಾ ಮಿಯೂ ಜಗದಾಧಾರನೂ ಆದ ಶಿವನು ಎಂಬರ್ಥದಲ್ಲಿ ಪರ್ಯವಸಾನ ಹೊಂದು ವುದು. ಮಂತ್ರದಲ್ಲಿರುವ "ಈ" ವರ್ಣಕ್ಕೂ ಇದೇ ಅರ್ಥವು. ಭರ್ಗೋದೇವ ಸ್ಯಧೀ" ಎಂದುಪಕ್ರಮಿಸಿ ತ್ರಿಪುರಾತಾಪಿನ್ಯುಪನಿಷತ್ತಿನಲ್ಲಿ ತುರೀಯಮಕ್ಷರಂ ಸರ್ವಾಂತರ್ಭೂತಂ | ತುರೀಯಾಕ್ಷರಂ ಪದಾನಾಂಮಧ್ಯವರ್ತಿತ್ವೇನ ವ್ಯಾಖ್ಯಾ ತಂ, ತಸ್ಮಾದ್ಭರ್ಗೋದೇವಸ್ಯಧೀತ್ಯೇವ ಮಾಕಾರಃ ಎಂದು ಹೇಳಿರುವ ವಚನವು ಪ್ರಮಾಣವು. ಮಂತ್ರದಲ್ಲಿ ಈಕಾರವು ಮೂರನೆಯ ವರ್ಣವಾಗಿದ್ದರೂ ಮಾತೃಕೆ ಯಲ್ಲಿ ನಾಲ್ಕನೆಯದಾಗಿರುವುದರಿಂದ ನಾಲ್ಕನೆಯ ಈಕಾರದ ಅರ್ಥವಾಗಿ ಉಪ ನಿಷತ್ತಿನಲ್ಲಿ ಹೇಳಿರುವುದು ಸಮಂಜಸವು, ಮುಂದೆ ಗಾಯತ್ರೀ ಮಂತ್ರದಲ್ಲಿ ಮಹೀ ಎಂಬ ಪದವಿದೆ. ಇದು ಮಹತ್ವ, ಕಠಿಣತ್ವ ಗುಣಗಳಿಂದ ಕೂಡಿದ ಪೃಥ್ವಿಯನ್ನೂ ಇತರ ಭೂತಗಳನ್ನೂ ಬೋಧಿಸುವುದು, ಕಾರ್ಯಕಾರಣ (ಪರಿ ಣಾಮ) ಗಳ ಒಂದೇ ವಿಭಕ್ತಿಯ ಪದ ದ್ವಯಗಳನ್ನು ಒಟ್ಟಿಗೆ ಪ್ರಯೋಗ ಮಾಡುವುದನ್ನು ಮೃದ್ಘಟಃ ಮುಂತಾದ ಕಡೆ ನೋಡಿರುವಂತೆ ಇಲ್ಲಿ ಮಹೀ ಎಂಬುದು ಪೃಥಿವೀ ರೂಪವಾಗಿ ಪರಿಣಮಿಸಿರುವ ವಸ್ತುವನ್ನು ಬೋಧಿಸುವುದು. ಆದಿ ವಿದ್ಯೆಯ ಪೃಥಿವೀ ಬೀಜವಾದ "ಲ" ಎಂಬ ವರ್ಣಕ್ಕೂ ಇದೇ ಅರ್ಥವು.

ಕ್ರಮ್ಯ 'ಸಸಾಗರಂ ಸಪರ್ವತಂ' ಇತ್ಯಾದಿನಾ ಭೂಮಂಡಲಂ ಪ್ರತಿಪಾದ್ಯ 'ಭೂಮಂಡಲಮೇವೋಕ್ತಂ ಲಕಾರೇಣ' ಇತಿ ಶ್ರುತೇಃ. ತೃತೀಯೇತಿ. ಗಾಯತ್ರ್ಯಾಸ್ತೃತೀಯೋಂಘ್ರಿಃ 'ಧಿಯೋಯೋನಃ ಪ್ರಚೋದಯಾತ್' ಇತಿ. ಅಸ್ಮದಾದೀನಾಂಧಿಯೋ ಧ್ಯಾನಾದಿರಹಿತೇ ವಸ್ತುನಿ ನಿಷ್ಪ್ರಪಂಚೇ ವಿಷಯೇ ಪ್ರೇರಯತೀತ್ಯರ್ಥಃ. ಪರತತ್ತ್ವವಿಷಯಕಜ್ಞಾನಜನಕ ಇತಿ ಯಾವತ್. ತುರೀಯಾಂಘ್ರಿಃ 'ಪರೋರಜಸೇಸಾವದೋಂ' ಇತಿ. ರಜಸಃ ಪರಂ ಪರೋರಜಸೇ. ಸೋಃ ಶೇ ಇತ್ಯಾದೇಶಃ. ರಜೋಽತೀತಂ. ನಿರ್ಮಲಮಿತಿ ನಿರ್ಗುಣಮಿತಿ ವಾಽರ್ಥಃ, ರಜಃಶಬ್ದಸ್ಯ ಧೂಲೀವಾಚಕತ್ವವತ್ ಗುಣತ್ರಯೋಪಲಕ್ಷಕತ್ವಸಂಭವಾತ್. ತ್ರಿಗುಣಾತೀತಮಿತಿ ಯಾವತ್. ಸ ಪುನಃ ಪರ ಇತ್ಯತ್ರ ಭಿನ್ನಪದತ್ವಭ್ರಮಃ ಕಾರ್ಯಃ. ಸುಬ್ರಹ್ಮಣ್ಯಾನಿಗದೇ 'ಪರೋರಜಾಸ್ತೇ ಪಂಚಮಃ ಪಾದಃ' ಇತಿ ಪ್ರಯೋಗಾತ್. ಸಾವದೋಮಿತ್ಯಸ್ಯ ಸವ

ಉಪನಿಷತ್ತಿನಲ್ಲಿ ಮಹೀ ಎಂಬ ಪದಕ್ಕೆ "ಸಸಾಗರಂ ಸಪರ್ವತಂ" ಎಂಬುದಾಗಿ ಭೂಮಂಡಲವೆಂಬ ಅರ್ಥವನ್ನು ತೋರಿಸಿ ಭೂಮಂಡಲಮೇವೋಕ್ತಂ ಲಕಾರೇಣ ಎಂದು ಲಕಾರಕ್ಕೆ ಇದೇ ಅರ್ಥವನ್ನೇ ತೋರಿಸಿದೆ ಗಾಯತ್ರೀ ಮಂತ್ರದ ಮೂರನೆಯ ಪಾದವಾದ "ಧಿಯೋಯೋನಃ ಪ್ರಚೋದಯಾತ್" ಎಂಬ ಭಾಗವು ನಮ್ಮ ಬುದ್ಧಿಗಳನ್ನು ಧ್ಯಾನಾದಿ ವೃತ್ತಿಗಳಿಗೆ ಗೋಚರವಾಗದ ನಿಷ್ಪ್ರಪಂಚ ಚಿನ್ಮಾತ್ರವಸ್ತುವಿನ ವಿಷಯವನ್ನು ಗ್ರಹಿಸುವ ಹಾಗೆ ಪ್ರೇರೇಪಿಸುವುದು ಎಂದರೆ ಪರತತ್ವವನ್ನು ತಿಳಿಸುವದು ಎಂಬ ಅರ್ಥವನ್ನು ತಿಳಿಸುತ್ತದೆ. ಗಾಯತ್ರೀ ಮಂತ್ರದ ನಾಲ್ಕನೆಯ ಪಾದವು ಪರೋರಜಸೇಸಾವದೋಮ್ ಎಂಬುದಾಗಿದೆ. ಇಲ್ಲಿ ಪರೋರಜಸೇ, ಸಾವದೋಮ್ ಎಂದು ಪದವಿಭಾಗ ಮಾಡಬೇಕು. ಪ್ರಥಮಾ ವಿಭಕ್ತಿಯ ಏಕವಚನ ಪ್ರತ್ಯಯ ಸು ಎಂಬುದಕ್ಕೆ ಛಂದಸ್ಸಿನಲ್ಲಿ ಏಕಾರಾದೇಶ ಬಂದಿರುವುದರಿಂದ ಪರೋರಜಸೇ ಎಂಬ ಪದವು ರಜೋರಹಿತವೆಂಬ ಅರ್ಥವನ್ನು ಹೇಳುವುದು. ರಜಸ್ಸು ಎಂದರೆ ಮಲರೂಪವಾದ ಧೂಳಿ, ರಜೋಗುಣವೆಂಬ ಅರ್ಥದ್ವಯ ಗರ್ಭಿತವಾದ್ದರಿಂದ ನಿರ್ಮಲವೂ ನಿರ್ಗುಣವೂ ಎಂದು ತಾತ್ಪರ್ಯಾರ್ಥವು. ಸಾವದೋಂ ಎಂದರೆ ಸವದ, ಅವದ ಹೇಳಲು ಶಕ್ಯವೂ ಅಶಕ್ಯವೂ ಆದ ಪ್ರಣವಾರ್ಥವು ಎಂದು ಭಾವಾರ್ಥವು. ಪ್ರಣವಾರ್ಥವು ಜಾತಿಗುಣಾದಿ ಧರ್ಮಸಂಬಂಧ ಶೂನ್ಯವಾದ್ದರಿಂದ ಧರ್ಮಸಹಿತ ವಸ್ತುವನ್ನೇ ಬೋಧಿಸುವ

ದೋಽವದಶ್ಚ ಯಃ ಪ್ರಣವಃ. ವಕ್ತುಂ ಶಕ್ಯೋ ವಕ್ತುಮಶಕ್ಯಶ್ಚೇತ್ಯರ್ಥಃ. ಶಬ್ದೈಃ ಶಕ್ತಿಮರ್ಯಾದಯಾ ನ ಬೋಧ್ಯಃ. ಶಕ್ಯತಾವಚ್ಛೇದಕಧರ್ಮಮಾತ್ರಸ್ಯ ಪರತತ್ತ್ವೇ ವಿರಹಾತ್. ಲಕ್ಷಣಯಾ ತು ಬೋಧ್ಯಃ. ಸತ್ಯಜ್ಞಾನಾದಿಪದಶಕ್ಯವಿಶಿಷ್ಟತಾದಾತ್ಮ್ಯಸಂಬಂಧಶಾಲಿತ್ವಾತ್. 'ಯತೋ ವಾಚೋ ನಿವರ್ತಂತ' ಇತಿ ಶ್ರುತೇಃ, 'ವೇದೈಶ್ಚ ಸರ್ವೈರಹಮೇವ ವೇದ್ಯಃ' ಲಕ್ಷ್ಯಾರ್ಥಾ ಲಕ್ಷಣಾಗಮ್ಯಾ ಇತ್ಯಾದಿ ಸ್ಮೃತೇಶ್ಚ. ಪ್ರಣವಾರ್ಥಃ ಪರತತ್ತ್ವಮಕಾರೋಕಾರಮಕಾರೈರ್ಬ್ರಹ್ಮವಿಷ್ಣುರುದ್ರಾತ್ಮಕಂ. ಏತಾವಾನಪ್ಯರ್ಥೋ ಹೃಲ್ಲೇಖಾಯಾಃ. ಹೃಕಾರಸ್ಯ ಹೃದಯಮರ್ಥಃ. ತತ್ರ ಈ ಗತೇತ್ಯರ್ಥಃ. 'ಇಟಕಿಟಕಟೀ ಗತೌ' ಇತ್ಯತ್ರ ಪ್ರಶ್ಲಿಷ್ಟೋಽಯಂ ಧಾತುಃ. ಅತ ಏವ ಹೃದಯಾಗಾರವಾಸಿನೀ ಹೃಲ್ಲೇಖಾ ಇತಿ ಶ್ರುತಿಃ. ಏವಂ ಚಾಯಮರ್ಥೋ ಗಾಯತ್ರ್ಯಾಃ ಪ್ರಥಮಕೂಟಸ್ಯ ಚ ಸಂಪನ್ನಃ. ಸರ್ವಜಗತ್ಸಿಸೃಕ್ಷಾರೂಪಕಾ

ಅಭಿಧಾ (ಶಕ್ತಿ) ಯುಳ್ಳ ಶಬ್ದಗಳಿಂದ ಬೋಧಿಸಲು ಅಶಕ್ಯವೂ ಲಕ್ಷಣಾ ಎಂಬ ವೃತ್ತಿಯಿಂದ ಶಕ್ಯವೂ ಆಗಿದೆ. ಸತ್ಯಜ್ಞಾನಾನಂದ ಮುಂತಾದ ಶಬ್ದಗಳು ಶಕ್ತಿಯಿಂದ ಬೋಧಿಸುವ ಸತ್ಯತ್ವಾದಿ ಧರ್ಮವಿಶಿಷ್ಟ ವ್ಯಕ್ತಿತಾದಾತ್ಮ್ಯ ಸಂಬಂಧವು ಪರತತ್ತ್ವದಲ್ಲಿರುವುದರಿಂದ ಅದು ಲಕ್ಷಣಾ ವೃತ್ತಿಗೆ ವಿಷಯವಾಗಬಹುದು. "ಯತೋ ವಾಚೋನಿವರ್ತಂತೇ" ವೇದೈಶ್ಚ ಸರ್ವೈರಹಮೇವವೇದ್ಯಃ ಲಕ್ಷ್ಯಾರ್ಥಾ ಲಕ್ಷಣಾಗಮ್ಯಾಃ" ಮುಂತಾದ ಶ್ರುತಿ ಸ್ಮೃತಿ ವಚನಗಳು ವಾಗಗೋಚರವೆಂದೂ ವೇದವಚನಗಳಿಗೆ ಗೋಚರವೆಂದೂ ಹೇಳುವುದರ ಅಭಿಪ್ರಾಯವೂ ಇದೇ ಆಗಿರುತ್ತದೆ. ಪ್ರಣವಕ್ಕೆ ಅ + ಉ + ಮ ಎಂಬ ಮೂರು ಅಂಶಗಳಿಂದ ಬ್ರಹ್ಮ–ವಿಷ್ಣು–ಶಿವ ಎಂಬ ತ್ರಿಮೂರ್ತಿ ಸ್ವರೂಪವು ಅರ್ಥವು. ಇಂತಹ ಪ್ರಣವಾರ್ಥವನ್ನೇ ಹ್ರೀಂ ಎಂಬ ಹೃಲ್ಲೇಖೆಯು ಬೋಧಿಸುತ್ತದೆ. ಹ್ರೀಂ ಎಂಬಲ್ಲಿ ಹೃ ಎಂಬ ವರ್ಣಭಾಗಕ್ಕೆ ಹೃದಯವೆಂದರ್ಥವು. ಮುಂದೆ ಈ ಎಂಬ ವರ್ಣವಿದೆ. ಪಾಣಿನೀಯ ಧಾತುಪಾಠದಲ್ಲಿ "ಇಟ ಕಿಟ ಕಟೀ ಗತೌ" ಎಂಬಲ್ಲಿ ಗತಿ ಎಂಬರ್ಥವುಳ್ಳ ಈ ಎಂಬ ಒಂದು ಧಾತುವೂ ಸೇರಿದೆ. ಆದ್ದರಿಂದ ಹೃ + ಈ ಎಂದರೆ ಹೃದಯಗತವೆಂದು ಅರ್ಥವಾಗುವುದು, ಆದುದರಿಂದ ಶ್ರುತಿಯು "ಹೃದಯಾಗಾರವಾಸಿನೀ ಹೃಲ್ಲೇಖಾ" ಎಂಬಲ್ಲಿ ಹೃಲ್ಲೇಖೆಯನ್ನು ಹೃದಯವಾಸಿನಿ ಎಂದು ವರ್ಣಿಸಿರುವುದು ಸಮಂಜಸವಾಗಿದೆ. ಈ ರೀತಿಯಾದ ವ್ಯಾಖ್ಯಾನದಿಂದ ಗಾಯತ್ರೀ ಮಂತ್ರಕ್ಕೂ

ಮನಾವಾರ್ ಕಾಮೇಶ್ವರಃ, ಜಗತ್ಕಾರಣರೂಪಾ ಕಾಮೇಶ್ವರೀ. ಶಿವಃ ಸರ್ವಾಂತರ್ಯಾಮಿೂ ಸರ್ವಾಧಾರಃ ಪಂಚಮಹಾಭೂತಾದ್ಯಾತ್ಮನಾ ಪರಿಣತಃ ಪರವಸ್ತುಮಾತ್ರವಿಷಯಕನಿರ್ವಿಕಲ್ಪಕಜ್ಞಾನಜನಕೋ ನಿರಂಜನೋ ನಿರ್ಗುಣೋ ವೇದ್ಯೈರ್ಲಕ್ಷಣಯಾ ಗಮ್ಯಃ ಶಕ್ತ್ಯಾತ್ಮಗಮ್ಯೋ ಬ್ರಹ್ಮವಿಷ್ಣುರುದ್ರಾತ್ಮಾ ಪರತತ್ತ್ವಮಿತಿ ॥ ೭೦-೭೧ ॥

ಆದಿ ವಿದ್ಯೆಯ ಪ್ರಥಮ ಕೂಟಕ್ಕೂ "ಸಕಲ ಜಗತ್ತನ್ನೂ ಸೃಜಿಸಬೇಕೆಂಬ ಕುತೂಹಲವುಳ್ಳ ಕಾಮೇಶ್ವರನೂ ಜಗತ್ಕಾರಣಳಾದ ಕಾಮೇಶ್ವರಿಯೂ ಮತ್ತು ಸರ್ವಾಂತರ್ಯಾಮಿಯೂ ಸರ್ವಾಧಾರನೂ ಪಂಚಮಹಾಭೂತರೂಪವಾಗಿ ಪರಿಣಮಿಸಿದವನೂ ಪರವಸ್ತುವಿನ ನಿರ್ವಿಕಲ್ಪಜ್ಞಾನವನ್ನು ಅನುಗ್ರಹಿಸುವವನೂ ನಿರಂಜನನೂ ನಿರ್ಗುಣನೂ ವೇದ ಮುಂತಾದ ಶಾಸ್ತ್ರಗಳಿಂದ ಶಕ್ತಿ ವ್ಯಾಪಾರದಿಂದ ಅಗಮ್ಯನೂ ಲಕ್ಷಣಾವೃತಿಯಿಂದ ಗಮ್ಯನೂ ಬ್ರಹ್ಮ ವಿಷ್ಣು ರುದ್ರರೆಂಬ ತ್ರಿಮೂರ್ತ್ಯಾತ್ಮಕನೂ ಆದ ಶಿವನೂ ಪರತತ್ತ್ವವು" ಎಂದು ಸಾರಾಂಶವಾದ ಅರ್ಥವು ಲಭಿಸುತ್ತದೆ ||೭೧||

೬೨-೬೩

ತ್ರಿಪದೀ ತ್ರಿವರ್ಣಬೋಧ್ಯಾ ತುರ್ಯಸ್ತದುಪರಿಷಡಕ್ಷರೀಗಮಕಃ ।
ಅಥ ತಾರ್ತೀಯೋ ವರ್ಣದ್ವಿತಯಂ ತ್ರಿಪದೀಷಡಕ್ಷರೀಗಮಕಮ್ ॥ ೬೨ ॥
ಕೂಟದ್ವಿತಯಸ್ಯ ಶೇಷಂ ಪೂರ್ವವದುನ್ನೇಯಮಿತಿ ತು ವಿದ್ಯಾಯಾಃ ।
ಗಾಯತ್ರ್ಯರ್ಥಸ್ತ್ರಿಪುರೋಪನಿಷದಿ ಕಥಿತಸ್ತಥೈಷ ಭಾಗವತೇ ॥ ೬೩ ॥

ದ್ವಿತೀಯತೃತೀಯಕೂಟಯೋರರ್ಥಮಾಹ—

ತ್ರಿಪದೀ ಗಾಯತ್ರೀಸ್ಥಂ ಪದತ್ರಯಂ ವಿದ್ಯಾದ್ವಿತೀಯಕೂಟಸ್ಥವರ್ಣತ್ರಯೇಣ ಬೋಧ್ಯಂ. ತ್ರ್ಯವಯವಕಾ ವರ್ಣಾಸ್ತ್ರಿವರ್ಣಾಃ. 'ತ್ರಿಗುಣಸಚಿವಃ' 'ನವರಸರುಚಿರಾಂ' ಇತ್ಯಾದಿವತ್ಸಮಾಸಃ. ತತ್ಪದಾರ್ಥೋ ಬ್ರಹ್ಮಶಿವವಾಚಿಹಕಾರಸ್ಯಾರ್ಥಃ, "ತದಿತಿ ಪರಮಾತ್ಮಾ" ಇತ್ಯಾರಭ್ಯ "ಹಕಾರಾಕ್ಷರಂ ಶಿವರೂಪಂ" ಇತ್ಯಾದ್ಯುಕ್ತ್ವಾಽಂತೇ "ತತ್ಪದವ್ಯಾವೃತ್ತಿಮಾದಾಯ ಶಕ್ತಿಂ ದರ್ಶಯತಿ" ಇತಿ ಶ್ರುತೇಃ. ಸಕಾರಸ್ಯ ಸವಿತಾಽರ್ಥಃ. ಕಕಾರಸ್ಯ ವರೇಣ್ಯಮರ್ಥಃ. ತುರ್ಯೋ ಹಕಾರ

ಆದಿವಿದ್ಯೆಯ ದ್ವಿತೀಯ-ತೃತೀಯ ಕೂಟಗಳ ಅರ್ಥಕ್ಕೆ ಗಾಯತ್ರೀ ಮಂತ್ರಾರ್ಥದೊಡನೆ ಈ ರೀತಿ ಸಮನ್ವಯವನ್ನರಿಯಬೇಕು :—ದ್ವಿತೀಯ ಕೂಟದಲ್ಲಿ ಹ-ಸ.ಕ ಎಂಬ ಆದಿಯ ಮೂರು ವರ್ಣಗಳು ಗಾಯತ್ರಿಯ ತತ-ಸವಿತುಃ-ವರೇಣ್ಯಂ ಎಂಬ ಪದತ್ರಯದ ಅರ್ಥವನ್ನು ಬೋಧಿಸುತ್ತವೆ. ತ್ರಿವರ್ಣವೆಂದರೆ ತ್ರಿಗುಣ ಸಚಿವಃ, ನವರುಸರುಚಿರಾಂ" ಎಂಬ ಪ್ರಯೋಗಗಳಲ್ಲಿರುವಂತೆ ಮೂರು ಅವಯುವಗಳ ವರ್ಣ ಸಮುದಾಯವೆಂದು ಅರ್ಥ ಮಾಡಬೇಕು. ಅವುಗಳಲ್ಲಿ "ಹ" ವರ್ಣಕ್ಕೆ ಬ್ರಹ್ಮ ಶಿವರೂಪವಾದ ತತ್ ಪದದ ಅರ್ಥವು. ತ್ರಿಪುರಾ ತಾಪಿನೀ ಉಪನಿಷತ್ತಿನಲ್ಲಿ "ತದಿತಿಪರಮಾತ್ಮಾ—ಹಕಾರಾಕ್ಷರಂ ಶಿವರೂಪಂ - ತತ್ಪದವ್ಯಾವೃತ್ತಿಮಾದಾಯಶಕ್ತಿಂದರ್ಶಯತಿ" ಎಂದು ಹೇಳಿದೆ. "ಸ" ವರ್ಣಕ್ಕೆ ಸವಿತಾ ಎಂಬ ಪದದ ಅರ್ಥವು. "ಕ" ವರ್ಣಕ್ಕೆ ವರೇಣ್ಯಂ ಎಂಬ ಪದದ ಅರ್ಥವು. ನಾಲ್ಕನೆಯ "ಹ" ಎಂಬ ವರ್ಣವು ಭರ್ಗೋದೇವಸ್ಯಧೀ ಎಂಬ ಆರು ಅಕ್ಷರಗಳ ಅರ್ಥವನ್ನು ಬೋಧಿಸುತ್ತದೆ, ಮೂರನೇ ಕೂಟದಲ್ಲಿ "ಸ–ಕ" ಎರಡು ವರ್ಣಗಳಿಗೆ ಗಾಯತ್ರಿಯ "ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯಧೀ"

ಸ್ತದುಪರಿ ಪದತ್ರಯೋಪರಿ ವಿದ್ಯಮಾನಾ ಯಾ ಷಡಕ್ಷರೀ "ಭರ್ಗೋ ದೇವಸ್ಯ ಧೀ' ಇತಿ ತದರ್ಥಬೋಧಕಃ. ತೃತೀಯಕೂಟೇ ವರ್ಣದ್ವಿತಯಂ ಸಕೇತಿ. ತಾಭ್ಯಾಂ ಧೀತ್ಯಂತಗಾಯತ್ರ್ಯಾ ಅರ್ಥಃ ಪ್ರತಿಪಾದ್ಯಃ. ಉಭಯತ್ರಾಪಿ ಲಕಾರಹ್ರಲ್ಲೇಖಾಭ್ಯಾಂ ಪಂಚಮಹಾಭೂತಾದ್ಯಾತ್ಮನೇತ್ಯಾದಿರರ್ಥ ಇತ್ಯಾಹ—ಕೂಟದ್ವಿತಯ ಇತಿ. ಏವಂ ಚತುಶ್ಚರಣಾಯಾ ಗಾಯತ್ರ್ಯಾಸ್ತ್ರಿರಾವೃತ್ತಾಯಾ ಅರ್ಥಸ್ಯ ಪ್ರತಿಪಾದಕಂ ಕೂಟತ್ರಿತಯಮಿತಿ. ಭಾಗವತ ಇತಿ. ಭಗವತ್ಯಾ ಇದಂ ಭಾಗವತಂ. ತತ್ರ ಭಗವತೀಪುರಾಣ ಇತ್ಯರ್ಥಃ. ತಸ್ಯ ಹಿ ಪುರಾಣಸ್ಯಾದಿಮಃ ಶ್ಲೋಕಸ್ತ್ರಿಚರಣಃ ಪಠ್ಯತೇ. ಯಥಾ—"ಸರ್ವಚೈತನ್ಯರೂಪಾಂ ತಾಮಾದ್ಯಾಂ ವಿದ್ಯಾಂ ಚ ಧೀಮಹಿ. ಬುದ್ಧಿಂ ಯಾ ನಃ ಪ್ರಚೋದಯಾತ್." ಇತಿ ಅತ್ರ ಹ್ಯಾದ್ಯಾಯಾಃ ಶ್ರೀವಿದ್ಯಾಯಾ ಏವ ಬ್ರಹ್ಮರೂಪತ್ವಂ ಗಾಯತ್ರ್ಯಾದಿಪ್ರತಿಪಾದ್ಯತ್ವಂ ವಿದ್ಯಾಪ್ರತಿಪಾದ್ಯತ್ವಾದಿಕಂ ಚ ತದರ್ಥವ್ಯಾಖ್ಯಾ

ಎಂಬ ಭಾಗದ ಅರ್ಥವು. ಎರಡು ಕೂಟಗಳಲ್ಲಿಯೂ "ಲಕಾರ, ಹೃಲ್ಲೇಖೆ" ಗಳಿಂದ ಪಂಚಮಹಾ ಭೂತರೂಪದಿಂದ ಪರಿಣಾಮಹೊಂದಿ ಸರ್ವಾಧಾರನಾದ ಶಿವ ಮುಂತಾದ ಮಿಕ್ಕ ಅರ್ಥವೆಲ್ಲವೂ ಹೇಳಲ್ಪಡುತ್ತದೆ. ಹೀಗೆ ನಾಲ್ಕು ಪಾದಗಳಿಂದ ಕೂಡಿದ ಗಾಯತ್ರೀ ಮಂತ್ರವನ್ನು ಮೂರು ಆವೃತ್ತಿಯಾಗಿ ಉಚ್ಚಾರ ಮಾಡಿದರೆ ಲಭಿಸುವ ಅರ್ಥವನ್ನು ಕೂಟತ್ರಯವು ಪ್ರತಿಪಾದಿಸುತ್ತದೆ. ಗಾಯತ್ರೀ ಮಂತ್ರಕ್ಕೆ ಮೇಲೆ ವಿವರಿಸಿದ ಅರ್ಥವನ್ನು ತ್ರಿಪುರಾ ಉಪನಿಷತ್ತಿನಲ್ಲಿಯೂ ಭಾಗವತದಲ್ಲಿಯೂ ಹೇಳಿದೆ. ಭಾಗವತವೆಂದರೆ ಭಗವತಿಗೆ ಸಂಬಂಧಪಟ್ಟ ದೇವೀ ಭಾಗವತ ಪುರಾಣವೆಂಬುದು ಇಲ್ಲಿ ವಿವಕ್ಷಿತವಾದ ಅರ್ಥವು. ಅದರ ಪ್ರಾರಂಭದಲ್ಲಿ "ಸರ್ವಚೈತನ್ಯ ರೂಪಾಂತಾಂ ಆದ್ಯಾಂ ವಿದ್ಯಾಂಚಧೀಮಹಿ| ಬುದ್ಧಿಂಯಾನಃ ಪ್ರಚೋದಯಾತ್" ಎಂಬ ಶ್ಲೋಕವು ಇದೆ. ಈ ಶ್ಲೋಕದಲ್ಲಿ ಮೂಲಭೂತವಾದ ಶ್ರೀವಿದ್ಯೆಯು ಬ್ರಹ್ಮರೂಪವೂ ಮತ್ತು ಗಾಯತ್ರೀ ಮಂತ್ರ, ಆದಿ ವಿದ್ಯಾ ಇವುಗಳಿಂದ ಪ್ರತಿಪಾದ್ಯವೂ ಆದುದು. ಎಂಬ ಅರ್ಥವು ಗರ್ಭಿತವಾಗಿದೆ. ಎಂಬುದನ್ನು ವ್ಯಾಖ್ಯಾತೃಗಳು ಬಲ್ಲವರಾಗಿದ್ದಾರೆ. "ಹಯಗ್ರೀವ ಬ್ರಹ್ಮವಿದ್ಯಾಯತ್ರ ವೃತ್ರವಧಸ್ತಥಾ| ಗಾಯತ್ರ್ಯಾಚ ಸಮಾರಂಭ ಸ್ತದ್ವೈ ಭಾಗವತಂವಿದುಃ" ಎಂಬ ಭಾಗವತದ ಲಕ್ಷಣವು ಹಯಗ್ರೀವ ವೃತ್ರವಧೆ ಚರಿತ್ರೆಗಳಿಂದ ಕೂಡಿ ಬ್ರಹ್ಮ ವಿದ್ಯಾಪ್ರತಿಪಾದಕವಾಗಿಯೂ ಗಾಯತ್ರೀ ಛಂದಸ್ಸಿನ ಶ್ಲೋಕದಿಂದ

ನದರ್ಶಿನಾಂ ಸ್ಪಷ್ಟಂ. ವಸ್ತುತಸ್ತು “ ಹಯಗ್ರೀವಬ್ರಹ್ಮವಿದ್ಯಾ ಯತ್ರ ವೃತ್ರವಧಸ್ತಥಾ. ಗಾಯತ್ರ್ಯಾ ಚ ಸಮಾರಂಭಸ್ತದ್ವೈ ಭಾಗವತಂ ವಿದುಃ.” ಇತಿ ಲಕ್ಷಣಾನುಗತ್ಯೇದಮೇವ ಭಾಗವತಪದವಾಚ್ಯಂ. ನ ಪುನಃ “ ಜನ್ಮಾದ್ಯಸ್ಯ ಯತೋಽನ್ವಯಾತ್ ” ಇತ್ಯಾದಿಕಂ ॥ ೬೨-೬೩ ॥

ಉಪಕ್ರಮವಾಗಿಯೂ ಇರುವ ದೇವೀ ಭಾಗವತದಲ್ಲಿಯೇ ಇರುವುದು. ಶ್ರೀ ಮದ್ಭಾಗವತದಲ್ಲಿ ಈ ವಿಧ ಲಕ್ಷಣವಿಲ್ಲದಿರುವುದರಿಂದ ಭಾಗವತ ಪುರಾಣ ವೆಂದರೆ ದೇವೀ ಭಾಗವತವನ್ನೇ ಸಂಗ್ರಹಿಸುವದು ನ್ಯಾಯವು ॥ ೬೨-೬೩ ॥

೭೪-೭೫

ವಾಮೇಚ್ಛೇ ಬ್ರಹ್ಮಭಾರತ್ಯೌ ಜ್ಯೇಷ್ಠಾಜ್ಞಾನೇ ಹರಿಕ್ಷಿತೀ ।
ರೌದ್ರೀಕ್ರಿಯೇ ಶಿವಾಪರ್ಣೇ ಇತ್ಯೇತನ್ಮಿಥುನತ್ರಯಮ್ ॥ ೭೪ ॥
ತ್ರಿಭಿಃ ಕೂಟೈಃ ಕ್ರಮಾದ್ವಾಚ್ಯಂ ಈಕಾರತ್ರಿತಯೇನ ತು ।
ಏತತ್ತ್ರಯಸಮಷ್ಟ್ಯಾತ್ಮ ವಾಚ್ಯಂ ಶಾಂತಾಂಬಿಕಾತ್ಮಕಮ್ ॥ ೭೫ ॥

ಅಥ ಯೋಗಿನೀಹೃದಯೇ ಕಥಿತಾನ್ ಭಾವಾರ್ಥಾದೀನ್ ಷಡರ್ಥಾನಾಹ–ಪ್ರಕಾಶಸ್ಯಾಂಶಭೂತಾ ವಾಮಾಜ್ಯೇಷ್ಠಾರೌದ್ರ್ಯಃ ಶಕ್ತಯಸ್ತಿಸ್ರೋ ಬ್ರಹ್ಮವಿಷ್ಣು ರುದ್ರಾಃ ಪುಂರೂಪಾಃ. ತತ್ಸಮಷ್ಟಿಃ ಶಾಂತಾऽऽತ್ಮಿಕಾ ಶಕ್ತಿಸ್ತುರೀಯಾ. ವಿಮರ್ಶಸ್ಯಾಂಶಭೂತಾ ಇಚ್ಛಾಜ್ಞಾನಾಕ್ರಿಯಾಃ ಶಕ್ತಯಸ್ತಿಸ್ರಸ್ತದ್ಭಾರ್ಯಾತ್ವೇನ ಪ್ರಸಿದ್ಧಾ ಭಾರತೀಪೃಥಿವೀರುದ್ರಾಣ್ಯಃ ಸ್ತ್ರೀರೂಪಾಃ. ತತ್ಸಮಷ್ಟಿರಂಬಿಕಾऽऽತ್ಮಿಕಾ ಶಕ್ತಿಸ್ತುರೀಯಾ. ಅತ್ರ ಚ ಪ್ರಥಮಮಿಥುನತ್ರಯಮೀಕಾರವಿನಿರ್ಮುಕ್ತಕೂಟತ್ರಯಸ್ಯ ಕ್ರಮೇಣಾರ್ಥಃ. ಈಕಾರಾಣಾಂ ತು ತುರೀಯಮಿಥು

ಪ್ರಕಾಶಕ್ಕೆ ಅಂಶಗಳಾಗಿರುವ ವಾಮಾಜ್ಯೇಷ್ಠಾರೌದ್ರೀ ಎಂಬ ಮೂರು ಶಕ್ತಿಗಳು ಪುಂರೂಪಗಳಾಗಿ ಬ್ರಹ್ಮ-ವಿಷ್ಣು-ರುದ್ರರಾಗಿರುತ್ತವೆ. ಹಾಗೆಯೇ ವಿಮರ್ಶಕ್ಕೆ ಅಂಶಗಳಾಗಿರುವ ಇಚ್ಛಾಜ್ಞಾನ ಕ್ರಿಯಾ ಎಂಬ ಮೂರು ಶಕ್ತಿಗಳು ಸ್ತ್ರೀರೂಪಗಳಾಗಿ ಭಾರತೀ, ಪೃಥಿವೀ, ರುದ್ರಾಣೀ ರೂಪಗಳಾಗಿ ಬ್ರಹ್ಮ-ವಿಷ್ಣು-ರುದ್ರರ ಪತ್ನಿಯರಾಗಿ ಪ್ರಸಿದ್ಧಗಳಾಗಿವೆ. ಪ್ರಕಾಶ ಶಕ್ತಿಗಳ ಸಮಷ್ಟಿಯು ಶಾಂತಾ ಎಂಬುದಾಗಿಯೂ ವಿಮರ್ಶ ಶಕ್ತಿಗಳ ಸಮಷ್ಟಿಯು ಅಂಬಿಕಾರೂಪವಾಗಿಯೂ ನಾಲ್ಕನೆಯದಾಗಿದೆ. ಇವುಗಳಲ್ಲಿ ಪ್ರಥಮ ಕೂಟಕ್ಕೆ ವಾಮಾ-ಇಚ್ಛಾ, ಬ್ರಹ್ಮ-ಭಾರತೀ, ಎಂಬ ದ್ವಂದ್ವವೂ ದ್ವಿತೀಯ ಕೂಟಕ್ಕೆ ಜ್ಯೇಷ್ಠಾ-ಜ್ಞಾನ, ವಿಷ್ಣು-ಪೃಥಿವೀ, ಎಂಬ ದ್ವಂದ್ವವೂ ತೃತೀಯ ಕೂಟಕ್ಕೆ ರೌದ್ರೀ-ಕ್ರಿಯಾ, ರುದ್ರ-ರುದ್ರಾಣೀ, ಎಂಬ ದ್ವಂದ್ವವೂ ಅರ್ಥವು. ಪ್ರತಿಯೊಂದು ಕೂಟದ ಈಕಾರಗಳಿಗೆಲ್ಲ ಸೇರಿ ಶಾಂತಾ, ಅಂಬಿಕಾ ರೂಪವಾದ ದ್ವಂದ್ವವು ಅರ್ಥ. ಇದು ಭಾವಾರ್ಥವು. ಮುಂದೆ ಹೇಳುವ ಶಾಕ್ತಾರ್ಥದಲ್ಲಿ ಪ್ರತಿಯೊಂದು ಕೂಟದಲ್ಲಿಯೂ ರೇಫ (ರವರ್ಣ) ದವರೆಗಿನ ಆರು ಅಕ್ಷರಗಳಿಗೆ ಮೂರು ದ್ವಂದ್ವಗಳೂ ಅರ್ಥವಾಗಿರುವುದರಿಂದ

ನಮರ್ಥಃ. ವಕ್ಷ್ಯಮಾಣೇ ಶಾಕ್ತಾರ್ಥೇ ತ್ವೇಕೈಕಸ್ಮಿನ್ನಪಿ ಕೂಟೇ ರೇಫಾಂತವರ್ಣಷಟ್ಕಸ್ಯಾಪಿ ಮಿಥುನತ್ರಯಮರ್ಥ ಇತಿ ತಸ್ಮಾದ್ಭೇದಃ. ತದುಕ್ತಂ ಯೋಗಿನೀಹೃದಯೇ—'ಅಕ್ಷರಾರ್ಥೋ ಹಿ ಭಾವಾರ್ಥಃ ಕೇವಲಃ ಪರಮೇಶ್ವರಿ. ಯೋಗಿನೀಭಿಸ್ತಥಾ ವೀರೈರ್ವೀರೇಂದ್ರೈಃ ಸರ್ವದಾ ಪ್ರಿಯೇ. ಶಿವಶಕ್ತಿಸಮಾಯೋಜಗ್ಜಾನಿತೋ ಮಂತ್ರರಾಜಕಃ.' ಇತಿ. ವ್ಯಾಖ್ಯಾತಂ ಚೇದಮಮೃತಾನಂದಯೋಗಿಭಿಃ "ಭಾರತ್ಯಾದಿಭಿರ್ಯೋಗಿನೀಭಿರ್ಬ್ರಹ್ಮಾದಿಭಿರ್ವೀರೇಂದ್ರೈಃ ಕೂಟತ್ರಯವಾಚ್ಯಭೂತೈಃ ಶಿವಶಕ್ತಿ ಸಮಷ್ಟಿರೂಪಮಿಥುನೇನೇಕಾರವಾಚ್ಯಭೂತೇನ ಚೋಪಲಕ್ಷಿತೋ ಮಂತ್ರರಾಜೋ ವೀರೈರ್ಜನಿತೋ ಭಾವಿತ ಇತ್ಯರ್ಥ" ಇತಿ. ವಸ್ತುತಸ್ತು ಸಕಲಾದಿನಾಮಕಾಸ್ತ್ರಿವಿಧಾ ಉಪಾಸಕಾ ವಕ್ಷ್ಯಮಾಣಾ ವೀರಪದೇನೋಚ್ಯಂತೇ, 'ಅಹಮಿ ಪ್ರಲಯಂ ಕುರ್ವನ್ನಿದಮಃ ಪ್ರತಿಯೋಗಿನಃ. ಪರಾಕ್ರಮಪರೋ ಭುಂಕ್ತೇ ಸ್ವಾತ್ಮಾನಮಶಿವಾಪಹಂ.'

ಶಾಕ್ತಾರ್ಥ-ಭಾವಾರ್ಥಗಳಿಗೆ ವ್ಯತ್ಯಾಸವು ಇರುವುದು. ಇದಕ್ಕೆ ಆಧಾರವಾಗಿ ಯೋಗಿನೀ ಹೃದಯದ ಗ್ರಂಥದಲ್ಲಿ ಈ ವಚನವು ಕಂಡುಬರುವುದು :—" ಅಕ್ಷರಾರ್ಥೋಹಿ ಭಾವಾರ್ಥಃ ಕೇವಲಃ ಪರಮೇಶ್ವರಿ | ಯೋಗಿನೀಭಿಸ್ತಥಾ ವೀರೈರ್ವೀರೇಂದ್ರೈಃ ಸರ್ವದಾಪ್ರಿಯೇ | ಶಿವಶಕ್ತಿ ಸಮಾಯೋಗಾಜ್ಜನಿತೋಮಂತ್ರರಾಜಕಃ ||" ಇದಕ್ಕೆ ಅಮೃತಾನಂದ ಯೋಗಿಗಳೆಂಬ ವ್ಯಾಖ್ಯಾನಕಾರರು "ಭಾರತ್ಯಾದಿ ಯೋಗಿನಿಯರು, ಬ್ರಹ್ಮ ಮುಂತಾದ ವೀರೇಂದ್ರರು ಕೂಟತ್ರಯಕ್ಕೆ ಕ್ರಮವಾಗಿ ವಾಚ್ಯರಾಗಿಯೂ ಶಿವಶಕ್ತಿ ಸಮಷ್ಟಿ ರೂಪವಾದ ದ್ವಂದ್ವವು ಈಕಾರಕ್ಕೆ ವಾಚ್ಯವಾಗಿಯೂ ಇರುವುದರಿಂದ ಈ ವಾಚ್ಯಾರ್ಥದಿಂದ ಗುರುತಿಸಲ್ಪಟ್ಟ ಮಂತ್ರರಾಜವನ್ನು ಸಾಧಕರಾದ ವೀರರು ಉಪಾಸನೆ ಮಾಡಿರುವರು" ಎಂದು ವ್ಯಾಖ್ಯಾನಮಾಡಿರುತ್ತಾರೆ. ಆದರೆ ವೀರಪದಕ್ಕೆ ಸಕಲ, ಅಕಲ, ಸಕಲಾಕಲರೆಂಬ ಮೂರು ಬಗೆಯ ಉಪಾಸಕರೆಂದು ಅರ್ಥ. ಅಹಮಿಪ್ರಲಯಂಕುರ್ವಾದಿದಮಃ ಪ್ರತಿಯೋಗಿನಃ | ಪರಾಕ್ರಮಪರೋಭುಂಕ್ತೇ ಸ್ವಾತ್ಮಾನಮಶಿವಾಪಹಮ್ " ಎಂಬ ಪರಾಪಂಚಾಶಿಕಾವಚನದಲ್ಲಿ ಉಪಾಸಕನು ತನ್ನ ಯೋಗಬಲದಿಂದ ಇದಂಪದಾರ್ಥವಾದ (ಬಾಹ್ಯ) ಪರಾಕ್ ವಸ್ತುಗಳನ್ನೆಲ್ಲ ಅಹಂ ಎಂಬ ಅಮಂಗಲವನ್ನು ನಾಶಮಾಡುವ ಪ್ರತ್ಯಗಾತ್ಮನಲ್ಲಿ ಲಯಮಾಡುವುದೆಂಬ ಪರಾಕ್ರಮವನ್ನು ತೋರಿಸುವ ಕೆಲಸವನ್ನು ಮಾಡಿರುವುದರಿಂದ ವೀರನೆಂದು ಹೇಳ

ಇತ್ಯಾದಿನಾ ಪರಾಪಂಚಾಶಿಕಾಯಾಮನ್ಯತ್ರ ಚ ವೀರಪದಸ್ಯ ಸಾಧಕಪ ರತ್ವೇನೈವ ನಿರ್ವಚನಾತ್, ಅತ ಏವ ಬ್ರಹ್ಮಾದೀನಾಮುಪಾಸಕಶ್ರೇಷ್ಠ ತ್ವಾದ್ವೀರೇಂದ್ರಪದವಾಚ್ಯತ್ವಂ ಸಂಗಚ್ಛತೇ. ಏವಂ ಚ ಸತಿ ತಿಸ್ರೋ ಭಾರತ್ಯಾದ್ಯಾ ಯೋಗಿನ್ಯಸ್ತ್ರಯಃ ಸಕಲಾದ್ಯಾ ಸಾಧಕಾಸ್ತ್ರಯೋ ಬ್ರಹ್ಮಾ ದ್ಯಾ ವೀರೇಂದ್ರಾಃ ಕೂಟತ್ರಯೇಣ ಹೃಲ್ಲೇಖಾವಿನಿರ್ಮುಕ್ತೇನ ಕ್ರಮಾ ತ್ಪ್ರತಿಪಾದ್ಯಾಃ. ಹೃಲ್ಲೇಖಾನಾಂ ತು ಶಿವಶಕ್ತಿಸಾಮರಸ್ಯಾತ್ಮಕಂ ಚತು ರ್ಥಂ ಮಿಥುನಮರ್ಥಃ, 'ಹ್ರೀಂಕಾರ ಉಭಯಾತ್ಮಕ ಇತಿ ವಚನಾತ್. ವಾಚ್ಯಭೂತೈರ್ಯೋಗಿನ್ಯಾದಿಭಿರ್ಜನಿತೋ ಯುಕ್ತೋ ಮಂತ್ರ ಇತ್ಯ ರ್ಥಃ ॥ ೬೪–೬೫ ॥

ಲ್ಪಟ್ಟಿರುತ್ತಾನೆ. ಸಾಮಾನ್ಯ ಉಪಾಸಕರೆಲ್ಲರೂ ವೀರರೆಂದ ಬಳಿಕ ಅವರಲ್ಲಿ ಶ್ರೇಷ್ಠರೆನಿಸಿದ ಬ್ರಹ್ಮಾದಿಗಳು ವೀರೇಂದ್ರರೆನಿಸಿಕೊಳ್ಳುವರು. ಇದರಿಂದ ಭಾರತೀ ಮುಂತಾದ ಮೂವರು ಯೋಗಿನಿಯರೂ ಸಕಲ ಮುಂತಾದ ಮೂವರು ಉಪಾಸ ಕರೂ ಬ್ರಹ್ಮ ಮುಂತಾದ ಮೂವರು ಉಪಾಸಕ ಶ್ರೇಷ್ಠರೂ ಹ್ರೀಂ ವರ್ಣದವರೆ ಗಿನ ಕೂಟತ್ರಯದಿಂದ ಕ್ರಮವಾಗಿ ಪ್ರತಿಪಾದ್ಯರಾಗುವರು. ಉಳಿದ ಹೃಲ್ಲೇಖೆ ಗಳಿಗೆ ಪೂರ್ವೋಕ್ತವಾದ ಶಿವ-ಶಕ್ತಿ ಸಾಮರಸ್ಯವೆಂಬ ನಾಲ್ಕನೆಯ ಮಿಥುನವೇ ಅರ್ಥ, ಆದ್ದರಿಂದ "ಹ್ರೀಂಕಾರ ಉಭಯಾತ್ಮಕಃ" ಎಂದು ಹೇಳಿರುವುದು ಸಂಗತವಾಗಿದೆ. ಯೋಗಿನೀ-ಉಪಾಸಕರು–ಅವರಲ್ಲಿ ಶ್ರೇಷ್ಠರು ಎಂಬ ವಾಚ್ಯಾ ರ್ಥಗಳಿಂದ ಕೂಡಿ ಮಂತ್ರರಾಜವು ಪ್ರಕಾಶಿಸುತ್ತಿದೆ. ಎಂದು ಮೇಲ್ಕಂಡ ಯೋಗಿನೀ ಹೃದಯದ ವಚನದ ಅರ್ಥವನ್ನು ಹೇಳುವುದೂ ಸಮಂಜಸವಾಗು ವುದು ॥ ೬೪–೬೫ ॥

೬೬

ಯದ್ವಾ ಗೀಃ ಸಕಲ ಬ್ರಹ್ಮಪ್ರಭೃತೀನಾಂ ತ್ರಯಂ ತ್ರಯಮ್ ।
ತ್ರಿಕೂಟವಾಚ್ಯಂ ಮಾಯಾಯಾಃ ತುರೀಯಂ ಮಿಥುನಂ ಮತಮ್ ॥ ೬೬

ಏತಮೇವಾರ್ಥಂ ಮನಸಿ ನಿಧಾಯಾಹ—ಅಥ ವಾ ವೀರಪದಂ ಯೋಗಿನೀನಾಮೇವ ವಿಶೇಷಣಮತಲ್ಲಿಂಗಂ. ಅತ ಏವ ಬ್ರಹ್ಮಾದೀನಾಂ ವೀರಪತಿವಾಚಕ ವೀರೇಂದ್ರಪದೇನ ನಿರ್ದೇಶಃ. ಯೋಗಿನೀವೀರೇಂದ್ರ ಪದಾಭ್ಯಾಂ ಚ ಶಾಕ್ತಾರ್ಥೇ ವಕ್ಷ್ಯಮಾಣಾನಾಂ ಷಣ್ಣಾಮಕ್ಷರಾಣಾಂ ಬ್ರಹ್ಮಭಾರತ್ಯಾದಿವಾಚಕಾನಾಂ ಪರಾಮರ್ಶಃ. ಶಿವಶಕ್ತಿಸಮಾಯೋಗ ಪದೇನ ಕಾಮಕಲಾಯಾಃ ಪರಾಮರ್ಶಃ. ತಸ್ಯಾಮುಭಯಯೋಗಸ್ಯಾನುಪದಂ ವಕ್ಷ್ಯಮಾಣತ್ವಾತ್. ಏವಂ ಸಪ್ತಭಿರಕ್ಷರೈಸ್ತ್ರಿರಾವೃತ್ತ್ಯೈರ್ಮಂತ್ರರಾಜೋ ಜನಿತಃ ಪ್ರಾದುರ್ಭೂತ ಇತ್ಯರ್ಥಃ. ಏತತ್ಸಪ್ತಕಪರಿಣಾಮತ್ವಾನ್ಮಂತ್ರೋಽಪಿ ತದಾತ್ಮಕಃ ಪ್ರಸಾರಪರಮಾರ್ಥನ್ಯಾಯಾದಿತಿ ಭಾ

ಯೋಗಿನೀ ಹೃದಯದ ವಚನಕ್ಕೆ ಹಿಂದೆ ಹೇಳಿರುವ ಎರಡನೆಯ ಅಥ ವನ್ನೇ ಈ ಮೂಲ ಶ್ಲೋಕವು ಹೇಳುತ್ತದೆ. ಒಂದೊಂದು ಕೂಟಕ್ಕೆ ಕ್ರಮವಾ ಭಾರತೀ, ಸಕಲ, ಬ್ರಹ್ಮ ಇವರಿಂದ ಉಪಕ್ರಮ ಹೊಂದುವ ಯೋಗಿನೀ, ಉಪ ಸಕ, ಉತ್ತಮೋಪಾಸಕರೆಂಬ ಮೂರು ಮೂರು ವಸ್ತುಗಳ ಸಮೂಹವೇ ವಾಚ ರ್ಥವು. ಹ್ರೀಂಕಾರಕ್ಕೆ ನಾಲ್ಕನೆಯ ಮಿಥುನವು ಅರ್ಥವೆಂದು ಶ್ಲೋಕಕ ಯಥಾಶ್ರುತವಾದ ಅರ್ಥವು. ಇದಕ್ಕಿಂತಲೂ ಸ್ವರಸವಾದ ಅರ್ಥವನ್ನು ಯೋಗಿನಿ ಹೃದಯದ ವಚನದಲ್ಲಿ ವಿವರಿಸಬಹುದು :—ವೀರೈಃ ಎಂಬುದು ಯೋಗಿನಿಯ ವಿಶೇಷಣವು. ಯೋಗಿನಿಯರು ವೀರಪದದಿಂದ ನಿರ್ದೇಶಿಸಲ್ಪಟ್ಟದ್ದರಿಂ ಬ್ರಹ್ಮಾದಿಗಳು ವೀರೇಂದ್ರಪದದಿಂದ, ನಿರ್ದೇಶಿಸಲ್ಪಟ್ಟಿರುವರು. ಹೀಗೆ ಯೋಗಿನೀ ವೀರೇಂದ್ರ ಪದಗಳಿಂದ ಶಾಕ್ತಾರ್ಥದಲ್ಲಿ ತೋರಿಸುವ ಆರು ವರ್ಣಗಳು ಸೂಚಿ ವಾಗಿವೆ. ಶಿವಶಕ್ತಿ ಸಮಾಯೋಗಪದದಿಂದ ಹ್ರೀಂಕಾರವು ಸೂಚಿತವಾಗಿದೆ ಕಾಮಕಲೆಯೆಂಬ ಹ್ರೀಂಕಾರದಲ್ಲಿ ಶಿವ-ಶಕ್ತಿ ಎರಡು ತತ್ತ್ವಗಳ ಸಂಬಂಧವು ಮುಂದೆ ವಿವರಿಸಲ್ಪಡುವುದು. ಹೀಗೆ ಏಳು ಅಕ್ಷರಗಳನ್ನು ಮೂರುಸಲ ಆವೃತ್ತಿ ಮಾಡುವುದರಿಂದ ಮಂತ್ರರಾಜವು ಉತ್ಪನ್ನವಾಗಿಯೆಂದೂ ಏಳು ಅಕ್ಷರಗ

ವಃ. ನ ಚ ಮಂತ್ರಸ್ಯೋತ್ಪತ್ತ್ಯಂಗೀಕಾರೇऽನಾದಿತ್ವಭಂಗಃ, ನಿರ್ವಿಶೇಷ ಬ್ರಹ್ಮಾತಿರಿಕ್ತಸ್ಯ ನಿಖಿಲಸ್ಯಾಪಿ ಸೃಷ್ಟಿಪ್ರತಿಪಾದಕಶಾಸ್ತ್ರಪ್ರಾಮಾಣ್ಯಾಜ್ಜ ನ್ಯತ್ವಸ್ಯೇಷ್ಟತ್ವೇನ ಸವಿಶೇಷಶಕ್ತಿವದಜನ್ಯತ್ವರೂಪಾನಾದಿತ್ವಸ್ಯಾನಭಿಮತ ತ್ವಾತ್. ಪ್ರವಾಹಾನಾದಿತ್ವಂ ತು ಜನ್ಯತ್ವಾಂಗೀಕಾರೇऽಪಿ ನಾನುಪ ಪನ್ನಂ, ಕಾರ್ಯಮಾತ್ರಸ್ಯ ಸ್ಥೂಲಸೂಕ್ಷ್ಮರೂಪದ್ವಯಸ್ವೀಕಾರೇಣೋ ತ್ಪತ್ತೇಃ ಪೂರ್ವಮಪಿ ಕಾರಣಾಂತಃ ಸೂಕ್ಷ್ಮರೂಪೇಣಾವಸ್ಥಾನಸ್ಯ ಸತ್ಕಾರ್ಯವಾದಿಭಿರಸ್ಮಾಭಿರಂಗೀಕಾರೇಣಾನಾದಿತ್ವಪ್ರತಿಪಾದಕವಚನಾ ನಾಂ ತತ್ಪರತ್ವೇನಾಪ್ಯುಪಪತ್ತೇಃ. ಪ್ರಥಮಪಕ್ಷದ್ವಯೇ ತು ಜನಿತ ಪದಾದೇರರ್ಥೋ ನ ಸ್ವರಸಃ. ಅತ ಏವೋತ್ತರಗ್ರಂಥೇ ಭಾರ ತ್ಯಾದಿ ಸಪ್ತಕಸಮಷ್ಟಿರೂಪಾಯಾಃ ಪರದೇವತಾಯಾಃ ಮಂತ್ರಾ ಭೇದ ಪ್ರತಿಪಾದನಂ ಸಂಗಚ್ಛತೇ. ವಾಚಕಾಕ್ಷರಸಮಷ್ಟ್ಯಾತ್ಮಕ ಮಂತ್ರಸ್ಯವಾಚ್ಯಾರ್ಥ ಸಮಷ್ಟ್ಯಾತ್ಮಕ ಪರದೇವತಾऽಭೇದಸ್ಯ ವಾಚ್ಯ

ಪರಿಣಾಮವಾದ ಮಂತ್ರವು ಪರಿಣಾಮಿಯಾದ ಸಪ್ತಕಸ್ವರೂಪವೆಂದೂ ಅರ್ಥ ಮಾಡಬಹುದು, ನಿರ್ವಿಶೇಷ ಬ್ರಹ್ಮವಸ್ತುವಿಗೆ ಅತಿರಿಕ್ತವಾದ ಎಲ್ಲ ವಸ್ತುಗಳಿಗೂ ಶಾಸ್ತ್ರ ಪ್ರಾಮಾಣ್ಯದಿಂದ ಉತ್ಪತ್ತಿಯನ್ನು ಒಪ್ಪಲೇಬೇಕಾಗಿರುವುದರಿಂದ ಮಂತ್ರಕ್ಕೆ ಉತ್ಪತ್ತಿಯನ್ನು ಒಪ್ಪಿದ ಮಾತ್ರದಿಂದ ಸಿದ್ಧಾನ್ತವಿರೋಧವು ಬರಲಾ ರದು. ಅಜನ್ಯತ್ವವೆಂಬ ಅನಾದಿತ್ವವು ಮಂತ್ರಕ್ಕೆ ಸಿದ್ಧಾಂತ ಸಮ್ಮತವಲ್ಲ. ಕೆಲವು ಕಡೆ ಮಂತ್ರಕ್ಕೆ ಹೇಳುವ ಅನಾದಿತ್ವವನ್ನು ಪ್ರವಾಹಾನಾದಿ=ಎಂದರೆ ಪ್ರವಾಹರೂಪವಾಗಿ ಯಾವಾಗಲೂ ತಪ್ಪದೇ ಇರುವುದು. ಅಥವಾ ಸೂಕ್ಷ್ಮ- ಸ್ಥೂಲಗಳೆರಡು ರೂಪಗಳಲ್ಲಿ ಸ್ಥೂಲೋತ್ಪತ್ತಿಯಾಗುವ ಮೊದಲು ಕಾರಣದಲ್ಲಿ ಸೂಕ್ಷ್ಮರೂಪದಿಂದ ಇರುವುದು. ಎಂಬ ತಾತ್ಪರ್ಯದಿಂದ ಹೊಂದಿಸಬಹುದು. ಸತ್ಕಾರ್ಯವಾದದ ಸಿದ್ಧಾಂತವನ್ನು ಅವಲಂಬಿಸಿರುವ ನಮಗೆ ಸೂಕ್ಷ್ಮರೂಪದಿಂದ ಅನಾದಿತ್ವವನ್ನು ವರ್ಣಿಸುವುದು ಅಸಂಗತವಲ್ಲ. ಹಿಂದೆ ತೋರಿಸಿದ ಎರಡು ಅರ್ಥಗಳಲ್ಲಿಯೂ "ಜನಿತಃ" ಎಂಬ ಪದಕ್ಕೆ ಸ್ವರಸವಾದ ಅರ್ಥವು ಹೊಂದಿರ ಲಿಲ್ಲ. ಆದ್ದರಿಂದಲೇ ಮುಂದೆ ಭಾರತೀ ಮುಂತಾದ ಏಳು ಶಕ್ತಿಗಳ ಸಮಷ್ಟಿ ರೂಪನಾದ ಪರದೇವತೆಯು ಮಂತ್ರದಲ್ಲಿ ಐಕ್ಯ ಹೊಂದಿರುವಳೆಂಬ ವರ್ಣನೆಯು ಸರಿಹೋಗುವುದು. ಮಂತ್ರವು ವಾಚಕ ಅಕ್ಷರಗಳ ಸಮಷ್ಟಿ ರೂಪವು. ಪರ ದೇವತೆಯು ವಾಚ್ಯಾರ್ಥಗಳ ಸಮಷ್ಟಿ ರೂಪಳು. ವಾಚ್ಯವಾಚಕಗಳಿಗೆ ಪರಸ್ಪರಾ

ವಾಚಕಯೋರಭೇದವಾದಿನಾಮಸ್ಮಾಕಂ ನ್ಯಾಯಸಿದ್ಧತ್ವೇನ ಸಂದರ್ಭಶುದ್ಧೇಃ. ಯಥಾ—'ತನ್ಮಯೀಂ ಪರಮಾನಂದನಂದಿತಾಂ ಸ್ಪಂದರೂಪಿಣೀಂ. ನಿಸರ್ಗಸುಂದರೀಂ ದೇವೀಂ ಜ್ಞಾತ್ವಾ ಸ್ವೈರಮುಪಾಸತೇ. ಶಿವಶಕ್ತ್ಯಾತ್ಮಸಂಘಟ್ಟರೂಪೇ ಬ್ರಹ್ಮಣಿ ಶಾಶ್ವತೇ. ತತ್ಪ್ರಥಾಪ್ರಸರಾಶ್ಲೇಷಶಾಲಿನ್ಯೈಂದ್ರೋಪಲಕ್ಷಿತೇ. ಜ್ಞಾತೃಜ್ಞಾನಮಯಾಕಾರಕರಣಾನ್ಮಂತ್ರರೂಪಿಣೀಂ. ತೇಷಾಂ ಸಮಷ್ಟಿರೂಪೇಣ ಪರಾಶಕ್ತಿಸ್ತುಮಾತೃಕಾ. ಇತಿ. ತನ್ಮಯೀಂ ಮಂತ್ರರಾಜಾಭಿನ್ನಾಂ. 'ಆನಂದಮಯಃ,' 'ಚಿನ್ಮಯ' ಇತ್ಯಾದಿವದಭೇದೇ ಮಯಟ್. ಅನ್ಯೇ ತು 'ತುರೀಯಕೂಟಸ್ಯಾರ್ಥಮಾಹ—ತನ್ಮಯೀಮಿತಿ. ಚತುರ್ವಿಧಮಿಥುನವಾಚಕತ್ರಿಬೀಜಸಮಷ್ಟಿರೂಪಮಂತ್ರವಾಚ್ಯಾಮಿತ್ಯರ್ಥಃ,' ಇತಿ ವ್ಯಾಚಕ್ಷತೇ. ತನ್ನಾತೀವ ಸಂದರ್ಭಶುದ್ಧಂ, ವಾಚ್ಯಾರ್ಥೇ ಮಯಡಭಾವಶ್ಚೇತ್ಯುಪೇಕ್ಷ್ಯಂ. ಸ್ಪಂದಃ ಷಟ್ತ್ರಿಂಶತ್ತತ್ತ್ವಾತ್ಮನಾ ಪರಿಣಾಮಃ, ತದ್ರೂಪಿ

ಭೇದವೇ ಸಿದ್ಧಾಂತ ಸಿದ್ಧವಾದ್ದರಿಂದ ಯಾವ ಅಂಶಕ್ಕೂ ವಿರೋಧವಿಲ್ಲ. ಯೋಗಿನೀ ಹೃದಯದ ಮುಂದಿನ ಪದ್ಯಗಳು ಈ ರೀತಿಯಾಗಿವೆ. "ತನ್ಮಯೀಂ ಪರಮಾನಂದನಂದಿತಾಂ ಸ್ಪಂದರೂಪಿಣೀಂ | ನಿಸರ್ಗಸುಂದರೀಂ ದೇವೀಂ ಜ್ಞಾತ್ವಾಸ್ವೈರಮುಪಾಸತೇ | ಶಿವಶಕ್ತ್ಯಾತ್ಮಸಂಘಟ್ಟ ರೂಪೇಬ್ರಹ್ಮಣಿಶಾಶ್ವತೇ | ತತ್ಪ್ರಥಾಪ್ರಸರಾಶ್ಲೇಷಶಾಲಿನ್ಯೈಂದ್ರೋಪಲಕ್ಷಿತೇ | ಜ್ಞಾತೃಜ್ಞಾನಮಯಾಕಾರಕರಣಾನ್ಮಂತ್ರರೂಪಿಣೀಂ | ತೇಷಾಂಸಮಷ್ಟಿರೂಪೇಣ ಪರಾಶಕ್ತಿಸ್ತುಮಾತೃಕಾ ||" ಈ ಶ್ಲೋಕಗಳಿಗೆ ಸಂಗ್ರಹವಾಗಿ ಅರ್ಥವನ್ನು ವಿವರಿಸಿದೆ:—ಇಲ್ಲಿ ತನ್ಮಯೀಂ ಎಂಬ ಪದವು ನಾಲ್ಕು ದ್ವಂದ್ವಗಳನ್ನು ಹೇಳುವ ಬೀಜಾಕ್ಷರ ಸಮಷ್ಟಿರೂಪ ಮಂತ್ರಕ್ಕೆ ವಾಚ್ಯಳು ಎಂದು ನಾಲ್ಕನೆಯ ಕೂಟದ ಅರ್ಥವನ್ನು ಹೇಳುವುದೆಂದು ಕೆಲವರು ವ್ಯಾಖ್ಯಾನ ಮಾಡುವರು. ಮಯಟ್ ಎಂಬ ಪ್ರತ್ಯಯಕ್ಕೆ ವಾಚ್ಯಳು ಎಂಬ ಅರ್ಥವು ಇಲ್ಲದ್ದರಿಂದಲೂ ಸಂದರ್ಭಕ್ಕೆ ಆ ಅರ್ಥವು ಹೊಂದಿಲ್ಲವಾದ್ದರಿಂದಲೂ ಆ ವ್ಯಾಖ್ಯಾನವು ಸರಿಯಾದುದಲ್ಲ. ಮಂತ್ರ ರಾಜಾಭಿನ್ನಳೂ ಪರಮಾನಂದ ಪೂರ್ಣಳೂ, ಸ್ಪಂದರೂಪಿಣಿಯೂ, ನಿಸರ್ಗಸುಂದರಿಯೂ ಆದ ದೇವಿಯನ್ನು ಉಪಾಸನೆಮಾಡುತ್ತಾರೆ. ಎಂದು ಮೊದಲನೆಯ ಪದ್ಯದ ಅರ್ಥವು. ಇಲ್ಲಿ ಸ್ಪಂದವೆಂದರೆ ಮೂವತ್ತಾರು ತತ್ವಗಳ ಪರಿಣಾಮವು. ದೇವಿಯು ಪರಿಣಾಮಾಭಿನ್ನಳಾಗಿರುವಳೆಂದು ಹೇಳಿದ್ದರಿಂದ ಮಂತ್ರವೂ ಪರಿಣಾಮಾಭಿನ್ನವಾ

ಣೇಂತದಭಿನ್ನಾಂ. ಏತೇನ ದೇವತಾಽಭಿನ್ನವಿಶ್ವಸ್ಯಾಪಿ ಮಂತ್ರಾಭೇದಃ ಸೂಚಿತಃ. ಅವ್ಯಾಕೃತನಾಮರೂಪ ಪ್ರಪಂಚಸ್ಯೋತ್ಪತ್ತ್ಯುನ್ಮುಖತ್ವೈವ ಸ್ಪಂದೋನ್ಮೇಷವ್ಯಾಕರಣಾದಿಶಬ್ದೈರ್ವ್ಯವಹ್ರಿಯತೇ, 'ನಾಸ್ತಿ ಕಿಂಚನ ಮಿಷತ್,' 'ನಾಮರೂಪೇ ವ್ಯಾಕರವಾಣಿ,' 'ನಖಲು ಕುಶಲಃ ಸ್ಪಂದಿತುಮಪಿ' ಇತ್ಯಾದೌ. ತೇನಾವ್ಯಾಕೃತನಾಮರೂಪಜಗತ ಏವ ಸ್ಪಂದ ಇತಿ ಪ್ರಾಯೇಣ ತಂತ್ರೇಷು ವ್ಯವಹಾರಃ. ಇತ್ಥಂ ಮಂತ್ರದೇವತಾ ಜಗತಾಮಭೇದಮನುಸಂಧಾನೋ ಮಂತ್ರಂ ಜಪೇದಿತಿ ವಿಧತ್ತೇ—ಸ್ವೈರಮುಪಾಸತ ಇತಿ. ಪಂಚಮೋಽಯಂ ಲಕಾರೋ ಲಿಙರ್ಥೇ. 'ಮುಖಂ ವ್ಯಾದಾಯ ಸ್ವಪಿತಿ' ಇತಿ ವರ್ತಮಾನಕಾಲಿಕತ್ವೇಽಪಿ 'ಜ್ಞಾತ್ವಾ' ಇತ್ಯತ್ರ ಕ್ತ್ವಾಪ್ರತ್ಯಯಃ. ಏವಂ ದೇವತಾಯಾಂ ಮಂತ್ರಾಭೇದಂ ಯುಕ್ತಿಭಿಃ ಪ್ರತಿಪಾದ್ಯ ಮಂತ್ರಪದಸ್ಯಾವಯವಶಕ್ತಿರಪಿ ಸಮಸ್ತೀತಿ ಪ್ರದರ್ಶಯತಿ ಶಿವೇತ್ಯಾದಿ ಸಾರ್ಧಶ್ಲೋಕೇನ—ಶಿವಶಕ್ತ್ಯಾತ್ಮನೋಃ ಸಂಘ

ಗಿರುವುದೆಂಬುದು ಸಿದ್ಧವು. "ನಾಸ್ತಿ ಕಿಂಚನ ಮಿಷತ್, ನಾಮರೂಪೇ ವ್ಯಾಕರವಾಣಿ, ನಖಲುಕುಶಲಃ ಸ್ಪಂದಿತುಮಪಿ" ಮುಂತಾದ ವಚನಗಳಲ್ಲಿ ಉನ್ಮೇಷ, ವ್ಯಾಕರಣ, ಸ್ಪಂದವೆಂದು ಹೇಳಲ್ಪಟ್ಟಿರುವುದು ಅವ್ಯಾಕೃತ ನಾಮರೂಪ ಪ್ರಪಂಚದ ಉತ್ಪತ್ತಿಯಾಗುವ ಉನ್ಮುಖತೆಯೇ ಆಗಿದೆ. ತಂತ್ರಶಾಸ್ತ್ರಗಳಲ್ಲಿಯೂ ಅವ್ಯಾಕೃತನಾಮರೂಪವೆಂಬ ಜಗತ್ತನ್ನು ಸ್ಪಂದ ಶಬ್ದದಿಂದ ವ್ಯವಹರಿಸುವುದು ವಾಡಿಕೆಯಾಗಿದೆ. ಜ್ಞಾತ್ವಾ ಸ್ವೈರ ಮುಪಾಸತೇ ಎಂಬ ಭಾಗವು ಮಂತ್ರ ದೇವತೆ ಜಗತ್ತುಗಳಲ್ಲಿ ಐಕ್ಯಭಾವನೆಯಿಂದ ದೇವತೆಯನ್ನು ಉಪಾಸನೆ ಮಾಡಬೇಕೆಂದು ವಿಧಿಸುತ್ತದೆ. ವಿಧಿ ಎಂಬ ಅರ್ಥದಲ್ಲಿ ವೈದಿಕವಾಗಿ ಐದನೆಯ "ಲೇಟ್" ಎಂಬ ಲಕಾರ ಪ್ರತ್ಯಯವು ಉಪಾಸತೇ ಎಂಬಲ್ಲಿ ಬಂದಿರುತ್ತದೆ. ದೇವತೆಯ ಉಪಾಸನೆ ಐಕ್ಯಾನುಸಂಧಾನ ಎರಡೂ ಒಂದೇ ಕಾಲದಲ್ಲಿರುವುವಾದ್ದರಿಂದ ಐಕ್ಯವನ್ನು ತಿಳಿದು ತರುವಾಯ ಉಪಾಸನೆಯೆಂದು ಅನಂತರ ಕಾಲವೆಂಬ ಅರ್ಥವು "ಜ್ಞಾತ್ವಾ" ಎಂಬಲ್ಲಿ "ತ್ವಾ" ಎಂಬ ಪ್ರತ್ಯಯಕ್ಕೆ ವಿವಕ್ಷಿತವಲ್ಲ. ಆ ಅರ್ಥವನ್ನು ಬಿಟ್ಟು "ಮುಖಂ ವ್ಯಾದಾಯಸ್ವಪಿತಿ" (ಬಾಯಿಯನ್ನು ತೆರೆದುಕೊಂಡು ಮಲಗಿದ್ದಾನೆ. ಎಂದರ್ಥ) ಎಂಬ ಕಡೆ ಆ ಪ್ರತ್ಯಯದ ಪ್ರಯೋಗವು ಇರುತ್ತದೆ. ಈ ಯುಕ್ತಿಗಳಿಂದ ದೇವತೆಯು ಮಂತ್ರಾಭಿನ್ನಳೆಂದು ಸಾಧಿಸುವುದು ಮಾತ್ರವಲ್ಲದೆ ಮಂತ್ರ ಪದದ ಅವಯವಾರ್ಥಗಳನ್ನು ಆಲೋಚಿಸಿದರೂ ಅಭೇದಾರ್ಥವು

ಟ್ಯೋಃ ಸಾಮರಸ್ಯಂ ತದ್ರೂಪೇ. ಶಾಶ್ವತೇಽನಾದಿನಿಧನೇ. ತಸ್ಯ ಪ್ರಥಾಯಾಃ ಪೃಥುತ್ವೇನ ಪ್ರಸರೋ ಜಗದ್ರೂಪಃ, ತದಾಶ್ಲೇಷ ಶಾಲಿನ್ಯಪ್ಯೈಂದ್ರೇಣ ಜಗದೈಶ್ವರ್ಯೇಣ ಕಾಕೇನೇವೋಪಲಕ್ಷಿತೇ ನ ತು ವಿಶಿಷ್ಟೇ. ವಿಷಯ ತ್ವಂ ಸಪ್ತಮ್ಯರ್ಥಃ. ತಥಾ ಚ ಸತ್ಯತ್ವಜ್ಞಾನತ್ವಾದ್ಯುಪಲಕ್ಷಿತ ಶುದ್ಧ ಬ್ರಹ್ಮೈಕ ವಿಷಯಕನಿರ್ವಿಕಲ್ಪಕಜ್ಞಾನವತಃ ಸಾಧಕಪುಂಗವಸ್ಯ ಜ್ಞಾನಮಯಃ ಸ್ವಸಂವಿದ್ರೂಪೋ ಬ್ರಹ್ಮಭಾವೋ ಯ ಆಕಾರಸ್ತತ್ಕರಣಾನ್ಮಂತಾರಮುಕ್ತಜ್ಞಾನರೂಪಮನನಶಾಲಿನಂ ತ್ರಾಯತೇ ಭಯಜನಕದ್ವಿತೀಯಪದಾಮಾತ್ರನಿರಾಸಾದಿತಿ ಮಂತ್ರಪದಾವಯವಾರ್ಥಃ. ತದ್ರೂಪಿಣೀಮಿತಿ ವಿಧ್ಯಂತರ್ಗತದೇವೀಪದಸ್ಯ ವಿಶೇಷಣಂ. ಮಂತ್ರ ಇತಿ ಪದಸ್ಯ ದೇವ್ಯಾಮನುಗತಿಮುಪಪಾದ್ಯ ತತ್ಪದಾರ್ಥಭೂತಂ ಪಂಚದಶ್ಯಭಿನ್ನತ್ವಂ ಸಂಮುಗ್ಧಾಕಾರೇಣ ಪ್ರತಿಜ್ಞಾತಪೂರ್ವಮಪಿ ಹೇತುನಾ ದ್ರಢಯತಿ ತೇಷಾಮಿತಿ. ತುಶಬ್ದೋಽತ್ರ ಹೇತ್ವರ್ಥಕಃ. ಯತೋ ಭಾರತ್ಯಾದೀನಾಂ

ಲಭಿಸುವುದೆಂಬುದನ್ನು ನಿರ್ಧರಿಸಲು ಎರಡನೆಯ ಪದ್ಯವು ಹೊರಟಿರುವುದು. ಶಿವ ಶಕ್ತಿಗಳ ಸಾಮರಸ್ಯ ರೂಪವು ಉತ್ಪತ್ತಿ ನಾಶಗಳಿಲ್ಲದ್ದರಿಂದ ಶಾಶ್ವತವೂ, ಅದರ ವಿಭೂತಿ ವಿಸ್ತಾರ ರೂಪವಾದ ಜಗತ್ತೆಂಬ ಪರಿಣಾಮದಿಂದ ಕೂಡಿಯೂ ಜಗದೈಶ್ವರ್ಯವೆಂಬ ಗುಣದಿಂದ ಉಪಲಕ್ಷಿತ (ಗುರುತಿಸಲ್ಪಟ್ಟ) ವೂ ಆದ ಪರ ಬ್ರಹ್ಮವಸ್ತುವಿನ ವಿಷಯದಲ್ಲಿ ಸತ್ಯತ್ವ ಜ್ಞಾನತ್ವಾದಿ ಧರ್ಮೋಪಲಕ್ಷಿತವಾದ ಶುದ್ಧ ಬ್ರಹ್ಮವನ್ನು ಮಾತ್ರ ವಿಷಯೀಕರಿಸುವ ಜ್ಞಾನವನ್ನು ಹೊಂದಿದ ಉತ್ತಮೋಪಾಸಕನಿಗೆ ಜ್ಞಾನರೂಪವಾದ ಬ್ರಹ್ಮಭಾವವೆಂಬ ಆಕಾರವನ್ನು ಕೊಡುವುದು. “ಮಂತಾರಂತ್ರಾಯತೇ” ನಿರ್ವಿಶೇಷ ಜ್ಞಾನವೆಂಬ ಮನನವುಳ್ಳ ಪುರುಷನನ್ನು ಭಯನಿಮಿತ್ತವಾದ ದ್ವಿತೀಯ ವಸ್ತುವಿನ ಸಂಸರ್ಗವನ್ನೇ ತಪ್ಪಿಸಿ ರಕ್ಷಿಸುವುದೆಂದು ಮಂತ್ರಪದದ ಅವಯವಾರ್ಥವು. ಅಂತಹ ಮಂತ್ರಾರ್ಥಸ್ವರೂಪವುಳ್ಳವಳೆಂದು ಉಪಾಸ್ಯಳಾದ ದೇವಿಯ ವಿಶೇಷಣವು. ದೇವಿಯು ಪಂಚದಶೀಮಂತ್ರಾಭಿನ್ನಳೆಂದು ಮುಂದಿನ ಭಾಗವು ಪ್ರತಿಪಾದಿಸುತ್ತದೆ. ಭಾರತ್ಯಾದಿಗಳ ಸಮಷ್ಟಿ ರೂಪದಿಂದ ಪರದೇವತೆಯು ಇರುವುದರಿಂದ ಅಕ್ಷರ ಸಮಷ್ಟಿರೂಪವಾದ ವಿದ್ಯೆಯ ಅಭೇದವು ದೇವಿಯಲ್ಲಿ ಉಪಪನ್ನವಾಗುವುದು. ಅಥವಾ ಮಂತ್ರವು ರೂಢಿಶಕ್ತಿಯಿಂದಲೇ ದೇವಿಯನ್ನು ಬೋಧಿಸಲು ಸಮರ್ಥವಾಗಿದೆಯೆಂದು ಪ್ರತಿಪಾದಿಸುತ್ತದೆ. ಮಂತ್ರರಾಜ ಪದಕ್ಕೆ ಪ್ರವೃತ್ತಿ ನಿಮಿತ್ತ ಅಥವಾ ಶಕ್ಯತಾವಚ್ಛೇದಕ

ಸಮುಷ್ಟಿರೂಪೇಣೋಪಲಕ್ಷಿತಾ ವಾತಾ ತತಸ್ತಸ್ಯಾಂ ತದ್ವಾಚಕಾಕ್ಷರ ಸಮುಷ್ಟ್ಯಾತ್ಮಕವಿದ್ಯಾಽಭೇದ ಉಪಪದ್ಯತ ಇತಿ ಭಾವಃ. ಅಥ ವಾ ಮಂತ್ರಪದಸ್ಯಾವಯವಶಕ್ತ್ಯಾ ಪ್ರವೃತ್ತಿ ಮುಪಪಾದ್ಯ ಸಮುದಾಯ ಶಕ್ತ್ಯಾಽಪಿ ತಾಮುಪಪಾದಯಿತುಂ ಮಂತ್ರರಾಜಪದಶಕ್ಯತಾವಚ್ಛೇದ ಕಂ ಭಾರತ್ಯಾದಿಸಪ್ತಕಸಮುಷ್ಟಿತ್ವಂ (?) ಪರದೇವತಾಯಾವಾಹ ತೇ ಷಾಮಿತಿ. ಸಮುಷ್ಟೀತಿ ಭಾವಪ್ರಧಾನೋ ನಿರ್ದೇಶಃ. ಸಮುಷ್ಟಿತ್ವೇನ ಶಕ್ಯತಾವಚ್ಛೇದಕರೂಪೇಣ ಯುಕ್ತಾ ಯತಃ ಪರದೇವತಾ ತತೋ ರೂಢ್ಯಾಽಪಿ ಮಂತ್ರರಾಜಪದವಾಚ್ಯತ್ವಂ ಯುಕ್ತಂ. ತೇನ ಚ ತಯೋರ ಭೇದೋಽಪಿ ಯುಜ್ಯತ ಇತಿ ಭಾವಃ ॥ ೬೬ ॥

ಧರ್ಮವು ಭಾರತ್ಯಾದಿಗಳ ಸಮುಷ್ಟಿತ್ವವು. ಆ ಸಮುಷ್ಟಿತ್ವವು ಪರದೇವತೆಯಲ್ಲಿರುವುದರಿಂದ ಪರದೇವತೆಯು ಮಂತ್ರರಾಜಪದಕ್ಕೆ ವಾಚ್ಯಳೂ ವಾಚಕವಾದ ಮಂತ್ರದಲ್ಲಿ ಐಕ್ಯಹೊಂದಿದವಳೂ ಆಗಿರುವಳು ॥ ೬೬ ॥

೬೭-೬೮

ವಾಮೇಚ್ಛಾದ್ಯಾಃ ಷಡೀಕಾರ ಇತಿ ಸಪ್ತಭಿರಕ್ಷರೈಃ ।
ತ್ರಿರಾವೃತ್ತೈರಿಯಂ ವಿದ್ಯಾ ಸಂಜಾತಾ ತೇನ ತನ್ಮಯೀ ॥ ೬೭ ॥
ವಾಮಾದಿಸಪ್ತಶಕ್ತೀನಾಂ ಸಮಷ್ಟಿಃ ಪರದೇವತಾ ।
ಷಟ್ತ್ರಿಂಶತ್ತತ್ತ್ವರೂಪಾಸ್ಮಾನ್ಮಾತ್ರಯಾಪಿ ನ ಭಿದ್ಯತೇ ॥ ೬೮ ॥

ಅಮುಮೇವಾರ್ಥಂ ಸುನಿಷ್ಕೃಷ್ಟಂ ಶ್ಲೋಕತೋ ನಿಬಧ್ನಾತಿ— ಅಸ್ಮಾತ್ತನ್ಮಂತ್ರಾತ್ ಮಾತ್ರಯಾಽಪಿ ಲೇಶೇನಾಪಿ ನ ಭಿದ್ಯತೇ. ಮಂತ್ರೇ ತೃತೀಯವರ್ಣಸ್ಯ ಜ್ಯೇಷ್ಠಾಶಕ್ತಿವಾಚಕತ್ವೇನ ವಾಮಾಽಽದಿಷಟ್ಕಾಂತಃ ಪಾತಿತ್ವೇನಾವಶಿಷ್ಟಾನಾಂ ಹೃಲ್ಲೇಖಾಸ್ಥಾನಾಮೇವ ಕಾಮಕಲಾನಾಮೀ ಕಾರಪದೇನ ಪರಾಮರ್ಶಾನ್ನ ತ್ರಿರಾವೃತ್ತೈರಿತಿ ಸಂಖ್ಯಾವಿರೋಧಃ. ನ ಚ ಶಾಕ್ತಾರ್ಥೇನ ಪೌನರುಕ್ತ್ಯಂ. ತತ್ರ ವಾಮಾಽಽದಿಷಟ್ಕಂ ಕಾಮಕಲಾ ಯಾ ಅಭಿನ್ನಮಿತಿ ವಾಕ್ಯಾರ್ಥಃ, ಅತ್ರ ತು ವಾಮಾಽಽದಿಕಾಮಕಲಾಽಂತ ಸಪ್ತಕಾಭಿನ್ನೋ ಮಂತ್ರಃ ಷಟ್ತ್ರಿಂಶತ್ತತ್ತ್ವಾಭಿನ್ನಮಾತ್ರಭಿನ್ನ ಇತ್ಯರ್ಥ ಇತಿ ಮಹತೋ ಭೇದಾತ್. ಅಥ ವಾ ಶಿವಶಕ್ತಿಸಮಾಯೋಗರೂ

ವಾಮಾ–ಜ್ಯೇಷ್ಠಾ-ರೌದ್ರೀ-ಇಚ್ಛಾ-ಜ್ಞಾನ-ಕ್ರಿಯಾ ಎಂಬ ಶಕ್ತಿವಾಚಕ ಗಳಾದ ಆರು ವರ್ಣಗಳೂ, ಹೃಲ್ಲೇಖಾಂತರ್ಗತವಾದ ಈ ಕಾರವೂ ಸೇರಿ ಏಳು ಅಕ್ಷರಗಳನ್ನು ಮೂರುಸಲ ಆವೃತ್ತಿ ಮಾಡುವುದರಿಂದ ಈ ವಿದ್ಯೆಯು ಹುಟ್ಟು ವುದಾದ್ದರಿಂದ ವಿದ್ಯೆಯು ಅಕ್ಷರಮಯವೇ ಆಗಿದೆ. ವಾಮಾದಿ ಏಳು ಶಕ್ತಿಗಳ ಸಮಷ್ಟಿ ರೂಪಳಾದ ಪರದೇವತೆಯು ಮೂವತ್ತಾರು ತತ್ತ್ವರೂಪವಾದ ಪರಿ ಣಾಮವುಳ್ಳವಳಾಗಿರುವುದರಿಂದ ಈ ಮಂತ್ರಕ್ಕೆ ಸ್ವಲ್ಪ ಅಂಶದಲ್ಲಿಯೂ ವ್ಯತಿರಿಕ್ತ ಳಾದವಳಲ್ಲ. ಜ್ಯೇಷ್ಠಾಶಕ್ತಿ ವಾಚಕವಾದ ಈ ಕಾರವು ಮಂತ್ರದಲ್ಲಿ ಮೂರನೆಯ ದಾಗಿದೆ. ಅದೂ ಸೇರಿ ವಾಮಾದಿ ಶಕ್ತಿವಾಚಕಗಳು ಆರು ವರ್ಣಗಳು ಆಗುವುವು. ಹೃಲ್ಲೇಖೆಯಲ್ಲಿರುವ ಈ ಕಾರವನ್ನು ಈ ಕಾರವೆಂಬ ಪದ್ಯದಲ್ಲಿನ ಪದದಿಂದ ತೆಗೆದುಕೊಳ್ಳಬೇಕು. ಆದುದರಿಂದ ತ್ರಿರಾವೃತ್ತೈಃ ಎಂಬ ಪದಕ್ಕೆ ವಿರೋಧವಿಲ್ಲ- ಶಾಕ್ತಾರ್ಥದಲ್ಲಿ ವಾಮಾದಿ ಶಕ್ತಿಷಟ್ಕವೂ ಕಾಮಕಲಾಕ್ಕೆ ಅಭಿನ್ನವೆಂದೂ ಭಾವಾ ರ್ಥದಲ್ಲಿ ವಾಮಾದಿ ಕಾಮಕಲಾಂತ ಸಪ್ತಕಕ್ಕೆ ಅಭಿನ್ನವಾದ ಮಂತ್ರವು ಮೂವ

ಪಸಮುಷ್ಟಿಜನ್ಯತ್ವಾನ್ಮಂತ್ರರಾಜಃ ಸ್ಪಂದಶ್ಚ ತದ್ವ್ಯಷ್ಟಿರೂಪೌ ಶಿವಶಕ್ತಿಮಯೌ. ತೇನ ಜಗನ್ಮಂತ್ರದೇವೀನಾಮಭೇದ ಇತಿ ಭಾವನಂ ಭಾವಾರ್ಥಃ. ಅತ ಏವೋಪಸಂಹೃತಂ ಯೋಗಿನೀಹೃದಯೇ—' ಚಲತ್ತಾಸಂಸ್ಥಿತಸ್ಯ ತು. ಧರ್ಮಾಧರ್ಮಸ್ಯ ವಾಚ್ಯಸ್ಯ ವಿಷಾಮೃತಮಯಸ್ಯ ಚ. ವಾಚಕಾಕ್ಷರಸಂಯುಕ್ತೇಃ ಕಥಿತಾ ವಿಶ್ವರೂಪಿಣೀ. ತೇಷಾಂ ಸಮುಷ್ಟಿರೂಪೇಣ ಪರಾಶಕ್ತಿಂ ತು ಮಾತೃಕಾಂ. ಕೂಟತ್ರಯಾತ್ಮಿಕಾಂ ದೇವೀಂ ಸಮುಷ್ಟಿವ್ಯಷ್ಟಿರೂಪಿಣೀಂ. ಆದ್ಯಾಂ ಶಕ್ತಿಂ ಭಾವಯಂತೋ ಭಾವಾರ್ಥ ಇತಿ ಮನ್ವತೇ.' ಇತಿ. ಪರಾಹಂತೇತ್ಯಾದಿಭಾವಾರ್ಥಕತ್ವತಲಾದಿವಾಚ್ಯತ್ವಾದ್ಧರ್ಮಃ ಶಕ್ತಿಃ. ನಿರ್ಧರ್ಮಕತ್ವಾದಧರ್ಮಃ ಶಿವಃ. ಸ್ಪಂದಜನನಂ ಪ್ರತಿ ಶಕ್ತಿಬಹಿರ್ಭೂತಸ್ಯ ಶಿವಸ್ಯಾಕ್ಷಮತ್ವಾದನ್ವಯವ್ಯತಿರೇಕಯೋ ರಾಚಾರ್ಯಭಗವತ್ಪಾದೈಃ ಸೌಂದರ್ಯಲಹರ್ಯಾಂ ಪ್ರಥಮಶ್ಲೋಕೇ ತಥೈವ ತದ್ವ್ಯಾಖ್ಯಾನಕರ್ತೃಭಿಶ್ಚ ಪ್ರದರ್ಶಿತತ್ವಾಚ್ಚ ಶಕ್ತೇಃ ಕಾರಣ

ತ್ವಾರು ತತ್ತ್ವರೂಪಳಾದ ಮಾತೆಗೆ ಅಭಿನ್ನವೆಂದೂ ವ್ಯತ್ಯಾಸವಿರುವುದರಿಂದ ಶಾಕ್ತಾರ್ಥ ಭಾವಾರ್ಥಗಳಿಗೆ ಪೌನರುಕ್ತ್ಯ ದೋಷದ ಶಂಕೆಗೆ ಅವಕಾಶವಿಲ್ಲ. ಅಥವಾ ಭಾವಾರ್ಥವೆಂದರೆ:—ಜಗತ್-ಮಂತ್ರ-ದೇವೀ ಎಲ್ಲವನ್ನೂ ಅಭೇದ ರೂಪದಿಂದ ಭಾವಿಸುವುದು ಭಾವಾರ್ಥವು. ಶಿವ ಶಕ್ತಿ ಸಾಮರಸ್ಯವೆಂಬ ಸಮುಷ್ಟಿಯಿಂದ ವ್ಯಷ್ಟಿ ರೂಪವಾದ ಮಂತ್ರರಾಜವೂ ಸ್ಪಂದವೂ ಹುಟ್ಟಿದ್ದಾಗಿರುವುದರಿಂದ ವ್ಯಷ್ಟಿ ಸಮುಷ್ಟಿಗಳಿಗೆ ಪರಸ್ಪರ ಅಭೇದವೇ ತತ್ತ್ವವಾದ್ದರಿಂದ ಸ್ಪಂದ, ಮಂತ್ರರಾಜ, ಇವು ಶಿವಶಕ್ತಿರೂಪವಾದುವು. ಈ ವಿಧಥ ಭಾವನೆಯೇ ಭಾವಾರ್ಥವೆಂಬ ತಾತ್ಪರ್ಯದಿಂದ ಯೋಗಿನೀ ಹೃದಯದಲ್ಲಿ ಉಪಸಂಹಾರದಲ್ಲಿ ಈ ರೀತಿಯ ವಚನಗಳು ಕಾಣುತ್ತಲಿವೆ. " ಚಲತ್ತಾಸಂಸ್ಥಿತಸ್ಯತು | ಧರ್ಮಾಧರ್ಮಸ್ಯ ವಾಚ್ಯಸ್ಯ ವಿಷಾಮೃತಮಯಸ್ಯ ಚ | ವಾಚಕಾಕ್ಷರಸಂಯುಕ್ತೇಃ ಕಥಿತಾ ವಿಶ್ವರೂಪಿಣೀ | ತೇಷಾಂ ಸಮುಷ್ಟಿರೂಪೇಣ ಪರಾಶಕ್ತಿಂತು ಮಾತೃಕಾಮ್ | ಕೂಟತ್ರಯಾತ್ಮಿಕಾಂ ದೇವೀಂ ಸಮುಷ್ಟಿವ್ಯಷ್ಟಿರೂಪಿಣೀಂ | ಆದ್ಯಾಂ ಶಕ್ತಿಂ ಭಾವಯಂತೋ ಭಾವಾರ್ಥ ಇತಿ ಮನ್ವತೇ" || ಈ ಪದ್ಯಗಳ ಸಂಕ್ಷಿಪ್ತವಾದ ಅರ್ಥವು:—ಪರಾಹಂತಾ ಮುಂತಾದ ಶಬ್ದಗಳಲ್ಲಿ ಭಾವಾರ್ಥದಲ್ಲಿ ಬಂದಿರುವ "ತ್ವ, ತಲ್," ಮುಂತಾದ ಪ್ರತ್ಯಯಗಳು ಸೇರಿದ್ದರಿಂದ ಆ ಶಬ್ದವಾಚ್ಯವಾದ ಶಕ್ತಿಯು ಧರ್ಮರೂಪವು. ನಿರ್ಧರ್ಮಕನಾದ್ದರಿಂದ ಶಿವನು ಅಧರ್ಮರೂಪನು.

ತಾವಚ್ಛೇದಕತ್ವಂ ಕಾರಣತ್ವಂ ಭವಚಕ್ರಾऽऽತ್ಮಕಸ್ಪಂದಂ ಪ್ರತಿ ಸ್ವೀಕಾರ್ಯಂ. ತೇನ ಜನನಮರಣಾದಿಕ್ಲೇಶಮಯಸಂಸಾರಜನಕತ್ವಾದ್ವಿಷಂ ಶಕ್ತಿಃ ತದ್ವಿನಿರ್ಮೋಕಾದಮೃತಂ ಶಿವಃ, ತದುಭಯಸ್ಯ ವಾಚ್ಯಸ್ಯ ವಾಚಕೇ ಯೇ ಅಕ್ಷರೇ ವಕ್ಷ್ಯಮಾಣರೀತ್ಯಾ ಹಕಾರಾಕಾರರೂಪೇ, ತಾಭ್ಯಾಂ ವ್ಯಸ್ತಾಭ್ಯಾಂ ತದುಭಯಸಮಾವೇಶರೂಪಕಾಮಕಲಾऽಕ್ಷರೇಣಚಾಸ್ಯ ಚಲತ್ತಾಸಂಸ್ಥಿತಸ್ಯ ನಶ್ವರತಾಯುಕ್ತಸ್ಯ ಜಗತಃ, ಪ್ರಕೃತತ್ವಾನ್ಮಂತ್ರರಾಜಸ್ಯ ಚ ಸಮ್ಯಕ್ಪರಿಣಾಮಪರಿಣಾಮಿಭಾವೇನ ಯುಕ್ತೇಃ ಸಂಬಂಧಾದೇಷಾಂ ವಿದ್ಯಾ ವಿಶ್ವರೂಪಿಣೀ ಕಥಿತಾ. ಏಕಾಕಾರೇಣೋತ್ಪನ್ನಯೋರಭೇದಾದಿತಿ ಶಿವಶಕ್ತಿಸಾಮರಸ್ಯರೂಪಸ್ಯ ಪರಾಶಕ್ತಿಜಗದಂಬಾದಿಪದವಾಚ್ಯಸ್ಯ ಕಾರಣಸ್ಯ ಕಾರ್ಯಾಭ್ಯಾಂ ವಿಶ್ವವಿದ್ಯಾಭ್ಯಾಮಭೇದಂ ಸೂಚಯಂಸ್ತ್ರಯಾಣಾಮಭೇದಮುಪಸಂಹರತಿ ತೇಷಾಮಿತ್ಯಾದಿನೇತಿ ತದರ್ಥಃ. ಅಸ್ಮಿನ್ಪಕ್ಷೇ ಯೋಗಿನ್ಯಾದಿಭಿರ್ಭಾವಿತ ಇತಿ ಶ್ಲೇಷಪೂ

ಸೌಂದರ್ಯಲಹರೀ ಪ್ರಥಮ ಶ್ಲೋಕದಲ್ಲಿಯೂ ತದ್ವ್ಯಾಖ್ಯಾನ ಗ್ರಂಥದಲ್ಲಿಯೂ ಶಕ್ತಿ ಬಹಿರ್ಭೂತನಾದ ಶಿವನಿಗೆ ಕಾರಣತ್ವವು ಸಂಭವಿಸಲಾರದಾದ್ದರಿಂದ ಶಕ್ತಿ ಸಹಿತನಾದ ಶಿವನಿಂದಲೇ ಜಗದುತ್ಪತ್ತಿಯು ಅನ್ವಯ ವ್ಯತಿರೇಕ ಪ್ರಮಾಣ ಸಿದ್ಧವೆಂದೂ ಶಕ್ತಿಯು ಸಂಸಾರಚಕ್ರವೆಂಬ ಸ್ಪಂದವನ್ನು ಕುರಿತು ಕಾರಣತಾನಿಯಾಮಕತ್ವರೂಪವಾದ ಕಾರಣತ್ವವನ್ನೇ ಹೊಂದುವುದೆಂದೂ ಹೇಳಲ್ಪಟ್ಟಿದೆ. ಅದರಿಂದ ಜನನ ಮರಣಗಳ ಕ್ಲೇಶ ಪೂರ್ಣವಾದ ಸಂಸಾರ ಕಾರಣವಾದ ಶಕ್ತಿಯು ವಿಷಸ್ವರೂಪವು. ಶಿವನು ಅಮೃತಸ್ವರೂಪನು. ಹೀಗೆ ಧರ್ಮ ಅಧರ್ಮ ವಿಷ ಅಮೃತ ರೂಪರಾದ ಶಕ್ತಿ ಶಿವರೆಂಬ ವಾಚ್ಯಾರ್ಥಕ್ಕೆ ವಾಚಕಗಳಾದ ಹ ಅಕಾರ ಮತ್ತು ಈ ಕಾರಗಳೆಂಬ ಅಕ್ಷರಗಳು ನಶ್ವರವಾದ ಮಂತ್ರ ರಾಜ ಮತ್ತು ಜಗತ್ತೆಂಬ ಪರಿಣಾಮದ ಕೂಡ ಸಂಬಂಧಿಸಿರುವುದರಿಂದ ಈ ವಿದ್ಯೆಯು ವಿಶ್ವ ರೂಪಿಣಿಯಾಗಿರುವುದು. ಒಂದೇ ಆಕಾರವುಳ್ಳ ಕಾರಣದಿಂದ ಹುಟ್ಟಿದ ಎರಡು ಕಾರ್ಯಗಳೂ ಅಭಿನ್ನವಾದುವುಗಳು. ಆದ್ದರಿಂದ ಜಗದಂಬಾ, ಪರಾಶಕ್ತಿ, ಅಥವಾ ಶಿವಶಕ್ತಿ ಸಾಮರಸ್ಯ ಇವುಗಳಿಂದ ಹುಟ್ಟಿದ ವಿಶ್ವ, ವಿದ್ಯೆಮತ್ತು ಸಮಷ್ಟಿ ರೂಪದಿಂದ ಕಾರಣವಾದ ಶಿವಶಕ್ತಿಸಾಮರಸ್ಯ ಪರಾಶಕ್ತಿ ಅಥವಾ ಮಾತೃಕೆ ಇವುಗಳನ್ನು ಕೂಟತ್ರಯಾತ್ಮಕವೂ ಸಮಷ್ಟಿ ವ್ಯಷ್ಟಿರೂಪವೂ ಆದುದೆಂದು ಭಾವಿಸುವಿಕೆಯು ಭಾವಾರ್ಥವು. ಈ ಪಕ್ಷದಲ್ಲಿ ಯೋಗಿನ್ಯಾದಿಗಳಿಂದ ಭಾವಿಸಲ್ಪಟ್ಟದ್ದು ಎಂಬ

ರಣೇನೋಪಕ್ರಮಶ್ಲೋಕಾರ್ಥೋ ವರ್ಣನೀಯಃ. ಭಾವಾರ್ಥಸ್ವರೂಪಂ ತು ಶಿವಶಕ್ತಿಸಮಾಯೋಗಾದಿಜನ್ಯತ್ವಾದಿಕಮಾತ್ರಂ, ನ ಪುನರ್ಯೋಗಿನ್ಯಾದೇರ್ಜನಕಕೋಟೌ ನಿವೇಶಃ. ಅಕ್ಷರಾರ್ಥತ್ವಂ ಚ ತಾದೃಶಾಕ್ಷರದ್ವಯಜನ್ಯತ್ವಾದೇವೇತಿ ದಿಕ್. ಅತ್ರೇದಮನುಸಂಧೇಯಂ—ಇಯಂ ಸೃಷ್ಟಿಃ ಪರಬ್ರಹ್ಮ ಪರಿಣಾಮ ಇತಿ ಪೂರ್ವಮುಕ್ತಂ, ಸಾ ಚ ಸೃಷ್ಟಿರ್ದ್ವೇಧಾಽರ್ಥಮಯೀ ಶಬ್ದಮಯೀ ಚೇತಿ. ಚಕ್ರಮಯೀ ದೇಹ ಮಯೀ ಚೇತಿ ಸೃಷ್ಟಿದ್ವಯಂ ತು ಬಾಲಕ್ರೀಡನಕಾರ್ಥೇ ಸ್ಥೂಲಗೃಹಸಮಾನಾಕಾರತ್ವೇನ ಸೂಕ್ಷ್ಮಗೃಹನಿರ್ಮಾಣತುಲ್ಯಮರ್ಥಸೃಷ್ಟಾವೇವಾಂತರ್ಗತಂ. ನ ಪುನರತ್ಯಂತಂ ಭಿದ್ಯತೇ. ಸಾ ಚ ದ್ವಿವಿಧಾಽಪಿ ಸೃಷ್ಟಿಃ ಸಮಕಾಲೀನೋತ್ಪತ್ತಿಕಾ, ಸಮಕಾಲೀನಾಭಿವೃದ್ಧಿಶಾಲಿನೀ ಚ, ಯಥಾ ಬೀಜಾದಂಕುರತಚ್ಛಾಯೇ. ತತ್ರ ಚ ಛಾಯಾದರ್ಶನೇನ ವೃಕ್ಷಾನುಮಿತಿರನುಭವ ಸಿದ್ಧಾ. ಸಾ ಚ ಛಾಯಾಯಾಂ ವೃಕ್ಷಸಮಾನಾಕಾರತ್ವಂ ವೃಕ್ಷಾವಿನಾ

ಬೀಜಾಕ್ಷರವಾದ ಸಕಾರಗಳಿಂದ ರಸಗಳು ಲಕ್ಷಣಾ ವೃತ್ತಿಯಿಂದ ಬೋಧ್ಯವಾಗಿವೆಯೆಂಬ ತಾತ್ಪರ್ಯವನ್ನು ಸೂಚಿಸುವುದು. ಆಕಾಶವಾಚಕವಾದ ಹಕಾರವು ಆಕಾಶ ಗುಣವನ್ನು ಲಕ್ಷಣಾ ವೃತ್ತಿಯಿಂದ ಬೋಧಿಸುತ್ತದೆ ಎಂದು ಹಿಂದೆ ಹೇಳಿದ ದೃಷ್ಟಾಂತವು ಇದಕ್ಕೆ ಸಮಾನವಾಗಿದೆ. ಆದರೆ ಹಕಾರದ ವಾಚ್ಯಾರ್ಥ ಲಕ್ಷ್ಯಾರ್ಥಗಳಿಗೆ ಗುಣಗುಣಿಭಾವವೆಂಬ ಸಂಬಂಧವು ಇರುತ್ತದೆ. ವಾಯ್ವಾದಿಗಳಲ್ಲಿರುವ ಶಬ್ದದಲ್ಲಿಯೂ ಸ್ವವಾಚ್ಯಸಮವೇತವ್ಯಾಪ್ಯತ್ವ (ತನ್ನ ವಾಚ್ಯಾರ್ಥ ಆಕಾಶ, ಅಲ್ಲಿರುವ ಶಬ್ದಗುಣಕ್ಕೆ ವ್ಯಾಪ್ಯವಾಗಿ ವಾಯ್ವಾದಿ ಶಬ್ದವಿದೆ ಎಂದು ಅರ್ಥ) ಎಂಬ ಸಂಬಂಧವು ಇದೆ. "ಪ್ರಧಾನಂತೇಜಸೋರೂಪಂ ತದ್ಬೀಜೇನಹಿ ಜನ್ಯತೇ" ಎಂಬಲ್ಲಿ ತೇಜಸ್ಸಿನಲ್ಲಿರುವ ರೂಪವು ವ್ಯಾಪಕವಾದ್ದರಿಂದ ಪ್ರಧಾನವೆಂದು ಹೇಳಿ ಇತರ ಭೂತಗಳ ರೂಪಗಳು ವ್ಯಾಪ್ಯವೆಂದು ತೋರಿಸಿದ್ದರಿಂದ ಅದರಂತೆ ಆಕಾಶಗುಣ, ವಾಯ್ವಾದಿಗುಣ ಇವುಗಳಿಗೆ ವ್ಯಾಪ್ಯವ್ಯಾಪಕ ಭಾವ ಸಂಬಂಧದ ಮೂಲಕವಾಗಿ ಹಕಾರಕ್ಕೂ ಇದರ ಲಕ್ಷ್ಯಾರ್ಥಕ್ಕೂ ಸಂಬಂಧವಿದೆ. ಚಂದ್ರಬೀಜವರ್ಣವಾದ ಸಕಾರಕ್ಕೆ ಪರಂಪರಾಸಂಬಂಧವು ಚಂದ್ರಗತವಾದ ಅಮೃತದಲ್ಲಿ ಬಂದರೂ ಜಲದಲ್ಲಿರುವ ರಸದಲ್ಲಿ ಸಂಬಂಧವಿಲ್ಲದ್ದರಿಂದ ರಸವನ್ನು ಲಕ್ಷಣಾ ವೃತ್ತಿಯಿಂದ ಬೋಧಿಸಲಾರದು ಎಂಬ ಶಂಕೆಯು ಬರುವುದು. ಅಮೃತಕ್ಕೂ ರಸಕ್ಕೂ ಯಾವದಾದರೊಂದು ಸಂಬಂಧವು ಲೋಕಪ್ರಸಿದ್ಧವಾದುದು ಸಂಭವಿಸು

ಪಕ್ಷೇ ರಸಾಮೃತಯೋರಭೇದಸ್ಯ ಲೋಕಸಿದ್ಧತ್ವಾದ್ರಸಾಭಿನ್ನಾಮೃತ ತವತಿ ಶಕ್ತಸ್ಯ ಸಕಾರಸ್ಯ ರಸೋಽಪಿ ಶಕ್ಯತಾವಚ್ಛೇದಕ ಇತಿ ಭಾವಃ. ಹಾದಿವಿದ್ಯಾಪಕ್ಷಪಾತಿನಸ್ತು 'ಚಂದ್ರಬೀಜೈಃ' ಇತಿ ಬಹುವಚನಸ್ಯ ಸ್ವಾನುಗುಣತ್ವಂ ಮತ್ವಾ ತುಷ್ಯಂತಸ್ತ್ರಿಭಿಃ ಸಕಾರೈ ರಸಾ ಲಕ್ಷ್ಯಂತ ಇತಿ ವ್ಯಾಖ್ಯಾಯ, ನನು ರಸಸ್ಯ ದ್ವೈವಿಧ್ಯಾತ್ತೃತೀಯಸಕಾರಃ ಕಿಮರ್ಥ ಇತ್ಯಾಶಂಕ್ಯ ಅಮೃತಂ ಗತೋಽಪ್ಯೇಕೋ ರಸೋಽಸ್ತೀತಿ ತಲ್ಲಕ್ಷಕತ್ವೇನೋದ್ಗ್ರಂಥಮೇವ ಸಮಾಧಾಯ; ನನ್ವೇವಂ ಸತಿ ತೃತೀಯರಸಾಧಾರತ್ವೇನ ಭೂಜಲಭೇದಾತ್ ಷಷ್ಠಮಹಾಭೂತಸ್ಯಾಪತ್ತಿರಿತ್ಯಾಶಂಕಾಯಾಂ 'ಸಂಬಂಧೋ ವಿದಿತಃ' ಇತಿ ಗ್ರಂಥಮವತಾರ್ಯ; ಜಲಾಮೃತಯೋಃ ಸಂಬಂಧೋ ಹಿ ಲೋಕಪ್ರಸಿದ್ಧಃ; ತಸ್ಯ ಜಲನಿಧಾವೇವೋತ್ಪನ್ನತ್ವಾತ್, ಅತೋ ಜಲ ಏವಾಂತರ್ಭಾವ ಇತ್ಯಾಶಯಪರತ್ವೇನ ವ್ಯಾಚಕ್ಷತೇ. ತೇಷಾಂ ರಸಸ್ಯೇತಿ ಪದಸ್ಯ ಜಲನಿಧೌ ಲಕ್ಷ

ವಲ್ಲಿ ಮೇಲ್ಕಂಡ ಶಂಕೆಯು ಸುಲಭವಾಗಿ ಪರಿಹಾರ ಹೊಂದುವುದು. "ಸಂಬಂಧೋವಿದಿತೋಲೋಕೇ ರಸಸ್ಯಾಪ್ಯಮೃತಸ್ಯಚ" ಎಂಬಂತೆ ಅಮೃತದಲ್ಲಿ ರಸವು ಸೇರಿಕೊಂಡಿರುವುದರಿಂದ ರಸ+ಅಮೃತಗಳಿಗೆ ಆಧಾರಾಧೇಯಭಾವ ಅಥವಾ ಅಭೇದ ಸಂಬಂಧವಿರುವುದರಿಂದ ಲಕ್ಷಣಾವೃತ್ತಿಯು ಬರುವುದರಲ್ಲಿ ಯಾವ ವಾದಕ್ಕೂ ಅವಕಾಶವಿಲ್ಲ. ಶಕ್ಯತಾವಚ್ಛೇದಕ ಧರ್ಮದಲ್ಲಿ ಶಕ್ತಿಯನ್ನೇ ಒಪ್ಪುವವರ ಸಿದ್ಧಾಂತದಲ್ಲಿ ರಸ+ಅಮೃತಗಳಿಗೆ ಅಭೇದವು ಲೋಕಪ್ರಸಿದ್ಧವಾಗಿರುವುದರಿಂದ ಅಮೃತಾಧಾರ ವಸ್ತುವಿನಲ್ಲಿ ಶಕ್ತಿಯುಳ್ಳ ವರ್ಣವು ರಸವನ್ನೂ ಶಕ್ತಿಯಿಂದಲೇ ಬೋಧಿಸಬಲ್ಲದು. "ಚಂದ್ರಬೀಜೈಃ" ಎಂಬ ಪದದ ಬಹುವಚನವನ್ನು ಕಂಡು ಹಾದಿ ವಿದ್ಯಾ ಪಕ್ಷಪಾತಿಗಳು ತಮ್ಮ ಸಿದ್ಧಾಂತಾನುಸಾರವಾಗಿ ವ್ಯಾಖ್ಯಾನವನ್ನು ಬೆಳಿಯಿಸುತ್ತಾರೆ. ಜಲ-ಪೃಥಿವೀಗತವಾದ ಎರಡು ರಸಗಳಂತೆ ಅಮೃತದಲ್ಲಿ ಇರುವ ರಸವನ್ನೂ ಸೇರಿಸಿ ಮೂರು ರಸಗಳನ್ನು ಮಂತ್ರದಲ್ಲಿರುವ ಮೂರು ಸಕಾರಗಳು ಬೋಧಿಸುತ್ತವೆ. "ಸಂಬಂಧೋವಿದಿತಃ" ಎಂಬ ಗ್ರಂಥದಲ್ಲಿ ಪ್ರತಿಪಾದಿಸಿದಂತೆ ಜಲ–ಅಮೃತಗಳಿಗೆ ಭೇದವಿಲ್ಲದಿರುವುದರಿಂದ ತೃತೀಯರಸಕ್ಕೆ ಆಧಾರವಾದ ಮಹಾಭೂತವು ಆರನೆಯದಾಗಿ ಸಿದ್ಧಿಸಲು ಅವಕಾಶವಿಲ್ಲ. ಅಮೃತವು ಸಮುದ್ರಾತ್ಮಕ ಜಲದಲ್ಲಿ ಹುಟ್ಟುವುದರಿಂದ ಜಲವೂ ಅಮೃತವೂ ಅಭಿನ್ನವೆಂಬುದು ಸಮ್ಮತವು. ಈ ವ್ಯಾಖ್ಯಾನದಲ್ಲಿ ಅನೇಕ ದೋಷಗಳು ಕಾಣುತ್ತವೆ.

ಣಾ, ಸ್ಥೂಲಸೂಕ್ಷ್ಮಪದಾಭ್ಯಾಂ ಪ್ರತ್ಯೇಕೈಕತ್ವವತ್ತ್ವೇನ ಲಬ್ಧದ್ವಿತ್ವ ವಿರೋಧಶ್ಚ, ಜಲೇಽಂತರ್ಭಾವೇ ಸಿದ್ಧೇ ಪುನರ್ವೈಯರ್ಥ್ಯತಾದವಸ್ಥ್ಯಂ ಚ. ಪ್ರತ್ಯುತ ಜಲಾಮೃತಯೋರಭೇದಾತ್ಪ್ರಾತಿಸ್ವಿಕಮಮೃತವಾಚಕಃ ಸಕಾರೋ ನಾಪೇಕ್ಷಿತ ಇತ್ಯೇವಾರ್ಥಃ ಸಂಭವತೀತಿ. ಏವಂ ಲಕಾರಸ್ಯ ಗಂಧಬೋಧಕತ್ವಂ "ವಸುಂಧರಾಗತೋ ಗಂಧಸ್ತಲ್ಲಿಪಿರ್ಗಂಧವಾಚಿಕಾ" ಇತಿ ವಚನಾತ್ ॥ ೭೫ ॥

"ರಸಸ್ಯಾಪ್ಯಮೃತಸ್ಯ" ಇಲ್ಲಿ ರಸ ಎಂಬ ಪದಕ್ಕೆ ಸಮುದ್ರ ಎಂಬ ಲಕ್ಷ್ಯಾರ್ಥವನ್ನಿಟ್ಟುಕೊಳ್ಳಬೇಕಾಗುವುದು. ಹಾಗೂ ಸ್ಥೂಲ ಸೂಕ್ಷ್ಮ ಪದಗಳ ಏಕವಚನಗಳಿಂದ ಲಭಿಸುವ ದ್ವಿತ್ವ ಸಂಖ್ಯೆಗೆ ವಿರೋಧವು ಬರುವುದು. ಮತ್ತು ಜಲವೂ ಅಮೃತವೂ ಒಂದಾದ ಮೇಲೆ ಪ್ರತ್ಯೇಕವಾಗಿ ಅಮೃತರಸವನ್ನು ಬೋಧಿಸುವ ಸಕಾರವು ಹೆಚ್ಚೇ ಆಗುವುದು. ಈ ದೋಷಗಳನ್ನು ವಾರಣಮಾಡಲು ಅಶಕ್ಯವಾಗುವುದು. "ವಸುಂಧರಾಗತೋ ಗಂಧಸ್ತಲ್ಲಿಪಿರ್ಗಂಧವಾಚಿಕಾ" ಎಂಬ ಪ್ರಮಾಣದಿಂದ ಪೃಥಿವೀ ಬೀಜಾಕ್ಷರವಾದ ಲಕಾರವು ಗಂಧವನ್ನು ಬೋಧಿಸುತ್ತದೆ || ೭೫ ||

೭೬

ಭುವನತ್ರಯಸಂಬಂಧಾದಾಸೀತ್ತ್ರೇಧಾ ಲಕಾರೋಽಪಿ ।
ಯೇ ಯೇ ಯದ್ವ್ಯಞ್ಜನಕಾಸ್ತೇಷಾಂ ತೇಷಾಂ ತ ಏವಾರ್ಥಾಃ ॥ ೭೬ ॥

ನನ್ವೇಕೇನೈವ ಲಕಾರೇಣೈಕವಿಧ ಗಂಧಬೋಧೋಪಪತ್ತೇರಿತರ ದ್ವಯವೈಯರ್ಥ್ಯಂ ; ಅತ ಆಹ—ಭುವನತ್ರಯೇಣ ಸಹ ವಾಚ್ಯವಾಚಕಭಾವ ಸಂಬಂಧಾಲ್ಲಕಾರಸ್ಯ ತ್ರೈವಿಧ್ಯಂ ಜನ್ಯಜನಕಭಾವ ಸಂಬಂಧಾದ್ವಾ, ' ಭುವನತ್ರಯಸಂಬಂಧಾತ್ತ್ರಿಧಾತ್ವಂ ತು ಮಹೇಶ್ವರಿ ' ಇತಿ ವಚನಾತ್. ಸ್ಪಷ್ಟಮನ್ಯತ್ ॥ ೭೬ ॥

ಪೃಥಿವಿಯು ಒಂದಾದರೂ ಅಲ್ಲಿ ಮೂರು ಲೋಕಗಳಿರುವುದರಿಂದ ಅವುಗಳಲ್ಲಿ ಪ್ರತ್ಯೇಕವಾಗಿ ಗಂಧಗಳೂ ಮೂರಾಗಿರುವುದರಿಂದ ಗಂಧಗಳಿಂದ ಕೂಡಿದ ಮೂರು ಲೋಕಗಳ ವಾಚ್ಯವಾಚಕ ಭಾವ ಸಂಬಂಧ ಅಥವಾ ಜನ್ಯ ಜನಕ ಭಾವ ಸಂಬಂಧ ಇವುಗಳನ್ನನುಸರಿಸಿ ಮಂತ್ರದಲ್ಲಿ ಮೂರು ಸಕಾರಗಳು ಇರುತ್ತವೆ. " ಭುವನತ್ರಯಸಂಬಂಧಾತ್ತ್ರಿಧಾತ್ವಂ ತು ಮಹೇಶ್ವರಿ " ಎಂಬಲ್ಲಿಯೂ ಇದೇ ಅರ್ಥವನ್ನೇ ಹೇಳಿದೆ. ಈ ರೀತಿಯಾಗಿ ಯಾವ ವಸ್ತುಗಳು ಯಾವ ಶಬ್ದಗಳಿಂದ ಹುಟ್ಟಿವೆಯೋ ಆ ಶಬ್ದಗಳಿಗೆ ಆಯಾಯ ಕಾರ್ಯಭೂತವಾದ ವಸ್ತುಗಳೇ ಅರ್ಥವೆಂದು ತಿಳಿಯಬೇಕು || ೭೬ ||

೭೭

ಕಕಾರತ್ರಯವಾಚ್ಯಾಸ್ತು ಸಕಲಾಃ ಪ್ರಲಯಾಕಲಾಃ ।
ವಿಜ್ಞಾನಕೇವಲಾಶ್ಚೇತಿ ತ್ರಿಪ್ರಕಾರಾ ಉಪಾಸಕಾಃ ॥ ೭೭ ॥

ಇದಾನೀಂ ವಾಯುಜನಕಾನಾಮಪಿ ಕಕಾರಾಣಾಮರ್ಥಾಂತರಮಸ್ತೀತಿ ಪೂರ್ವೋಕ್ತಸ್ಯ 'ಯೇ ಯೇ ಯದ್ಯಜ್ಜನಕಾಃ' ಇತ್ಯಸ್ಯಾತ್ಸರ್ಗಿಕಸ್ಯ ನಿಯಮಸ್ಯಾಪವಾದಮಾಹ—ಪ್ರಮಾತಾರಃ ಸಾಧಕಾಃ ಪಶವಃ ಇತ್ಯಾದಿಪದಾಭಿಧೇಯಾ ಉಪಾಸಕಾಸ್ತ್ರಿವಿಧಾಃ—ಅಧಮಾ ಮಧ್ಯಮಾ ಉತ್ತಮಾಶ್ಚೇತಿ. ತ ಏವಾಶುದ್ಧಮಿಶ್ರ ಶುದ್ಧಪದೈಃ ಸಕಲಾದಿಪದೈಶ್ಚ ಕ್ರಮೇಣ ವ್ಯವಹ್ರಿಯಂತೇ. ತತ್ರ ಭೇದೈಕದೃಷ್ಟಯಃ ಶಿವಾಹಂಭಾವಭಾವನಾಹೀನಾಃ ಕರ್ಮೈಕರತಾಃ ಪ್ರಥಮಾಃ. ಸುಪಕ್ವಮಲಕ

ವಾಯು ಜನಕವಾದ ಕವರ್ಣಗಳಿಗೆ ಅರ್ಥಾಂತರವನ್ನು ತೋರಿಸಿ ಆಯಾಯ ಕಾರ್ಯಗಳು ಕಾರಣ ಶಬ್ದದಿಂದ ಬೋಧ್ಯಗಳಾಗುವುವೆಂಬ "ಯೇಯೇಯದ್ಯಜ್ಜನಕಾಃ" ಎಂಬ ಪ್ರಾಚೀನೋಕ್ತಿಗೆ ಅಪವಾದವನ್ನು ಇಲ್ಲಿ ತೋರಿಸುತ್ತದೆ. ಉಪಾಸಕರು ಪ್ರಮಾತಾ, ಸಾಧಕ, ಪಶು ಮುಂತಾದ ಹೆಸರುಗಳಿಂದ ಕರೆಯಲ್ಪಡುವರು. ಅವರು ಅಧಮ, ಮಧ್ಯಮ, ಉತ್ತಮರೆಂದು ಮೂರು ವಿಧರಾಗಿದ್ದಾರೆ. ಕ್ರಮವಾಗಿ ಇವರನ್ನು ಅಶುದ್ಧ-ಮಿಶ್ರ-ಶುದ್ಧರೆಂದೂ, ಸಕಲ-ಪ್ರಲಯಾಕಲ-ವಿಜ್ಞಾನಕೇವಲರೆಂದೂ ಕರೆಯುವುದುಂಟು. ಭೇದ ದೃಷ್ಟಿಯಿಂದ ಕೂಡಿ ಶಿವಾಹಂಭಾವ ಭಾವನೆಯಿಲ್ಲದೇ ಕರ್ಮ ತತ್ಪರರು ಮೊದಲನೆಯವರು. ಮಲ-ಕರ್ಮಗಳನ್ನು ಪರಿಪಾಕಮಾಡಿ "ಚಿತಿಶ್ಚೈತ್ಯಂಚ ಚೈತನ್ಯಂ ಚೇತನಂ ದ್ವಯಕರ್ಮಜ । ಜೀವಃ ಕಲಾಶರೀರಂಚ ಸೂಕ್ಷ್ಮಂ ಪುರ್ಯಷ್ಟಕಂಭವೇತ್" ಎಂಬ ಶ್ಲೋಕದಲ್ಲಿ ಹೇಳಿದ ಸೂಕ್ಷ್ಮ ಪುರ್ಯಷ್ಟಕ ಸಂಬಂಧವುಳ್ಳವರಾಗಿ ಕರ್ಮಮಾರ್ಗ, ಜ್ಞಾನಮಾರ್ಗ ಎರಡರಲ್ಲಿಯೂ ಸಾಧಾರಣವಾಗಿರುವವರು ಎರಡನೆಯವರು. ಭೇದ ದೃಷ್ಟಿಯನ್ನು ತೊಲಗಿಸಿ ಶಿವೈಕ್ಯ ದೃಷ್ಟಿಯಿಂದ ಪೂರ್ಣಜ್ಞಾನಿಗಳು ಮೂರನೆಯವರು. ಇವರ ಲಕ್ಷಣವನ್ನು ಸ್ವಚ್ಛಂದ ಸಂಗ್ರಹದಲ್ಲಿ ವಿವರಿಸಿದೆ. ಈ ಉಪಾಸಕರು ಮೂರು ಕಕಾರಗಳಿಂದ ಬೋಧ್ಯರಾಗುವರು. ಈ ವಿಷಯವನ್ನು "ಅಶುದ್ಧ ಶುದ್ಧ ಮಿಶ್ರಾಣಾಂ

ಮರ್ಾಣಃ 'ಚಿತಿಶ್ಚೈತ್ಯಂ ಚ ಚೈತನ್ಯಂ ಚೇತನಂ ದ್ವಯಕರ್ಮ ಚ. ಜೀವಃ ಕಲಾ ಶರೀರಂ ಚ ಸೂಕ್ಷ್ಮಂ ಪುರ್ಯಷ್ಟಕಂ ಭವೇತ್.' ಇತಿ ಶ್ಲೋಕೋಕ್ತಸೂಕ್ಷ್ಮಪುರ್ಯಷ್ಟಕಸಂಬಂಧಶಾಲಿನಃ ಕರ್ಮಜ್ಞಾನಮಾರ್ಗಯೋಃ ಸಾಧಾರಣಾ ದ್ವಿತೀಯಾಃ. ನಿರಸ್ತಭೇದಾಃ ಸರ್ವತ್ರ ಶಿವೈಕದೃಷ್ಟಯಃ ಪೂರ್ಣಜ್ಞಾನಿನಸ್ತೃತೀಯಾಃ. ಏತೇ ಚ ಸ್ವಚ್ಛಂದಸಂಗ್ರಹೇ ವಿಸ್ತರೇಣ ಪ್ರಪಂಚಿತಾಃ. ತೇ ತ್ರಯಾಣಾಂ ಕಕಾರಾಣಾಂವಾಚ್ಯಾಃ. ತದುಕ್ತಂ—'ಅಶುದ್ಧಶುದ್ಧಮಿಶ್ರಾಣಾಂ ಪ್ರಮಾತೄಣಾಂ ಪರಂವಪುಃ. ಕ್ರೋಧೀಶತ್ರಿತಯೇನಾಸ್ಯ ವಿದ್ಯಾಸ್ಥೇನ ಪ್ರಕಾಶ್ಯತೇ.' ಇತಿ. ಕ್ರೋಧೀಶಃ ಕಕಾರಃ. ನ ಚಾಕಾರಾಣಾಂ ಪಾರ್ಥಕ್ಯಸ್ಯಾಗ್ರೇ ವಕ್ಷ್ಯಮಾಣತ್ವೇನೈಕೈಕಹಲಾತ್ಮಕಾ ಏವ ಹಕಾರಕಕಾರಾದಯೋ ವಾಚಕಾ ವಕ್ತವ್ಯಾಃ, ತಥಾ ಚ ಕಕಾರೇ ಜಶ್ಭಾವೇನ ಗತ್ವಾಪತ್ತಿರಿತಿ ವಾಚ್ಯಂ; ಏಕಹಲ ಏವ ಪದತ್ವೇನ ಪದಾಂತತ್ವಾಭಾವಾತ್, ವ್ಯಪದೇಶಿವದ್ಭಾವಸ್ಯ 'ಟಕಿತೌ' 'ಸುಪ್ತಿತೌ' ಇತ್ಯಾದಿ ಜ್ಞಾಪಕೇನಾನಿತ್ಯತ್ವಾತ್ ॥ ೭೭ ॥

ಪ್ರಮಾತೄಣಾಂ ಪರಂವಪುಃ । ಕ್ರೋಧೀಶತ್ರಿತಯೇನಾಸ್ಯ ವಿದ್ಯಾಸ್ಥೇನ ಪ್ರಕಾಶ್ಯತೇ ॥" ಎಂಬ ವಚನದಲ್ಲಿ ಕಾಣಬಹುದು. ಕ್ರೋಧೀಶ = ಕಕಾರವೆಂದು ಅರ್ಥವು. ಇಲ್ಲಿ ಮೇಲೆ ಸೇರಿದ ಸ್ವರಗಳಿಂದ ವ್ಯಂಜನಗಳು ಬೇರೆಯಾಗಿದ್ದುಕೊಂಡು ಅರ್ಥ ವಾಚಕಗಳಾದ್ದರಿಂದ ಕವರ್ಣದಲ್ಲಿ ಗಕಾರಾದೇಶವೆಂಬ ಜಶ್ಭಾವವು ಬರಬೇಕಾಗುವುದು. ಆದರೆ "ಟಕಿತೌ–ಸುಪ್ತಿತೌ" ಎಂದು ಸೂತ್ರಕಾರ ಪ್ರಯೋಗದಿಂದ ಒಂದೇ ಅವಯವಕ್ಕೆ ಆದಿ-ಅಂತಗಳೆಂಬ ವ್ಯಪ ದೇಶವು ಅನಿತ್ಯವೆಂದು ತೋರುವುದರಿಂದ ಕ್ವರ್ಣವು ಒಂದೇ ಪದವಾಗಿರುವುದರಿಂದ ಪದದ ಅಂತ್ಯದಲ್ಲಿಲ್ಲದ ಕಾರಣ ಗ್ ಆದೇಶವು ಬರುವುದಿಲ್ಲ ॥ ೭೭ ॥

೭೮

ಆಕಾರೈರ್ದಶಸಂಖ್ಯಾಕೈರುಚ್ಯಂತೇ ಜೀವರಾಶಯಃ |
ವಿದ್ಯಾಯಾಃ ಪ್ರಾಣಭೂತಃ ಸಂಸ್ತದ್ವಾಚ್ಯೇಕಾದಶಃ ಸ್ವರಃ || ೭೮ ||

ಪಂಚದಶ್ಯಾಂ ದ್ವಿತೀಯತೃತೀಯವರ್ಣೌ ಹೃಲ್ಲೇಖಾತ್ರಯಂ ಚ ಮುಕ್ತ್ವಾಽವಶಿಷ್ಟೇಷು ದಶಸ್ವಕ್ಷರೇಷ್ವಕಾರಾ ದಶ. ತೇಷಾಂ ಜೀವರಾಶಯ ಏವ ವಾಚ್ಯಾಃ. ಏಕೇನಾಪ್ಯಭಿಧಾನಸಂಭವೇ ದಶಭಿರಭಿಧಾನಂ ಜೀವಾನಾ ಮಾನಂತ್ಯದ್ಯೋತನಾಯ. ತೃತೀಯಕೂಟಾದ್ಯಾಕಾರೇ ತು ಧ್ವನಿಸ್ವರೂಪಸ್ಯೈವ ಭಾವಾರ್ಥಪ್ರಕರಣೇ ಮೂಲಬೀಜಾಂಶ ರೂಪತ್ವ ಮುಕ್ತಮಿತಿ ನ ವಿರೋಧಃ. ಏಕಾದಶಃ ಸ್ವರ ಏಕಾರಃ. ಸ ಚ ವಿದ್ಯಾ ಲಕ್ಷಣಸ್ಯ ಮೂಲಬೀಜೋತ್ಥ ವೃಕ್ಷಸ್ಯಾಂತರಃ ಪ್ರಾಣಃ ಸನ್ನಪಿ ಸ್ವಯಂ

ಪಂಚದಶಿಯಲ್ಲಿ ಮೂರು ನಾಲ್ಕನೆಯ ವರ್ಣಗಳು, ಹೃಲ್ಲೇಖಾತ್ರಯ ಎಂದರೆ ಏ, ಈ, ಹ್ರೀಂ ವರ್ಣಗಳು ಮೂರು. ಇವುಗಳನ್ನು ಬಿಟ್ಟು ಹತ್ತು ಅಕಾರಗಳೆಂಬ ಸ್ವರಗಳಿವೆ. ಅವು ಜೀವರಾಶಿಗಳನ್ನು ಬೋಧಿಸುತ್ತವೆ. ಒಂದೇ ಅಕಾರವು ಜೀವವನ್ನು ಬೋಧಿಸಲು ಶಕ್ತವಾಗಿದ್ದರೂ ವಾಚ್ಯಭೂತ ಜೀವರಲ್ಲಿ ನಾನಾವಿಧತೆಯನ್ನು ತೋರಿಸಲು ಅನೇಕ ಅಕಾರಗಳನ್ನು ವಾಚಕಗಳಾಗಿ ಹೇಳಿದೆ. ತೃತೀಯ ಕೂಟದ ಆದಿಯಾದ ಅಕಾರದಲ್ಲಿರುವ ಧ್ವನಿಯ ಅಂಶಕ್ಕೆ ಭಾವಾರ್ಥ ಪ್ರಕರಣದಲ್ಲಿ ಮೂಲ ಬೀಜ ಸ್ವರೂಪ ವರ್ಣವು ಅರ್ಥವೆಂದು ಹೇಳಿದ್ದರಿಂದ ವಿರೋಧವಿಲ್ಲ. ಹನ್ನೊಂದನೆಯ ಸ್ವರವು ಏಕಾರವು, ಇದು ವಿದ್ಯೆಯೆಂಬ ಮೂಲ ಬೀಜೋತ್ಪನ್ನ ವೃಕ್ಷದಲ್ಲಿ ಪ್ರಾಣಭೂತವಾಗಿರುವುದು ಮಾತ್ರವೇ ಅಲ್ಲದೇ ತನ್ನನ್ನೇ ತಾನು ಬೋಧಿಸುವುದೂ ಆಗಿದೆ. ಒಂದು ವೃಕ್ಷವನ್ನು ಕತ್ತರಿಸಿದರೂ ಪುನಃ ಅದು ಬೆಳೆಯುವುದರಿಂದ ಅದು ಜೀವಿಸಲು ನಿಮಿತ್ತವಾಗಿ ಆಧ್ಯಾತ್ಮಿಕ ವಾಯು ಅಥವಾ ಪ್ರಾಣವು ಅಲ್ಲಿದೆಯೆಂದು ಊಹಿಸಬಹುದು. ಅಕಾರ ಏಕಾರಗಳೆಂಬ ಸ್ವರಗಳ ಅರ್ಥವನ್ನು ಹಿಗೆಯೇ ಮುಂದಿನ ಪ್ರಮಾಣ ವಚನವೂ ತಿಳಿಸುತ್ತದೆ. " ಶ್ರೀಕಂಠದಶಕಂತದ್ವದವ್ಯಕ್ತಸ್ಯಹಿ ವಾಚಕಂ | ಪ್ರಾಣಭೂತಃ ಸ್ಥಿತೋ ದೇವಿ ತದ್ವದೇಕಾದಶಃಸ್ವರಃ | ಏಕಃ ಸನ್ನೇವ ಪುರುಷೋ ಬಹುಧಾ ಜಾಯತೇ ಹಿ ಸಃ || ಇತಿ " ಶ್ರೀಕಂಠ ದಶಕಂ= ಹತ್ತು ಅಕಾರಗಳು, ಅವ್ಯಕ್ತಸ್ಯ= ಜೀವನ

ಸ್ವವಾಚೀ, ಲೋಕೇಽಪಿ ಕ್ಷತಸ್ಯ ಪುನಃ ಪ್ರರೋಹಣಾದಿನಾಽನುಮೀಯಮಾನಸ್ಯಾಧ್ಯಾತ್ಮಿಕವಾಯುಸಂಬಂಧಸ್ಯ ವೃಕ್ಷಾದಾವಂಗೀಕಾರಾತ್. ಉಕ್ತಂ ಚ—' ಶ್ರೀಕಂಠದಶಕಂ ತದ್ವದವ್ಯಕ್ತಸ್ಯ ಹಿ ವಾಚಕಂ. ಪ್ರಾಣಭೂತಃ ಸ್ಥಿತೋ ದೇವಿ ತದ್ವದೇಕಾದಶಃ ಪರಃ. ಏಕಃ ಸನ್ನೇವ ಪುರುಷೋ ಬಹುಧಾ ಜಾಯತೇ ಹಿ ಸಃ.' ಇತಿ. ಶ್ರೀಕಂಠಾ ಅಕಾರಾಃ. ಅವ್ಯಕ್ತೋ ಜೀವಃ. ಏಕಾದಶ ಏಕಾರಃ, ' ಸಂಧಿರೇಕಾದಶೋ ಭದ್ರಾ ಪದ್ಮನಾಭಃ ಕುಲಾಚಲಃ ಇತಿ ಕೋಶಾತ್, ಯದೇಕಾದಶಮಾಧಾರಂ ಬೀಜಂ ಕೋಣತ್ರಯಾಽಽತ್ಮಕಂ. ಬ್ರಹ್ಮಾಂಡಾದಿ ಕಟಾಹಾಂತಂ ಜಗತ್' ಇತಿ ಪ್ರಯೋಗಾಚ್ಚ ಯೋಗರೂಢೋಽಯಂ ಶಬ್ದಃ. ತಸ್ಯ ಚ ಶುದ್ಧಯೋಗಾಪೇಕ್ಷಯಾ ಪರತ್ವಮಸ್ತ್ಯೇವ. ಸ ಚ ಪ್ರಕೃತ ಏಕೋಽಪಿ ದೃಶ್ಯಮಾನೋ ಬಹುರೂಪಃ ಪರಿಣಮತೇ. ಉಕ್ತಂ ಚ ಕಾದಿಮತೇ— ' ಯದೇಕಾದಶಮಾಧಾರಂ ಬೀಜಂ ಕೋಣತ್ರಯಾತ್ಮಕಂ. ಬ್ರಹ್ಮಾಂ

ಎಂದು ಅರ್ಥ, "ಸಂಧಿರೇಕಾದಶೋ ಭದ್ರಾ ಪದ್ಮನಾಭಃ ಕುಲಾಚಲಃ" ಎಂಬ ಕೋಶಾನುಸಾರ ಏಕಾದಶವೆಂದರೆ ಏಕಾರವು. "ಯದೇಕಾದಶಮಾಧಾರಂ ಬೀಜಂ ಕೋಣತ್ರಯಾತ್ಮಕಂ । ಬ್ರಹ್ಮಾಂಡಾದಿಕಟಾಹಾಂತಂ ಜಗತ್" ಎಂಬ ಪ್ರಯೋಗದಿಂದ ಏಕಾದಶವೆಂಬ ಶಬ್ದವು ಯೋಗರೂಢವೆಂದು ತಿಳಿಯುವುದು. ಅವಯವಗಳ ಶಕ್ತಿಯೂ ರೂಢಿಶಕ್ತಿಯೂ ಎರಡೂ ಒಂದು ಅರ್ಥದಲ್ಲಿ ಇರುವಂತಹ ಪದವು ಯೋಗರೂಢವೆನ್ನಲ್ಪಡುವುದು. ಶುದ್ಧವಾದ ಯೋಗದ ದೃಷ್ಟಿಯಿಂದ ಇದು ಪರ ರೂಪವಾಗಿಯೂ ಇದೆ. ಪ್ರಕೃತದಲ್ಲಿ ಇದು ಒಂದೇ ಆಗಿದ್ದರೂ ಸರ್ವರಿಗೂ ಕಾಣುವ ಹಾಗೆ ಅನೇಕ ಪರಿಣಾಮುಗಳನ್ನು ಹೊಂದುವುದು. ಕಾದಿಮತದ ಸಿದ್ಧಾಂತವನ್ನು ಹೇಳುವ ಸಂದರ್ಭದಲ್ಲಿ "ಯದೇಕಾದಶಮಾಧಾರಂ ಬೀಜಂಕೋಣತ್ರಯಾತ್ಮಕಂ । ಬ್ರಹ್ಮಾಂಡಾದಿ ಕಟಾಹಾಂತಂ ಜಗದದ್ಯಾಪಿ ದೃಶ್ಯತೇ" ಎಂಬಲ್ಲಿ ದೃಶ್ಯ ರೂಪವಾದ ಅನೇಕ ಪರಿಣಾಮ ಹೊಂದುವುದನ್ನು ಹೇಳಿರುತ್ತದೆ. ಹಾದಿ ಪಕ್ಷದವರು ಏಕಾದಶ ಪದವನ್ನು ಯೌಗಿಕವೆಂದು ಅಂಗೀಕರಿಸಿ ಹನ್ನೊಂದನೆಯ ಅಕಾರವೇ ಅದಕ್ಕೆ ಅರ್ಥವೆಂದು ವ್ಯಾಖ್ಯಾನ ಮಾಡಿ ಪರಃ= ಎಂದರೆ ಅದರ ಮುಂದಿನ ಹನ್ನೆರಡನೆಯ ಪರಪುರುಷನು ಶಿವರೂಪಿಯು ಎಂದು ವಿವರಿಸುತ್ತಾರೆ. ಈ ವ್ಯಾಖ್ಯಾನವು ಕ್ಲಿಷ್ಟವೆಂದು ತೋರಿಸಲು "ಏಕಾದಶಃ ಸ್ವರಃ" ಎಂಬ ಮೂಲ ಶ್ಲೋಕದಲ್ಲಿ ವಿಶೇಷ್ಯವಾಗಿ ಸ್ವರವೆಂದು ಹೇಳಿದೆ.

ಡಾದಿ ಕಟಾಹಾಂತಂ ಜಗದದ್ಯಾಪಿ ದೃಶ್ಯತೇ.' ಇತಿ. ಹಾದಿಪಕ್ಷೇ ತು ಶುದ್ಧಯೌಗಿಕತ್ವಮಂಗೀಕೃತ್ಯ ಶ್ರೀಕಂಠಪರತ್ವೇನೈಕಾದಶಪದಂ ವ್ಯಾಖ್ಯಾಯ ಪರೋ ದ್ವಾದಶಃ ಪುರುಷಃ ಪರಃ ಶಿವಃ ತದ್ವಾಚಕ ಇತಿ ವ್ಯಾಚಕ್ಷತೇ. ತತ್ಕ್ಲಿಷ್ಟಮಿತಿ ಸ್ವರ ಇತಿ ವಿಶೇಷ್ಯೇಣಾಕಾರವ್ಯಾವರ್ತಕೇನ ಸೂಚಿತಂ. ನನು ಶ್ರೀಕಂಠದಶಕಸ್ಯೈಕಸ್ಮಿನ್ನೇವ ಶ್ಲೋಕೇ ಪ್ರತಿಸಂಬಂಧಿತ್ವೇನ ನಿರ್ದಿಷ್ಟಸ್ಯೋಪಸ್ಥಿತ್ಯಾ, ಏಕಾದಶೋಪಿ ಶ್ರೀಕಂಠ ಏವೇತಿ ಚೇನ್ನ, ರೂಢಿಪ್ರಾಬಲ್ಯೇ ತಾದೃಶೋಪಸ್ಥಿತೇರಪ್ರಯೋಜಕತ್ವಾತ್. ಕಥಮನ್ಯಥಾ ಜ್ಞಾನಾರ್ಣವೇ "ಆದ್ಯಂ ವಾಗ್ಭವಮುಚ್ಚಾರ್ಯ ಕಾಮಬೀಜಂ ದ್ವಿತೀಯಕಂ. ಕುಮಾರ್ಯಾಸ್ತು ತೃತೀಯಂ ತು ತ್ರಿಪುರಾ ಪರಮೇಶ್ವರೀ." ಇತಿ ತ್ರಿಪುರಾಚಕ್ರೇಶ್ವರೀಮಂತ್ರೋದ್ಧಾರಃ ಸಂಗಚ್ಛತಾಂ? ತತ್ರ ಹಿ ಕುಮಾರ್ಯಾಃ ಪ್ರತಿಸಂಬಂಧಿತ್ವೇನ ನಿರ್ದೇಶೇऽಸ್ಯಾದ್ಯದ್ವಿತೀಯಪದಾಭ್ಯಾಂ ಮಾತೃಕಾಸಂಬಂಧಿನಾವೇವ ಪ್ರಥಮದ್ವಿ

ಶ್ರೀಕಂಠದಶಕಂ=ಎಂದು ಹತ್ತು ಅಕಾರಗಳನ್ನು ಹೇಳಿ ಹನ್ನೊಂದನೆಯ ಸ್ವರವೆಂದು ಹೇಳಿದಾಗ ಅಕಾರವೆಂದೇ ಮೊದಲು ತೋರುವುದು ಯುಕ್ತವು. ಆದರೆ ಏಕಾದಶ ಪದದ ರೂಢಿ ಶಕ್ತಿಯ ಪ್ರಾಬಲ್ಯದಿಂದ ಅಕಾರದ ಜ್ಞಾನವು ನಿರೋಧಿಸಲ್ಪಟ್ಟಿದೆ. ಹೀಗೆ ರೂಢಿಶಕ್ತಿಯ ಪ್ರಾಬಲ್ಯವನ್ನು ಅನೇಕ ಕಡೆಯಲ್ಲಿ ಅಂಗೀಕರಿಸಿದೆ. ಉದಾಹರಣೆ:—"ಆದ್ಯಂವಾಗ್ಭವಮುಚ್ಚಾರ್ಯ ಕಾಮಬೀಜಂದ್ವಿತೀಯಕಂ। ಕುಮಾರ್ಯಾಸ್ತು ತೃತೀಯಂತು ತ್ರಿಪುರಾ ಪರಮೇಶ್ವರೀ॥" ಈ ಜ್ಞಾನಾರ್ಣವ ಶ್ಲೋಕದಲ್ಲಿ ಆದ್ಯ ವಾಗ್ಭವ ಬೀಜ "ಅಂ" ದ್ವಿತೀಯ ಕಾಮಬೀಜ "ಆಂ" ಕುಮಾರಿಯ ತೃತೀಯ ಬೀಜ "ಸೌಃ" ಇವುಗಳಿಂದ ತ್ರಿಪುರಾ ಚಕ್ರೇಶ್ವರೀ ಮಂತ್ರದ ಉದ್ಧಾರವನ್ನು ತೋರಿಸಿದೆ. ಅಲ್ಲಿ ಕುಮಾರೀ ತೃತೀಯ ವರ್ಣವಾದ "ಸೌಃ" ಎಂಬುದನ್ನು ತೋರಿಸಿ ಆದ್ಯ ದ್ವಿತೀಯ ಪದಗಳಿಂದ ಕುಮಾರೀ ಸಂಬಂಧವಾದ ಆದ್ಯದ್ವಿತೀಯ ವರ್ಣಗಳನ್ನೇ ಹೇಳುವ ಪಕ್ಷದಲ್ಲಿ ಬಾಲಾ ಮಂತ್ರವೇ ತ್ರಿಪುರೇಶ್ವರೀ ಮಂತ್ರವಾಗಬೇಕಾಗುವುದು. ಆದ್ದರಿಂದ ಮಾತೃಕಾ ಕ್ರಮದಲ್ಲಿ ಆದ್ಯ ದ್ವಿತೀಯ ವರ್ಣಗಳನ್ನೇ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯದಿಂದ ದಕ್ಷಿಣಾಮೂರ್ತಿ ಸಂಹಿತಾ ಮುಂತಾದ ಗ್ರಂಥಗಳಲ್ಲಿ ಅಂ+ಆಂ+ಸೌಃ ಎಂಬುದಾಗಿಯೇ ಉದ್ಧಾರ ಮಾಡಿದೆ. ಆದ್ದರಿಂದ ಮಾತೃಕೆಯ ಹನ್ನೊಂದನೆಯ ಅಕ್ಷರವನ್ನೇ ಇಲ್ಲಿ ತೆಗೆದುಕೊಳ್ಳಬೇಕು. ತೃತೀಯ

ತೀಯೌ ವರ್ಣೌ ವಿವಕ್ಷಿತೌ, ದಕ್ಷಿಣಾಮೂರ್ತಿ ಸಂಹಿತಾದೌ "ಅಂ ಆಂಸೌಃ" ಇತ್ಯಸ್ಯೈವ ಪ್ರಥಮಚಕ್ರೇಶ್ವರೀ ಮಂತ್ರಸ್ಯೋದ್ಧೃತತ್ವಾತ್. ಅನ್ಯಥಾ ಬಾಲಾಯಾ ಏವ ತ್ರಿಪುರಾಚಕ್ರೇಶ್ವರೀತ್ವಮಾಪದ್ಯೇತ. ತಸ್ಮಾನ್ಮಾತೃಕಾಯಾ ಮೇಕಾದಶ ಏವಾತ್ರ ಗ್ರಾಹ್ಯ ಇತಿ. ತಾರ್ತೀಯಪ್ರಥಮಸ್ಯ ಪೂರ್ವಮಭಿಹಿತತ್ವಾನ್ನೇಹ ಪುನರುಟ್ಟಂಕನಮಿತ್ಯಪಿ ಹಾದಿಪಕ್ಷೇ ಸುವಚಂ. ಪರಂ ತು ನ ತಥಾ ಸಾಂಪ್ರದಾಯಿಕೈರ್ವ್ಯಾಖ್ಯಾತಂ. ತಥಾಽಪಿ ಕಃ ಪ್ರಾಣವಾಚಕೋಽಕಾರಃ ಕೋ ವಾ ಜೀವವಾಚಕ ಇತ್ಯನಿರ್ಧಾರಣಂ ತತ್ಪಕ್ಷೇ ದುರುದ್ಧರಮ್ ॥ ೭೮ ॥

ಕೂಟದ ಆದ್ಯಕ್ಷರದ ಅರ್ಥವನ್ನು ಹಿಂದೆಯೇ ಹೇಳಿದ್ದರಿಂದ ಇಲ್ಲಿ ಅದರ ಅರ್ಥವನ್ನು ಹೇಳಿಲ್ಲವೆಂದು ಹಾದಿಪಕ್ಷದಲ್ಲಿ ಹೇಳಲು ಅವಕಾಶವಿದೆ. ಆದರೆ ಸಾಂಪ್ರದಾಯಿಕರು ಆ ರೀತಿಯ ವ್ಯಾಖ್ಯಾನವನ್ನು ಅಂಗೀಕರಿಸಿಲ್ಲ. ಮತ್ತು ಅಕಾರಗಳಲ್ಲಿ ಪ್ರಾಣವಾಚಕವಾದ ಅಕಾರವು ಯಾವುದು? ಜೀವ ವಾಚಕ ಅಕಾರವು ಯಾವುದು? ಎಂಬ ವ್ಯವಸ್ಥೆಗೆ ಆ ಮತದಲ್ಲಿ ನಿಮಿತ್ತವಿಲ್ಲದೇ ಹೋಗುವುದು ॥ ೭೮ ॥

೭೯

ಬಿಂದುಭಿಸ್ತ್ರಿಭಿರುಚ್ಯಂತೇ ರುದ್ರೇಶ್ವರಸದಾಶಿವಾಃ ।
ಶಾಂತಿಃ ಶಕ್ತಿಶ್ಚ ಶಂಭುಶ್ಚ ನಾದತ್ರಿತಯಬೋಧನಾಃ ॥ ೭೯ ॥

ಯೋಗಿನೀಹೃದಯಸ್ಥಮೇವ ಪದ್ಯಂ ಲಾಘವಾತ್ಸ್ಪಷ್ಟತ್ವಾಚ್ಚ ನಿಬಧ್ನಾತಿ. ರುದ್ರಸ್ತೇಜಸ್ತತ್ತ್ವಂ, "ರುದ್ರೋ ವಾ ಏಷ ಯದಗ್ನಿಃ" ಇತಿ ಶ್ರುತೇಃ. ತೇನ ಪುರುಷನಿಯತಿಕಾಲರಾಗವಿದ್ಯಾಕಲಾಮಾಯಾನಾಂ ಪರಿಗ್ರಹಃ. "ಪುರುಷಾದಿಕಮಾಯಾಂತಂ ತೇಜಸ್ತತ್ತ್ವಂ ಮಹೇಶ್ವರಿ" ಇತಿ ಸ್ವಚ್ಛಂದ ಸಂಗ್ರಹೋಕ್ತೇಃ. ಶಾಂತಿಃ ಪ್ರಕೃತಿಃ ಶುದ್ಧ ವಿದ್ಯಾ ಚ, ಅರ್ಧಚಂದ್ರಾದ್ಯುನ್ಮನಾಂತ ವರ್ಣಾಷ್ಟಕಂ ನಾದಪದೇನೋಚ್ಯತೇ. ನಾದತ್ರಿತಯಮೇವ ಬೋಧನಂ ಯೇಷಾಂ ತೇ. ಕರಣೇ ಲ್ಯುಟ್ ॥ ೭೯ ॥

"ರುದ್ರೋ ವಾ ಏಷಯದಗ್ನಿಃ" ಎಂಬ ಶ್ರುತಿಯಿಂದ ರುದ್ರನೆಂದರೆ ತೇಜಸ್ತತ್ತ್ವವೆಂದು ಅರ್ಥವು. ಇದು ಪುರುಷ, ನಿಯತಿ, ಕಾಲ, ರಾಗ, ವಿದ್ಯಾ, ಕಲಾ, ಮಾಯಾ ಈ ತತ್ತ್ವಗಳನ್ನು ಒಳಗೊಂಡಿದೆ. ಇಂತಹ ರುದ್ರ, ಈಶ್ವರ, ಸದಾಶಿವ ತತ್ತ್ವಗಳನ್ನು ಮೂರು ಬಿಂದುಗಳು ಬೋಧಿಸುತ್ತವೆ. ಸ್ವಚ್ಛಂದ ಸಂಗ್ರಹದಲ್ಲಿ "ಪುರುಷಾದಿಕಮಾಯಾಂತಂ ತೇಜಸ್ತತ್ತ್ವಂ ಮಹೇಶ್ವರಿ" ಎಂಬಲ್ಲಿ ತೇಜಸ್ತತ್ತ್ವದಿಂದ ಪುರುಷಾದಿ ಮಾಯಾಂತ ತತ್ತ್ವಗಳ ಸಂಗ್ರಹವನ್ನು ಹೇಳಿರುತ್ತದೆ. ಅರ್ಧಚಂದ್ರ ಮೊದಲಾಗಿ ಉನ್ಮನಾಂತಗಳಾದ ನಾದಗಳು ಪ್ರತ್ಯೇಕವಾಗಿ ಮೂರಾಗಿದ್ದು ಪ್ರಕೃತಿ, ಶುದ್ಧ ವಿದ್ಯಾರೂಪವಾದ ದ್ವಿವಿಧ ಶಾಂತಿ ಶಕ್ತಿ, ಶಂಭು ಎಂಬ ಅರ್ಥಗಳನ್ನು ಬೋಧಿಸುತ್ತವೆ. ಬೋಧನಂ ಎಂಬ ಮೂಲ ಶ್ಲೋಕದ ಪದವು ಕರಣಾರ್ಥದಲ್ಲಿ "ಲ್ಯುಟ್" ಎಂಬ ಪ್ರತ್ಯಯ ಬಂದು ಅದಕ್ಕೆ "ಅನ" ಎಂಬ ಆದೇಶದಿಂದ ರೂಪಹೊಂದಿದೆ || ೭೯ ||

೮೦

ಏವಂ ಸಪ್ತತ್ರಿಂಶತ್ಸಂಖ್ಯಾಕಪದೈರ್ಮಹಾವಿದ್ಯಾ ।
ಷಟ್ತ್ರಿಂಶತ್ತತ್ತ್ವಾನಾಂ ತತ್ತ್ವಾತೀತಸ್ಯ ಚಾಭಿಧಾತ್ರೀಯಮ್ ॥ ೮೦ ॥

ಏವಮಿತ್ಯಸ್ಯಾನಂತರೋದೀರಿತಶ್ಲೋಕಷಟ್ಕೋಕ್ತರೀತ್ಯೇತ್ಯರ್ಥಃ. ತತ್ರ ಹಿ ವ್ಯೋಮಬೀಜಪಂಚಕಂ, ಕಾಮಕಲಾಶ್ಚತಸ್ರಃ, ಚಂದ್ರಬೀಜೇ ದ್ವೇ, ರೇಫಭೂಬೀಜಕ್ರೋಧೀಶ ಬಿಂದುನಾದಾಸ್ತ್ರಯಸ್ತ್ರಯಃ, ಶ್ರೀಕಂಠದಶಕಂ, ಏಕಾದಶಃ ಸ್ವರ ಏಕಃ ಇತಿ ಸಂಹತ್ಯ ಸಪ್ತತ್ರಿಂಶತ್ಪದಾನ್ಯುಪಪಾದಿತಾನಿ. ತೇಷಾಂ ಚ ತತ್ತ್ವಾನಿ ಷಟ್ತ್ರಿಂಶತ್ತತ್ತ್ವಾತೀತಂ ಬ್ರಹ್ಮೈಕಮಿತ್ಯರ್ಥಃ. ತಾನಿ ಚ ಯಥಾ—ಶಿವಃ, ಶಕ್ತಿಃ, ಸದಾಶಿವಃ, ಈಶ್ವರಃ, ಶುದ್ಧವಿದ್ಯಾ, ಮಾಯಾ, ಕಲಾ, ವಿದ್ಯಾ, ರಾಗಃ, ಕಾಲಃ,

ಹಿಂದೆ ಹೇಳಿರುವ ಆರು ಶ್ಲೋಕಗಳ ಅರ್ಥಾನುಸಾರವಾಗಿ ಆಕಾಶ ಬೀಜ ಪಂಚಕ, ಕಾಮಕಲಾ ಚತುಷ್ಟಯ, ಚಂದ್ರಬೀಜದ್ವಯ, ರೇಫ–ಭೂಬೀಜ–ಕ್ರೋಧೀಶ–ಬಿಂದು–ನಾದಗಳ ಪ್ರತ್ಯೇಕತ್ರಯ, ಶ್ರೀಕಂಠ ದಶಕ, ಏಕಾದಶ ಸ್ವರವು ಒಂದು ಒಟ್ಟಾಗಿ ಮೂವತ್ತೇಳು ಪದಗಳು ಹೇಳಲ್ಪಟ್ಟವೆ. ಅವುಗಳಿಗೆ ಈ ಕೆಳಗೆ ಹೇಳುವಂತೆ ಮೂವತ್ತಾರು ತತ್ವಗಳೂ ತತ್ವಾತೀತವಾದ ಪರಬ್ರಹ್ಮವೂ ಅರ್ಥವು. ಆ ತತ್ವಗಳು ಯಾವುವೆಂದರೆ:—ಶಿವ, ಶಕ್ತಿ, ಸದಾಶಿವ, ಈಶ್ವರ, ಶುದ್ಧವಿದ್ಯಾ, ಮಾಯಾ, ಕಲಾ, ವಿದ್ಯಾ, ರಾಗ, ಕಾಲ, ನಿಯತಿ, ಪುರುಷ, ಪ್ರಕೃತಿ, ಅಹಂಕಾರ, ಬುದ್ಧಿ, ಮನಸ್, ಶ್ರೋತ್ರ, ತ್ವಕ್, ಚಕ್ಷು, ಜಿಹ್ವಾ, ಘ್ರಾಣ, ವಾಕ್, ಪಾಣಿ, ಪಾದ, ಪಾಯು, ಉಪಸ್ಥ, ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಆಕಾಶ, ವಾಯು, ತೇಜಸ್, ಅಪ್, ಪೃಥಿವೀ ಎಂದು ಮೂವತ್ತೇಳು ಇವೆ. ಇವುಗಳ ಸ್ವರೂಪ, ಉತ್ಪತ್ತಿ ಕ್ರಮಗಳನ್ನು ಇಲ್ಲಿ ಬಹು ವಿಸ್ತಾರವಾಗುವುದರಿಂದ ವಿವರಿಸಿಲ್ಲ. ಸೌಭಾಗ್ಯ ಸುಧೋದಯ ಗ್ರಂಥವನ್ನು ನೋಡಿ ತಿಳಿಯಬೇಕು. ಇವುಗಳಲ್ಲಿ ಬಿಂದುಗಳಿಗೆ ಶಿವ, ಶಕ್ತಿ, ಶುದ್ಧ ವಿದ್ಯಾ, ಪ್ರಕೃತಿಗಳು ಅರ್ಥವು. ನಾದಗಳಿಗೆ ಶುದ್ಧ ವಿದ್ಯೆಯನ್ನು ಬಿಟ್ಟು ಸದಾಶಿವ ಮೊದಲಾಗಿ ಪುರುಷಪರ್ಯಂತವಾಗಿ ಒಂಭತ್ತು ತತ್ವಗಳು ಅರ್ಥ. ಹಕಾರಾದಿ ಐದು ವ್ಯಂಜನಗಳಿಗೆ ಶಬ್ದಾದಿ ಪಂಚಕ, ಆಕಾಶಾದಿ ಪಂಚಕ, ಶ್ರೋತ್ರಾದಿ ಪಂಚಕ, ವಾಗಾದಿ

ನಿಯತಿಃ, ಪುರುಷಃ, ಪ್ರಕೃತಿಃ, ಅಹಂಕಾರಃ, ಬುದ್ಧಿಃ, ಮನಃ, ಶ್ರೋತ್ರಂ, ತ್ವಕ್, ಚಕ್ಷುಃ, ಜಿಹ್ವಾ, ಘ್ರಾಣಂ, ವಾಕ್, ಪಾಣಿಃ, ಪಾದಃ, ಪಾಯುಃ, ಉಪಸ್ಥಃ, ಶಬ್ದಃ, ಸ್ಪರ್ಶಃ, ರೂಪಂ, ರಸಃ, ಗಂಧಃ, ಆಕಾಶಃ, ವಾಯುಃ, ತೇಜಃ, ಆಪಃ, ಪೃಥಿವೀ. ಏತೇಷಾಂ ಸ್ವರೂಪಮುತ್ಪತ್ತಿಕ್ರಮಶ್ಚ ಸೌಭಾಗ್ಯಸುಧೋದಯೇ ದ್ರಷ್ಟವ್ಯಃ, ವಿಸ್ತರಭಯಾನ್ನೇಹಲಿಖ್ಯತೇ. ತತ್ರ ಶಿವಶಕ್ತಿ ಶುದ್ಧವಿದ್ಯಾಪ್ರಕೃತಯೋ ಬಿಂದ್ವರ್ಥಾಃ. ಸದಾಶಿವಾದಿಪುರುಷಾಂತಾ ನವ ನಾದಾರ್ಥಾಃ. ಶಬ್ದಾದಯ ಆಕಾಶಾದಯಃ ಶ್ರೋತ್ರಾದಯೋ ವಾಗಾದಯಶ್ಚ ಪಂಚ ಪಂಚ ಹಕಾರಾದೇರರ್ಥಾಃ. ಅಹಂಕಾರಾದಿತ್ರಯಂ ತು ಕಕಾರತ್ರಯಸ್ಯ ಶ್ರೀಕಂಠಾನಾಂ ವಾಽರ್ಥಃ. ಏಕಾದಶಸ್ವರಸ್ಯ ತತ್ತ್ವಾತೀತಮರ್ಥ ಇತಿ ವಿವೇಕಃ. ಯದ್ಯಪಿ ಹಕಾರಾದೇಃ ಶಬ್ದಾದ್ಯರ್ಥಕತ್ವವದಿಂದ್ರಿಯಾದ್ಯರ್ಥಕತ್ವಂ ನೋಕ್ತಂ, ತಥಾಽಪಿ “ಸ್ವರವ್ಯಂಜನಭೇದೇನ ಸಪ್ತತ್ರಿಂಶತ್ಪ್ರಭೇದಿನೀ. ಸಪ್ತತ್ರಿಂ

ಪಂಚಕಗಳು ಅರ್ಥ, ಮೂರು ಕಕಾರಗಳು ಅಥವಾ ಅಕಾರಗಳಿಗೆ ಅಹಂಕಾರಾದಿ ತ್ರಯವು ಅರ್ಥ. ಹನ್ನೊಂದನೆಯ ಸ್ವರಕ್ಕೆ ತತ್ತ್ವಾತೀತ ವಸ್ತುವೇ ಅರ್ಥ. “ಸ್ವರವ್ಯಂಜನಭೇದೇನ ಸಪ್ತತ್ರಿಂಶತ್ಪ್ರಭೇದಿನೀ । ಸಪ್ತತ್ರಿಂಶತ್ಪ್ರಭೇದೇನ ಷಟ್ತ್ರಿಂಶತ್ತತ್ತ್ವರೂಪಿಣೀ । ತತ್ತ್ವಾತೀತಸ್ವಭಾವಾಚ ವಿದ್ಯೈಷಾ ಭಾವ್ಯತೇ ಮಯಾ” ಎಂಬ ವಚನದಿಂದ ಹಿಂದೆ ಹಕಾರಾದಿಗಳಿಗೆ ಶಬ್ದಾದಿ ಬೋಧಕತ್ವವನ್ನು ಹೇಳಿದಂತೆ ಇಂದ್ರಿಯಾರ್ಥ ಬೋಧಕತ್ವವನ್ನು ಹೇಳದಿದ್ದರೂ ಅದನ್ನು ಕಲ್ಪಿಸಬೇಕು. ಮೂವತ್ತೇಳು ವರ್ಣಗಳಿಗೆ ಕ್ರಮವಾಗಿ ಮೂವತ್ತೇಳು ತತ್ತ್ವಗಳಲ್ಲಿ ಶಕ್ತಿಯನ್ನು ಒಪ್ಪಿದರೆ ಹಕಾರಾದಿಗಳಿಗೆ ಆಕಾಶ ಮುಂತಾದ ತತ್ವಗಳಲ್ಲಿ ಸಿದ್ಧವಾದ ಶಕ್ತಿಯನ್ನು ಪರಿತ್ಯಾಗಮಾಡಿ ಬೇರೆ ಅರ್ಥದಲ್ಲಿ ಶಕ್ತಿಯನ್ನು ಅಂಗೀಕಾರ ಮಾಡಬೇಕಾಗುವುದು. ಆದ್ದರಿಂದ ಆ ಪಕ್ಷವು ಸರಿಯಲ್ಲ. ಹಕಾರಾದಿಗಳಿಗೆ ವಿಷಯ, ಭೂತ, ಇಂದ್ರಿಯ ಈ ಅನೇಕ ವಸ್ತುಗಳಲ್ಲಿ ಶಕ್ತಿಯನ್ನು ಒಪ್ಪಿದರೆ ಅನೇಕಾರ್ಥತ್ವ ದೋಷ ಬರುವುದರಿಂದ ಭೂತಗಳಲ್ಲಿ ಶಕ್ತಿಯನ್ನೂ ಇತರಾರ್ಥಗಳಲ್ಲಿ ಲಕ್ಷಣೆಯನ್ನೂ ಒಪ್ಪುವುದೇ ಯುಕ್ತವು. ಈ ವಚನದಿಂದಲೇ ಪೂರ್ವೋಕ್ತ ರೀತಿಯಿಂದ ಸಪ್ತತ್ರಿಂಶತ್ತ್ವ ಸಂಖ್ಯೆಯನ್ನು ಶಕ್ತತಾವಚ್ಛೇದಕ ಧರ್ಮದಲ್ಲಿ ಸೇರಿಸುವುದರಿಂದ ವೃತ್ತಿದ್ವಯ ವಿರೋಧವೆಂಬ ದೋಷವೂ ಸಂಭವಿಸುವುದಿಲ್ಲ. ಕೇವಲ ಹಕಾರಕ್ಕೆ ಆಕಾಶ ವಾಚಕತ್ವವು ಕಂಡಿರುವುದರಿಂದ ಶಕ್ತತಾವಚ್ಛೇದಕ ಧರ್ಮ

ಶತ್ಪ್ರಭೇದೇನ ಷಟ್ತ್ರಿಂಶತ್ತತ್ತ್ವರೂಪಿಣೀ. ತತ್ತ್ವಾತೀತಸ್ವಭಾವಾ ಚ ವಿದ್ಯೈಷಾ ಭಾವ್ಯತೇ ಮಯಾ.' ಇತಿ ವಚನಬಲಾತ್ತತ್ತ್ವದರ್ಶಕತ್ವಮವಶ್ಯ ಕಲ್ಪನೀಯಂ. ನ ಚ ಸಪ್ತತ್ರಿಂಶತೋ ವರ್ಣಾನಾಂ ಸಪ್ತತ್ರಿಂಶತಿತತ್ತ್ವೇಷು ಕ್ರಮೇಣ ಶಕ್ತಿರಸ್ತ್ವಿತಿ ವಾಚ್ಯಂ. ಹಕಾರಾದೌ ಕ್ಲೃಪ್ತಶಕ್ತಿಪರಿತ್ಯಾಗಸ್ಯ ಶಕ್ತ್ಯಂತರಸ್ವೀಕಾರಸ್ಯ ಚಾಪತ್ತೇಃ. ನ ಚ ಭವತ್ಪಕ್ಷೇಽಪ್ಯೇಕಸ್ಯಾನೇಕಾರ್ಥಕತ್ವಂ ದೋಷ ಇತಿ ವಾಚ್ಯಂ, ಏಕತ್ರ ಶಕ್ತಿಃ ಪರತ್ರ ಲಕ್ಷಣೇತಿ ಸುವಚತ್ವಾತ್. ನ ಚ ಯುಗಪದ್ವೃತ್ತಿದ್ವಯ ವಿರೋಧಃ, ಏತದ್ವಚನಬಲಾದೇವ ಸಪ್ತತ್ರಿಂಶತ್ತತ್ತ್ವಸ್ಯ ಶಕ್ತತಾಽವಚ್ಛೇದಕತ್ವಾಂಗೀಕಾರೇಣ ಪೂರ್ವವತ್ತಸ್ಯಾದೋಷತ್ವಾತ್, ಕೇವಲ ಹಕಾರಸ್ಯೈವ ವ್ಯೋಮವಾಚಕತ್ವಾದಿನಾ ಪ್ರಮಿತತ್ವೇನ ತದ್ವಿರೋಧಸ್ಯೋದ್ಭಾವನೇ ತು ವೃತ್ತಿದ್ವಯ ವಿರೋಧೇಽಕಿಂಚಿತ್ಕರತ್ವಸ್ಯ ಸುವಚತ್ವಾಚ್ಚ. ಪ್ರಮಾಣಪ್ರಮಿತತ್ವಾವಿಶೇಷಾದಾಪಾತತೋಽನೇಕಾರ್ಥತ್ವಸ್ಯಾಪಿ ಹರ್ಯಾದಿಪದವದದೋಷ

ದಲ್ಲಿ ವಿಶೇಷಣಾಂತರವನ್ನು ನಿವೇಶಮಾಡುವುದು ಅಸಂಗತವೆಂದರೆ ವೃತ್ತಿದ್ವಯ ವಿರೋಧವು ದೋಷವೇ ಅಲ್ಲವೆಂದು ಹಿಂದೆ ಹೇಳಿದ ಸಮಾಧಾನವನ್ನು ಸ್ಮರಿಸಿಕೊಳ್ಳಬೇಕು. ಪ್ರಮಾಣಾನುಸಾರಿಯಾಗಿ ಒಂದು ಪದಕ್ಕೆ "ಹರಿ" ಮುಂತಾದ ಪದಗಳಂತೆ ನಾನಾ ಅರ್ಥಗಳನ್ನು ಕಲ್ಪಿಸುವುದೂ ವಿರುದ್ಧವಲ್ಲ. ಅದಕ್ಕಿಂತಲೂ ಸಿದ್ಧವಾದ ಶಕ್ತಿಯನ್ನು ಪರಿತ್ಯಾಗ ಮಾಡುವುದು ಅನುಚಿತವು. ಇಲ್ಲಿ ಸಾಧಾರಣವಾಗಿ ಹೀಗೊಂದು ಶಂಕೆಗೆ ಅವಕಾಶ ಒದಗುವುದು:—ಪ್ರಥಮಾಂಶದಲ್ಲಿ ವಿದ್ಯೆಯಲ್ಲಿ ಸೇರಿ ಐವತ್ತೆಂಟು ವರ್ಣಗಳಿವೆಯೆಂದು ಹೇಳಿ ಇಲ್ಲಿ ಮೂವತ್ತೇಳು ವರ್ಣಗಳಿವೆಯೆಂದು ಹೇಳುವುದು ಪರಸ್ಪರ ವಿರುದ್ಧವಾಗಲಾರದೇ? ಈ ಶಂಕೆಯನ್ನು ಈ ಸಮಾಧಾನದಿಂದ ಪರಿಹರಿಸಬೇಕು. ಈ ಪದ್ಯದಲ್ಲಿ ಮೂವತ್ತೇಳೆಂಬ ಸಂಖ್ಯೆಯು ಅಕ್ಷರಗಳಲ್ಲಿರುವುದೆಂದು ಸ್ಪಷ್ಟವಾಗಿ ಹೇಳಿಲ್ಲ. ಆ ಸಂಖ್ಯೆಯು ಪದಗಳಲ್ಲಿರುವುದೂ ಆಗಬಹುದು. ಅರ್ಧಚಂದ್ರಾದಿ ಎಂಟು ವರ್ಣಗಳನ್ನೂ ಕಾಮಕಲೆಯನ್ನು ನಾಲ್ಕು ಅವಯವಗಳುಳ್ಳ ಪದವನ್ನಾಗಿ ಭಾವಿಸುವಂತೆ ಎಂಟು ಅವಯವಗಳಿಂದ ಕೂಡಿದ ಒಂದು ಪದವನ್ನಾಗಿ ಭಾವಿಸಲು ಯಾವ ವಿರೋಧವೂ ಇಲ್ಲ. ಈ ಯುಕ್ತಿಯಿಂದಲೇ ತ್ರೈಪುರ ಮಂತ್ರದಲ್ಲಿ ಸಮೂಹಕ್ಕೆ ಮೂಲ ಕಾರಣವಾದ ಮಹಾಮೇರುವಿನಲ್ಲಿ ಅರ್ಧಚಂದ್ರಾದಿ ಎಂಟು ಅವಯವಗಳನ್ನು ಒಂದು ವರ್ಣವನ್ನಾಗಿ ಭಾವಿಸಿ "ನವಾಕ್ಷರೋ ಮಹಾಮೇರು ರಯಂ ಬ್ರಹ್ಮಾಂಡ

ತ್ವಾಚ್ಚ. ಕ್ಲುಪ್ತಶಕ್ತಿಪರಿತ್ಯಾಗಸ್ತು ನ ಸರ್ವಥಾ ಪ್ರಾಮಾಣಿಕಃ. ನನು ಪ್ರಥಮೇಽಂಶೇ ವಿದ್ಯಾಯಾಮಷ್ಟಪಂಚಾಶದ್ವರ್ಣಾ ಉಕ್ತಾಃ; ಕಥ ಮಿಹ ಸಪ್ತತ್ರಿಂಶತ್ತ್ವೇನ ಗಣ್ಯಂತ ಇತಿ ಚೇತ್, ಸತ್ಯಂ. ನ ಪುನರತ್ರವ ರ್ಣಗತೇಯಂ ಸಂಖ್ಯಾ ಕಂಠರವೇಣೋಕ್ತವಚನೇ ಶ್ರೂಯತೇ, ಯೇ ನೈವಮುಚ್ಯೇತ. ಶ್ರೂಯಮಾಣಂ ಸಂಖ್ಯಾಮಾತ್ರಂ ತು ಪದನಿಷ್ಠತ್ವೇ ನಾಪ್ಯುಪಪನ್ನಂ, ಅರ್ಧಚಂದ್ರಾದಿವರ್ಣಾಷ್ಟಕಸ್ಯೈಕಪದತ್ವಾತ್, ಚತು ರವಯವಕಕಾಮಕಲಾವನ್ನಾದಸ್ಯಾಷ್ಟಾವಯವಕ್ಯೈಕವರ್ಣತ್ವಾಂಗೀಕಾ ರೇಽಪಿ ಕ್ಷತಿವಿರಹಾಚ್ಚ. ಅತ ಏವ ತ್ರೈಪುರಮಂತ್ರೇ ಸಮೂಹ ಮೂಲಕಾರಣಭೂತೇ ಮಹಾಮೇರಾವರ್ಧಚಂದ್ರಾದೀನಾಮಷ್ಟಾನಾ ಮಪ್ಯರ್ಧಚಂದ್ರತ್ವರೂಪೈಕ ವರ್ಣಾತ್ಮಕತ್ವಮಂಗೀಕೃತ್ಯ "ನವಾ ಕ್ಷರೋ ಮಹಾಮೇರುರಯಂ ಬ್ರಹ್ಮಾಂಡಗೋಲಕಃ" ಇತ್ಯಾದಿವ್ಯ ವಹಾರಸ್ತಂತ್ರೇಷು ದೃಶ್ಯತೇ. ವಸ್ತುತೋಽರ್ಧಚಂದ್ರಾದೇಃ ಸ್ಥಾನಸ್ವ

ಗೋಲಕಃ" ಎಂಬ ವ್ಯವಹಾರವು ತಂತ್ರ ಶಾಸ್ತ್ರಗಳಲ್ಲಿ ಸ್ಪಷ್ಟವಾಗಿದೆ. ವಸ್ತು ಸ್ಥಿತಿಯನ್ನನುಸರಿಸಿದರೆ ಅರ್ಧ ಚಂದ್ರ ಮುಂತಾದುವುಗಳು ಸ್ಥಾನ–ಸ್ವರೂಪಾದಿ ಗಳಲ್ಲಿ ವೈಲಕ್ಷಣ್ಯವನ್ನು ಹೊಂದಿರುವುದರಿಂದ ಒಂದು ವರ್ಣ ರೂಪಗಳಾಗಿರ ಲಾರವು. ಕಾಮಕಲಾವಯವಗಳಲ್ಲಿ ಪರಸ್ಪರ ವೈಲಕ್ಷಣ್ಯವಿಲ್ಲದ್ದರಿಂದ ನಾಲ್ಕು ಅವಯವಗಳು ಸೇರಿ ವರ್ಣ ರೂಪವಾಗಿರಲು ಬಾಧಕವಿಲ್ಲ, ಅರ್ಧಚಂದ್ರಾದಿ ಗಳಲ್ಲಿ ವರ್ಣರೂಪವು ಅಸಂಭವಿಯೆಂದು ಮೂಲದಲ್ಲಿ "ಪದೈಃ" ಎಂದು ಹೇಳಿದೆ. ಈ ಅವಯವಗಳಲ್ಲಿ ಸೇರಿ ಒಂದು ಅರ್ಥದಲ್ಲಿ ಶಕ್ತಿಯಿರುವುದರಿಂದ "ಶಕ್ತಂಪದಂ" ಎಂಬ ಲಕ್ಷಣಾನುಸಾರವಾಗಿ ಪದವೆಂದು ಹೇಳಲ್ಪಡಬಹುದು. "ಸುಪ್ತಿಙನ್ತಂಪದಂ" (ಪಾಣಿನಿಸೂತ್ರ) ತೇವಿಭಕ್ತ್ಯಂತಾಃ ಪದಂ (ನ್ಯಾಯ ಸೂತ್ರ) ಇವುಗಳಿಂದ ವಿಭಕ್ತಿಸಹಿತವಾದ ಶಬ್ದರೂಪವನ್ನೇ ಪದವೆಂದು ಕರೆಯ ಬೇಕಾಗಿದ್ದರೂ ಪ್ರತಿಯೊಂದು ಅಕ್ಷರಕ್ಕೂ ಅರ್ಥವಿದ್ದು ಪ್ರಾತಿಪದಿಕದ ಸಂಪೂರ್ಣ ಲಕ್ಷಣವು ಬರುವುದರಿಂದ ಸುಪ್ಪ್ರತ್ಯಯ ಬಂದು ಅದಕ್ಕೆ ಕೆಲವು ಕಡೆ ವ್ಯತ್ಯಯ ವಿಧಾನ, ಶಾಕಲ್ಯ ಮುನಿಮತದಂತೆ ಪಾಕ್ಷಿಕಲೋಪ, "ಸುಪಾಂ ಸುಲುಕ್" ಮುಂತಾದ ಶಾಸ್ತ್ರ ಇವುಗಳಿಂದ ಲೋಪ ಬಂದಿದೆಯೆಂದು ಅಂಗೀಕರಿಸಿ ಶಕ್ತಂ ಪದಂ" ಎಂಬ ಆಧುನಿಕ ಪರಿಭಾಷೆಗೆ ಪ್ರಾಮಾಣ್ಯವನ್ನು ಒಪ್ಪದಿದ್ದರೂ ನಾದಕ್ಕೆ ಪದತ್ವವನ್ನು ಸಮರ್ಥಿಸಬಹುದು. ಹಾಗಾದರೆ ಕಕಾರಾದಿ ವ್ಯಂಜನಗಳಿಗೆ ಪದತ್ವ

ರೂಪಾದಿಭೇದಾನ್ನೈಕವರ್ಣತ್ವಂ ಯುಕ್ತಂ, ಕಾಮಕಲಾವಯವೇಷು ತು ನ ತಥೇತಿ ವೈಷಮ್ಯಂ. ಅತ ಏವ ಮೂಲೇ ಪದೈರಿತ್ಯುಕ್ತಂ. 'ಶಕ್ತಂ ಪದಂ' ಇತಿ ತಲ್ಲಕ್ಷಣಾಚ್ಛಕ್ತೈರಿತ್ಯರ್ಥಃ. ನ ಚ 'ಸುಪ್ತಿಜಂತಂ ಪದಂ' ಇತಿ ಪಾಣಿನೀಯಸೂತ್ರಾತ್ "ತೇ ವಿಭಕ್ತ್ಯಂತಾಃ ಪದಂ" ಇತಿ ನ್ಯಾಯಸೂತ್ರಾಚ್ಚ "ಶಕ್ತಂ ಪದಂ" ಇತ್ಯಾಧುನಿಕ ಪರಿಕಲ್ಪಿತ ಪರಿಭಾಷಾಯಾ ಅಪ್ರಮಾಣತ್ವಾದಿಹ ಪದತ್ವಂ ನ ಯುಜ್ಯತ ಇತಿ ವಾಚ್ಯಂ, ತಥಾಽಪ್ಯರ್ಥವತ್ತ್ವೇನ ಪ್ರತ್ಯಕ್ಷರಂ ಪ್ರಾತಿಪದಿಕ ಸಂಜ್ಞಾಯಾಂ ಸುಬುತ್ಪತ್ತೇಃ, ಕ್ವಚಿದ್ವ್ಯತ್ಯಯಾದಿನಾ, ಕ್ವಚಿಚ್ಛಾಕಲ್ಯಮತೇನ, ಕ್ವಚಿತ್ 'ಸುಪಾಂ ಸುಲುಕ್' ಇತ್ಯನೇನ ಚ ಲೋಪಸ್ವೀಕಾರಾತ್. ನ ಚೈವಂ ಕಕಾರೇಷು ಜಶ್ತ್ವಾಪತಿಃ, 'ಕಿತಿ,' 'ಪಿತಿ' ಇತ್ಯಾದಿ ಜ್ಞಾಪಕೈಕಾಕ್ಷರಪದೇ ತದನಿತ್ಯತಾಯಾ ಜ್ಞಾಪನಾದಿತಿ. "ಸ್ವರ ವ್ಯಂಜನ ಭೇದೇನ" ಇತ್ಯಸ್ಯಾಯಮರ್ಥಃ—ಸ್ವರವ್ಯಂಜನಯೋರಭೇದವಿವಕ್ಷಾ

ಬಂದಿದ್ದರಿಂದ ಅದರ ಅಂತ್ಯದಲ್ಲಿರುವ ಕ್ ಮುಂತಾದ್ದಕ್ಕೆ ಜಶ್ ಭಾವದಿಂದ ಗ್ ಆದೇಶವು ಏಕೆ ಬರಲಿಲ್ಲವೆಂದು ಶಂಕಿಸಬಹುದು. ವ್ಯಾಕರಣ ಸೂತ್ರಕಾರರೇ ಕಿತಿ, ಪಿತಿ, ಮುಂತಾದ ಪ್ರಯೋಗಗಳನ್ನು ತೋರಿಸಿರುವುದರಿಂದ ಒಂದೇ ಅಕ್ಷರ ರೂಪವಾದ ಪದದಲ್ಲಿ ಜಶ್ ಆದೇಶವು ವಿಕಲ್ಪವೆಂದು ಸೂಚಿಸಿರುತ್ತಾರೆ. ಮೇಲೆ ಉದಾಹರಿಸಿರುವ "ಸ್ವರವ್ಯಂಜನ ಭೇದೇನ" ಎಂಬ ಪದ್ಯಕ್ಕೆ ಈ ರೀತಿಯಾಗಿ ಅರ್ಥವನ್ನು ತಿಳಿಯಬೇಕು. ಸ್ವರ-ವ್ಯಂಜನಗಳಿಗೆ ಪರಸ್ಪರ ಅಭೇದ ವಿವಕ್ಷೆಯು ಇಲ್ಲವೆಂದು ಸೂಚಿಸಲು "ಭೇದೇನ" ಎಂದು ಹೇಳಿದೆ. ಅಭೇದ ವಿವಕ್ಷೆಯಿರುವಾಗ ಮಾತ್ರ ಅವುಗಳಿಗೆ ಅಂಗಾಂಗಿ ಭಾವವು ಲೋಕಸಿದ್ಧವಾದುದು. ಅವುಗಳಲ್ಲಿ ವ್ಯಂಜನಗಳು ಸ್ವರಗಳಿಗೆ ಅಂಗಗಳು. ವಿದ್ಯೆಯಲ್ಲಿ ಕ, ಸ, ಹ, ಲಕಾರಗಳೆಂಬ ಹತ್ತು ವ್ಯಂಜನಗಳು ಅದೇ ವ್ಯಂಜನಗಳ ಮುಂದೆ ಉಚ್ಚರಿಸಲ್ಪಡುವ ಅಕಾರಗಳಿಗೆ ಅಂಗಗಳು. ಹೃಲ್ಲೇಖೆಗಳ ಆದಿಯಲ್ಲಿರುವ ಹಕಾರಗಳು ಅದರ ಹಿಂದೆ ಉಚ್ಚರಿಸಲ್ಪಡುವ ಲ ಎಂಬ ವ್ಯಂಜನಗಳ ಮುಂದಿನ ಅಕಾರಗಳಿಗೆ ಅಂಗಗಳು ಎಂದು 'ಸಂಯೋಗಾದಿ' (ಪ್ರಾ ೨೧-೭) ಸೂತ್ರದಿಂದ ತೋರುತ್ತದೆ. ಆದರೂ "ನಾಂತಸ್ಥಾ ಪರಮುಸವರ್ಣಂ" (ಪ್ರಾ ೨೧ = ೭)ಎಂಬ ಉತ್ತರಸೂತ್ರಾನುಸಾರವಾಗಿ ಹಕಾರಗಳನ್ನು ಪರಾಂಗವನ್ನಾಗಿ ಒಪ್ಪುವುದೇ ಉಚಿತವು. ರೇಫಗಳು ಬಿಂದು ಸಹಿತ ಕಾಮಕಲೆಗಳಿಗೆ ಅಂಗಗಳು. ಅನುಸ್ವಾರಗಳೂ ಕಾಮಕಳೆ

ಮುಪಪಾದಿತುಂ ಭೇದೇನೇತ್ಯುಕ್ತಂ. ಅಭೇದೇ ವಿವಕ್ಷಿತ ಏವ ಹಿ ತಯೋ
ರಂಗಾಂಗಿಭಾವೋ ಲೋಕಸಿದ್ಧಃ. ತಥಾ ಹಿ ವ್ಯಂಜನಾನಿ ತಾವತ್ಸ್ವ
ರಾಂಗಾಣಿ. ತತ್ರ ಕಕಾರಸಕಾರಹಕಾರಲಕಾರಾ ದಶಸಂಖ್ಯಾಕಾಸ್ತು ಸ್ವ
ಸ್ವಾವ್ಯವಹಿತೋತ್ತರಕ್ಷಣೋಚ್ಚಾರ್ಯಮಾಣಶ್ರೀಕಂಠಾನಾಮಂಗಾನಿ. ಹೃ
ಲ್ಲೇಖಾऽऽದ್ಯಹಕಾರಾಸ್ತು ಸ್ವಸ್ವಪೂರ್ವೋಚ್ಚಾರ್ಯಮಾಣಲಕಾರೀಯ
ಶ್ರೀಕಂಠಾನಾಮೇವಾಂಗಾನೀತಿ ಯದ್ಯಪಿ "ಸಂಯೋಗಾದಿ" (ಪ್ರಾ.
೨೧-೪) ಇತಿ ಸೂತ್ರೇಣ ಪ್ರತಿಭಾತಿ. ತಥಾऽಪಿ "ನಾಂತಸ್ಥಾಪ
ರಮುಪವರ್ಣಂ" (ಪ್ರಾ. ೨೧-೭) ಇತಿ ಸೂತ್ರೇಣ ಪರೇಷಾಮೇವಾಂ
ಗಾನೀತಿ ವಾಚ್ಯಂ- ರೇಫಾಸ್ತು ಸಬಿಂದುಕಕಾಮಲಾನಾಂ, ಅನುಸ್ವಾರಾ
ಅಪಿ ತಾಸಾಮೇವೇತಿ ವಸ್ತುಸ್ಥಿತಿಃ. ತದೇತತ್ಸರ್ವಂ ಯಾಜುರ್ವೇದಿ
ಕಪ್ರಾತಿಶಾಖ್ಯಸೂತ್ರಾಣಿ ತ್ರಿಭಾಷ್ಯರತ್ನಾದಿತದ್ವ್ಯಾಖ್ಯಾನಾನಿ ಚ ಜಾನಾ
ನಾನಾಂ ಸ್ಪಷ್ಟತರಂ. ಪ್ರಕೃತೇ ತ್ವಿಯಾನ್ವಿಶೇಷಃ. ಬಿಂದವೋ ಹಿ

ಗಳಿಗೆ ಅಂಗಗಳು ಎಂದು ವಸ್ತುಸ್ಥಿತಿಯು. ಈ ವಿಷಯವು ಯಜುರ್ವೇದ ಪ್ರಾತಿ
ಶಾಖ್ಯ ಸೂತ್ರ, ಅದರ ವ್ಯಾಖ್ಯಾನ ತ್ರಿಭಾಷ್ಯರತ್ನ ಮುಂತಾದ ಗ್ರಂಥಗಳನ್ನು
ನೋಡಿದವರಿಗೆ ಸ್ಪಷ್ಟಪಡುವುದು. ಪ್ರಕೃತದಲ್ಲಿ ಈ ವಿಶೇಷವನ್ನು ಅರಿಯಬೇಕು:–
ಬಿಂದುಗಳು ತನ್ನ ಮುಂದಿನ ನಾದವೆಂಬ ಸ್ವರಕ್ಕೆ ಅಂಗಗಳಾಗುವುವೇ ಹೊರತು
ಕಾಮಕಲಾಂಗಗಳಲ್ಲ. ಇಲ್ಲಿ "ತತ್ಪರಸ್ವರಂ" (ಪ್ರಾ ೨೧–೨) ಎಂಬ ಪ್ರಾತಿ
ಶಾಖ್ಯ ಸೂತ್ರವು ಪ್ರವರ್ತಿಸುವುದು. ಯಾವ ಅನುಸ್ವಾರವು ಸ್ವರದ ಹಿಂದೆ
ಉಚ್ಚರಿಸಲ್ಪಡುವುದಿಲ್ಲವೋ ಆ ಅನುಸ್ವಾರವು ತನಗೆ ಪೂರ್ವದಲ್ಲಿರುವ ಸ್ವರಕ್ಕೆ
ಅಂಗವೆಂದು "ಅನುಸ್ವಾರಃ" (ಪ್ರಾ ೨೧–೬) ಎಂಬ ಸೂತ್ರವು ವಿಧಿಸುವುದು.
ಲೋಕಭಾಷೆಯಲ್ಲಿಯಾಗಲಿ ವೇದ ಭಾಷೆಯಲ್ಲಾಗಲಿ ಅನುಸ್ವಾರದ ಮುಂದೆ
ಸ್ವರೋಚ್ಚಾರಣೆಯು ಎಲ್ಲಿಯೂ ಕಾಣುವುದಿಲ್ಲ. ಮ ಅಥವಾ ನಕಾರಗಳಿಗೆ ಹಲ್
ಝುಲ್ ಎಂಬ ವ್ಯಂಜನ ವಿಶೇಷಗಳು ಮುಂದೆ ಬಂದಾಗ ಅನುಸ್ವಾರವು "ಮೋऽನು
ಸ್ವಾರಃ, ನಶ್ಚಾಪದಾಂತಸ್ಯ ಝುಲಿ" (ಪಾ ೮-೩-೨೩, ೨೪) ಎಂಬ ಸೂತ್ರಗಳಿಂದ
ವಿಧಿಸಲ್ಪಟ್ಟಿದೆ. ಆದರೆ ಆ ಅನುಸ್ವಾರಕ್ಕೆ ಯಯ್ ಎಂಬ ವ್ಯಂಜನಗಳು ಮುಂದೆ
ಬಂದರೆ ಪರಸವರ್ಣವರ್ಣಾಂತರಾದೇಶವು ಬರುವುದರಿಂದ ಆ ಸ್ಥಳದಲ್ಲಿ ಅನುಸ್ವಾ
ರವೇ ನಿಲ್ಲುವುದಿಲ್ಲ. ಶಷಸಹ ಅಥವಾ ರಾಹು ಕೂಟ ವರ್ಣಗಳ ಸಂಬಂಧದಲ್ಲಿ
ಹಂಸ ಇತ್ಯಾದಿಗಳಲ್ಲಿ ಮಾತ್ರ ಅನುಸ್ವಾರ ಸ್ವರೂಪವು ಉಳಿಯುವುದೆಂದು ಅಭಿ

ಸ್ಯೋತ್ತರೋಚ್ಚಾರ್ಯಮಾಣನಾದಾಖ್ಯಸ್ವರಸ್ಯೈವಾಂಗಾನಿ ನ ಪುನಃ ಕಾಮುಕಲಾನಾಂ, 'ತತ್ಪರಸ್ವರಂ' (ಪ್ರಾ. ೨೧-೨) ಇತಿ ಪ್ರಾತಿಶಾಖ್ಯ ಸೂತ್ರಸ್ಯಾತ್ರ ಪ್ರವೃತ್ತೇಃ. ಯೋ ಹಿ ಸ್ವರಾತ್ಪೂರ್ವಮನುಸ್ವಾರೋ ನೋಚ್ಚಾರ್ಯತೇ ಸ ಏವ ಸ್ವಪೂರ್ವಸ್ವರಾಂಗಮಿತಿ "ಅನುಸ್ವಾರಃ" (ಪ್ರಾ. ೨೧-೯) ಇತಿ ಸೂತ್ರಸ್ಯ ವಿಷಯಃ. ನ ಹಿ ಲೋಕವೇದಯೋಃ ಕ್ವಾಪಿ ಸಂಹಿತಾಯಾಮನುಸ್ವಾರೋತ್ತರಂ ಸ್ವರೋಚ್ಚಾರಣಂ ದೃಶ್ಯತೇ. ಮಕಾರನಕಾರಯೋರ್ಹಿ ಸತೋರ್ಹಲಿ ಝುಲಿ ಚ ಪರೇಽನುಸ್ವಾರವಿಧಿಃ "ಮೋಽನುಸ್ವಾರಃ" (೮-೩-೨೩) "ನಶ್ಚಾಪದಾಂತಸ್ಯ ಝುಲಿ" (೮-೩-೨೪) ಇತಿ ಪಾಣಿನೀಯ ಸೂತ್ರಯೋರುಪಲಭ್ಯತೇ. ತಸ್ಯ ಚ ಯಯಿ ಪರೇ ಪರಸವರ್ಣವರ್ಣಾಂತರತಾಽಽಪತ್ತಿವಿಧಾನಾಚ್ಚ ಷಸಹಾಽಽಖ್ಯರಾಹುಕೂಟೇ "ಹಂಸಃ" ಇತ್ಯಾದಾವಾತ್ಮಲಾಭ ಇತ್ಯಾಶಯೇನ ವೇದಮಾತ್ರಮಧಿಕೃತ್ಯ ಪ್ರವೃತ್ತೇನ ಪ್ರಾತಿಶಾಖ್ಯಮುನಿನಾಽ

ಪ್ರಾಯುವು. ವೇದಭಾಷಾ ಪ್ರಯೋಗ ಲಕ್ಷಣಗಳನ್ನು ಉಪದೇಶಿಸಲು ಹೊರಟ ಪ್ರಾತಿಶಾಖ್ಯಕಾರ ಮುನಿಯು ಎಲ್ಲ ಅನುಸ್ವಾರಗಳೂ ಪೂರ್ವಸ್ವರಾಂಗವೆಂದು "ಅನುಸ್ವಾರಃ" ಪ್ರಾ ೨೧-೬ ಸೂತ್ರದಿಂದ ಬೋಧಿಸಿರುವನು. ಪೂರ್ವಾಂಗ ವಾದುದಕ್ಕೆ "ವ್ಯಂಜನಮುಪರಾಂಗಂ ವಿರಾಮೇಲುಪ್ಯತೇ" ಎಂದು ಸಾಮ ವೇದದ ಫುಲ್ಲ ಸೂತ್ರಗಳಿಂದ ಹೇಳುವಂತೆ ಸಾಮ ವಿಶೇಷಗಳಲ್ಲಿ ಪ್ರಯೋಜನ ವಿದೆ. ಪ್ರಕೃತಕ್ಕೆ ಉಪಯೋಗವಿಲ್ಲದ್ದರಿಂದ ಅದನ್ನೆಲ್ಲ ಇಲ್ಲಿ ವಿಸ್ತರಿಸಿಲ್ಲ. ಇಲ್ಲಿ ಪ್ರಥಮ ದ್ವಿತೀಯ ಕೂಟಗಳ ಅನುಸ್ವಾರಗಳಿಗೆ ಮುಂದೆ ಹ-ಸಕಾರಗಳೇ ಬರುವುದರಿಂದ ಪರಸವರ್ಣಾದಿ ವರ್ಣಾಂತರಾದೇಶವಿಲ್ಲದಿರುವುದರಿಂದ ಪೂರ್ವಾಂಗತ್ವ ಪ್ರಸಂಗ ಸಂಭವಿಸಿದರೂ ಕೂಟಗಳನ್ನು ಬೇರೆ ಬೇರೆ ಉಚ್ಚರಿಸುವಾಗ ನಾದವೆಂಬ ಸ್ವರವೇ ಅನುಸ್ವಾರಕ್ಕೆ ಪರವಾಗಿರುವುದರಿಂದ ಕೂಟಗಳನ್ನು ಸಂಧಿಸಿ ಉಚ್ಚರಿಸುವಾಗ ಬಿಂದ್ವಾದಿ ಒಂಭತ್ತು ವರ್ಣಗಳನ್ನೂ ಉತ್ತರ ಕೂಟದಲ್ಲಿ ಸೇರಿಸಿ ಉಚ್ಚರಿಸಬೇಕೆಂದು ವಿಧಿಸಿರುವುದರಿಂದ ಅನುಸ್ವಾರಕ್ಕೆ ಹಕಾರಾದಿಗಳು ಮುಂದಿದ್ದಂತೆ ಸಂಭವಿಸುವುದಿಲ್ಲವಾದ್ದರಿಂದ ಪೂರ್ವಾಂಗತ್ವ ಪ್ರಸಂಗವನ್ನು ಪರಿಹರಿಸಬಹುದು. ಆದರೆ ಇದು ವಸ್ತು ಸ್ಥಿತಿಯಾಗಲಾರದು. ವ್ಯಂಜನ ವೆಂದರೆ ಹಲ್ ಎಂದು ಅರ್ಥ. "ಹಲೋಽನನ್ತರಾಃ ಸಂಯೋಗಃ" ಎಂಬ ಸೂತ್ರದಲ್ಲಿ ಹೇಳಿದ ಸಂಯೋಗ ಸಂಜ್ಞೆಯು ಹಂಸ ಎಂಬಲ್ಲಿರುವ ಸಕಾರಕ್ಕೂ ಇರುವುದರಿಂದ

ನುಸ್ವಾರಮಾತ್ರಸ್ಯ ಪೂರ್ವಾಂಗತ್ವಂ “ ಅನುಸ್ವಾರಃ ” ಇತಿ ಸೂತ್ರೇಣೋಕ್ತಂ. ತಸ್ಯ ಚ ‘ ವ್ಯಂಜನಮುಪರಾಂಗಂ ವಿರಾಮೇ ಲುಪ್ಯತೇ.’ ಇತ್ಯಾದಿ ಸಾಮವೇದೀಯಫುಲ್ಲಸೂತ್ರಾದ್ಯುಕ್ತಾನಿ ಸಾಮವಿಶೇಷೇಷುಪ್ರಯೋಜನಾನಿ ವಿಸ್ತರಭಯಾದನುಪಯೋಗಾಚ್ಚ ನೇಹೋಲ್ಲಿಖಿತಾನಿ. ನ ಚಾತ್ರಾಪಿ ಪ್ರಥಮದ್ವಿತೀಯ ಕೂಟಸ್ಥಾನುಸ್ವಾರಯೋರ್ಹಕಾರಸಕಾರಪೂರ್ವತ್ವೇನ ಪರಸವರ್ಣಾದಿವರ್ಣಾಂತರಭಾವಾಭಾವಾತ್ಪೂರ್ವಾಂಗತ್ವಾಽಪತ್ತಿರಿತಿ ವಾಚ್ಯಂ. ಕೂಟಾನಾಂ ಪಾರ್ಥಕ್ಯೇನೋಚ್ಚಾರಣೇ ಸ್ವರಪರತ್ವಾನ್ಮಿಲಿತ್ವೋಚ್ಚಾರಣೇ ತು ಬಿಂದ್ವಾದಿನವಕಸ್ಯೋತ್ತರಕೂಟೇ ಪ್ರವೇಶವಿಧಾನೇನ ಹಕಾರಾದಿ ಪೂರ್ವತ್ವಾಭಾವಾತ್. ವಸ್ತುತಸ್ತು, ಹಲ್ತ್ವಮೇವ ಹಿ ವ್ಯಂಜನತ್ವಂ. ಕಥಮನ್ಯಥಾ “ ಹಲೋಽನಂತರಾಃ ಸಂಯೋಗಃ ” (೧-೧-೭) ಇತಿ ಸೂತ್ರೋಕ್ತಾ ಸಂಯೋಗಸಂಜ್ಞಾ ‘ ಹಂಸಃ ’ ಇತಿ ನಕಾರೇ ಸ್ಯಾತ್ ? ತದಭಾವೇ ಚ ಹಕಾರೀಯಾ

ಆ ಸಂಯೋಗವರ್ಣವು ಪರವಾಗಿ ಬಂದನಿಮಿತ್ತದಿಂದ ಹಕಾರದಲ್ಲಿರುವ ಅಕಾರವು “ ಸಂಯೋಗೇಗುರು ” ಎಂಬ ಸೂತ್ರಾನುಸಾರವಾಗಿ ಗುರು ಸಂಜ್ಞೆಯನ್ನು ಹೊಂದುವುದು. ಇದನ್ನು ಛಂದಃಶಾಸ್ತ್ರದ “ ಧ್ರಾದಿಪರಃ ” ಎಂಬ ಪಿಂಗಲ ಸೂತ್ರ ವಿವರಣ ಸಂದರ್ಭದಲ್ಲಿ ಛಂದೋಭಾಸ್ಕರ ಗ್ರಂಥದಲ್ಲಿ ವಿಚಾರಮಾಡಿದೆ. ಈ ಕ್ರಮದಿಂದ ಅನುಸ್ವಾರದಲ್ಲಿ ಹಲ್ತ್ವವೆಂಬ ವ್ಯಂಜನ ಸ್ವರೂಪವು ಇರುವುದರಿಂದ “ ಸಂಯೋಗಾದಿ ” ಪ್ರಾತಿಶಾಖ್ಯ ಸೂತ್ರದಿಂದ ಸಂಯುಕ್ತಾಕ್ಷರಗಳಲ್ಲಿ ಆದಿಯ ವರ್ಣವು ಪೂರ್ವಾಂಗವೆಂದು ವಿಧಿಸಿದ್ದರಿಂದಲೇ ಅನುಸ್ವಾರಕ್ಕೂ ಪೂರ್ವಾಂಗತ್ವವು ಲಭಿಸುವುದರಿಂದ “ ಅನುಸ್ವಾರಃ ” ಎಂಬ ಸೂತ್ರವು ಯಥಾಶ್ರುತದಲ್ಲಿ ವ್ಯರ್ಥವಾಗುವುದು. ಅವಸಾನದಲ್ಲಿ ಅಥವಾ ಸ್ವರವು ಮುಂದೆ ಬಂದಾಗ ಲೋಕ–ವೇದಭಾಷೆಗಳಲ್ಲಿ ಅನುಸ್ವಾರ ವಿದ್ದ ಸಂದರ್ಭದಲ್ಲಿ ಮಾತ್ರ ಹಿಂದೆ ಹೇಳಿದ ಸೂತ್ರವು ಸಫಲವಾಗುತ್ತಿತ್ತು. ಆದರೆ ಅಂತಹ ಅನುಸ್ವಾರವು ಎಲ್ಲಿಯೂ ಇಲ್ಲ. ಆದ್ದರಿಂದ ಶ್ರೀವಿದ್ಯೆಯ ಅನುಸ್ವಾರವು ಕಾಮಕಲೆಯೆಂಬ ಪೂರ್ವಸ್ವರಕ್ಕೆ ಅಂಗವಾಗುವುದೆಂದು ಹೇಳುವುದೇ ಆ ಸೂತ್ರಕ್ಕೆ ಪ್ರಯೋಜನವೆಂದರಿಯಬೇಕು. ನಾದವು ದ್ವಿತೀಯ ತೃತೀಯ ಸ್ವರಗಳಾದ “ ಏ–ಈ ” ಕಾರಗಳಂತೆ ಅಂಗಭೂತ ವ್ಯಂಜನಗಳಿಲ್ಲದ ಸ್ವರವಾಗಬಹುದು, ಈ ಸ್ವರವ್ಯಂಜನಗಳ ಅಂಗಾಂಗಿ ಭಾವವು “ ಚತುರ್ವಿಂಶತ್ಯಕ್ಷರಾಗಾಯತ್ರೀ ” ಮುಂತಾದ ವೇದ ವಾಕ್ಯಗಳಲ್ಲಿಯೂ,

ಕಾರೇ ' ಸಂಯೋಗೇ ಗುರು ' (೧-೪-೧೧) ಇತಿ ಸೂತ್ರೇಣ ಗುರು ಸಂಜ್ಞಾ ನ ಸಿದ್ಧ್ಯೇತ್. ಇಷ್ಟಾ ಹಿ ಸಾ. ತದೇತಚ್ಛಂದಃ ಶಾಸ್ತ್ರೀಯೇ ' ಧ್ರಾದಿಪರಃ ' ಇತಿ ಪಿಂಗಲಸೂತ್ರೇ ಛಂದೋಭಾಸ್ಕರೇ ಪ್ರಪಂಚಿತ ಮಸ್ಮಾಭಿಃ. ತಥಾ ಚ " ಸಂಯೋಗಾದಿ " (೨೧-೪) ಇತಿ ಪ್ರಾತಿಶಾಖ್ಯ ಸೂತ್ರೇಣ ಸಂಯುಕ್ತಾಕ್ಷರಾದಿನುವ್ಯಂಜನಸ್ಯ ಪೂರ್ವಾಂಗತ್ವಂ ವಿದಧ ತೈವ ಚಾರಿತಾರ್ಥ್ಯಾತ್ ' ಅನುಸ್ವಾರಃ ' (ಪ್ರಾ. ೨೧-೬) ಇತಿ ಪೃಥ ಗ್ಯೋಗೋ ವ್ಯರ್ಥಃ. ನ ಹ್ಯವಸಾನೇ ಸ್ವರೇ ವಾ ಪರೇ ಲೋಕವೇದಯೋ ರನುಸ್ವಾರಃ ಕ್ವಾಪಿ ದೃಶ್ಯತೇ, ಯೇನ ತತ್ಸಾರ್ಥಕ್ಯಂ ಭವೇತ್ ತಸ್ಮಾತ್ ಪೃಥಕ್ ಸೂತ್ರಕರಣಸ್ಯ ಶ್ರೀವಿದ್ಯಾಽನುಸ್ವಾರ ಏವ ವಿಷಯ ಇತ್ಯವ ಶ್ಯಂ ವಕ್ತವ್ಯಂ. ತೇನ ಚ ಕಾಮಕಲಾನಾಮೇವ ಬಿಂದವೋಽಂಗಾನಿ, ನಾದಸ್ತು ದ್ವಿತೀಯತೃತೀಯಸ್ವರವದವ್ಯಂಜನಾಂಗ ಏವ ಸ್ವರೋಭವಿ ಷ್ಯತೀತಿ ದಿಕ್. ಅಯಂ ಚಾಂಗಾಂಗಿಭಾವಃ ' ಚತುರ್ವಿಂಶತ್ಯಕ್ಷರಾ

ಲೌಕಿಕ ಛಂದಸ್ಸುಗಳಲ್ಲಿಯೂ, ಪ್ರಕೃತ ವಿದ್ಯೆಯಲ್ಲಿಯೂ ಪಂಚದಶತ್ವ ಷೋಡ ಶತ್ವ ಸಂಖ್ಯೆಗಳ ಸಿದ್ಧಿಗಾಗಿ ಉಪಯುಕ್ತವಾಗಿದೆ. ಅಂಗಾಂಗಿಗಳಿಗೆ ಪರಸ್ಪರಾ ಭೇದವಿರುವುದರಿಂದ ಪ್ರಧಾನವಾದ ಅಕ್ಷರಗಳ ಗಣನೆಯಿಂದಲೇ ಸಂಖ್ಯಾನಿಯಮ ವನ್ನು ಉಪಪಾದಿಸಬೇಕು. ಎಂಬುದು ವಸ್ತುಸ್ಥಿತಿಯು. ಈ ರೀತಿಯ ಅಭೇದ ವಿವಕ್ಷೆಯು ಪ್ರಕೃತದಲ್ಲಿ ವಿವಕ್ಷಿತವಲ್ಲವೆಂದು " ಭೇದೇನ " ಎಂಬ ಪದದಿಂದ ತಿಳಿಯುವುದು. ಹಾದಿ ವಿದ್ಯಾಪಕ್ಷದಲ್ಲಿ ದ್ವಿತೀಯ ತೃತೀಯಾಕ್ಷರಗಳು ವ್ಯಂಜನ ಸಹಿತಗಳಾದ್ದರಿಂದ ಅರವತ್ತು ಅಕ್ಷರಗಳಾಗುತ್ತವೆ. ಅರ್ಧಚಂದ್ರಾದಿಗಳನ್ನೆಲ್ಲ ಸೇರಿ ಒಂದೇ ವರ್ಣವೆಂದು ಭಾವಿಸಿದರೆ ಮೂವತ್ತೊಂಭತ್ತು ಆಗುತ್ತವೆ. ಬಿಂದು ಗಳನ್ನೂ ನಾದದಲ್ಲಿ ಅಂತರ್ಭಾವ ಮಾಡಿದರೆ ಮೂವತ್ತಾರು ಆಗುವುವು. ಅರ್ಥ ಬೋಧನ ಶಕ್ತಿಯುಳ್ಳವುಗಳು ಆ ಮತದಲ್ಲಿ ನಲವತ್ತು ಆಗುತ್ತವೆ. ಆಕಾಶ ಬೀಜಗಳು ಆರು, ಮಾಯಾತ್ರಯ, ಕಾರಣ ಬಿಂದು ಒಂದು, ರೇಫ, ಚಂದ್ರಬೀಜ, ಭೂಬೀಜ, ಕ್ರೋಧೀಶ, ಬಿಂದು, ನಾದಗಳು ಪ್ರತಿಯೊಂದೂ ಮೂರು, ಶ್ರೀಕಂಠ ಗಳು ಹನ್ನೆರಡು ಎಂಬ ಕ್ರಮದಿಂದಲೇ ಅರ್ಥ ಪ್ರತಿಪಾದನೆ ಮಾಡುವುದೆಂದು ಅಂಗೀಕರಿಸಿರುವುದರಿಂದ ಮೂವತ್ತೇಳೆಂಬ ಸಂಖ್ಯೆಯು ಯಾವ ರೀತಿಯಿಂದಲೂ ಸರಿಹೋಗುವುದಿಲ್ಲ. ಸ್ವರಗಳು ಹದಿನೈದು, ವ್ಯಂಜನಗಳು ಹದಿನೆಂಟು, ಬಿಂದು ಗಳು ಮೂರು, ಈ ವರ್ಣಗಳ ಸಮಷ್ಟಿ ಒಂದು ಎಂಬ ಕ್ರಮದಿಂದ ಗಣನೆ

ಗಾಯತ್ರೀ' ಇತ್ಯಾದೌ ವೇದೇ ಲೌಕಿಕಛಂದಸ್ಸು ಪ್ರಕೃತೇಽಪಿ ಪಂಚ ದಶತ್ವ ಷೋಡಶತ್ವಾದ್ಯುಪಪತ್ತ್ಯರ್ಥಮುಪಯುಜ್ಯತೇ, ಅಂಗಾಂಗಿನೋ ರಭೇದವಿವಕ್ಷಯಾ ತದಭಿನ್ನಪ್ರಧಾನಾಕ್ಷರಗಣನಯೈವ ಸಂಖ್ಯಾಪೂ ರ್ತೇರಾವಶ್ಯಕತ್ವಾದಿತಿ ವಸ್ತುಸ್ಥಿತಿಃ. ತದಪವಾದಾಯ "ಸ್ವರವ್ಯಂಜನ ಭೇದೇನ" ಇತ್ಯುಕ್ತಂ. ಅಂಗಾಂಗಿನೋರ್ಭೇದ ಏವ ಪ್ರಕೃತಾರ್ಥೇ ಕಾರ್ಯೋ ನ ಪುನರಭೇದೋ ವಿವಕ್ಷಣೀಯ ಇತ್ಯರ್ಥಃ. ಹಾದಿವಿದ್ಯಾ ಯಾಂ ಹಿ ದ್ವಿತೀಯತೃತೀಯಾಕ್ಷರಯೋರಪಿ ಸವ್ಯಂಜನಕತ್ವೇನ ಷಷ್ಟಿ ರಕ್ಷರಾಣಿ. ಅರ್ಧಚಂದ್ರಾದೇರೇಕವರ್ಣತ್ವಾಂಗೀಕಾರೇಽಪಿ ತಾವದೇ ಕೋನಚತ್ವಾರಿಂಶತ್. ಬಿಂದೂನಾಮಪಿ ನಾದೇಷು ಮೇಲನೇನೈಕ ವರ್ಣತ್ವಸ್ವೀಕಾರೇ ತು ಷಟ್ತ್ರಿಂಶತ್. ಶಕ್ತ್ಯಾನಿ ತು ತತ್ರ ಚತ್ವಾ ರಿಂಶತ್. ವ್ಯೋಮಬೀಜಷಟ್ಕಂ ಮಾಯಾತ್ರಯಂ ಕಾರಣಬಿಂದು ರೇಕೋ ರೇಫಚಂದ್ರಬೀಜಭೂಬೀಜಕ್ರೋಧೀಶಬಿಂದುನಾದಾನಾಂ ತ್ರ

ಮಾಡಿದರೆ ಮೂವತ್ತೇಳೆಂಬ ಸಂಖ್ಯೆಯು ಲಭಿಸುವುದು "ಅಜ್ವ್ಯಂಜನ ಬಿಂದು ತ್ರಯ ಸಮಷ್ಟಿಭೇದೈರ್ವಿಭಾವಿತಾಕಾರಾ । ಷಟ್ತ್ರಿಂಶತ್ತತ್ತ್ವಾತ್ಮಾ ತತ್ತ್ವಾತೀತಾ ಚ ಕೇವಲಾ ವಿದ್ಯಾ" ಎಂಬ ಕಾಮಕಲಾವಚನದಲ್ಲಿಯೂ ಇದೇ ಕ್ರಮವನ್ನನು ಸರಿಸಿ ವಿವರಿಸಿರುತ್ತದೆ. ಆದರೂ ವರ್ಣಗಳಲ್ಲಿ ಸಂಖ್ಯೆಯು ಪೃಥಕ್ಕಾಗಿ ವ್ಯಕ್ತಿಯಲ್ಲಿ ಮಾತ್ರ ಅನ್ವಯಿಸುವ ಸ್ವಭಾವವುಳ್ಳದ್ದರಿಂದ ಪ್ರತ್ಯೇಕ ವ್ಯಕ್ತಿಗಳಲ್ಲಿ ಗಣನೆ ಮಾಡಲ್ಪಟ್ಟ ಸಂಖ್ಯೆಗೆ ಸಮಷ್ಟಿಯಲ್ಲಿಯ ಸಂಖ್ಯೆಯ ಗಣನೆಯಿಂದ ಆಧಿಕ್ಯವನ್ನು ಕಲ್ಪಿಸುವುದು ಗೌಣವಾಗುವುದು. ಮತ್ತು ಪಂಚದಶೀ ವಿದ್ಯೆಯಲ್ಲಿ ಇದೇ ಕ್ರಮ ದಿಂದ ಷೋಡಶೀತ್ವವು ಪ್ರಸಕ್ತವಾಗುವುದು. ಮತ್ತು ಅಂಗಾಂಗಿಗಳಿಗೆ ಲೋಕ ಸಿದ್ಧವಾದ ಭೇದಕ್ಕೆ ಇಲ್ಲಿ ವಿವಕ್ಷೆಯಿಲ್ಲವೆಂದು "ಭೇದೇನ" ಎಂಬ ಪದದಿಂದ ತೋರಿಸಿ ಲೋಕದಲ್ಲಿ ಭೇದರೂಪದಿಂದಲೇ ಸಿದ್ಧವಾದ ಪಂಚದಶ (ಹದಿನೈದು) ವರ್ಣಗಳಿಗೆ ಅಭೇದ ರೂಪದಿಂದಲೂ ಗಣನೆಯು ಹೇಗೆ ಸರಿಹೋಗುವುದೆಂಬು ದನ್ನು ವಿಚಾರಿಸಬೇಕು. "ಸಂಭೇದಃ ಸಿಂಧುಸಂಗಮಃ" ಎಂಬ ಕೋಶದಲ್ಲಿ ಸಂ + ಭೇದಶಬ್ದವನ್ನು ಸಂಗಮಾರ್ಥದಲ್ಲಿ ತೋರಿಸಿರುವುದರಿಂದ ಸ್ವರ ವ್ಯಂಜನ ಗಳ ಮಿಶ್ರಣವೆಂದೂ ಭೇದ ಶಬ್ದಕ್ಕೆ ಅರ್ಥಮಾಡಲು ಅವಕಾಶವುಂಟು. ಆದರೆ ಭೇದಪದಕ್ಕೆ ವೃತ್ತ್ಯಂತರ ಕಲ್ಪನಾ ಕ್ಲೇಶವೂ "ಸಂ" ಉಪಸರ್ಗ ಶೂನ್ಯವಾದ ಭೇದ ಶಬ್ದಕ್ಕೆ ಮೇಲನಾರ್ಥಾವಾಚಕತ್ವವೆಂಬ ದೋಷವೂ ಬರುವುದು. ಮತ್ತು

ಯಂ ತ್ರಯಂ ದ್ವಾದಶ ಶ್ರೀಕಂಠಾ ಇತ್ಯೇವ ತದರ್ಥೋಽಪಪಾದನಾದಿತಿ ನ ಕಥಂ ಚನ ಸಪ್ತತ್ರಿಂಶತ್ತ್ವಾ ಸಂಪದ್ಯತೇ. ಯದ್ಯಪಿ ಸ್ವರಾಃ ಪಂಚ ದಶ, ವ್ಯಂಜನಾನ್ಯಷ್ಟಾದಶ, ಬಿಂದವಸ್ತ್ರಯಃ, ಸರ್ವವರ್ಣಸಮುಷ್ಟಿರೇಕೇತಿ ಸಪ್ತತ್ರಿಂಶತ್ತ್ವಾತದುಪಾಸಕೈರುಪಪಾದ್ಯತೇ, ತದುಕ್ತಂ ಕಾಮುಕ ಲಾವಿಲಾಸೇ—'ಅಜ್ವ್ಯಂಜನಬಿಂದುತ್ರಯ ಸಮುಷ್ಟಿಭೇದೈರ್ವಿಭಾವಿತಾಕಾರಾ. ಷಟ್ತ್ರಂಶತ್ತತ್ತ್ವಾತ್ಮಾ ತತ್ತ್ವಾತೀತಾ ಚ ಕೇವಲಾ ವಿದ್ಯಾ." ಇತಿ. ತಥಾಽಪಿ ಸಂಖ್ಯಾಯಾಃ ಪೃಥಜ್ಞ್ನಿವೇಶಿತ್ವಸ್ಯಾಭಾವ್ಯೇನ ವ್ಯಷ್ಟಿವೇಷೇಣ ಗಣಿತಸ್ಯ ಪುನರ್ಗಣನಂ ಗೌಣಂ, ಪಂಚದಶಾನಾಂ ಷೋಡಶೀತ್ವಾಪಾದಕಂ ಚ. ಕಿಂ ಚ ಅಂಗಾಂಗಿನೋರಭೇದಸ್ಯ ಲೋಕಸಿದ್ಧಸ್ಯಾಪವಾದಾಯ ಭೇದೇನೇತಿ ಕಂಠರವೇಣೋಕ್ತೇರ್ಲೋಕಸಿದ್ಧಭೇದಾನಾಂ ಪಂಚದಶಾನಾಂ ವರ್ಣಾನಾಮಭೇದೇನ ಗಣನಸ್ಯ ಕುತೋ ಲಾಭ ಇತಿ ವಿಚಾರ್ಯಂ. ಯದ್ಯಪಿ ಭೇದಪದಸ್ಯ 'ಸಂಭೇದಃ ಸಿಂಧು

ಹಿಂದೆ "ವ್ಯಾಪ್ತಾಪಂಚದಶಾರ್ಣೈಃಸಾ" ಎಂಬ ವಚನದಿಂದ ಸಾಮಾನ್ಯವಾಗಿ ಹೇಳಿರುವ ಪಂಚದಶತ್ವವೆಂಬ ಅಕ್ಷರ ಸಂಖ್ಯೆಯನ್ನು "ಪಂಚಭಿಶ್ಚತಥಾಷಡ್ಭಿಃ" ಎಂಬ ಉತ್ತರ ಗ್ರಂಥವು ಉಪಪಾದಿಸಿದಂತೆ ಪ್ರಕೃತದಲ್ಲಿ "ಸ್ವರವ್ಯಂಜನ ಭೇದೇನ ಸಪ್ತತ್ರಿಂಶತ್ಪ್ರಭೇದಿನೀ" ಎಂಬ ವಚನದಿಂದ ಸಾಮಾನ್ಯವಾಗಿ ಹೇಳಿರುವ ಮೂವತ್ತೇಳೆಂಬ ಸಂಖ್ಯೆಯನ್ನು "ವ್ಯೋಮ ಬೀಜೈಸ್ತುವಿದ್ಯಾಸ್ಥೈಃ.... ನಾದ ತ್ರಿತಯಬೋಧನಾಃ" ಎಂಬ ಉತ್ತರ ಗ್ರಂಥವು ವಿಶೇಷವಾಗಿ ಉಪಪಾದಿಸುವುದೆಂಬುದು ನಿರ್ವಿವಾದವಾದ ವಿಷಯವು. ಆದರೆ ಹಿಂದೆ ಹೇಳಿದಂತೆ ನಲವತ್ತು ವರ್ಣಗಳ ಉಪಪಾದನೆ ಮಾಡಿದಂತಾಗುವುದರಿಂದ ಪೂರ್ವಾಪರ ಗ್ರಂಥಗಳಿಗೆ ವಿರೋಧವು ಅಪರಿಹಾರ್ಯವಾಗುವುದು. ಮತ್ತು "ಬಿಂದುಭಿಸ್ತ್ರಿಭಿರುಚ್ಯಂತೇ ರುದ್ರೇಶ್ವರಸದಾಶಿವಾಃ। ಶಾಂತಿಃ ಶಕ್ತಿಶ್ಚ ಶಂಭುಶ್ಚ ನಾದತ್ರಿತಯ ಬೋಧನಾಃ" ಎಂಬ ಒಂದೇ ಶ್ಲೋಕದಲ್ಲಿ ಬಿಂದುತ್ರಯ ನಾದತ್ರಯಗಳ ಅರ್ಥವನ್ನು ವರ್ಣಿಸಿ ಮೂವತ್ತೇಳು ಸಂಖ್ಯೆಯು ಪೂರ್ತಿಯಾಗಿ ಲಭಿಸುವುದಕ್ಕೋಸ್ಕರ ಬಿಂದುತ್ರಯವನ್ನು ಮಾತ್ರ ಉಲ್ಲೇಖಿಸುವುದು ನಾದತ್ರಯದ ಸಂಖ್ಯೆಯನ್ನು ಮಾತ್ರ ಪರಿತ್ಯಾಗ ಮಾಡುವುದು ವೈಷಮ್ಯತೋರಿಸಿದಂತೆ ಆಗುವುದು. ಪ್ರಾಚೀನರು ಕಾದಿ ವಿದ್ಯೆಯಲ್ಲಿ ಸಪ್ತತ್ರಿಂಶತ್ತ್ವ ಸಂಖ್ಯೆಯನ್ನು ಹೊಂದಿಸಲು ದ್ವಿತೀಯ ತೃತೀಯಾಕ್ಷರಗಳು ಸಂಧ್ಯಕ್ಷರಗಳಾಗಿರುವುದರಿಂದ ಪ್ರತಿಯೊಂದನ್ನೂ ಎರಡನ್ನಾಗಿ

ಸಂಗಮ' ಇತ್ಯಾದೌ ಸಂಗಮಾರ್ಥೇ ಪ್ರಸಿದ್ಧತ್ವಾದಿಹ ಸ್ವರವ್ಯಂಜನಾನಾಂ ಸರ್ವೇಷಾಂ ಮೇಲನೇನೇತ್ಯಪ್ಯರ್ಥಃ ಸುವಚಃ; ತಥಾಽಪಿ ಭೇದಪದಸ್ಯ ವೃತ್ತಿಕ್ಲೇಶಃ, ಸಮಿತ್ಯನುಪಸ್ಯಷ್ಟಸ್ಯ ತಾದೃಶಾರ್ಥಾವಾಚಕತ್ವಂ ಚ. ಕಿಂ ಚ ಯಥಾತಾವತ್ 'ವ್ಯಾಪ್ತಾ ಪಂಚದಶಾರ್ಣೈಃ ಸಾ' ಇತ್ಯನೇನ ಸಾಮಾನ್ಯತಃ ಪಂಚದಶಸಂಖ್ಯಾಕಾಕ್ಷರಕತ್ವಮುಕ್ತ್ವಾ ತದುಪಪಾದನಾಯ ತದಗ್ರಿಮಗ್ರಂಥೇ 'ಪಂಚಭಿಶ್ಚ ತಥಾಷಡ್ಭಿಃ' ಇತಿ ವಿಶಿಷ್ಯಕಥನಂ, ತಥೈವ "ಸ್ವರವ್ಯಂಜನಭೇದೇನ ಸಪ್ತತ್ರಿಂಶತ್ಪ್ರಭೇದಿನೀ" ಇತ್ಯಾದಿನಾ ಸಾಮಾನ್ಯೇನ ಸಪ್ತತ್ರಿಂಶತ್ಸಂಖ್ಯಾಕಾಕ್ಷರಕತ್ವಂ ಪ್ರತಿಜ್ಞಾಯ ತದಗ್ರಿಮಗ್ರಂಥೇನ "ವ್ಯೋಮಬೀಜೈಸ್ತು ವಿದ್ಯಾಸ್ಥೈಃ" ಇತ್ಯಾದಿನಾ "ನಾದತ್ರಿತಯಬೋಧನಾ" ಇತ್ಯಂತೇನ ವಿವಿಚ್ಯ ತದುಪಪಾದನಮಿತ್ಯವಿವಾದಂ. ತತ್ರ ಚೋಕ್ತರೀತ್ಯಾ ಚತ್ವಾರಿಂಶತೋಽಪ್ಯುಪಪಾದನಾದುಪಕ್ರಮೋಪಸಂಹಾರವಿರೋಧೋ ದುರುದ್ಧರಃ. ಕಿಂ

ಗಣನೆಮಾಡಿರುವರು. ಆದರೆ ಅದು ಕ್ಲೇಶದ ಮಾರ್ಗವು. ಅದೇ ರೀತಿಯಾಗಿ ಹೃಲ್ಲೇಖೆಯಲ್ಲಿಯೂ ಎಣಿಸಲು ಸಂಖ್ಯಾ ಆಧಿಕ್ಯ ಪ್ರಸಂಗವೆಂಬ ದೋಷವೂ ಬರುವುದು. ಆದುದರಿಂದ ನಾದತ್ರಯದ ಮಿಶ್ರಣವೇ ಸಪ್ತತ್ರಿಂಶತ್ವ ಸಂಖ್ಯಾ ಪೂರ್ತಿಗೆ ಸುಲಭ ಮಾರ್ಗವು. "ಹೃಲ್ಲೇಖಾತ್ರಯ ಸಂಭೂತೈಸ್ತಿಥಿಸಂಖ್ಯೈಸ್ತಥಾಕ್ಷರೈಃ" ಎಂದು ಯೋಗಿನೀಹೃದಯದಲ್ಲಿ ಅನೇಕ ಬಾರಿ ಪ್ರತಿಯೊಂದು ಹೃಲ್ಲೇಖೆಯಲ್ಲಿಯೂ ಐದು ಅಕ್ಷರಗಳನ್ನು ತೋರಿಸಿರುವುದರಿಂದ ಈ ಅರ್ಥವು ಸ್ಪಷ್ಟವಾಗುವುದು. ಆದ್ದರಿಂದ ಯೋಗಿನೀ ಹೃದಯದಲ್ಲಿ ಸಂಪ್ರದಾಯಾರ್ಥ ಪ್ರಕರಣವೆಲ್ಲವೂ ಕಾದಿ ವಿದ್ಯೆಯಲ್ಲಿಯೇ ಸ್ವರಸವಾಗಿ ಸಮಂಜಸವೆಂದು ವಿದ್ವಾಂಸರು ನಿಷ್ಪಕ್ಷಪಾತ ದೃಷ್ಟಿಯಿಂದ ವಿವೇಚಿಸಲಿ. ವಿದ್ಯೆಯಲ್ಲಿ ನಿಷ್ಕೃಷ್ಟಾರ್ಥವು ಈ ರೀತಿಯಲ್ಲಿ ಪರ್ಯವಸಾನವನ್ನು ಹೊಂದಿದೆ:—ಆಯಾಯ ಅಕ್ಷರಗಳಿಂದ ವಾಚ್ಯವೂ ಲಕ್ಷ್ಯವೂ ಆದ ಪದಾರ್ಥಗಳನ್ನುದ್ದೇಶಿಸಿ ಹನ್ನೊಂದನೆಯ ಸ್ವರದಿಂದ ತತ್ಪ್ರತೀತ ಬ್ರಹ್ಮಾಭೇದವು ತೋರಿಸಲ್ಪಡುವುದು. ಮತ್ತು ವಿದ್ಯೆಯು ಅವಯವಗಳಾದ ಅಕ್ಷರ ಸಮೂಹವಾಚ್ಯ ಪದಾರ್ಥಗಳ ಸಮೂಹ ಸ್ವರೂಪವಾದ್ದರಿಂದ ವಿಶ್ವವು ವಿದ್ಯೆಗೆ ಅಭಿನ್ನವಾದುದೆಂದೂ ವಿಧಿಸಲ್ಪಡುತ್ತದೆ. ಭಾವಾರ್ಥದಲ್ಲಿ ವಿದ್ಯಾ, ಜಗತ್ ಇವೆರಡರಲ್ಲಿ ಶಿವ–ಶಕ್ತಿ ಇವುಗಳಿಂದ ಉತ್ಪತ್ತಿ ಹೊಂದಿರುವುದರಿಂದ ತಿಳಿಯಲು ಸಾಧ್ಯವಾದ ಶಿವ–ಶಕ್ತಿಗಳ ಅಭೇದವನ್ನು ವಿಧಿಸುವದೊಂದು ಬೋಧವು

ಚ "ಬಿಂದುಭಿಸ್ತ್ರಿಭಿರುಚ್ಯಂತೇ ರುದ್ರೇಶ್ವರಸದಾಶಿವಾಃ. ಶಾಂತಿಃಶಕ್ತಿಶ್ಚ ಶಂಭುಶ್ಚ ನಾದತ್ರಿತಯಬೋಧನಾಃ." ಇತ್ಯೇಕಸ್ಮಿನ್ನೇವ ಶ್ಲೋಕೇ ಬಿಂದುತ್ರಯ ನಾದತ್ರಯಯೋರರ್ಥವರ್ಣನೇನ ಬಿಂದುತ್ರಯಸ್ಯ ಸಪ್ತತ್ರಿಂಶತ್ಸಂಖ್ಯಾಪೂರ್ತ್ಯರ್ಥಮುಲ್ಲೇಖೋ ನಾದತ್ರಯಸ್ಯ ತು ತ್ಯಾಗ ಇತ್ಯತ್ರ ತು ಸ್ಪಷ್ಟಂ ಪಕ್ಷಪಾತ ಏವ ಮೂಲಮಿತಿ. ಏತೇನ ಕಾದಿವಿದ್ಯಾಯಾಂ ಸಪ್ತತ್ರಿಂಶತ್ತ್ವಸಿದ್ಧ್ಯರ್ಥಂ ದ್ವಿತೀಯತೃತೀಯಾಕ್ಷರಯೋಃ ಸಂಧ್ಯಕ್ಷರತ್ವಾತ್ಪ್ರಾತಿಸ್ವಿಕಂ ದ್ವ್ಯಾತ್ಮಕತ್ವೇನ ಗಣನಾಕ್ಲೇಶಃ ಪ್ರಾಚಾಮಪಾಸ್ತಃ; ಹೃಲ್ಲೇಖಾಸ್ವಪಿ ತಥಾಽಽಪತ್ತ್ಯಾ ಪ್ರಕೃತಬಾಧಕಾಪಾದಕಶ್ಚ. ತಸ್ಮಾನ್ನಾದತ್ರಯ ಮೇಲನೇನೈವ ಸಪ್ತತ್ರಿಂಶತ್ತ್ವಂ. ಸ್ಪಷ್ಟಮೇತದ್ಯೋಗಿನೀಹೃದಯೇ ಹೃಲ್ಲೇಖಾತ್ರಯ ಸಂಭೂತೈಸ್ತ್ರಿಸಂಖ್ಯೈಸ್ತಥಾಽಕ್ಷರೈಃ." ಇತ್ಯಸಕೃತ್ಪ್ರತಿಹೃಲ್ಲೇಖಂ ಪಂಚಾನಾಮಕ್ಷರಾಣಾಂ ಗಣನಾತ್. ತಸ್ಮಾದ್ಯೋಗಿನೀಹೃದಯೇ ಸಂಪ್ರದಾಯಾರ್ಥಪ್ರಕರಣಂ ಸರ್ವಂಕಾದಿವಿದ್ಯಾಯಾಮೇವ ಸ್ವರಸಮಿತಿ ನಿಷ್ಪಕ್ಷಪಾತಂ ಕೃತಮತಯೋ ವಿದಾಂಕುರ್ವಂತು. ಅಯಮತ್ರ ನಿಷ್ಕರ್ಷಃ—ತತ್ತದಕ್ಷರೈರ್ವಾಚ್ಯಾಂಲ್ಲಕ್ಷ್ಯಾಂಶ್ಚ ಪದಾರ್ಥಾನುದ್ದಿಶ್ಯೈಕಾದಶಸ್ವರೇಣ ತತ್ತ್ವಾತೀತಬ್ರಹ್ಮಾಭೇದೋ ವಿಧೀಯತೇ. ಏವಂ ವಿದ್ಯಾಽವಯವಾಕ್ಷರಸಮೂಹವಾಚ್ಯಪದಾರ್ಥ ಸಮುದಾಯಾತ್ಮಕತ್ವಾತ್ 'ವಿಶ್ವಂ ವಿದ್ಯಾಽಭಿನ್ನಂ' ಇತ್ಯಪಿ ವಿಧೀಯತೇ. ಭಾವಾರ್ಥೇ ಹಿ ಶಿವಶಕ್ತಿಜನ್ಯತ್ವಜ್ಞಾಪ್ಯಕಶಿವಶಕ್ತ್ಯೋರಭೇದವಿಧೇಯಕೋ ವಿದ್ಯಾಜಗದುಭಯೋದ್ದೇಶ್ಯಕ ಏಕೋ ಬೋಧಃ. ವಿಶ್ವಜನಕಜನ್ಯತ್ವಜ್ಞಾಪ್ಯಕವಿಶ್ವಾಭೇದವಿಧೇಯಕೋ ವಿದ್ಯೋದ್ದೇಶ್ಯ ಕಶ್ಚೈಕಃ. ಇಹ ತು ವಿದ್ಯೋದ್ದೇಶ್ಯಕೋ ವಿಶ್ವಾಂತರ್ಗತ ಯಾವತ್ಪದಾರ್ಥಪ್ರಾತಿಸ್ವಿಕವಾಚಕಾಕ್ಷರೈಕಘಟಿತತ್ವಜ್ಞಾಪ್ಯಕ ವಿಶ್ವಾಭೇದವಿಧೇಯಕ ಏಕಃ, ವಿಶ್ವೋದ್ದೇಶ್ಯಕವಿದ್ಯಾಽಭೇದ ವಿಧೇಯಕಶ್ಚಾನ್ಯೋಬೋಧ ಇತಿ ಭೇದಃ ॥ ೮೦ ॥

ವಿದ್ಯೆಯೆಂಬ ಉದ್ದೇಶ್ಯದಲ್ಲಿ ವಿಶ್ವಜನಕದಿಂದ ಜನ್ಯವಾದುದರ ನಿಮಿತ್ತದಿಂದ ತಿಳಿಯಬಹುದಾದ ವಿಶ್ವಾಭೇದವನ್ನು ವಿಧಿಸುವುದೊಂದು ಬೋಧವು. ಈ ರೀತಿಯಾಗಿ ಎರಡು ಬೋಧಗಳು ಉಂಟಾಗುವುವು. ಸಂಪ್ರದಾಯಾರ್ಥದಲ್ಲಿ ವಿದ್ಯೆಯಲ್ಲಿ ವಿಶ್ವಾಂತರ್ಗತವಾದ ಪ್ರತಿಯೊಂದು ಪದಾರ್ಥಗಳಿಗೆ ವಾಚಕಗಳಾದ ಅಕ್ಷರಗಳಿಂದ ಘಟಿತವಾಗಿರುವುದರಿಂದ ತಿಳಿಯಬಹುದಾದ ವಿಶ್ವಾಭೇದವನ್ನು ವಿಧಿಸುವುದೊಂದು ಬೋಧವೂ ವಿಶ್ವದಲ್ಲಿ ವಿದ್ಯಾ ಅಭೇದವನ್ನು ವಿಧಿಸುವುದೊಂದು ಬೋಧವೂ ಸೇರಿ ಎರಡು ಬೋಧಗಳುಂಟಾಗುವುವು. ಎಂಬುದಾಗಿ ಎರಡು ಅರ್ಥಗಳಿಗೆ ವೈಲಕ್ಷಣ್ಯವನ್ನು ತಿಳಿಯಬೇಕು ॥ ೮೦ ॥

೮೧

ಜನ್ಯಜನಕಯೋರ್ಭೇದಾಭಾವಾದ್ವಾಚ್ಯಸ್ಯ ವಾಚಕೇನಾಪಿ |
ಬ್ರಹ್ಮಣಿ ಜಗತೋ ಜಗತಿ ಚ ವಿದ್ಯಾಽಭೇದಸ್ತು ಸಂಪ್ರದಾಯಾರ್ಥಃ || ೮೧ ||

ತದೇತದಭಿಸಂಧಾಯಾಹ—ಬ್ರಹ್ಮಣಿ ಜಗತ ಇತ್ಯತ್ರ, ಅಭೇದ ಇತಿ ಶೇಷಃ. ಸಮ್ಯಗ್ಗುರುಶಿಷ್ಯ ಪಾರಂಪರ್ಯಕ್ರಮಾಯಾತ ಮರ್ಯಾದಾಽನುಸಾರೇಣ ದೀಯತ ಇತಿ ಸಂಪ್ರದಾಯಾರ್ಥಃ || ೮೧ ||

ಹಿಂದೆ ವಿವರಿಸಿದಂತೆ ಪರ್ಯವಸಿತವಾದ ಅರ್ಥವನ್ನು ಈ ಪದ್ಯವು ಹೇಳುತ್ತಿದೆ. ಜನ್ಯ-ಜನಕಗಳಿಗೂ, ವಾಚ್ಯ-ವಾಚಕಗಳಿಗೂ ಭೇದವಿಲ್ಲದಿರುವುದರಿಂದ ಬ್ರಹ್ಮನಲ್ಲಿ ಜಗತ್ತಿನ ಅಭೇದವೂ ಜಗತ್ತಿನಲ್ಲಿ ವಿದ್ಯಾ ಅಭೇದವೂ ಸಂಪ್ರದಾಯಾರ್ಥವು, ಅಭೇದ ಪದವನ್ನು ಜಗತಃ ಎಂಬಲ್ಲಿ ಅಧ್ಯಾಹಾರವಿಟ್ಟುಕೊಳ್ಳಬೇಕು. ಗುರು ಶಿಷ್ಯ ಪರಂಪರಾ ಪ್ರಾಪ್ತಮರ್ಯಾದಾನುಸಾರವಾಗಿ ಕೊಡಲ್ಪಡುವುದರಿಂದ ಸಂಪ್ರದಾಯಾರ್ಥವೆಂಬ ಹೆಸರು ಬಂದಿದೆ || ೮೧ ||

೮೨

ಪರಮಶಿವೇ ನಿಷ್ಕಲತಾ ತದಭಿನ್ನತ್ವಂ ಸ್ವದೇಶಿಕೇಂದ್ರಸ್ಯ ।
ತತ್ಕರುಣಾತಃ ಸ್ವಸ್ಮಿನ್ನಪಿ ತದಭೇದೋ ನಿಗರ್ಭಾರ್ಥಃ ॥ ೮೨ ॥

ಅಥ ನಿಗರ್ಭಾರ್ಥಮಾಹ—ಪರಮಶಿವಃ ಕಾಮಕಲಾಸ್ವರೂಪನಿರ್ಣಯಾವಸರೇ ನಿಷ್ಕೃಷ್ಯ ಕಥಿತಂ ಬ್ರಹ್ಮ. ತತ್ರ ನಿಷ್ಕಲತಾ ತದಿತರ ಪದಾರ್ಥಾಭಾವಃ, ತದಿತರಸ್ಯ ಸರ್ವಸ್ಯಾಪಿ ದುಃಖಜನಕತ್ವಾತ್, "ದ್ವಿತೀಯಾದ್ವೈ ಭಯಂ ಭವತಿ" ಇತಿ ಶ್ರುತೇಃ. ಇತಿ ಪ್ರಥಮಕೂಟಾರ್ಥಃ. ತೇನ ಬ್ರಹ್ಮಣಾ ಸ್ವೀಯಸ್ಯ ದೇಶಿಕೇಂದ್ರಸ್ಯ ಶ್ರೀಗುರುಚರಣಾನಾಮಭೇದಃ, ತೇಷಾಂ ಬ್ರಹ್ಮಾಭೇದಭಾವನಾದಾರ್ಢ್ಯೇನ ತದಭೇದಸ್ಯ ಸಿದ್ಧತ್ವಾದಿತಿ ದ್ವಿತೀಯಕೂಟಾರ್ಥಃ. ತತ್ಕರುಣಾತಃ ಸ್ವಕೃತಾವ್ಯಭಿಚರಿತಭಕ್ತಿಪುರಃಸರದೃಢತರಸೇವಾಸಂಪಾದಿತಪ್ರಸಾದಜನ್ಯ ಗುರುಕರುಣಾಕರಂಬಿತಕಟಾಕ್ಷನಿರೀಕ್ಷಣಬಲಾತ್ಸ್ವಸ್ಮಿನ್ನಪಿ ಸಾಧಕೇ ಬ್ರಹ್ಮಾಭೇದಃಸಿದ್ಧ್ಯತೀತಿ ತೃತೀಯಕೂಟಾರ್ಥಃ. ಸ್ವಸ್ಯ ಗುರುದ್ವಾರಾ ಶಿವಗರ್ಭೇ ಪ್ರವೇಶಸಂಪಾದಕತ್ವಾದೇತಜ್ಜ್ಞಾನಸ್ಯ ವಿಷಯಃ ಶಿವಗುರ್ವಾತ್ಮೈಕ್ಯಂ ನಿಗರ್ಭಾರ್ಥಪದವಾಚ್ಯಂ ॥ ೮೨ ॥

ಈ ಪದ್ಯವು ನಿಗರ್ಭಾರ್ಥವನ್ನು ಪ್ರತಿಪಾದಿಸುತ್ತದೆ. ಕಾಮಕಲಾಸ್ವರೂಪವನ್ನು ವಿವೇಚಿಸುವ ಸಂದರ್ಭದಲ್ಲಿ ಪರಮಶಿವನು ಪರಬ್ರಹ್ಮ ಸ್ವರೂಪನೆಂದು ಹೇಳಿದೆ. "ದ್ವಿತೀಯಾದ್ವೈಭಯಾಂಭವತಿ" ಎಂಬ ಶ್ರುತಿಯಿಂದ ದ್ವಿತೀಯ ವಸ್ತುಗಳೆಲ್ಲವೂ ದುಃಖಜನಕಗಳೆಂದು ತಿಳಿಯುವುದರಿಂದ ಪರಮಾತ್ಮನಲ್ಲಿ ಅಂತಹ ವಸ್ತುಗಳು ಯಾವುವೂ ಇಲ್ಲವೆಂದು ತದ್ಭಿನ್ನ ಸಮಸ್ತ ದ್ವೈತ ವಸ್ತುಗಳೂ ನಿಷಿದ್ಧವಾಗಿವೆ. ಇದು ವಿದ್ಯೆಯ ಪ್ರಥಮ ಕೂಟಾರ್ಥವು. ತನ್ನ ಪೂಜ್ಯರಾದ ಗುರುವಿನಲ್ಲಿ ಬ್ರಹ್ಮಾಭೇದಭಾವನಾದಾರ್ಢ್ಯದಿಂದ ಬ್ರಹ್ಮಾಭೇದವು ಸಿದ್ಧವಾದುದರಿಂದ ಗುರುಬ್ರಹ್ಮಾಭೇದವು ದ್ವಿತೀಯ ಕೂಟದ ಅರ್ಥವು. ಉಪಾಸಕನು ಗುರುಗಳಲ್ಲಿಟ್ಟಿರುವ ಅಕೃತ್ರಿಮ ಭಕ್ತಿವಶದಿಂದ ಗುರುವು ಪ್ರಸನ್ನನಾಗಿ ಬೀರುವ ಕರುಣಾಕಟಾಕ್ಷದಿಂದ ಉಪಾಸಕನಲ್ಲಿ ಬ್ರಹ್ಮಾಭೇದವು ಸಿದ್ಧಿಸುವುದೆಂದು ತೃತೀಯ ಕೂಟದ ಅರ್ಥವು. ತನಗೆ ಗುರುವಿನ ಮೂಲಕ ಶಿವಗರ್ಭದಲ್ಲಿ ಪ್ರವೇಶ ಸಂಪಾದಕವಾದ್ದರಿಂದ ಈ ಭಾವನಾ ವಿಷಯವಾದ ಶಿವ, ಗುರು, ಆತ್ಮರ ಅಭೇದವು ನಿಗರ್ಭಾರ್ಥವೆಂದು ಹೇಳಲ್ಪಟ್ಟಿದೆ ॥ ೮೨ ॥

೮೩

ಮಾತಾ ನಿರುಪಮತೇಜೋಮಯ್ಯಾಃ ಸ್ವಸ್ಯಾ ಮರೀಚಿರೂಪಾಣಾಮ್ ।
ಆವರಣದೇವತಾನಾಮೀಶತ್ವಾದುಚ್ಯತೇ ಗಣೇಶೀತಿ ॥ ೮೩ ॥

ಅಥ ಪರದೇವತಾಯಾ ವಿದ್ಯಾಯಾಶ್ಚಕ್ರರಾಜಸ್ಯ ಶ್ರೀಗುರೋರಾತ್ಮನಶ್ಚೈಕ್ಯಂ ಕೌಲಿಕಾರ್ಥ ಇತ್ಯುಚ್ಯತೇ. ಸರ್ವೇಷಾಂ ಬ್ರಹ್ಮಾಭೇದೇನ ಸಜಾತೀಯತ್ವಾತ್, ಸಜಾತೀಯಯೂಥಸ್ಯ ಕುಲಪದವಾಚ್ಯತ್ವಾತ್, 'ಸಜಾತೀಯೈಃ ಕುಲಂ ಯೂಥಂ' ಇತ್ಯಮರೋಕ್ತೇಃ. ಅಯಂ ಚ ಪಂಚಾನಾಮಭೇದಃ ಸಮಾನಧರ್ಮವತ್ತ್ವೇನ ಸಿಸಾಧಯಿಷಿತಃ. ಸ ಚ ಸಮಾನೋ ಧರ್ಮಃ 'ಗಣೇಶಗ್ರಹನಕ್ಷತ್ರಯೋಗಿನೀಂರಾಶಿರೂಪಿಣೀಂ. ದೇವೀಂ ಮಂತ್ರಮಯೀಂ ನೌಮಿ ಮಾತೃಕಾಪೀಠರೂಪಿಣೀಂ.' ಇತಿ ತಂತ್ರರಾಜೋಕ್ತಗಣೇಶಾದಿಷಟ್ಕಾತ್ಮಕತ್ವಾಽಽಖ್ಯಃ. ತತ್ರ ಪರದೇವತಾಯಾಂ ಪ್ರಥಮಂ ಗಣೇಶತ್ವಮುಪಪಾದಯತಿ—'ನ ತತ್ರ ಸೂರ್ಯೋ ಭಾತಿ' ಇತ್ಯಾದಿಶ್ರುತ್ಯಾ ಪ್ರತಿಪಾದಿತಾನವಧಿಕ ತೇಜೋರೂಪ ಬ್ರಹ್ಮಣೋ ಮರೀಚಯ ಏವಾವರಣದೇವತಾಃ ತಾಶ್ಚೈಕಾದಶೋತ್ತರಶತಸಂಖ್ಯಾಕಾಃ. ತಂತ್ರಭೇದೇನಾನ್ಯಾ ಅಪಿ ಪ್ರತಿಪಾದಿತಾಃ. ತಾದೃಶದೇವತಾಗಣಸ್ಯೇಶತ್ವಾದ್ಗಣೇಶೀತ್ಯುಚ್ಯತೇ ಮಾತಾ ॥ ೮೩ ॥

ತಂತ್ರಶಾಸ್ತ್ರದಲ್ಲಿ ಪರದೇವತಾ, ವಿದ್ಯಾ, ಚಕ್ರರಾಜ, ಶ್ರೀಗುರು ಮತ್ತು ಉಪಾಸಕ ಇವುಗಳ ಐಕ್ಯವನ್ನು ಕೌಲಿಕಾರ್ಥವೆಂದು ಹೇಳಿರುತ್ತದೆ. "ಸಜಾತೀಯೈಃ ಕುಲಂ ಯೂಥಂ" ಎಂದು ಅಮರಕೋಶದಲ್ಲಿ ಹೇಳಿದಂತೆ ಇವೆಲ್ಲವೂ ಬ್ರಹ್ಮಾಭೇದದಿಂದ ಸಜಾತೀಯಗಳಾಗಿವೆಯೆಂದು ತಿಳಿಯುವುದು ಆವಶ್ಯಕ. ಈ ಪಂಚವಸ್ತುಗಳ ಅಭೇದವು ಒಂದು ಧರ್ಮದ ಸಾಮ್ಯವನ್ನು ಅವಲಂಬಿಸಿ ಸಾಧನೀಯವಾಗಿದೆ. ಆ ಧರ್ಮವನ್ನು "ಗಣೇಶಗ್ರಹನಕ್ಷತ್ರಯೋಗಿನೀಂ ರಾಶಿ ರೂಪಿಣೀಂ. ದೇವೀಂ ಮಂತ್ರಮಯೀಂ ನೌಮಿ ಮಾತೃಕಾಪೀಠ ರೂಪಿಣೀಂ" ಎಂಬ ತಂತ್ರ ರಾಜವಚನವು ಗಣೇಶಾದಿ ಷಟ್ಕಾದಾತ್ಮ್ಯವೆಂದು ಹೇಳಿದೆ. ಅದರಂತೆ ಪರದೇವತೆಯಲ್ಲಿ ಗಣೇಶ ರೂಪತ್ವವನ್ನು ಈ ಪದ್ಯವು ಹೇಳುವುದು. "ನತತ್ರ ಸೂರ್ಯೋಭಾತಿ" ಎಂಬ ಶ್ರುತಿಯಿಂದ ನಿರುಪಮತೇಜೋರೂಪವಾದ ಪರದೇವತೆಯ ಕಿರಣಗಳೆಂಬ ಆವರಣ ದೇವತೆಗಳ ಗಣಕ್ಕೆ ಪರದೇವತೆಯು ಈಶಳಾಗಿರುವುದರಿಂದ ಗಣೇಶಿಯೆಂದು ವರ್ಣಿಸಲ್ಪಡುತ್ತಾಳೆ. ಆವರಣ ದೇವತೆಗಳು ಒಂದುನೂರಹನ್ನೊಂದು ಸಂಖ್ಯೆಯಿಂದ ಕೂಡಿವೆ. ತಂತ್ರಶಾಸ್ತ್ರದ ಗ್ರಂಥ ಭೇದಾನುಸಾರ ಹೆಚ್ಚಾಗಿಯೂ ಇರುವುವು ॥ ೮೩ ॥

೮೪

ಇಚ್ಛಾದಿತ್ರಿಸಮಷ್ಟಿರ್ಗುಣತ್ರಯಾಢ್ಯಾಽನಲೇಂದುರವಿನೇತ್ರಾ ।
ಏವಂ ನವಭಿರ್ಯೋಗಾದ್ಗ್ರಹರೂಪೇತ್ಯುಚ್ಯತೇ ಮಾತಾ ॥ ೮೪ ॥

ಇಚ್ಛಾ, ಜ್ಞಾನಾ, ಕ್ರಿಯೇತಿ ಶಕ್ತಿತ್ರಯಸಮಷ್ಟಿರೂಪಾ ಮಾತಾ. ತದುಕ್ತಂ ಸಂಕೇತಪದ್ಧತೌ—'ಇಚ್ಛಾ ಶಿರಃಪ್ರದೇಶೇಽಥ ಜ್ಞಾನಾ ಚ ತದಧೋಗತಾ. ಕ್ರಿಯಾ ಪದಗತಾ ಹ್ಯಸ್ಯಾಃ' ಇತಿ. ಗುಣವಿಶಿಷ್ಟಸ್ಯ ಶಬಲಬ್ರಹ್ಮಣೋಽವಯವರೂಪಾ ಏವ ಗುಣಾ ಇತಿ ವ್ಯವಹ್ರಿಯಂತೇ. ಆದಿತ್ಯಾದಿಗ್ರಹಾಣಾಂ ನವಸಂಖ್ಯಾಕತ್ವಾನ್ನವಸಂಖ್ಯಾಕಾವಯವಶಾಲಿತ್ವಮೇವ ಪ್ರಕೃತೇ ಗ್ರಹತ್ವಂ ವಿವಕ್ಷಿತಂ. ಏವಮೇವ ನಕ್ಷತ್ರಾದಿಷು ಬೋದ್ಧವ್ಯಮ್ ॥ ೮೪ ॥

ಪರದೇವತೆಯಲ್ಲಿ ಗ್ರಹರೂಪತ್ವವನ್ನು ಈ ರೀತಿಯಾಗಿ ತಿಳಿಯಬೇಕು. ಸಂಕೇತ ಪದ್ಧತಿಯಲ್ಲಿ "ಇಚ್ಛಾ ಶಿರಃ ಪ್ರದೇಶೇಽಥ ಜ್ಞಾನಾಚತದಧೋಗತಾ । ಕ್ರಿಯಾಪದಗತಾಹ್ಯಸ್ಯಾಃ" ಎಂದು ಪರದೇವತೆಯನ್ನು ಇಚ್ಛಾಜ್ಞಾನಾಕ್ರಿಯಾ ಇವುಗಳ ಸಮಷ್ಟಿ ರೂಪಳೆಂದು ಹೇಳಿದೆ. ಮತ್ತು ಗುಣತ್ರಯೋಪಾಧಿಯಿಂದ ಕೂಡಿದ ಪರದೇವತೆಗೆ ಗುಣಗಳು ಅವಯವ ರೂಪಗಳೆಂದು ವ್ಯವಹರಿಸಲ್ಪಟ್ಟಿದೆ. ಮತ್ತು ಅಗ್ನಿ–ಚಂದ್ರ–ಸೂರ್ಯರು ನೇತ್ರಸ್ಥಾನದಲ್ಲಿರುವರು. ಹೀಗೆ ಪರದೇವತೆಯಲ್ಲಿ ಒಂಭತ್ತು ವಸ್ತುಗಳು ಇವೆ. ಆದಿತ್ಯಾದಿ ಗ್ರಹಗಳು ಒಂಭತ್ತಾಗಿರುವುದರಿಂದ ಒಂಭತ್ತು ಅವಯವಗಳು ಪರದೇವತೆಯಲ್ಲಿಯೂ ಬರುವುದರಿಂದ ದೇವತೆಯು ಗ್ರಹರೂಪಳಾಗುವಳು. ನಕ್ಷತ್ರಾದಿ ರೂಪತ್ವವನ್ನೂ ಹೀಗೆಯೇ ಸಂಖ್ಯಾಸಾಮ್ಯದಿಂದ ಉಪಪಾದಿಸಬೇಕು ॥ ೮೪ ॥

೮೫

ಇಂದ್ರಿಯದಶಕೇನಾಂತಃಕರಣಚತುಷ್ಕೇಣ ವಿಷಯದಶಕೇನ ।
ಪ್ರಕೃತಿಪುರುಷಗುಣತತ್ತ್ವೈರ್ಜಾತಾ ನಕ್ಷತ್ರರೂಪಿಣೀ ಮಾತಾ ॥ ೮೫ ॥

ಜ್ಞಾನೇಂದ್ರಿಯಾಣಿ ಶ್ರೋತ್ರಾದೀನಿ ಪಂಚ, ಕರ್ಮೇಂದ್ರಿಯಾಣಿ ವಾಗಾದೀನಿ ಪಂಚೇತಿ ದಶೇಂದ್ರಿಯಾಣಿ, ಮನೋ-ಬುದ್ಧಿರಹಂಕಾರಶ್ಚಿತ್ತಂ ಚೇತ್ಯಂತಃಕರಣಚತುಷ್ಕಂ, ಶಬ್ದಾದಯೋ ವಚನಾದಯಶ್ಚ ವಿಷಯಾ ದಶ. ಪ್ರಕೃತಿರ್ಗುಣತ್ರಯಸಾಮ್ಯಾವಸ್ಥಾ, ಪುರುಷಃ, ಸತ್ತ್ವಾದಿಗುಣತ್ರಯಸಮಷ್ಟಿರೂಪಂ ಸುಖದುಃಖಮೋಹಮೂಲಂ ಗುಣತತ್ತ್ವಂ. ಏವಂ ಸಪ್ತವಿಂಶತಿಸಂಖ್ಯಾಕತ್ವಾನ್ನಕ್ಷತ್ರರೂಪತ್ವಂ ಮಾತುಃ ॥ ೮೫ ॥

ಪರದೇವತೆಯಲ್ಲಿ ನಕ್ಷತ್ರ ರೂಪತ್ವವು ಈ ವಿಧವಾಗಿದೆ. ಶ್ರೋತ್ರಾದಿ ಜ್ಞಾನೇಂದ್ರಿಯಗಳು ಐದು, ವಾಗಾದಿ ಕರ್ಮೇಂದ್ರಿಯಗಳು ಐದು, ಮನಸ್ಸು ಬುದ್ಧಿ, ಅಹಂಕಾರ ಚಿತ್ತಗಳೆಂದು ಅಂತಃಕರಣಗಳು ನಾಲ್ಕು, ಶಬ್ದಾದಿ ಜ್ಞಾನೇಂದ್ರಿಯ ವಿಷಯಗಳು ಐದು, ವಚನಾದಿ ಕರ್ಮೇಂದ್ರಿಯ ವಿಷಯಗಳು ಐದು, ಗುಣತ್ರಯ ಸಾಮ್ಯಾವಸ್ಥೆಯೆಂಬ ಪ್ರಕೃತಿ ಒಂದು, ಪುರುಷತತ್ತ್ವ ಒಂದು ಸತ್ತ್ವಾದಿ ಗುಣತ್ರಯ ಸಮಷ್ಟಿರೂಪವೂ ಸುಖದುಃಖ ಮೋಹಮೂಲವೂ ಆದ ಗುಣತತ್ತ್ವ ಒಂದು ಈ ರೀತಿಯಾಗಿ ಅಶ್ವಿನ್ಯಾದಿ ನಕ್ಷತ್ರಗಳಲ್ಲಿರುವ ಇಪ್ಪತ್ತೇಳೆಂಬ ಸಂಖ್ಯೆಯ ಅವಯವಗಳು ಇರುವುದರಿಂದ ಪರದೇವತೆಯು ನಕ್ಷತ್ರ ರೂಪಳೆಂಬುದನ್ನು ತಿಳಿಯಬಹುದು ॥ ೮೫ ॥

೮೭

ನರಪತಿರವಿಕಾಷ್ಠಾಷಟ್ಸಮುದ್ರದ್ವಿಸಂಖ್ಯೈ
ರಕಡಬವಹಪೂರ್ವೈರಕ್ಷರೈರ್ವೇಷ್ಟಿತಾಭಿಃ ॥
ಡರಲಕಸಹವರ್ಣಾದ್ಯಾಕಿನೀಭಿಸ್ತು ಷಡ್ಭಿ
ರ್ಘಟಿತತನುರಿತೀಯಂ ಕಥ್ಯತೇ ಯೋಗಿನೀತಿ ॥ ೮೭ ॥

ನರಪತಯೋ ರಾಜಾನಃ ಷೋಡಶಃ. ರವಯೋ ದ್ವಾದಶ. ಕಾಷ್ಠಾದಿಶೋ ದಶ, ಉರ್ಧ್ವಾರ್ಧೋದಿಗ್ದ್ವಯಸ್ಯಾಪ್ಯಷ್ಟಭಿರ್ದಿಗ್ಭಿಃ ಸಾಹಿತ್ಯಾತ್. ಸಮುದ್ರಾಶ್ಚತ್ವಾರಃ 'ಪಯೋಧರೀಭೂತಚತುಃಸಮುದ್ರಾಂ' ಇತ್ಯಾದೌ ತಥೈವ ಸಮುದ್ರಗತಸಂಖ್ಯಾಪ್ರಸಿದ್ಧೇಃ. ಷೋಡಶಾದಿಸಂಖ್ಯಾನಾಮಕಾರಾದ್ಯಕ್ಷರೈರ್ಯಥಾಸಂಖ್ಯಮನ್ವಯಃ. ಅಕಾರಾದ್ಯಾಃ ಷೋಡಶಸ್ವರಾಃ. ಅಮೃತಾದಿತದ್ದೇವತೋಪಲಕ್ಷಕಾಃ. ಕಾದಿಠಾಂತಾ ದ್ವಾದಶ ವರ್ಣಾಃ ಕಾಲರಾತ್ರ್ಯಾದೀನಾಮುಪಲಕ್ಷಕಾಃ. ಡಾದಿಫಾಂತಾ ದಶ ಡಾಮರ್ಯಾದೀನಾಂ. ಬಾದಿಲಾಂತಾಃ ಷಡ್ ಬಂಧಿನ್ಯಾದೀನಾಂ. ವಾದಿಸಾಂತಾಶ್ಚತ್ವಾರೋ ವರದಾದೀನಾಂ. ಹಕ್ಷೌ ದ್ವೌ ಹಂಸವತೀಕ್ಷಮಾ

ಪರದೇವತೆಯಲ್ಲಿ ಯೋಗಿನೀ ರೂಪತ್ವವನ್ನು ಈ ಪದ್ಯವು ಹೇಳುತ್ತದೆ. ಇಲ್ಲಿ ಅಕ್ಷರಗಳಿಗೆ ನರಪತಿ ಇತ್ಯಾದಿ ಪದವು ಅಕಡ ಇತ್ಯಾದಿ ಪದವೂ ವಿಶೇಷಣಗಳಾಗಿವೆ. ಮೊದಲನೆಯ ವಿಶೇಷಣವು ಸಂಖ್ಯೆಗಳನ್ನು ಹೇಳುತ್ತಿದೆ. ನರಪತಿ ಎಂದರೆ ರಾಜರು ಹದಿನಾರು, ರವಿ = ಸೂರ್ಯರು ಹನ್ನೆರಡು, ಕಾಷ್ಠಾ ದಿಕ್ಕುಗಳು, ಊರ್ಧ್ವ ಅಧೋದಿಕ್ಕುಗಳ ಜೊತೆಗೆ ಹತ್ತು, ಸಮುದ್ರಗಳು "ಪಯೋಧರೀಭೂತ ಚತುಃಸಮುದ್ರಾಂ" ಮುಂತಾದ ಕವಿಪ್ರಯೋಗ ಪ್ರಸಿದ್ಧಿಯಿಂದ ನಾಲ್ಕು, ಈ ಸಂಖ್ಯೆಗಳನ್ನು ಸೂಚಿಸಿದಂತೆ ಆಗಿದೆ. ಎರಡನೆಯ ವಿಶೇಷಣವು ಅ-ಕ-ಡ–ಬ-ವ-ಹ ಎಂಬ ಆದ್ಯಕ್ಷರಗಳನ್ನು ಕ್ರಮವಾಗಿ ಹೇಳುತ್ತದೆ. ಎರಡು ವಿಶೇಷಣಗಳನ್ನೂ ಕ್ರಮವಾಗಿ ವಿಶೇಷ್ಯದಲ್ಲಿ ಅನ್ವಯಿಸಲಾಗಿ ಅಮೃತಾದಿ ದೇವತೋಪಲಕ್ಷಕಗಳಾದ ಅಕಾರಾದಿಯಾದ ಹದಿನಾರು ಸ್ವರಗಳೂ, ಕಾಲರಾತ್ರ್ಯಾದಿ ದೇವತೋಪಲಕ್ಷಕಗಳಾದ ಕಕಾರಾದಿ ಠಕಾರಾನ್ತ ಹನ್ನೆರಡು ವರ್ಣಗಳೂ, ಡಾಮರ್ಯಾದಿ ದೇವತೆಗಳನ್ನುಪಲಕ್ಷಿಸುವ ಡಕಾರಾದಿ ಫಕಾರಾಂತ ಹತ್ತುವರ್ಣಗಳೂ ಬಂಧಿನ್ಯಾದಿ

ವತ್ಯೋರುಪಲಕ್ಷಕೌ. ಡಕಾರಾದಿ ವರ್ಣಷಟ್ಕಮಾದಿಭೂತಂ ಯಾಸಾ ಮಾಕಿನೀನಾಂ ತಾ ಡಾಕಿನ್ಯಾದಯಃ. ತೇನಾಮೃತಾಽಽದ್ಯಾವೃತಾ ಡಾ ಕಿನೀ, ಕಾಲರಾತ್ರ್ಯಾದ್ಯಾವೃತಾ ರಾಕಿನೀ, ಇತಿ ಪ್ರಕಾರೇಣ ಷಡ್ಭಿಸ್ತ್ವಗ ಸೃಙ್ಮಾಂಸಮೇದೋಽಸ್ಥಿಮಜ್ಜಾಧಿಪತಿಭಿರ್ವಿಶುದ್ಧ್ಯನಾಹತ ಮಣಿಪೂರ ಸ್ವಾಧಿಷ್ಠಾನ ಮೂಲಾಧಾರಾಜ್ಞಾಚಕ್ರಾಣಾಂ ತತ್ತದ್ದೇವತಾಽಽವರಣಶ ಕ್ತಿಸಮಾನಸಂಖ್ಯಾಕತತ್ತದೀಯದಲನಿವಿಷ್ಟತಾವತ್ತಾವತ್ಸಂಖ್ಯಾಕದೇವೀ ಸಂವೃತಾನಾಂ ಕರ್ಣಿಕಾಸು ನಿವಿಷ್ಟಾಭಿರ್ಡಾಕಿನೀರಾಕಿನೀಲಾಕಿನೀಕಾ ಕಿನೀಸಾಕಿನೀಹಾಕಿನೀಭಿರ್ಘಟಿತಾ ತನುರ್ಯಸ್ಯಾಃ ಸಾ ಯೋಗಿನೀತ್ಯು ಚ್ಯತ ಇತ್ಯರ್ಥಃ. ಯದ್ಯಪಿ " ತ್ವಗಸೃಙ್ಮಾಂಸಮೇದೋಽಸ್ಥಿಮಜ್ಜಾಶು ಕ್ರಾಣಿ ಧಾತವಃ " ಇತಿ ಭಿಷಜಾಂ ಘಂಟಾಘೋಷೇಣ ಧಾತವಃ ಸಪ್ತ, ತದಧಿಪತಿರಪಿ ಯಾಕಿನೀನಾಮ್ನಾ ಸಹಸ್ರಾರಪದ್ಮೇಽಮೃತಾಽಽದಿ ಸಕಲ ಶಕ್ತಿಬೃಂದಾಧಿಷ್ಠಿತದಲಕರ್ಣಿಕಾರಿತೇ ತಿಷ್ಠತೀತಿ ತಂತ್ರೇಷು ಪ್ರಸಿದ್ಧಂ;

ದೇವತೋಪಲಕ್ಷಕಗಳಾದ ಬಕಾರಾದಿ ಲಕಾರಾಂತ ಆರು ವರ್ಣಗಳೂ, ವರದಾದಿ ದೇವತೆಗಳನ್ನುಪಲಕ್ಷಿಸುವ ವಕಾರಾದಿ ಸಕಾರಾಂತ ನಾಲ್ಕು ವರ್ಣಗಳೂ, ಹಂಸ ವತೀ, ಕ್ಷಮಾವತೀ ದೇವತೋಪಲಕ್ಷಕಗಳಾದ ಹ–ಕ್ಷ ಎಂಬ ಎರಡು ವರ್ಣಗಳೂ ಹೇಳಲ್ಪಟ್ಟವೆ. ಆಕಿನೀ ಎಂಬುದಕ್ಕೆ ಕ್ರಮವಾಗಿ ಡ-ರ-ಲ-ಕ-ಸ.ಹ ಎಂಬ ವರ್ಣ ಗಳನ್ನು ಸೇರಿಸಿ ಸಂಧಿ ಮಾಡಿದರೆ ಡಾಕಿನೀ, ರಾಕಿನಿ, ಲಾಕಿನೀ, ಕಾಕಿನೀ, ಸಾಕಿನೀ, ಹಾಕಿನೀ, ಎಂದು ಶಕ್ತಿ ದೇವತೆಗಳ ಹೆಸರಾಗುವುದು. ತ್ವಕ್, ಅಸೃಕ್, ಮಾಂಸ, ಮೇದಸ್ಸು, ಅಸ್ಥಿ, ಮಜ್ಜಾ, ಎಂಬ ಆರು ಧಾತುಗಳಿಗೆ ಕ್ರಮವಾಗಿ ಅಧಿಪತಿಗಳಾಗಿ, ವಿಶುದ್ಧಿ-ಅನಾಹತ-ಮಣಿಪೂರ-ಸ್ವಾಧಿಷ್ಠಾನ–ಮೂಲಾಧಾರ-ಆಜ್ಞಾಚಕ್ರವೆಂಬ ತಮ್ಮ ಆವರಣ ದೇವತೆಗಳ ಸಮಸಂಖ್ಯೆಯ ದಲಗಳಿಂದ ಕೂಡಿದ ಆರು ಕಮಲಕರ್ಣಿಕೆಗಳಲ್ಲಿ ವಾಸಮಾಡುವ ಅಮೃತಾದಿ ಆವರಣ ಶಕ್ತಿಸಂವೃತಳಾದ ಡಾಕಿನೀ, ಕಾಲರಾತ್ರ್ಯಾದಿ ಶಕ್ತಿ ಸಂವೃತಳಾದ ರಾಕಿನೀ, ಡಾಮರ್ಯಾದಿ ಶಕ್ತಿ ಸಂವೃತಳಾದ ಲಾಕಿನೀ, ಬಂಧಿನ್ಯಾದಿ ಶಕ್ತಿ ಸಂವೃತಳಾದ ಕಾಕಿನೀ, ವರದಾದಿ ಶಕ್ತಿ ಸಂವೃತಳಾದ ಸಾಕಿನೀ, ಹಂಸವತ್ಯಾದಿ ಶಕ್ತಿ ಸಂವೃತ ಳಾದ ಹಾಕಿನೀ ಎಂಬ ಆರು ದೇವತೆಗಳಿಂದ ಸೇರಿದ ಮೂರ್ತಿಯನ್ನು ಧರಿಸಿರು ವುದರಿಂದ ಪರದೇವತೆಯು ಯೋಗಿನೀರೂಪಳಾಗಿರುವಳೆಂದು ತಿಳಿಯಬೇಕು. ವೈದ್ಯ ನಿಘಂಟುಗಳಲ್ಲಿ " ತ್ವಗಸೃಙ್ಮಾಂಸಮೇದೋಽಸ್ಥಿಮಜ್ಜಾಶುಕ್ರಾಣಿಧಾತವಃ"

ಷೋಢಾನ್ಯಾಸೇಽಪಿ ಕ್ವಚಿತ್ತಂತ್ರೇಷು ತಸ್ಯಾ ನ್ಯಾಸೋ ದೃಶ್ಯತೇ ; ತಥಾಽಪಿ ಯೋಗಿನೀಹೃದಯೇ ಷಣ್ಣಾಮೇವ ನ್ಯಾಸವಿಧಾನಾದಮೃತಾಽಽದಿಶಕ್ತ್ಯತಿರಿಕ್ತಶಕ್ತೇರಾವರಣರೂಪಾಯಾ ಅಭಾವೇನೈತತ್ಷಟ್ಕಸಮಷ್ಟ್ಯಾತ್ಮಕ ಮಾತೃತ್ವೇನ ಚ ಪಾರ್ಥಕ್ಯಾಭಾವಾದ್ಯೋಗಿನ್ಯಃ ಷಡೇವ. ಯದಾಹ—" ವಿಶುದ್ಧೌ ಹೃದಯೇ ನಾಭೌ ಸ್ವಾಧಿಷ್ಠಾನೇ ಚ ಮೂಲಕೇ. ಆಜ್ಞಾಯಾಂ ಧಾತುನಾಥಾಶ್ಚ ನ್ಯಸ್ತವ್ಯಾ ಡಾದಿದೇವತಾಃ. ಅಮೃತಾಽಽದಿಯುತಾಃ ಸಮ್ಯಗ್ಧ್ಯಾತವ್ಯಾಶ್ಚ ಸುರೇಶ್ವರಿ.' ಇತಿ ‖ ೮೬ ‖

ಎಂದು ಸಪ್ತಧಾತುಗಳನ್ನು ಹೇಳಿರುತ್ತಾರೆ. ತಂತ್ರಶಾಸ್ತ್ರಗಳಲ್ಲಿ ಏಳನೆಯ ಧಾತುವಿಗೆ ಅಧಿಪತಿಯಾಗಿ ಯಾಕಿನೀ ಎಂಬ ಶಕ್ತಿಯು ಸಹಸ್ರಾರ ಪದ್ಮದಲ್ಲಿ ಅಮೃತಾದಿ ಸಕಲ ಶಕ್ತಿಸಮೂಹದಿಂದ ಸೇರಿದ ದಳಗಳ ಮಧ್ಯದಲ್ಲಿ ವಾಸವಾಗಿದೆಯೆಂದೂ ಹೇಳಿದೆ. ಆದರೆ ಯೋಗಿನೀಹೃದಯದಲ್ಲಿ ಡಾಕಿನ್ಯಾದಿ ಆರು ಶಕ್ತಿದೇವತೆಗಳಿಗೆ ಮಾತ್ರ ನ್ಯಾಸವು ಉಕ್ತವಾಗಿರುವುದರಿಂವಲೂ ಅಮೃತಾದಿ ಶಕ್ತಿಗಳಿಗಿಂತ ಅತಿರಿಕ್ತವಾದ ಅವರಣ ಶಕ್ತಿಯಿಲ್ಲದಿರುವುದರಿಂದಲೂ ಆರು ಶಕ್ತಿಗಳ ಸಮಷ್ಟ್ಯಾತ್ಮಕವಾದ ಮಾತ್ರದಿಂದ ಪೃಥಕ್ಸ್ವರೂಪವು ಸಂಭವಿಸದಿರುವುದರಿಂದಲೂ ಯೋಗಿನಿಯರು ಆರು ಎಂಬುದೇ ಸಿದ್ಧಾನ್ತವು, " ವಿಶುದ್ಧೀ ಹೃದಯೇನಾಭೌಸ್ವಾಧಿಷ್ಠಾನೇ ಚ ಮೂಲಕೇ । ಆಜ್ಞಾಯಾಂ ಧಾತುನಾಥಾಶ್ಚನ್ಯಸ್ತವ್ಯಾಡಾದಿದೇವತಾಃ । ಅಮೃತಾದಿಯುತಾಃ ಸಮ್ಯಗ್ಧ್ಯಾತವ್ಯಾಶ್ಚ ಸುರೇಶ್ವರಿ " ಎಂಬ ವಚನವು ಇದೇ ಸಿದ್ಧಾಂತಕ್ಕೆ ಅನುಕೂಲವಾಗಿರುವುದು ‖ ೮೬ ‖

೮೭

ಪಂಚಭಿರ್ನಾಗಕೂರ್ಮಾದ್ಯೈಃ ಪ್ರಾಣಾಪಾನಾದಿಪಂಚಭಿಃ ।
ಜೀವಾತ್ಮಪರಮಾತ್ಮಭ್ಯಾಂ ಚೈಷಾ ರಾಶಿಸ್ವರೂಪಿಣೀ ॥ ೮೭ ॥

ಆದ್ಯಾದಿಪದಾಭ್ಯಾಂ ಕೃಕರದೇವದತ್ತಧನಂಜಯಾನಾಂ ವ್ಯಾನೋದಾನಸಮಾನಾನಾಂ ಚ ಸಂಗ್ರಹಃ. ಏವಂ ದ್ವಾದಶಾತ್ಮಕತ್ವಾದ್ರಾಶಿರೂಪಿಣೀ ಜಗನ್ಮಾತಾ. ಪೀಠಾನಾಂ ಗಣೇಶಾದಿಸಮಾನಸಂಖ್ಯಾಕತ್ವಾತ್ತದಾತ್ಮಕತ್ವೋಕ್ತ್ಯೈವ ತದುಕ್ತಪ್ರಾಯಮಿತಿ ನ ಪುನಃ ಪೃಥಕ್ಸಂರಂಭಃ ॥ ೮೭ ॥

ನಾಗ–ಕೂರ್ಮ–ಕೃಕರ-ದೇವದತ್ತ-ಧನಂಜಯಗಳೆಂಬ ಐದು ಉಪಪ್ರಾಣಗಳೂ, ಪ್ರಾಣ-ಅಪಾನ-ವ್ಯಾನ-ಉದಾನ-ಸಮಾನವೆಂಬ ಐದು ಮುಖ್ಯ ಪ್ರಾಣಗಳೂ, ಜೀವಾತ್ಮ, ಪರಮಾತ್ಮರಿಬ್ಬರೂ ಸೇರಿ ಹನ್ನೆರಡು ವಸ್ತುಗಳಾಗುವುವು. ಪರದೇವತೆಯು ಈ ದ್ವಾದಶ ವಸ್ತುಸ್ವರೂಪಳಾದ್ದರಿಂದ ಈ ಸಂಖ್ಯೆಯು ಪರದೇವತೆಯಲ್ಲಿಯೂ ಸಂಭವಿಸುವುದು. ಮೇಷಾದಿ ದ್ವಾದಶರಾಶಿಗಳಲ್ಲಿ ಸುಪ್ರಸಿದ್ಧವಾದ ಈ ಸಂಖ್ಯೆಯು ಇರುವುದರಿಂದ ಪರದೇವತೆಯನ್ನು ರಾಶಿಸ್ವರೂಪಳೆಂದು ತಿಳಿಯಬೇಕು. ಹಿಂದೆ ಪರದೇವತೆಯನ್ನು ಗಣೇಶಾದಿ ರೂಪಳೆಂದು ಹೇಳಿದೆ. ಗಣೇಶಾದಿ ಸಂಖ್ಯೆಗೆ ಪೀಠಾದಿ ಗತ ಸಂಖ್ಯೆಯೂ ಸಮಾನವಾದ್ದರಿಂದ ಪೀಠಾದ್ಯಾತ್ಮಕತ್ವವೂ ತುಲ್ಯನ್ಯಾಯದಿಂದ ಹೇಳಿದಂತಾಗಿದೆಯಾದ್ದರಿಂದ ಅದನ್ನು ಹೇಳಲು ಯತ್ನಿಸುವುದು ಆವಶ್ಯಕವಲ್ಲ॥ ೮೭ ॥

೭೭

ಅಕಥಾದಿಕಷೋಡಶಾಕ್ಷರಾತ್ಮಕತಾರ್ತೀಯಕಕಾಮವಾಗ್ಭವೈಃ ।
ಘಟಿತಾ ಚ ಪರಾಽಽದಿವಾಗ್ಗಣೈರಿತಿ ವಿದ್ಯಾಽಪಿ ಗಣೇಶರೂಪಿಣೀ ॥ ೭೭ ॥

ಅಥ ವಿದ್ಯಾಯಾಂಗಣೇಶಾದಿರೂಪಮುಪಪಾದಯತಿ—ಅಕಾರಾದಿ ಷೋಡಶಸ್ವರಾತ್ಮಕಂತಾರ್ತೀಯಂ ಶಕ್ತಿಕೂಟಂ. ಕಾದಿತಾಂತಾಕ್ಷರರೂಪಂ ದ್ವೈತೀಯೀಕಂ ಕಾಮರಾಜಕೂಟಂ. ಥಕಾರಾದಿಸಕಾರಾಂತಾಕ್ಷರಮಯಂ ಪ್ರಾಥಮಿಕಂ ವಾಗ್ಭವಕೂಟಂ. ಪರಾಽಽದಿವಾಕ್ಚತುಷ್ಟಯರೂಪಂ ಚೈತದ್ವ್ಯಷ್ಟಿಸಮಷ್ಟಿಭೇದೇನ. ಅತಃ ಶಬ್ದಗಣಸ್ಯೇಶತ್ವಾಚ್ಛ್ರೀವಿದ್ಯಾಽಪಿ ಗಣೇಶರೂಪಾ. ವೈತಾಲೀಯಂ ಛಂದಃ ॥ ೭೭ ॥

ಶ್ರೀ ವಿದ್ಯೆಯು ಗಣೇಶಾದಿ ರೂಪವೆಂಬುದನ್ನು ಈ ಪದ್ಯಗಳು ವಿವರಿಸುತ್ತವೆ. ಮಂತ್ರದಲ್ಲಿರುವ ತೃತೀಯ ಕೂಟವು ಅಕಾರಾದಿ ಹದಿನಾರು ಸ್ವರಾಕ್ಷರಗಳ ಸ್ವರೂಪವೂ, ದ್ವಿತೀಯವಾದ ಕಾಮಕೂಟವು ಕಕಾರಾದಿಯಾಗಿ ಕ್ರಮವಾದ ಹದಿನಾರು ವ್ಯಂಜನಗಳ ಸ್ವರೂಪವೂ ಪ್ರಥಮವಾದ ವಾಗ್ಭವ ಕೂಟವು ಥಕಾರಾದಿಯಾಗಿ ಕ್ರಮವಾದ ಹದಿನಾರು ವ್ಯಂಜನಗಳ ಸ್ವರೂಪವೂ ಆಗಿವೆ. ಇದರಿಂದ ವಿದ್ಯೆಯು ವರ್ಣಾತ್ಮಕವೆಂದು ತಿಳಿಯುವುದು. ಮತ್ತು ವಾಗ್ಭವ, ಕಾಮ, ಶಕ್ತಿಯೆಂಬ ಕೂಟತ್ರಯದಿಂದ ಕೂಡಿದ ವಿದ್ಯೆಯು ಕ್ರಮವಾಗಿ ವ್ಯಷ್ಟಿಸಮಷ್ಟಿ ರೂಪಗಳಿಂದ ಪರಾ, ಪಶ್ಯಂತೀ, ಮಧ್ಯಮಾ, ವೈಖರೀ, ಎಂಬ ಶಬ್ದಾತ್ಮಕವೂ ಆಗಿದೆ. ಹೀಗೆ ಶಬ್ದಗಳ ಗಣಕ್ಕೆ ಈಶಳಾಗಿರುವುದರಿಂದ ವಿದ್ಯೆಯು ಗಣೇಶರೂಪಿಣಿಯಾಗಿದೆ॥ ೭೭ ॥

೮೯

ಬಿಂದುತ್ರಯಸನಾದತ್ರಯತದನ್ಯಕೂಟತ್ರಯೈರ್ಗ್ರಹತ್ವಮಿಹ ।
ನಕ್ಷತ್ರತ್ವಂ ಚ ದಶಾಕಾರಾಣಾಂ ವ್ಯಂಜನೈರಪಾರ್ಥಕ್ಯಾತ್ ॥ ೮೯ ॥

ಬಿಂದುನಾದವಿನಿರ್ಮುಕ್ತಂ ಕೂಟಮೇಕಂ ಬಿಂದುರೇಕೋ ನಾದ ಏಕಃ, ಏವಂ ಪ್ರತಿಕೂಟಂ ತ್ರಯಂ ತ್ರಯಮಿತ್ಯರ್ಥಃ. ತದುಕ್ತಂ— ' ಬೀಜಬಿಂದುಧ್ವನೀನಾಂ ಚ ತ್ರಿಕೂಟೇಷು ಗ್ರಹಾತ್ಮಿಕಾ ' ಇತಿ. ಬಿಂದವಶ್ಚ ಧ್ವನಯಶ್ಚೇತಿ ದ್ವಂದ್ವೋತ್ತರಂ ಬೀಜಾನಾಂ ಬಿಂದುಧ್ವನಯ ಇತಿ ತತ್ಪುರುಷಾತ್. ತೇನ ಚ ಬೀಜಬಿಂದುಧ್ವನೀನಾಮಿತಿ ಪದೇನಷಡ್ ಗಣಿತಾ ಭವಂತಿ. ತೇಷಾಂ ಷಣ್ಣಾಂ ತ್ರಿಕೂಟೇಷು; ಅರ್ಥಾತ್ತ ದತಿರಿಕ್ತೇಷು ತ್ರಿಷು ಮೇಲನೇನೇತಿ ಶೇಷಃ. ಷಷ್ಠ್ಯಾ ವಾ ಸಂಬಂಧಿತ್ವಮು

ವಿದ್ಯೆಯಲ್ಲಿರುವ ಮೂರು ಕೂಟಗಳಲ್ಲಿಯೂ ಪ್ರತ್ಯೇಕವಾಗಿ ಬಿಂದು, ನಾದ, ಮಿಕ್ಕ ಅಕ್ಷರಗಳ ಸಮೂಹವೂ ಸೇರಿ ಮೂರು ಸಂಖ್ಯೆಯಿಂದಿವೆ. ಇವೆಲ್ಲ ಸೇರಿ ಮೂರು ಕೂಟಗಳಲ್ಲಿ ಒಂಭತ್ತು ಸಂಖ್ಯೆಯ ಅವಯವಗಳು ಇರುವುವು. ಗ್ರಹಗಳಲ್ಲಿ ಪ್ರಸಿದ್ಧವಾದ ಈ ಸಂಖ್ಯೆಯ ಸಂಬಂಧದಿಂದ ಗ್ರಹರೂಪತ್ವವನ್ನು ವಿದ್ಯೆಯು ಹೊಂದಿದೆಯೆಂದು ತಿಳಿಯಬೇಕು. " ಬೀಜ ಬಿಂದುಧ್ವನೀನಾಂ ಚತ್ರಿಕೂಟೇಸು ಗ್ರಹಾತ್ಮಿಕಾ " ಎಂಬ ವಚನದಲ್ಲಿ ಗ್ರಹಾತ್ಮಕತ್ವವನ್ನು ಹೀಗೆಯೇ ಸ್ಪಷ್ಟಪಡಿಸಿರುತ್ತದೆ. ಇಲ್ಲಿ " ಬೀಜಬಿಂದುಧ್ವನೀನಾಂ " ಎಂಬ ಪದಕ್ಕೆ ಬಿಂದವಶ್ಚ + ಧ್ವನಯಶ್ಚ ಎಂದು ದ್ವಂದ್ವ ಸಮಾಸಮಾಡಿ ಬೀಜಾನಾಂ ಬಿಂದು ಧ್ವನಯಃ ಎಂದು ಷಷ್ಠೀ ತತ್ಪುರುಷ ಸಮಾಸವನ್ನು ಮಾಡಬೇಕು. ಇದರಿಂದ ಬೀಜಾಕ್ಷರ ಸಂಬಂಧವಾದ ಬಿಂದು, ಧ್ವನಿಗಳ ಷಟ್ತ್ವ (ಆರು) ಸಂಖ್ಯೆಯು ಲಬ್ಧವಾಗುವುದು. ಆ ಸಂಖ್ಯೆಯನ್ನು ಮಿಕ್ಕಿರುವ ಕೂಟಾವಯವಗಳ ಜೊತೆಗೆ ಸೇರಿಸಿದರೆ ವಿದ್ಯೆಯು ಒಂಭತ್ತು ಸಂಖ್ಯೆಯನ್ನು ಹೊಂದುವುದರಿಂದೆ ಗ್ರಹಾತ್ಮಕವಾಗುವುದು. " ಧ್ವನೀನಾಂ " ಎಂಬ ಪದದಲ್ಲಿರುವ ಷಷ್ಠೀ ವಿಭಕ್ತಿಯು ಸಂಬಂಧ ಸಾಮಾನ್ಯ ಅರ್ಥದಲ್ಲಿ ಬಂದಿದೆಯೆಂತಲೂ ವಿವರಿಸಬಹುದು. ಅರ್ಥದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಇಲ್ಲಿ ಕೆಲವರು ಮತ್ತೊಂದು ವಿಧವಾಗಿ ಈ ವಾಕ್ಯಕ್ಕೆ ಅರ್ಥವನ್ನು ವಿವರಿಸುತ್ತಾರೆ. ಅವರ ವ್ಯಾಖ್ಯಾನ ಶೈಲಿಯು ಈ ವಿಧವಾಗಿದೆ :—ಬೀಜವೆಂಬ ಪದಕ್ಕೆ

ರ್ಥಃ. ತೈಃ ಷಡ್ಭಿಃ ಸಂವೇಲ್ಯ ಗಣಿತೇಷು ಕೂಟೇಷು ಸತ್ಸು ಗ್ರಹಾತ್ಮಿಕಾ ವಿದ್ಯಾ ಭವತೀತಿ ಯೋಜನಾ. ಯೇ ತು ಬೀಜಪದೇನ ಹಕಾರರೇಫೇ ಕಾರಸಮೂಹಮಾತ್ರಂ, ತಾನಿ ಚ ಬಿಂದವಶ್ಚ ಧ್ವನಯಶ್ಚೇತಿ ತ್ರಿಪದ ದ್ವಂದ್ವ ಇತಿ ವ್ಯಾಖ್ಯಾಯ ಬೀಜಮಾತ್ರೇಣಾವಯವವಿಶ್ಲೇಷ ಸಚಿವೇನ ಗ್ರಹತ್ವಮುಪಪಾದಯಂತಿ ತೇಷಾಮಿತರಾಂಶವೈಯರ್ಥ್ಯಂ; ಸಂಪೂರ್ಣಾಯಾ ವಿದ್ಯಾಯಾ ಏವ ಗಣೇಶನಕ್ಷತ್ರಾದ್ಯಾತ್ಮಕತ್ವೋಕ್ತ್ಯಾ ಪ್ರಕೃತೇ ವಿದ್ಯೈಕದೇಶಸ್ಯೈವ ಗ್ರಹತ್ವೋಪಪಾದನೇ ಕ್ವಚಿದೇಕದೇಶೇ ಕ್ವಚಿತ್ಸಂಪೂರ್ಣಾಯಾಮಿತಿ ವೈರೂಪ್ಯಂ ಚ. ಯಥಾ ಚ ಯೋಗಿನ್ಯಾದೇರಪಿ ನೈಕದೇಶರೂಪತಾಽಽಪತ್ತಿಸ್ತಥಾಽನುಪದಮೇವ ವಕ್ಷ್ಯಾಮಃ. ಕಿಂ ಚ ಬಿಂದುವಿನಿರ್ಮುಕ್ತಸ್ಯ ಬೀಜತ್ವಾಭಾವಾದ್ಬೀಜಪದೇನ ಪರಾಮರ್ಶೋಽಪಿ ನೋಚಿತಃ. ಕಥಮನ್ಯಥಾ 'ಶುದ್ಧಂ ಬಿಂದುಯುತಂ' ಇತ್ಯಾದಿದಶವಿಧಮಾತೃಕಾನ್ಯಾಸಾಂತರ್ಗತ ಶುದ್ಧಮಾತೃಕಾನ್ಯಾಸಪ್ರಕರಣೇ ಬಿಂದು

ಹಕಾರ, ರೇಫ, ಈಕಾರಗಳ ಸಮೂಹವು ಮಾತ್ರ ಅರ್ಥ. ಈ ಅರ್ಥವುಳ್ಳ ಬೀಜಪದವನ್ನು ಸೇರಿಸಿ "ಬೀಜಾನಿ ಚ ಬಿಂದವಶ್ಚ ಧ್ವನಯಶ್ಚೇತಿ" ಎಂಬ ರೀತಿಯಲ್ಲಿ ಪದತ್ರಯವುಳ್ಳ ದ್ವಂದ್ವಸಮಾಸವನ್ನು ಮಾಡಬೇಕು. ಹಿಂದೆ ಹೇಳಿರುವಂತೆ ಬೀಜಗಳಲ್ಲಿ ಸೇರಿದ ಪ್ರತ್ಯೇಕ ಅವಯವಗಳನ್ನೂ ಗಣನೆ ಮಾಡುವುದರಿಂದ ಗ್ರಹಸಂಖ್ಯೆಯು ಲಭಿಸಿರುವುದರಿಂದ ಗ್ರಹಾತ್ಮಕತ್ವವನ್ನು ತಿಳಿಯಬಹುದು. ಈ ವ್ಯಾಖ್ಯಾನವು ಸಾಧುವಾದುದಲ್ಲ. ಗ್ರಹಾತ್ಮಕತ್ವವು ಈ ಪಕ್ಷದಲ್ಲಿ ವಿದ್ಯೆಯ ಅವಯವಗಳಿಂದಲೇ ಸಿದ್ಧವಾದುದರಿಂದ ಇತರಾಂಶವು ನಿಷ್ಫಲವಾಗುವುದು. ಮತ್ತು ಗಣೇಶ, ನಕ್ಷತ್ರಾದಿ ರೂಪತ್ವವನ್ನು ಸಂಪೂರ್ಣ ವಿದ್ಯೆಯಲ್ಲಿ ಉಪಪಾದಿಸಿ ಗ್ರಹಾತ್ಮಕತ್ವವನ್ನು ವಿದ್ಯಾ ಏಕದೇಶದಲ್ಲಿ ಮಾತ್ರ ಉಪಪಾದಿಸಿರುವುದು ಒಂದೊಂದು ಕಡೆ ಒಂದೊಂದು ರೀತಿಯನ್ನವಲಂಬಿಸುವ ವೈಷಮ್ಯ ದೋಷಕ್ಕೆ ಆಸ್ಪದವಾಗುವುದು. ಯೋಗಿನ್ಯಾದಿ ರೂಪತ್ವ ವಿಷಯದಲ್ಲಿಯೂ ವಿದ್ಯಾ ಏಕದೇಶಾವಲಂಬನವು ಪ್ರಸಕ್ತವಾಗುವುದಿಲ್ಲವೆಂಬುದನ್ನು ಮುಂದೆ ವ್ಯಕ್ತಪಡಿಸುತ್ತೇವೆ. ಮತ್ತು ಬಿಂದು (ಅನುಸ್ವಾರ) ಶೂನ್ಯವಾದ ವರ್ಣವು ಬೀಜವಾಗಲಾರದಾದುದರಿಂದ ಬೀಜಪದದಿಂದ ಹಕಾರಾದಿ ವರ್ಣಗಳನ್ನು ಸೂಚಿಸಿರುವುದು ಉಚಿತವಾಗಲಾರದು. ಬಿಂದು ಶೂನ್ಯವರ್ಣಕ್ಕೆ ಬೀಜತ್ವವು ಇಲ್ಲದ್ದರಿಂದಲೇ "ಶುದ್ಧಂಬಿಂದುಯುತಂ" ಇತ್ಯಾದಿ ದಶವಿಧ ಮಾತೃಕಾನ್ಯಾಸಗಳಲ್ಲಿ ಒಂದಾದ ಶುದ್ಧ ಮಾತೃ

ವಿನಿರ್ಮೋಕೇ ಸತಿ ಕೇವಲಾನಾಮಕ್ಷರಾಣಾಂ ಬೀಜತ್ವಾಭಾವಾಪತ್ತ್ಯಾ ಬಿಂದುಯುತನ್ಯಾಸೇ ಪೌನರುಕ್ತ್ಯೇಽಪಿ ಸಬಿಂದುಕ ಏವ ಶುದ್ಧನ್ಯಾಸಃ ಕಾರ್ಯಃ ಇತಿ ಸಾಂಪ್ರದಾಯಿಕಾನಾಮುಕ್ತಿಃ ಸಂಗಚ್ಛತ ಇತಿ ದಿಕ್. ಸಂಪ್ರದಾಯಾರ್ಥಪ್ರಕರಣೇ ಸಪ್ತತ್ರಿಂಶದ್ವರ್ಣಾ ಉಕ್ತಾಃ. ತೇಷು ದಶ ಶ್ರೀಕಂಠಾನಾಂ ಸ್ವಸ್ವವ್ಯಂ ಜನ್ಯೈಃ ಸಹಗಣನೇ ದಶಸಂಖ್ಯಾಯಾ ಬಾಧೇ ಸಪ್ತವಿಂಶತಿರವಶಿಷ್ಯಂತೇ ; ತೇನ ಚ ನಕ್ಷತ್ರಾತ್ಮಕತ್ವಂ ಸಿದ್ಧಮಿತ್ಯಾಹ—ನಕ್ಷತ್ರತ್ವಂ ಚೇತಿ. ತದುಕ್ತಂ—"ಹೃಲ್ಲೇಖಾತ್ರಯಸಂಭೂತೈಸ್ತಿಥಿಸಂಖ್ಯೈಸ್ತಥಾಽಕ್ಷರೈಃ. ಅನ್ಯೈರ್ದ್ವಾದಶಭಿರ್ವರ್ಣೈರೇಷಾ ನಕ್ಷತ್ರರೂಪಿಣೀ." ಇತಿ ‖ ೮೯ ‖

ಕಾನ್ಯಾಸದಲ್ಲಿ ಬಿಂದುಗಳನ್ನು ವರ್ಜಿಸಿ ಕೇವಲ ವರ್ಣಗಳನ್ನು ಗ್ರಹಿಸಿದರೆ ಅವು ಬೀಜಗಳೇ ಅಲ್ಲವಾದ್ದರಿಂದ ಬಿಂದು ಸಹಿತವಾಗಿ ಗ್ರಹಿಸಿದರೆ ಪೌನರುಕ್ತ್ಯ ದೋಷವು ಬಂದರೂ ಹಾಗೆಯೇ ಶುದ್ಧ ನ್ಯಾಸಮಾಡಬೇಕೆಂದು ಸಾಂಪ್ರದಾಯಿಕರು ಹೇಳಿರುವುದು ಸಂಗತವಾಗುವುದು. ವಿದ್ಯೆಯಲ್ಲಿ ನಕ್ಷತ್ರಾತ್ಮಕತ್ವವನ್ನು ಪ್ರತಿಪಾದಿಸಬೇಕು. ಸಂಪ್ರದಾಯಾರ್ಥವನ್ನು ಹೇಳುವ ಸಂದರ್ಭದಲ್ಲಿ ಮೂವತ್ತೇಳು ವರ್ಣಗಳನ್ನು ವಿದ್ಯೆಯಲ್ಲಿ ತೋರಿಸಿರುತ್ತದೆ. ಅವುಗಳಲ್ಲಿ ಹತ್ತು ಅಕಾರ ಸ್ವರಗಳನ್ನು ವ್ಯಂಜನಗಳ ಜೊತೆಗೆ ಎಣಿಸುವುದರಿಂದ ಹತ್ತು ಸಂಖ್ಯೆಯು ನ್ಯೂನವಾಗಿ ಇಪ್ಪತ್ತೇಳು ಸಂಖ್ಯೆಯು ಉಳಿಯುವುದು. ಇದು ಅಶ್ವಿನ್ಯಾದಿ ನಕ್ಷತ್ರಗಳಲ್ಲಿ ಪ್ರಸಿದ್ಧವಾದ ಸಂಖ್ಯೆಯಾದ್ದರಿಂದ ಇದರ ಸಂಬಂಧದಿಂದ ವಿದ್ಯೆಯನ್ನು ನಕ್ಷತ್ರಾತ್ಮಕವೆಂದು ಭಾವಿಸಬೇಕು. "ಹೃಲ್ಲೇಖಾತ್ರಯಸಂಭೂತೈಸ್ತಿಥಿಸಂಖ್ಯೈಸ್ತಥಾಽಕ್ಷರೈಃ । ಅನ್ಯೈರ್ದ್ವಾದಶಭಿರ್ವರ್ಣೈರೇಷಾ ನಕ್ಷತ್ರರೂಪಿಣೀ" ಎಂಬ ಪ್ರಮಾಣವು ಈ ರೀತಿಯಾಗಿಯೇ ನಕ್ಷತ್ರರೂಪತ್ವವನ್ನು ಪ್ರತಿಪಾದಿಸಿರುತ್ತದೆ ‖ ೮೯ ‖

೯೦

ಹೃಲ್ಲೇಖಾಭಿಸ್ತಿಸೃಭಿಸ್ತದನ್ಯಕೂಟೈಶ್ಚ ಯೋಗಿನೀಯೋಗಾತ್ ।
ರಾಶೀಭೂತಾಽಪ್ಯೇಷಾ ತಿಸೃಣಾಂ ಪೂರ್ವಾರ್ಣೈರ್ಲೈಕ್ಯಾತ್ ॥ ೯೦ ॥

ಹೃಲ್ಲೇಖಾತ್ರಯಂ ತದ್ವಿನಿರ್ಮುಕ್ತಂ ಕೂಟತ್ರಯಂ ಚೇತಿ ಷಡ್ಭಿರ್ಯೋಗಾದೇಷಾ ವಿದ್ಯಾ ಯೋಗಿನೀ. ತಿಸೃಣಾಂ ಹೃಲ್ಲೇಖಾನಾಂ ಪೂರ್ವವರ್ಣೈರ್ಲಕಾರೈಃ ಸಹ ಗಣನಾಯಾಂ ದ್ವಾದಶಸಂಖ್ಯಾಕಾವಯವಶಾಲಿತ್ವಾದ್ರಾಶಿರೂಪಾಽಪ್ಯೇಷಾ. ಉಕ್ತಂ ಚ—'ವಿದ್ಯಾಂತರ್ಭೂತಶಕ್ತ್ಯಾದ್ಯೈಃ ಶಾಕ್ತೈಃ ಷಡ್ಭಿರಥಾಕ್ಷರೈಃ. ಯೋಗಿನೀತ್ವಂ ಚ ವಿದ್ಯಾಯಾ ರಾಶಿತ್ವಂ ಚಾಂತ್ಯವರ್ಜಿತೈಃ" ಇತಿ. ವಿದ್ಯಾಂತರ್ಭೂತಾ ಯೇ ಶಕ್ತೇರಾದ್ಯಭಾಗಾಶ್ಚತುಃ ಪಂಚತ್ರ್ಯಕ್ಷರರೂಪಾಸ್ತ್ರಯಃ, ತೈಃ ಶಾಕ್ತೈಃ ಶಕ್ತಿ

ಮೂರು ಹೃಲ್ಲೇಖೆಗಳೂ ತದ್ವರ್ಜಿತವಾದ ಮೂರು ಕೂಟಗಳೂ ಸೇರಿ ಯೋಗಿನಿಯರಲ್ಲಿ ಪ್ರಸಿದ್ಧವಾದ ಷಟ್ತ್ವ (ಆರು) ಸಂಖ್ಯೆಯು ವಿದ್ಯೆಯಲ್ಲಿ ಲಭಿಸುವುದರಿಂದ ಯೋಗಿನೀ ರೂಪತ್ವವು ಸಂಭವಿಸುವುದು. ಮತ್ತು ವಿದ್ಯೆಯಲ್ಲಿರುವ ಮೂರು ಕೂಟಗಳಲ್ಲಿ ಕ್ರಮವಾಗಿ ಹ್ರೀಂಕಾರವನ್ನೂ ಸೇರಿಸಿ ಐದು, ಆರು, ನಾಲ್ಕು ವರ್ಣಗಳು ಇವೆ. ಇವುಗಳಲ್ಲಿ ಪ್ರತಿಯೊಂದು ಕೂಟದಲ್ಲಿಯೂ ಕಡೆಯ ಲಕಾರ–ಹ್ರೀಂಕಾರಗಳನ್ನು ಒಂದಾಗಿ ಭಾವಿಸಿ ಎಲ್ಲ ವರ್ಣಗಳನ್ನೂ ಕ್ರಮವಾಗಿ ಎಣಿಸಲಾಗಿ ಮೇಷಾದಿ ದ್ವಾದಶ ರಾಶಿಗಳ ದ್ವಾದಶತ್ವ (ಹನ್ನೆರಡು) ಸಂಖ್ಯೆಯು ವಿದ್ಯೆಯಲ್ಲಿ ಅನ್ವಯಿಸುವುದರಿಂದ ರಾಶಿ ರೂಪವೂ ಆಗುವುದು. "ವಿದ್ಯಾಂತರ್ಭೂತಶಕ್ತ್ಯಾದ್ಯೈಃ ಶಾಕ್ತೈಃ ಷಡ್ಭಿರಥಾಕ್ಷರೈಃ। ಯೋಗಿನೀತ್ವಂ ಚ ವಿದ್ಯಾಯಾ ರಾಶಿತ್ವಂ ಚಾಂತ್ಯವರ್ಜಿತೈಃ" ॥ ಎಂಬ ವಚನವು ಯೋಗಿನೀರೂಪತ್ವವನ್ನೂ ಗ್ರಹರೂಪತ್ವವನ್ನೂ ವಿವರಿಸುತ್ತದೆ. ವಿದ್ಯೆಯಲ್ಲಿ ಅಂತರ್ಗತವಾದ ಶಕ್ತಿಯ ಆದ್ಯ ಭಾಗಗಳಾದ ನಾಲ್ಕು, ಐದು, ಮೂರು ವರ್ಣಗಳ ಗುಂಪುಗಳು ಮೂರು ಇವೆ. ಶಾಕ್ತವೆಂಬ ತದ್ಧಿತಪ್ರತ್ಯಯಾಂತ ಶಬ್ದವು ಇವಕ್ಕೆ ವಿಶೇಷಣವಾಗಿ ಹೇಳಲ್ಪಟ್ಟಿದೆ. ತದ್ಧಿತಪ್ರತ್ಯಯವು ಸ್ವಾರ್ಥದಲ್ಲಿ ಅಥವಾ ಸಾಹಿತ್ಯವೆಂಬ ಸಂಬಂಧಾರ್ಥದಲ್ಲಿ ಬಂದಿರುವುದು. ಇದರಿಂದ ಶಕ್ತಿರೂಪಗಳಾದ ಮೂರು ಹ್ರೀಂಕಾರಗಳನ್ನೂ ಮೂರು ಹಿಂದೆ ಹೇಳಿರುವ ಗುಂಪುಗಳನ್ನೂ ಸೇರಿಸಿದರೆ ಆರುಸಂಖ್ಯೆಯುಳ್ಳವು

ಭಿಃ. ಸ್ವಾರ್ಥೇ ತದ್ಧಿತಃ. ಸಾಹಿತ್ಯರೂಪಸಂಬಂಧಾರ್ಥೇ ವಾ. ತಿಸೃಭಿಃ ಶಕ್ತಿಭಿಃ ಸಹಿತೈಃ. ತೇನ ಷಟ್ಸಂಖ್ಯಾಮಾಪನ್ನೈರಿತ್ಯರ್ಥಃ. ಕೇಚಿತ್ತು-ಶಾಕ್ತಪದೇನ ಲಕಾರಾಸ್ತ್ರಯಃ ; ತೇಷಾಮೇವ ಶಕ್ತ್ಯಾದ್ಯೈರಿತಿ ವಿಶೇಷಣಂ ; ತಚ್ಚ ಶಕ್ತಿಸಾಹಿತ್ಯದ್ಯೋತನಾಯ ; ತೇನ ಚ ಷಟ್ಸಂಖ್ಯಾಪೂರ್ತಿಃ ; ಏವಂ ಚ ತ್ರಿಭಿರ್ಲಕಾರೈಸ್ತಿಸೃಭಿರ್ಲಜ್ಜಾಭಿಶ್ಚೇತ್ಯರ್ಥಃ— ಇತಿ ವ್ಯಾಚಕ್ಷತೇ. ತೇಷಾಂ ಮತೇ ವಿದ್ಯೈಕದೇಶಸ್ಯೈವ ಯೋಗಿನೀರೂಪತ್ವಾತ್ ' ಯೋಗಿನೀತ್ವಂ ಚ ವಿದ್ಯಾಯಾಃ ' ಇತ್ಯುಕ್ತಿಸ್ವಾರಸ್ಯಭಂಗಾಪತ್ತಿಃ, ವಿದ್ಯೈಕದೇಶೇ ವಿದ್ಯಾಪದಸ್ಯ ಲಕ್ಷಣಾಽಽಪತ್ತೇಃ. ಇದಂ ತು ಚಿಂತ್ಯಂ-ಶಕ್ತ್ಯಾದ್ಯಾ ಲಕಾರಾಸ್ತ್ರಯಃ ಶಾಕ್ತಾಃ ಸಕಾರಾಸ್ತ್ರಯ ಇತಿ ಸ್ಪಷ್ಟತರಂ ; ಹಾದಿವಿದ್ಯಾಪಕ್ಷ ಏವಾಸ್ಯ ಸ್ವಾರಸ್ಯೇ ಸತ್ಯಪಿ ಶಾಕ್ತಪದಂ ಲಕಾರಾರ್ಥಕತ್ವೇನ ಕಿಮಿತಿ ವ್ಯಾಖ್ಯಾತಂ ತತ್ಪಕ್ಷಪಾತಿಭಿರಿತಿ. ' ಅಂತ್ಯವರ್ಜಿತೈಃ ' ಇತ್ಯಸ್ಯಾಂತ್ಯಾನಾಂ ಮಾಯಾನಾಂ ಪಾರ್ಥಕ್ಯೇನ

ಗಳಾಗಿ ಯೋಗಿನೀ ರೂಪವು ಲಭಿಸುವುದೆಂದು ಅರ್ಥವು. ಕೆಲವರು ಈ ವಚನಕ್ಕೆ ಅರ್ಥವನ್ನು ಈ ರೀತಿಯಾಗಿ ವಿವರಿಸುವರು :—ಶಾಕ್ತಪದಕ್ಕೆ ಮೂರು ಲಕಾರಗಳು ಅರ್ಥ. ಅವಕ್ಕೆ " ಶಕ್ತ್ಯಾದ್ಯೈಃ " ಎಂಬುದು ವಿಶೇಷಣವು. ಈ ವಿಶೇಷಣದಿಂದ ಶಕ್ತಿಸಾಹಿತ್ಯವು ತೋರಿ ಒಟ್ಟಾಗಿ ಸೇರಿಸುವುದರಿಂದ ಆರು ಸಂಖ್ಯೆಯು ಲಭಿಸುವುದು. ಎಂದರೆ ಮೂರು ಲಕಾರ ಮೂರು ಹ್ರೀಂಕಾರ ಇವುಗಳಿಂದ ಆರು ಸಂಖ್ಯೆಯಾಗುವುದು. ಈ ವ್ಯಾಖ್ಯಾನವು ಸಮಂಜಸವಲ್ಲ. ಈ ಪಕ್ಷದಲ್ಲಿ ವಿದ್ಯೆಯ ಸ್ವಲ್ಪ ಭಾಗವು ಮಾತ್ರ ಯೋಗಿನೀ ರೂಪತ್ವವನ್ನು ಹೊಂದುವುದು. ಆದರೆ " ಯೋಗಿನೀತ್ವಂ ಚ ವಿದ್ಯಾಯಾಃ " ಎಂಬ ವಾಕ್ಯವು ಪೂರ್ಣವಾದ ವಿದ್ಯೆಯಲ್ಲಿ ಯೋಗಿನೀತ್ವವನ್ನು ಹೇಳುತ್ತದೆ. ಇದರ ಸ್ವಾರಸ್ಯಕ್ಕೆ ಭಂಗಬರುವುದು. ಅಲ್ಲಿರುವ " ವಿದ್ಯಾ " ಎಂಬ ಪದಕ್ಕೆ ಅದರ ಭಾಗವೆಂಬ ಅರ್ಥವನ್ನು ಲಕ್ಷಣಾವೃತ್ತಿಯಿಂದ ಹೇಳುವುದು ಅಷ್ಟು ಸ್ವಾರಸ್ಯವನ್ನು ಹೊಂದುವುದಿಲ್ಲ. ಇದೊಂದು ಗಮನಿಸಬೇಕಾದ ವಿಷಯ :—ಶಕ್ತ್ಯಾದ್ಯಗಳೆಂದರೆ ಲಕಾರಗಳೆಂದೂ ಶಾಕ್ತಗಳೆಂದರೆ ಸಕಾರಗಳೆಂದೂ ಸ್ಪಷ್ಟವಾಗಿದೆ. ಇದನ್ನು ನೋಡಿದರೆ ಹಾದಿ ವಿದ್ಯಾಪಕ್ಷದಲ್ಲಿಯೇ ಸ್ವಾರಸ್ಯವಿದ್ದಂತೆ ಕಂಡುಬರುವುದು. ಆದರೂ ತತ್ಪಕ್ಷಪಾತಿಗಳು ಶಾಕ್ತ ಪದಕ್ಕೆ ಲಕಾರವೆಂಬ ಅರ್ಥವನ್ನು ವಿವರಿಸುವುದೂ ಸರಿಯಲ್ಲ. " ಅಂತ್ಯವರ್ಜಿತೈಃ " ಎಂದರೆ ಹ್ರೀಂಕಾರಗಳನ್ನು ಪ್ರತ್ಯೇಕವಾಗಿ ಎಣಿಸದೇ ಹಿಂದಿನ ಲಕಾರಗಳೊಡನೆ

ಗಣನಂ ವರ್ಜನೀಯಮಿತ್ಯರ್ಥಃ. ಅರ್ಥಾತ್ಸಂನಿಹಿತೈರ್ಲಕಾರೈರ್ಮೇಲನೇನೇತಿ ಭಾವಃ. ಯೇ ತು ಯಥಾಶ್ರುತಂ ವ್ಯಾಚಕ್ಷತೇ ತೇಷಾಂ "ವಿದ್ಯಾಯಾಃ" ಇತಿ ಸ್ವಾರಸ್ಯಂ ಭಜ್ಯೇತ. ಅಥ ವಾ ರಾಶೀನಾಂ ಸಪಾದನಕ್ಷತ್ರದ್ವಯಾತ್ಮಕತ್ವೇನ ನಕ್ಷತ್ರತ್ವೋಕ್ತ್ಯೈವ ಪೂರ್ಣವಿದ್ಯಾಯಾ ರಾಶಿತ್ವಂ ಸಿದ್ಧಂ; ಏಕದೇಶೇಽಪಿ ತದಸ್ತೀತಿ ವಿಶೇಷದ್ಯೋತನಾಯಾಂತ್ಯವರ್ಜಿತೈರಿತ್ಯುಕ್ತಿಃ ॥ ೯೦ ॥

ಒಂದುಗೂಡಿಸಿ ಎಣಿಸಬೇಕೆಂದು ಅರ್ಥ. ಇಲ್ಲಿಯೂ ಯಥಾಶ್ರುತ ವ್ಯಾಖ್ಯಾನವನ್ನು ಮಾಡಿದರೆ ಹಿಂದಿನಂತೆ "ವಿದ್ಯಾಯಾಃ" ಎಂಬ ಪದದ ಸ್ವಾರಸ್ಯಕ್ಕೆ ಭಂಗ ಬರುವುದು. ಅಥವಾ ವಿದ್ಯೆಯನ್ನು ರಾಶಿರೂಪವೆಂದು ತೋರಿಸಿದುದರಿಂದಲೇ ರಾಶಿಯೆಂಬುದು ಎರಡೂಕಾಲು ನಕ್ಷತ್ರಗಳ ಸ್ವರೂಪವಾದ್ದರಿಂದ ವಿದ್ಯೆಯು ನಕ್ಷತ್ರಾತ್ಮಕವೆಂದು ಸಿದ್ಧವಾಗುವುದು. ಏಕದೇಶದಲ್ಲಿಯೂ ರಾಶಿತ್ವವಿರುವುದೆಂಬ ವಿಶೇಷವನ್ನು ಸೂಚಿಸುವುದಕ್ಕಾಗಿ "ಅಂತ್ಯವರ್ಜಿತೈಃ" ಎಂದು ಹೇಳಿದೆ ॥ ೯೦ ॥

೯೧

ದೇವ್ಯಾ ರೂಪಾಂತರತ್ವೇನ ವಿದ್ಯಾಯಾಸ್ತದಭೇದತಃ।
ಗಣೇಶಗ್ರಹನಕ್ಷತ್ರಯೋಗಿನೀರಾಶಿಪೀಠತಾ ॥ ೯೧ ॥

ಏವಂ ಗಣೇಶಾದಿಷಟ್ಕತ್ವಸ್ಯ ವಿದ್ಯಾಯಾಂ ದೇವ್ಯಭೇದಸಾಧಕತ್ವೇ ಸ್ಥಿತೇऽಪಿ ವಿದ್ಯಾಯಾಂ ದೇವೀರೂಪಾಂತರತ್ವಸ್ಯ ವಚನಬಲಾದೇವ ಸಿದ್ಧತ್ವೇನ ರಾಮಕೃಷ್ಣಾದಿವದಭೇದಸ್ಯಾಪಿ ಸಿದ್ಧತ್ವೇನಾಭೇದೇನೈವ ಹೇತುನಾ ಷಟ್ಕತ್ವಂ ಸಾಧಯತಿ ॥ ೯೧ ॥

ಈ ರೀತಿಯಾಗಿ ವಿದ್ಯೆಯಲ್ಲಿ ದೇವಿಯ ಅಭೇದವನ್ನು ಗಣೇಶ ಆದಿಯಾಗಿ ಷಟ್ಕದ ತಾದಾತ್ಮ್ಯ (ಆರರ ಅಭೇದ) ದಿಂದ ಸಾಧಿಸಿದಂತಾಗಿದೆ. ಆದರೆ ವಿದ್ಯೆಯು ದೇವಿಯ ರೂಪಾಂತರವೆಂಬುದು ಪ್ರಾಮಾಣಿಕವಾದ ವಚನದಿಂದಲೇ ಸಿದ್ಧವಾಗುವುದರಿಂದ ರಾಮಕೃಷ್ಣಾದಿಗಳಿಗೆ ಅಭೇದವು ಇರುವಂತೆಯೇ ದೇವೀ ವಿದ್ಯಾ ಇವುಗಳ ಅಭೇದವು ಸಿದ್ಧವಾದ್ದರಿಂದ ಆ ಹೇತುವಿನಿಂದಲೇ ಗಣೇಶಾದಿ ಷಟ್ಕತಾದಾತ್ಮ್ಯವನ್ನೂ ಸುಲಭವಾಗಿ ಸಾಧಿಸಬಹುದು ಎಂದು ಈ ಶ್ಲೋಕವು ಹೇಳುತ್ತಿದೆ. ವಿದ್ಯೆಯು ದೇವಿಯ ರೂಪಾಂತರವೇ ಎನಿಸಿರುವುದರಿಂದ ಗಣೇಶಾದಿ ಷಟ್ಕರೂಪಳಾದ ದೇವಿಯ ಅಭೇದದಿಂದ ಕೂಡಿದ ವಿದ್ಯೆಯು ಗಣೇಶ-ಗ್ರಹ-ನಕ್ಷತ್ರ-ಯೋಗಿನೀ–ರಾಶಿ–ಪೀಠಗಳೆಂಬ ಷಟ್ಕರೂಪವಾಗುವುದೆಂಬುದು ನ್ಯಾಯ ಸಿದ್ಧವಾಗುವುದು. ಎಂದು ಪದ್ಯದ ಅರ್ಥವು ॥ ೯೧ ॥

೯೨

ರೇಖಾದಲಕೋಣಗಣ್ಯೈರ್ಘಟನಾಚ್ಚಕ್ರೇ ಗಣೇಶತ್ವಂ ।
ತ್ರೈಲೋಕ್ಯಮೋಹನಾದ್ಯೈರ್ನವಭಿಶ್ಚಕ್ರೈರ್ಗ್ರಹತ್ವಂ ಚ ॥ ೯೨ ॥

ಅಥ ಚಕ್ರರಾಜೇ ಗಣೇಶಾದಿತ್ವಮಾಹ—ರೇಖಾಶ್ಚತುರಸ್ರಾಸ್ತಿಸ್ರೋ ವರ್ತುಲಾಸ್ತಿಸ್ರಃ. ದಲಾನಿ ಚತುರ್ವಿಂಶತಿಃ. ಕೋಣಾಃ ಪಂಚಚತ್ವಾರಿಂಶತ್. ತ್ರೈಲೋಕ್ಯೇತಿ. ಸರ್ವಾನಂದಮಯಾಂತೈರಿತಿ ಶೇಷಃ. ರೇಖಾಭಿಸ್ತಿಸೃಭಿರಕಥಾದಿಮಯೀಭಿರ್ಮಧ್ಯ ತ್ರಿಕೋಣಗಾಭಿರ್ಗಣೇಶತ್ವಂ ವದತಾಂ ಚಕ್ರೈಕದೇಶೇ ತದಾಪತ್ತ್ಯಾ ವೈರೂಪ್ಯಂ ದೋಷಃ ॥ ೯೨ ॥

ಶ್ರೀ ಚಕ್ರರಾಜದಲ್ಲಿ ಗಣೇಶಾದಿರೂಪತ್ವವನ್ನು ಈ ಶ್ಲೋಕಗಳು ವಿವರಿಸುತ್ತವೆ. ಚಕ್ರರಾಜದಲ್ಲಿ ಚತುರಶ್ರಾಕಾರ ವರ್ತುಲಾಕಾರಗಳ ರೇಖೆಗಳು ಒಟ್ಟಾಗಿ ಆರು ಇವೆ. ದಲಗಳು ಇಪ್ಪತ್ತನಾಲ್ಕು ಇವೆ. ಕೋಣ (ಮೂಲೆ) ಗಳು ನಲವತ್ತೈದು. ಇವುಗಳ ಗುಂಪು ಗಣವು. ಇದಕ್ಕೆ ಈಶ = ಅಧಿಪತಿಯಾಗಿರುವುದರಿಂದ ಚಕ್ರರಾಜವನ್ನು ಗಣೇಶವೆಂದರಿಯಬೇಕು. ಮತ್ತು ತ್ರೈಲೋಕ್ಯಮೋಹನಮೊದಲಾದ ಸರ್ವಾನಂದಮಯಾಂತ ಒಂಭತ್ತು ಚಕ್ರಗಳು ಅಂತರ್ಗತವಾಗಿರುವುದರಿಂದ ಗ್ರಹರೂಪತ್ವವೂ ಚಕ್ರರಾಜದಲ್ಲಿ ಪ್ರಾಪ್ತವಾಗುವುದು. ಅ–ಕ–ಥಾದಿ ವರ್ಣಮಯವಾಗಿ ಮಧ್ಯ ತ್ರಿಕೋಣದಲ್ಲಿರುವ ಮೂರು ರೇಖೆಗಳ ಗಣಕ್ಕೆ ಈಶವಾಗಿರುವ ನಿಮಿತ್ತದಿಂದ ಗಣೇಶತ್ವವನ್ನು ಸಮರ್ಥಿಸುವ ಪಕ್ಷದಲ್ಲಿ ಚಕ್ರದ ಒಂದು ಭಾಗವು ಮಾತ್ರವೇ ಗಣೇಶ ರೂಪವನ್ನು ಹೊಂದಿದಂತಾಗುವುದೆಂಬ ದೋಷಕ್ಕೆ ಅವಕಾಶವಿರುವುದು ॥ ೯೨ ॥

೯೩

ವೃತ್ತತ್ರಯಧರಣೀತ್ರಯಮನ್ವಶ್ರಾಣಾಂ ವಿಭಜ್ಯ ಗಣನೇನ ।
ಸಪ್ತಭಿರಿತರೈಶ್ಚಕ್ರೈಶ್ಚಕ್ರೇ ನಕ್ಷತ್ರರೂಪತ್ವಂ ॥ ೯೩ ॥

ದ್ವಯೋಃ ಪದ್ಮಯೋಃ ಕರ್ಣಿಕಾವೃತ್ತೇ ದ್ವೇ, ಏಕಂ ಬಹಿರ್ವೃತ್ತಮಿತಿ ತ್ರಯಂ. ಧರಣೀತ್ರಯಂ ಭೂಗೃಹರೇಖಾಸ್ತಿಸ್ರಃ. ಮನ್ವಶ್ರಾಣಿ ಚತುರ್ದಶ ಕೋಣಾಃ. ಇತರೈಃ ತ್ರೈಲೋಕ್ಯಮೋಹನಸರ್ವಸೌಭಾಗ್ಯದಾಯಕಾತಿರಿಕ್ತೈಃ. ವೃತ್ತತ್ರಯಮನ್ವಶ್ರ ಬಹಿರ್ದಶಾರೈರಿತಿ ಕೇಚಿತ್ ॥ ೯೩ ॥

ಚಕ್ರರಾಜದಲ್ಲಿರುವ ಎರಡು ಪದ್ಮಾಕಾರಗಳ ಕರ್ಣಿಕಾವರ್ತುಲ ರೇಖೆಗಳು ಎರಡು, ಬಹಿರ್ಭಾಗದ ವರ್ತುಲ ರೇಖೆಯೊಂದು ಹೀಗೆ ವರ್ತುಲ ರೇಖೆಗಳು ಮೂರು ಆಗುವುವು. ಭೂಗೃಹ ರೇಖೆಗಳು ಮೂರು ಇವೆ. ಕೋಣಗಳು ಹದಿನಾಲ್ಕು ಇವೆ. ತ್ರೈಲೋಕ್ಯ ಮೋಹನ ಸರ್ವಸೌಭಾಗ್ಯದಾಯಕ ಚಕ್ರಗಳನ್ನು ಬಿಟ್ಟು ಏಳು ಚಕ್ರಗಳ ಸಂಖ್ಯೆಯನ್ನು ಹಿಂದೆ ಹೇಳಿದ ವರ್ತುಲ ರೇಖಾ, ಭೂಗೃಹ ರೇಖಾ, ಕೋಣ ರೇಖೆಗಳನ್ನೆಲ್ಲ ಬೇರೆ ಬೇರೆಯಾಗಿ ಎಣಿಸಿದರೆ ನಕ್ಷತ್ರಗಳಲ್ಲಿ ಪ್ರಸಿದ್ಧವಾದ ಇಪ್ಪತ್ತೇಳು ಸಂಖ್ಯೆಯು ಲಭಿಸುವುದರಿಂದ ನಕ್ಷತ್ರರೂಪವೆಂದು ತಿಳಿಯಬೇಕು. ಕೆಲವರು ವರ್ತುಲ ರೇಖಾತ್ರಯ, ಬಹಿರ್ದಶಾರ, ಚತುರ್ದಶ ಕೋಣಗಳ ಗಣನೆಯಿಂದ ನಕ್ಷತ್ರ ರೂಪವನ್ನು ಸಮರ್ಥಿಸುವರು ॥ ೯೩ ॥

೯೪

**ಸ್ಥಿತಿಸಂಹೃತಿಚಕ್ರೇ ದ್ವೇ ಪದ್ಮೇ ದ್ವೇ ವೃತ್ತಭೂಗೃಹೇ ಚ ದ್ವೇ ।
ಏವಂ ಷಡ್ಭಿರ್ಯೋಗಾಚ್ಛ್ರೀಚಕ್ರಂ ಯೋಗಿನೀರೂಪಮ್ ॥ ೯೪ ॥**

ಬಿಂದುತ್ರಿಕೋಣವಸುಕೋಣಾಃ ಸಂಹೃತಿಚಕ್ರಂ, ದಶಾರೇ ದ್ವೇ ಚತುರ್ದಶಾರಂ ಚ ಸ್ಥಿತಿಚಕ್ರಂ, ಅವಶಿಷ್ಟಂ ಸೃಷ್ಟಿಚಕ್ರಮಿತ್ಯೇತತ್ತ್ರಿಪ್ರಕಾರಕತ್ವಂ ಚಕ್ರಸಂಕೇತೇ ಸ್ಪಷ್ಟಂ. ಪದ್ಮೇ ವಸುದಲಷೋಡಶದಲೇ. ವೃತ್ತಮೇಕಂ ಭೂಗೃಹತ್ವೇನೈಕಂ. ಅಷ್ಟಭಿಃ ಕೋಣೈರ್ಬ್ರಾಹ್ಮ್ಯಾದಿಯೋಗಿನೀರೂಪತ್ವಂ ವದತಾಂ ತ್ವತಿವೈರೂಪ್ಯಂ ॥ ೯೪ ॥

ಚಕ್ರಸಂಕೇತದಲ್ಲಿ ಬಿಂದು, ತ್ರಿಕೋಣ, ಮತ್ತು ಅಷ್ಟಕೋಣಗಳನ್ನು ಸಂಹೃತಿ ಚಕ್ರವೆಂದೂ, ದಶಾರದ್ವಯ, ಮತ್ತು ಚತುರ್ದಶಾರಗಳನ್ನು ಸ್ಥಿತಿ ಚಕ್ರವೆಂದೂ, ಮಿಕ್ಕ ಅಂಶವೆಲ್ಲವೂ ಸೃಷ್ಟಿ ಚಕ್ರವೆಂದೂ ಸ್ಪಷ್ಟವಾಗಿ ಹೇಳಿದೆ. ಅದರಂತೆ ಸ್ಥಿತಿ-ಸಂಹಾರಗಳೆಂಬ ಎರಡು ಚಕ್ರಗಳು, ಅಷ್ಟದಲ-ಷೋಡಶದಲವೆಂಬ ಎರಡು ಪದ್ಮಗಳು, ವೃತ್ತಾಕಾರ-ಭೂಗೃಹವೆಂಬ ಎರಡು ರೇಖಾಕಾರಗಳೂ ಸೇರಿ ಆರು ಸಂಖ್ಯೆಯ ಸಂಬಂಧದಿಂದ ಯೋಗಿನೀ ರೂಪವಾಗುವುದು. ಅಷ್ಟಕೋಣಗಳಿಂದ ಬ್ರಾಹ್ಮ್ಯಾದಿ ಯೋಗಿನೀರೂಪತ್ವವನ್ನು ವಿವರಿಸುವುದು ತುಂಬಾ ವೈಷಮ್ಯಮೋಷಕ್ಕೆ ಆಸ್ಪದವಾಗುವುದರಿಂದ ಸಮಂಜಸವಲ್ಲ ॥ ೯೪ ॥

೯೫

ಪಂಚಚತುಃಶಕ್ತ್ಯನಲಾ ಬಿಂದುರ್ವೃತ್ತಂ ಚ ಭೂಬಿಂಬಮ್ ।
ಏವಂ ದ್ವಾದಶಸಂಖ್ಯೈರ್ಘಟನಾಚ್ಚಕ್ರಸ್ಯ ರಾಶಿತ್ವಮ್ ॥ ೯೫ ॥

ಸ್ವಾಭಿಮುಖಾಗ್ರ ತ್ರಿಕೋಣಾನಿ ಶಕ್ತಯ ಇತ್ಯುಚ್ಯಂತೇ. ತಾನಿ ಪಂಚ. ಪರಾಙ್ಮುಖಾಗ್ರ ತ್ರಿಕೋಣಾನ್ಯನಲಾಃ. ತಾನಿ ಚತ್ವಾರಿ. ತದುಕ್ತಂ—' ಪಂಚಶಕ್ತಿ ಚತುರ್ವಹ್ನಿ ಸಂಯೋಗಾಚ್ಚಕ್ರ ಸಂಭವಃ." ಇತಿ. ವೃತ್ತಂ ಪದ್ಮದ್ವಯಗರ್ಭಿತಂ. ಯೇ ತು ನವ ತ್ರಿಕೋಣಾನಿ ದ್ವೇ ಪದ್ಮೇ ಭೂಗೃಹಮೇಕಮಿತ್ಯಾಹುಸ್ತೇಷಾಂ ಬಿಂದುಪರಿತ್ಯಾಗೋ ದೋಷಃ ॥ ೯೫ ॥

ಪೂರ್ವಾಭಿಮುಖವಾಗಿ ಇರುವ ಉಪಾಸಕನಿಗೆ ಮುಂದಿರುವ ಚಕ್ರದಲ್ಲಿ ತನಗೆ ಅಭಿಮುಖವಾಗಿರುವ ಐದು ತ್ರಿಕೋಣಗಳು ಶಕ್ತಿಯೆಂದೂ, ಮಿಕ್ಕ ನಾಲ್ಕು ತ್ರಿಕೋಣಗಳು ಅಗ್ನಿಯೆಂದೂ ಕರೆಯಲ್ಪಡುವುವು. " ಪಂಚಶಕ್ತಿ ಚತುರ್ವಹ್ನಿ ಸಂಯೋಗಾಚ್ಚಕ್ರಸಂಭವಃ " ಎಂಬ ಪ್ರಮಾಣ ವಚನವೂ ಐದು ಶಕ್ತಿ ಚಕ್ರಗಳಿಂದಲೂ ನಾಲ್ಕು ಅಗ್ನಿ ಚಕ್ರಗಳಿಂದಲೂ ಸೇರಿ ಚಕ್ರನಿರ್ಮಾಣವಾಗಿದೆ ಯೆಂದು ಹೇಳುತ್ತದೆ. ಹೀಗೆ ಒಂಭತ್ತು ತ್ರಿಕೋಣಗಳು, ಒಂದು ಬಿಂದು, ಪದ್ಮ ದ್ವಯಗಳಿಂದ ಗರ್ಭಿತವಾದ ಒಂದು ವೃತ್ತ, ಮತ್ತು ಭೂಬಿಂಬ ಇವುಗಳು ಸೇರಿ ಹನ್ನೆರಡು ಸಂಖ್ಯೆಯ ಸಂಬಂಧದಿಂದ ರಾಶಿರೂಪವಾಗುವುದು. ಕೆಲವರು ಒಂಭತ್ತು ತ್ರಿಕೋಣಗಳನ್ನೂ ಎರಡು ಪದ್ಮಗಳನ್ನೂ ಒಂದು ಭೂಗೃಹವನ್ನೂ ಸೇರಿಸಿ ರಾಶಿ ರೂಪವೆಂದು ಹೇಳುವರು. ಆದರೆ ಬಿಂದುವನ್ನು ಎಣಿಸದೇ ಬಿಟ್ಟಂತಾಗುವುದರಿಂದ ಆ ಅಂಶಕ್ಕೆ ರಾಶಿ ರೂಪತ್ವವಿಲ್ಲದಂತಾಗುವುದು ॥ ೯೫ ॥

೯೬

**ಚಕ್ರಂ ವಿದ್ಯಾಽಕ್ಷರೈರೇನ ಜನನಾತ್ತದಭೇದವತ್ ।
ದೇವ್ಯಾ ರೂಪಾಂತರತ್ವಾಚ್ಚ ತೇನ ಯುಕ್ತೋಕ್ತರೂಪತಾ ॥ ೯೬ ॥**

ಚಕ್ರಸ್ಯ ವಿದ್ಯಾಽಕ್ಷರಜನ್ಯತ್ವಾದಪ್ಯಭೇದಸ್ಯ ಸಿದ್ಧತ್ವಾತ್ತೇನ ಹೇತುನಾ ಷಡ್ರೂಪತ್ವಂ ದ್ರಢಯತಿ—ಯದ್ಯಪಿ ಮೂಲತಂತ್ರೇ ಚಕ್ರೇ ವಿದ್ಯಾಯಾ ಅಭೇದಸ್ತದಕ್ಷರಜನ್ಯತ್ವಜ್ಞಾಪಕ ಏವೋಕ್ತೋ, ನ ಪುನಃ ಷಡ್ರೂಪಕತ್ವಜ್ಞಾಪಕಃ, ತಥಾಽಪಿ 'ಏವಂ ವಿಶ್ವಪ್ರಥಾಽಽಕಾರಾ ಚಕ್ರರೂಪಾಮಹೇಶ್ವರೀ' ಇತ್ಯುಕ್ತ್ಯಾ ಷಡ್ರೂಪತಾ ಸೂಚಿತೇತಿ ಸಂಪ್ರದಾಯಃ ॥ ೯೬ ॥

ಚಕ್ರವು ವಿದ್ಯಾ ಅಕ್ಷರಗಳಿಂದ ಜನ್ಯವಾಗಿರುವುದರಿಂದ ವಿದ್ಯೆಯ ಅಭೇದವನ್ನು ಹೊಂದಿದೆ. ಆ ಕಾರಣದಿಂದಲೇ ವಿದ್ಯೆಯಲ್ಲಿರುವಂತೆ ಚಕ್ರದಲ್ಲಿಯೂ ಷಡ್ರೂಪತ್ವವನ್ನು ಸಾಧಿಸಬಹುದು. ಎಂಬುದನ್ನು ಈ ಪದ್ಯ ದೃಢಪಡಿಸುವುದು. ಮೂಲತಂತ್ರದಲ್ಲಿ ಚಕ್ರದಲ್ಲಿರುವ ವಿದ್ಯಾ ಅಭೇದವು ಅಕ್ಷರ ಜನ್ಯತ್ವವನ್ನು ಸೂಚಿಸುವುದಾಗಿ ಹೇಳಿದೆಯೇ ಹೊರತು ಷಡ್ರೂಪತ್ವಕ್ಕೆ ಸೂಚಕವಾಗಿ ಹೇಳಿಲ್ಲ. ಆದರೂ "ಏವಂ ವಿಶ್ವಪ್ರಥಾಕಾರಾ ಚಕ್ರರೂಪಾ ಮಹೇಶ್ವರೀ" ಎಂಬ ಮಾತಿನಿಂದ ಷಡ್ರೂಪತ್ವವೂ ಸೂಚಿಸಲ್ಪಟ್ಟಿದೆಯೆಂದು ಸಾಂಪ್ರದಾಯಿಕರು ಒಪ್ಪಿರುವರು ॥ ೯೬ ॥

೯೭-೯೮

ಯಾವನ್ಮಾತೃಕಮುದಿತಾನ್ಯೇಕಸಮೇತಾನಿ ಪಂಚಾಶತ್ ।
ಪೀಠಾನಿ ಪುನರ್ಗಣಿತಾನ್ಯೋಜಾಪೂರ್ಕಾನಿ ಚತ್ವಾರಿ ॥ ೯೭ ॥
ಗಣಪಗ್ರಹಭಾದೀನಾಂ ಶಶನಿಧಿತಾರರ್ತುಸೂರ್ಯಸಂಖ್ಯಾನಾವ್ ।
ಮೇಲನತಃ ಪೀಠಾನಿ ಜ್ಞೇಯಾನ್ಯೇತೇಷು ಪಂಚಪಂಚಾಶತ್ ॥ ೯೮ ॥

ಏತೇಷಾಂ ಗಣೇಶಾದೀನಾಂ ಪಂಚಾನಾಂ ಮೇಲನೇ ಪಂಚ ಪಂಚಾಶತ್ ಸಂಪದ್ಯಂತೇ, ಗಣೇಶಸ್ಯೈಕವಿಧತ್ವೇನೈವ ಗಣನಾತ್, ರೇಖಾದಲಕೋಣೇಷು ಪಂಚಸಪ್ತತಾವಪಿ 'ಏಕೋ ಗಣೇಶಃ' ಇತ್ಯೇವ ವ್ಯವಹಾರಾತ್. ಪೀಠಾನಿ ಯದ್ಯಪಿ ಕಾಮರೂಪಾದಿಛಾಯಾಛತ್ರಾಂತಾನ್ಯೇಕಪಂಚಾಶತ್, ತಥಾಽಪಿ 'ಓಜಾಪೂರ್ಕಾನಾಂ' ಇತಿ ಪ್ರಾಧಾ

ಹಿಂದೆ ಹೇಳಿದ ಗಣೇಶಾದಿಗಳಲ್ಲಿ ಗಣೇಶರೂಪವನ್ನು ಒಂದಾಗಿಯೂ ಗ್ರಹ, ನಕ್ಷತ್ರ, ಯೋಗಿನೀ ಮತ್ತು ರಾಶಿಗಳಲ್ಲಿರುವ ಒಂಭತ್ತು, ಇಪ್ಪತ್ತೇಳು, ಆರು, ಮತ್ತು ಹನ್ನೆರಡೆಂಬ ಸಂಖ್ಯೆಗಳನ್ನು ಸೇರಿಸಿದರೆ ಐವತ್ತೈದು ಆಗುವುವು. ಎಪ್ಪತ್ತೈದು ರೇಖಾದಲ ಕೋಣಗಳ ಗಣನೆಯಲ್ಲಿಯೂ "ಏಕೋಗಣೇಶಃ" ಗಣೇಶನು ಒಂದು ಎಂದು ವ್ಯವಹಾರವು ಇದೆ. ಐವತ್ತೈದು ಸಂಖ್ಯೆಯ ಲಾಭದಿಂದ ಪೀಠರೂಪತ್ವವು ಲಭಿಸುವುದು. ಪೀಠಗಳು ಕಾಮರೂಪ ಮೊದಲಾಗಿ ಛಾಯಾಛತ್ರಾಂತ ಐವತ್ತೊಂದು ಸಂಖ್ಯೆಯುಳ್ಳವುಗಳಾಗಿವೆ. ಆದರೆ ಅವುಗಳನ್ನು "ಓಜಾಪೂರ್ಕಾನಾಂ" ಎಂದು ಪ್ರಧಾನರೂಪದಿಂದ ಪುನಃ ಗಣಿಸಿದರೆ ಪೀಠಗಳ ಸಂಖ್ಯೆಯೂ ಐವತ್ತೈದು ಆಗುವುದು. ಆದ್ದರಿಂದ ಗಣೇಶಾದಿ ಪಂಚಕ ಸಮಷ್ಟಿ ರೂಪದಿಂದಲೇ ಪೀಠಾತ್ಮಕತ್ವವು ಸಿದ್ಧವಾಗಿದೆಯೆಂಬ ಆಶಯದಿಂದ ತಂತ್ರಗಳಲ್ಲಿ ಪೃಥಕ್ಕಾಗಿ ಪೀಠ ರೂಪತ್ವವನ್ನು ವಿವರಿಸಿಲ್ಲ. ಈ ಅಭಿಪ್ರಾಯವನ್ನೇ ಈ ಪದ್ಯಗಳು ಸ್ಪಷ್ಟಪಡಿಸುತ್ತವೆ. "ಯಾವನ್ಮಾತೃಕಂ" ಎಂಬ ಪದವು ಅವ್ಯಯೀಭಾವವೆಂಬ ಸಮಾಸವುಳ್ಳದ್ದು. ವರ್ಣಮಾಲೆಯಲ್ಲಿರುವ ಮಾತೃಕಾವರ್ಣಗಳಿಗೆ ಸಮವಾಗಿ ಐವತ್ತೊಂದು ಪೀಠಗಳು ಇವೆ. ಇವುಗಳಲ್ಲಿ ಓಡ್ಯಾಣ ಪೀಠ, ಜಾಲಂಧರಪೀಠ, ಪೂರ್ಣಗಿರಿ ಪೀಠ, ಕಾಮರೂಪ ಪೀಠಗಳನ್ನು "ನಾಮೈಕದೇಶೇ ನಾಮಗ್ರಹಣಂ" (ಹೆಸರಿನಲ್ಲಿ ಒಂದು ಅಂಶವನ್ನು ಹೇಳಿದರೂ ಪೂರ್ತಿ ಹೆಸರಿ

ನ್ಯವೇಷೇಣ ಪುನರ್ಗಣನಾಯಾಂ ಪಂಚಪಂಚಾಶತ್- ತೇನೈತತ್ಪಂಚಕ ಸಮುಷ್ಟಿತ್ವಾದೇವಪೀಠತ್ವಂ ಸಿದ್ಧಮಿತ್ಯಾಶಯೇನ ತಂತ್ರೇಷು ನ ಪುನಃ ಪೃಥಕ್ಪೀಠರೂಪತೋಕ್ತಿರಿತಿ ವಾ ತಂತ್ರಾಶಯ ಇತಿ ಮನಸ್ವಾನ ಆಹ— ಯಾವನ್ಮಾತೃಕಮಿತ್ಯವ್ಯಯೀಭಾವಃ, ಯಾವಂತೋ ಮಾತೃಕಾಸ್ತಾವಂತಿ ಪೀಠಾನೀತ್ಯರ್ಥಃ. ಓ, ಓಡ್ಯಾಣಪೀಠಂ; ಜಾ, ಜಾಲಂಧರಪೀಠಂ; ಪೂ, ಪೂರ್ಣಗಿರಿಪೀಠಂ; ಕಾ, ಕಾಮರೂಪಪೀಠಂ. ನಾಮ್ನೈಕದೇಶೇ ನಾಮಗ್ರಹಣಂ, ತಥೈವ ಸಂಪ್ರದಾಯಾತ್. ಭಾದೀನಾಂ ನಕ್ಷತ್ರಯೋಗಿನೀರಾಶೀನಾಂ. ಶಶ್ಯೇಕಃ. ನಿಧಯೋ ನವ. ತಾರಾಃ ಸಪ್ತವಿಂಶತಿಃ. ಸಾರೇತಿ ಪಾಠೇಽಪಿ ಸಕಾರಃ ಸಪ್ತಸಂಖ್ಯಾಯಾಂ ಸಾಂಕೇತಿಕಃ, ರೇಫಸ್ತು ದ್ವಿಸಂಖ್ಯಾಯಾಂ. 'ಅಂಕಾನಾಂ ವಾಮತೋ ಗತಿಃ' ಇತ್ಯುಕ್ತೇರುಕ್ತೈವ ಸಂಖ್ಯಾ ಸಿದ್ಧ್ಯತಿ. ತದುಕ್ತಂ ವರರುಚಿಪರಿಭಾಷಾಯಾಂ—'ಪಾದಯಃ ಪಂಚಯಾದ್ಯಷ್ಟ ಕಾದಯುಷ್ಟಾದಯೋ ನವ. ಏತದ್ಭಿನ್ನಾಕ್ಷರಂ ಬಿಂದುಃ ಸಂಖ್ಯಾ ತನ್ಮೇಲನೋದ್ಭವಾ.' ಇತಿ. ಋತವಃ ಷಟ್. ಸೂರ್ಯಾ ದ್ವಾದಶ ॥ ೯೭-೯೮ ॥

ನಿಂದ ಕೂಗಿದಂತೆ) ಎಂಬ ನ್ಯಾಯದಿಂದ ಓ, ಜಾ, ಪೂ, ಕಾ, ಎಂಬ ವರ್ಣಗಳಿಂದ ಸೂಚಿಸಿದೆ. ಇವುಗಳನ್ನು ಪ್ರಧಾನ ರೂಪದಿಂದ ಮತ್ತೊಂದುಸಲ ಗಣನೆ ಮಾಡಿದರೆ ಐವತ್ತೈದು ಪೀಠಗಳು ಆಗುವುವು. ಗಣೇಶಾದಿಗಳ ಸಮುಷ್ಟಿ ಸಂಖ್ಯೆಯು ಐವತ್ತೈದು ಆಗುವುದು. ಗಣೇಶ–ಒಂದು, ಗ್ರಹ-ಒಂಭತ್ತು, ನಕ್ಷತ್ರ-ಇಪ್ಪತ್ತೇಳು, ಯೋಗಿನೀ–ಆರು, ರಾಶಿ-ಹನ್ನೆರಡು, ಈ ಸಂಖ್ಯೆಯನ್ನು ಸೇರಿಸಿದರೆ ಐವತ್ತೈದು ಲಭಿಸುವುದು. ಇದರಿಂದ ಚಕ್ರದಲ್ಲಿ ಪೀಠ ರೂಪತ್ವವನ್ನು ತಿಳಿಯಬಹುದು. "ಶಶಿನಿಧಿತಾರರ್ತು" ಎಂಬ ಭಾಗದಲ್ಲಿ "ಶಶಿನಿಧಿಸಾರರ್ತು" ಎಂದು ಪಾಠವು ಕೆಲವು ಕಡೆ ಇದೆ. ಸಾರ = ಎಂದರೆ ಇಪ್ಪತ್ತೇಳು, ಹೇಗೆಂದರೆ ಸಕಾರವು ಸಪ್ತ ಸಂಖ್ಯೆಯಲ್ಲಿ ಸಂಕೇತವುಳ್ಳದ್ದು; ರೇಫವು ಎರಡು ಎಂಬ ಸಂಖ್ಯೆಯಲ್ಲಿ ಸಂಕೇತವುಳ್ಳದ್ದು. "ಅಂಕಾನಾಂ ವಾಮತೋಗತಿಃ" (ಅಂಕೆಗಳನ್ನು ಬಲದಿಂದ ಎಡಕ್ಕೆ ಓದಬೇಕು) ಎಂಬ ನ್ಯಾಯದಿಂದ ಮೊದಲು ಎರಡನ್ನೂ ಅನಂತರದಲ್ಲಿ ಏಳನ್ನೂ ಇಟ್ಟರೆ ಇಪ್ಪತ್ತೇಳು ಆಗುವುದು. ವರರುಚಿ ಪರಿಭಾಷೆಯಲ್ಲಿ "ಪಾದಯಃ ಪಂಚಯಾದ್ಯಷ್ಟಕಾದಯುಷ್ಟಾದಯೋ ನವ। ಏತದ್ಭಿನ್ನಾಕ್ಷರಂ ಬಿಂದುಃ ಸಂಖ್ಯಾ ತನ್ಮೇಲನೋದ್ಭವಾ ॥ ಎಂಬ ಕಾರಿಕೆಯು ಆಯಾಯ ವರ್ಣಗಳು ಸಂಖ್ಯಾ ವಿಶೇಷದಲ್ಲಿ ಸಂಕೇತವನ್ನು ಹೊಂದಿವೆಯೆಂದು ಹೇಳಿರುತ್ತದೆ. ಋತು ಎಂದರೆ ಆರು ಸಂಖ್ಯೆ, ಸೂರ್ಯ ಎಂದರೆ ಹನ್ನೆರಡು ಸಂಖ್ಯೆಯು ॥ ೯೭–೯೮ ॥

೯೯-೧೦೦

ಕತ್ರಿತಯಾದೀಕಾರಾದ್ಬಿಂದುರ್ಜಾತಸ್ತದಗ್ರಿಮೇ ಚಕ್ರೇ ।
ಹೃಲ್ಲೇಖಾಭಿಸ್ತತ್ಪರಚಕ್ರತ್ರಿತಯಂ ಹಕಾರಾಭ್ಯಾಮ್ ॥ ೯೯ ॥
ಏಕಾರೇಣ ಚ ತತ್ಪರಚಕ್ರೇ ಜಾತೇ ಸಕಾರಾಭ್ಯಾಮ್ ।
ಚತುರಶ್ರಾಣಿ ಲಕಾರೈರೇವಂ ವಿದ್ಯಾಕ್ಷರೇಣ ಚಕ್ರಜನಿಃ ॥ ೧೦೦ ॥

ಅಥ ಚಕ್ರರಾಜಸ್ಯ ವಿದ್ಯಾಽಕ್ಷರಜನ್ಯತ್ವಮುಪಪಾದಯತಿ ದ್ವಾಭ್ಯಾಂ ಶ್ಲೋಕಾಭ್ಯಾಂ—“ಇಚ್ಛಾಜ್ಞಾನಾಕ್ರಿಯಾರೂಪಮಾದನತ್ರಯಸಂಯುತಂ. ಸದಾಶಿವಾಸನಂ ದೇವಿ ಮಹಾಬಿಂದುಮಯಂ ಪರಂ.” ಇತ್ಯಸ್ಯ ಇಚ್ಛಾದಯಸ್ತಿಸ್ರಃ ಶಕ್ತಯೋ ರೂಪ್ಯಂತೇ ಜನ್ಯಂತೇ ಯಸ್ಮಾದೀಕಾರಾತ್ಸ ಚ ಮಾದನಾನಾಂ ಕಕಾರಾಣಾಂ ತ್ರಯಂ ಚೇತ್ಯೇತಾಭ್ಯಾಂ

ವಿದ್ಯಾ ಅಕ್ಷರಗಳಿಂದ ಚಕ್ರರಾಜದ ಉತ್ಪತ್ತಿಯಾಗಿರುವುದನ್ನು ಈ ಎರಡು ಪದ್ಯಗಳು ವಿವರಿಸುತ್ತವೆ. ಈ ಪದ್ಯಗಳಿಂದ ವರ್ಣಿಸಲ್ಪಡುವ ಅರ್ಥಕ್ಕೆ ಈ ಮೂಲ ವಚನವು ಪ್ರಮಾಣವಾಗಿದೆ :—

“ಇಚ್ಛಾ ಜ್ಞಾನಾಕ್ರಿಯಾರೂಪ ಮಾದನತ್ರಯಸಂಯುತಂ । ಸದಾಶಿವಾಸನಂ ದೇವಿ ಮಹಾಬಿಂದುಮಯಂ ಪರಂ” ಇಚ್ಛಾ, ಜ್ಞಾನಾ, ಕ್ರಿಯಾ ಎಂಬ ಮೂರು ಶಕ್ತಿಗಳಿಗೆ ಕಾರಣವಾದ ಈಕಾರವೂ “ಮಾದನತ್ರಯ” ವೆಂದರೆ ಮೂರು ಕಕಾರಗಳೂ ಸೇರಿ ಮಹಾಬಿಂದುವು ಹುಟ್ಟಿ ಸದಾಶಿವನ ಆಸನದ ಫಲಕರೂಪವಾಗಿದೆ. ಇದಕ್ಕೆ ಬ್ರಹ್ಮ-ವಿಷ್ಣು-ರುದ್ರ-ಈಶ್ವರರು ಪಾದಸ್ಥಾನದಲ್ಲಿರುವರು. ಅಂತಹ ಸರ್ವಾನಂದಮಯಚಕ್ರವೆಂಬ ಬಿಂದುವು ಕಕಾರತ್ರಯ, ಈ ಕಾರಗಳಿಂದ ಹುಟ್ಟಿದೆಯೆಂದು ಅರ್ಥವು. ಅಥವಾ “ಇಚ್ಛಾಜ್ಞಾನಾಕ್ರಿಯಾರೂಪ” ಎಂಬುದನ್ನು ಮಾದನ ಪದದ ಅರ್ಥವಾದ ಕಕಾರಗಳಿಗೆ ವಿಶೇಷಣ ಮಾಡಿ ತ್ರಯ ಪದಕ್ಕೆ ಬಿಂದುತ್ರಯರೂಪವಾದ ಈಕಾರವೆಂದು ಅರ್ಥಮಾಡಿದರೂ ಅದೇ ಅರ್ಥವೇ ಲಭಿಸುವುದು. ಮೂರು ಹ್ರೀಂಕಾರಗಳಿಂದ ಸರ್ವಸಿದ್ಧಿಪ್ರದ, ಸರ್ವರೋಗಹರಗಳೆಂಬ ನವಯೋನ್ಯಾತ್ಮಕಗಳಾದ ಎರಡು ಚಕ್ರಗಳು ಹುಟ್ಟಿವೆ. ಇದನ್ನು “ಹೃಲ್ಲೇಖಾತ್ರಯಸಂಭೂತೈಸ್ತಿಥಿಸಂಖ್ಯೈಸ್ತಥಾಽಕ್ಷರೈಃ । ಬಿಂದುತ್ರಯಯುತೈರ್ಜಾತಂ ನವಯೋನ್ಯಾತ್ಮಕಂ ಪ್ರಿಯೇ” ಎಂಬ ಪ್ರಮಾಣವಾಕ್ಯವು

ಸಂಯುತಂ ಜನಿತಂ ಮಹಾಬಿಂದುಮಯಂ ಸದಾಶಿವಾಸನಂ, ಬ್ರಹ್ಮ ವಿಷ್ಣು ರುದ್ರೇಶ್ವರಾಃ ಪಾದಾಃ, ಫಲಕಂ ಸದಾಶಿವಮಯಂ, ತಾದೃಶಂ ಸರ್ವಾನಂದಮಯಂ ಚಕ್ರಮಿತ್ಯರ್ಥಃ. ಅಥ ವಾ ಇಚ್ಛಾಜ್ಞಾನಾಕ್ರಿಯಾರೂಪಾಶ್ಚ ತೇ ನಾದನಾಶ್ಚ ತ್ರಯಂ ಚೇತಿ ದ್ವಂದ್ವಃ. ತ್ರಯಶಬ್ದೇನ ಬಿಂದುತ್ರಯಾತ್ಮಕತ್ವಾದೀಕಾರೋ ಗ್ರಾಹ್ಯಃ. ಶೇಷಂ ಪೂರ್ವವತ್. ತದೇತದಾಹ—ಕತ್ರಿತಯಾದಿತ್ಯಾದಿನಾ. ಸರ್ವಸಿದ್ಧಿಪ್ರದಸರ್ವರೋಗಹರಾಖ್ಯಚಕ್ರದ್ವಯಮಪಿ ಮಿಲಿತ್ವಾ ನವಯೋನ್ಯಾತ್ಮಕಂ; ತಚ್ಚ ತಿಸೃಭಿರ್ಲಜ್ಜಾಭಿರ್ಜಾತಂ, 'ಹ್ರಲ್ಲೇಖಾತ್ರಯಸಂಭೂತೈಸ್ತಿಥಿಸಂಖ್ಯೈಸ್ತಥಾಽಕ್ಷರೈಃ. ಬಿಂದುತ್ರಯಯುತೈರ್ಜಾತಂ ನವಯೋನ್ಯಾತ್ಮಕಂ ಪ್ರಿಯೇ.' ಇತಿ ವಚನಾದಿತ್ಯಾಹ–ತದಗ್ರಿಮ ಇತ್ಯಾದಿನಾ. ಸರ್ವರಕ್ಷಾಕರಸರ್ವಾರ್ಥ ಸಾಧಕಸರ್ವಸೌಭಾಗ್ಯದಾಯಕಾಽಽಖ್ಯಂ ಸ್ಥಿತಿಚಕ್ರತ್ರಿತಯಂ ತಿಸೃಭಿಃ ಶಕ್ತಿಭಿರನಲೈಶ್ಚ ರಚಿತಂ ಹಕಾರದ್ವಯೇನೈಕಾದಶಸ್ವ

ಹೇಳಿದೆ. ಮೂರು ಶಕ್ತಿಗಳಿಂದಲೂ ಮೂರು ಅನಲಗಳಿಂದಲೂ ರಚಿಸಲ್ಪಟ್ಟ ಸ್ಥಿತಿ ಚಕ್ರವೆಂಬ ಸಂಕೇತವುಳ್ಳ ಸರ್ವರಕ್ಷಾಕರ, ಸರ್ವಾರ್ಥಸಾಧಕ, ಸರ್ವಸೌಭಾಗ್ಯದಾಯಕ ಎಂಬ ಮೂರು ಚಕ್ರಗಳು ಎರಡು ಹಕಾರ, ಏಕಾರಗಳಿಂದ ಹುಟ್ಟಿವೆಯೆಂದು ತಿಳಿಯಬೇಕು. ಇದಕ್ಕೆ ಪ್ರಮಾಣವಾಕ್ಯವು ಈ ರೀತಿಯಾಗಿದೆ: "ಮಂಡಲತ್ರಯಯುಕ್ತಂತು ಚಕ್ರಂ ಶಕ್ತ್ಯನಲಾತ್ಮಕಂ | ವ್ಯೋಮಬೀಜತ್ರಯೇಣೈವ". ಎರಡು ದಶಾರಗಳೂ ಚತುರ್ದಶಾಶ್ರವೂ ಸೇರಿ ಮಂಡಲತ್ರಯವೆನ್ನಲ್ಪಟ್ಟಿದೆ. ವ್ಯೋಮ ಬೀಜಗಳು ಎರಡು ಮತ್ತು ತ್ರಯವೆಂದರೆ ಕೋಣತ್ರಯಾತ್ಮಕವಾದ ಏಕಾರ, ಇವುಗಳನ್ನು ತೆಗೆದುಕೊಳ್ಳಬೇಕು. ಅಥವಾ "ವ್ಯೋಮನೀ ಚ ಬೀಜಂಚೇತಿ" ಎಂಬ ವಿಗ್ರಹಾನುಸಾರವಾಗಿ ಎರಡು ಆಕಾಶ ಬೀಜಗಳಾದ ಹಕಾರ, ಬೀಜವೆಂದರೆ ಏಕಾರ ಈ ಮೂರು ವರ್ಣಗಳಿಂದೂ ಅರ್ಥಮಾಡಬಹುದು. ಬ್ರಹ್ಮಾಂಡಾದಿ ಕಟಾಹಾಂತ ಪ್ರಪಂಚಕ್ಕೆ ಏಕಾರವು ಕಾರಣವಾಗಿರುವುದರಿಂದ ಬೀಜ ಪದದಿಂದ ಏಕಾರವನ್ನು ತೆಗೆದುಕೊಳ್ಳುವುದು ಯುಕ್ತವೇ ಆಗಿದೆ. "ರುದ್ರೇಕಾದಶಮಾಧಾರಂ ಬೀಜಂ ಕೋಣತ್ರಯಾತ್ಮಕಂ" ಎಂಬಲ್ಲಿ ಏಕಾರಕ್ಕೆ ಬೀಜಪದದಿಂದ ನಿರ್ದೇಶವೂ ಇದೆ. ಹಾದಿ ವಿದ್ಯಾಪಕ್ಷದಲ್ಲಿ ಹಕಾರತ್ರಯವೆಂದೇ ಅರ್ಥವು ಸುಲಭವಾದ್ದರಿಂದ ಏನೂ ಕ್ಲೇಶಪಡಬೇಕಾಗಿಲ್ಲ. ಸರ್ವ ಸಂಕ್ಷೋಭಣ, ಸರ್ವಾಶಾ ಪರಿಪೂರಕಗಳೆಂಬ ಎರಡು ಚಕ್ರಗಳು ಎರಡು ಸಕಾರಗಳಿಂದ ಹುಟ್ಟಿವೆ.

ರೇಣ ಚ ಸಮುತ್ಪನ್ನಂ ತದುಕ್ತಂ—'ಮಂಡಲತ್ರಯಯುಕ್ತಂ ತು ಚಕ್ರಂ ಶಕ್ತ್ಯನಲಾತ್ಮಕಂ. ವ್ಯೋಮಬೀಜತ್ರಯೇಣೈವ' ಇತಿ. ದಶಾರದ್ವಯಂ ಮನ್ವಶ್ರಂ ಚೇತಿ ಮಂಡಲತ್ರಯಂ. ವ್ಯೋಮಬೀಜೇ ತ್ರಯಂ ಚೇತಿ ವಿಗ್ರಹಃ. ತ್ರಯಪದೇನ ಕೋಣತ್ರಯಾತ್ಮಕತ್ವಾದೇಕಾರಃ. ವ್ಯೋಮನೀ ಚ ಬೀಜಂ ಚೇತಿ ವಿಗೃಹ್ಯ ವ್ಯೋಮಬೀಜಾನ್ಯೇವ ತ್ರಯಮಿತಿ ವಾ ವಿಗ್ರಹಃ, ಬೀಜಪದೇನೈಕಾರಃ, ತಸ್ಯ ಬ್ರಹ್ಮಾಂಡಾದಿಕಟಾಹಾಂತಂ ಪ್ರತಿ ಬೀಜಭೂತತ್ವಾತ್. "ಯದೇಕಾದಶಮಾಧಾರಂ ಬೀಜಂ ಕೋಣತ್ರಯಾತ್ಮಕಂ" ಇತಿ ಪ್ರಯೋಗಾಚ್ಚ. ಹಾದಿಪಕ್ಷೇತು ನ ಕೋಽಪ್ಯತ್ರ ಕ್ಲೇಶಃ. ತದೇತದಾಹ—ತತ್ಪರೇತ್ಯಾದಿನೈಕಾರೇಣ ಚೇತ್ಯಂತೇನ. ತತ್ಪರಚಕ್ರೇ ಇತಿ. ಸರ್ವಸಂಕ್ಷೋಭಣಸರ್ವಾಶಾಪರಿಪೂರಕೇ ಇತ್ಯರ್ಥಃ. ಉಕ್ತಂ ಚ—"ಸರೋರುಹದ್ವಯಂ ಶಾಕ್ತೈಃ" ಇತಿ. ಶಾಕ್ತೈಃ ಸಕಾರಾಭ್ಯಾಂ. 'ಅಕ್ಷೀಣಿ ಮೇ'—ಇತಿ ವದ್ಬಹುವ

"ಸರೋರುಹದ್ವಯಂಶಾಕ್ತೈಃ" ಎಂಬುದು ಶಾಕ್ತಗಳೆಂಬ ಸಕಾರದ್ವಯದಿಂದ ಎರಡು ಚಕ್ರಗಳು ಹುಟ್ಟಿವೆಯೆಂದು ಹೇಳುತ್ತದೆ. ಎರಡು ಸಕಾರಗಳನ್ನು ಬೋಧಿಸುವುದಾದರೂ "ಶಾಕ್ತೈಃ" ಎಂಬ ಪದವು ಬಹುವಚನದಲ್ಲಿರುವುದು "ಅಕ್ಷೀಣಿಮೇದರ್ಶನೀಯಾನಿ" ಎಂಬ ಮಹಾ ಭಾಷ್ಯ ಪ್ರಯೋಗದಂತೆ ಸಾಧುವಾದುದು. ಹುಟ್ಟಿರುವ ಚಕ್ರಗಳು ಎರಡಾಗಿರುವುದರಿಂದ ಕಾರಣವಾದ ಸಕಾರಗಳೂ ಎರಡೇ ಇದ್ದರೆ ಜನ್ಯ ಜನಕಗಳ ಸಂಖ್ಯೆಯು ಸಮವಾಗಿರಬೇಕೆಂಬ-ಸಾಮಾನ್ಯ ನಿಯಮವೂ ರಕ್ಷಿತವಾಗುವುದು. ಆದ್ದರಿಂದಲೇ "ಹೃಲ್ಲೇಖಾತ್ರಯ" ವೆಂಬ ವಚನದಲ್ಲಿ "ಬಿಂದುತ್ರಯಯುತೈಃ" ಎಂಬ ವಿಶೇಷಣವು ಸಾರ್ಥಕವಾಗುವುದು. ಬಿಂದುನಾದತ್ರಯವನ್ನು ಈಕಾರದ ಜೊತೆಗೆ ಸೇರಿಸಿ ಗಣನೆ ಮಾಡುವುದರಿಂದ ಪ್ರತಿಯೊಂದು ಹೃಲ್ಲೇಖೆಯಲ್ಲಿಯೂ ಹಕಾರ ರೇಫ ಈಕಾರಗಳೆಂಬ ವರ್ಣತ್ರಯ ಮಾತ್ರವೇ ಇರುವುದರಿಂದ ಇವುಗಳು ಮೂರು ಸೇರಿ ಒಂಭತ್ತು ವರ್ಣಗಳ ಸಮೂಹದಿಂದ ನವಯೋನ್ಯಾತ್ಮಕವಾದ ಚಕ್ರದ್ವಯವು ಹುಟ್ಟಿದೆಯೆಂಬುದು ಸಮಂಜಸವಾಗುವುದು. ಬಿಂದು ಶಬ್ದಕ್ಕೆ ಬಿಂದು ಮೊದಲಾಗಿ ಉನ್ಮನ್ಯಂತವಾಗಿರುವ ಸಮೂಹವೇ ಅರ್ಥ. ಈ ರೀತಿಯಾಗಿ ವಿಶೇಷಣಕ್ಕೆ ಸಾರ್ಥಕ್ಯವು ಸಂಭವಿಸುವುದರಿಂದ ಸ್ವರೂಪ ಮಾತ್ರ ಬೋಧಕವೆಂದು ಒಪ್ಪಿ ವಿಶೇಷಣಕ್ಕೆ ವೈಯರ್ಥ್ಯವನ್ನು ಹೇಳುವುದು ಸರಿಯಲ್ಲ. ಮೂರು ಚತುರಶ್ರಗಳೆಂಬ ತ್ರೈಲೋಕ್ಯ

ಚನಂ. ಜನ್ಯಜನಕಯೋಃ ಸಮಸಂಖ್ಯಾಕತ್ವಸ್ಯ ಸತಿ ಸಂಭವೇ ಯುಕ್ತತ್ವಾಚ್ಚ. ಅತ ಏವ ಹಿ ಹೃಲ್ಲೇಖಾತ್ರಯೇತ್ಯುಕ್ತ ಶ್ಲೋಕೇ ಬಿಂದುತ್ರಯಯುತೈರಿತಿ ವಿಶೇಷಣಸ್ಯ ಸಾರ್ಥಕ್ಯಂ. ಪಂಚದಶಸ್ವಕ್ಷರೇಷು ಬಿಂದುನಾದತ್ರಯಸ್ಯೇಕಾರೈಃ ಸಹ ಮೇಲನೇ ಪ್ರತಿಹೃಲ್ಲೇಖಂ ಹಕಾರೋ ರೇಫ ಈಕಾರಶ್ಚೇತಿ ತ್ರಯಮೇವೇತಿ ತತ್ತ್ರಿಕೇಣ ನವಾಕ್ಷರಸಮೂಹೇನ ನವಯೋನ್ಯಾತ್ಮಕಸ್ಯ ಚಕ್ರದ್ವಯಸ್ಯ ಜನನಸಂಭವಾತ್, ಬಿಂದುಶಬ್ದಸ್ಯ ಬಿಂದ್ವಾದ್ಯುನ್ಮನ್ಯಂತಸಮೂಹಪರತ್ವಾತ್. ಸ್ವರೂಪಕೀರ್ತನಮಾತ್ರಪರತ್ವೇನ ವ್ಯಾಖ್ಯಾಯಾಂ ತು ತದ್ವೈಯರ್ಥ್ಯಂ ಸ್ಪಷ್ಟಂ. ಚತುರಶ್ರಾಣಿ ತ್ರೈಲೋಕ್ಯ ಮೋಹನಚಕ್ರಂ. ಉಭಯತ್ರ ಬಹುವಚನಂ ತ್ರಿತ್ವೇ ॥ ॥ ೯೯-೧೦೦ ॥

ಮೋಹನ ಚಕ್ರವು ಮೂರು ಲಕಾರಗಳಿಂದ ಹುಟ್ಟಿದೆ. ಈ ರೀತಿಯಾಗಿ ವಿದ್ಯೆಯ ಅಕ್ಷರಗಳಿಂದ ಚಕ್ರರಾಜೋತ್ಪತ್ತಿಯಾಗಿದೆಯೆಂದು ತಿಳಿಯಬೇಕು ॥ ೯೯-೧೦೦ ॥

೧೦೧

ಏತತ್ತ್ರಿತಯಾಭಿನ್ನಃ ಸ್ವಗುರುಸ್ತದಭೇದಭಾವನಾದಾರ್ಢ್ಯಾತ್ ।
ತೇನ ಗಣೇಶಾದಿಮಯಸ್ತದ್ದಯಯಾ ಚ ಸ್ವಯಂ ತಥಾರೂಪಃ ॥ ೧೦೧ ॥

ಏತೇಷಾಂ ದೇವತಾವಿದ್ಯಾಚಕ್ರಾಣಾಂ ತ್ರಿತಯೇನಾಭಿನ್ನಃ. ತೇನ ಗಣೇಶಾದಿಷಡ್ರೂಪಃ ಶ್ರೀಗುರುಃ. ತತ್ಪ್ರಸಾದೇನ ಸ್ವಯಂ ಸಾಧಕೋಽಪಿ. ತದುಕ್ತಂ—'ದೇವ್ಯಾ ದೇಹೋ ಯಥಾ ಪ್ರೋಕ್ತೋ ಗುರುದೇಹಸ್ತಥೈವ ಚ. ತತ್ಪ್ರಸಾದಾಚ್ಚ ಶಿಷ್ಯೋಽಪಿ ತದ್ರೂಪಃ ಸನ್ ಪ್ರಕಾಶತೇ." ಇತಿ. ದೇವೀದೇಹೇ ಯೇ ಯೇಽವಯವಾ ಯದ್ಯದ್ರೂಪಾಸ್ತತ್ತದ್ರೂಪಾವಯವಕ ಏವೈತಯೋರ್ದೇಹ ಇತ್ಯರ್ಥಃ ॥ ೧೦೧ ॥

ದೇವತಾ, ವಿದ್ಯಾ, ಚಕ್ರಗಳಲ್ಲಿ ಅಭೇದ ಭಾವನೆಯು ದೃಢವಾಗಿರುವುದರಿಂದ ಉಪಾಸಕನ ಗುರುವು ಈ ಮೂರರ ಅಭೇದವುಳ್ಳವನಾಗಿರುವನು. ಆದ್ದರಿಂದಲೇ ದೇವತೆ, ವಿದ್ಯೆ, ಚಕ್ರ ಇವುಗಳಲ್ಲಿರುವ ಗಣೇಶಾದಿ ರೂಪತ್ವವು ತದಭಿನ್ನ ಗುರುವಿನಲ್ಲಿಯೂ ಸಂಭವಿಸುತ್ತದೆ. ಅಂತಹ ಗುರುವಿನ ಅನುಗ್ರಹಕ್ಕೆ ಪಾತ್ರನಾದ ಶಿಷ್ಯನೂ ಗುರುಕರುಣಾಬಲದಿಂದ ಗುರುವಿನ ಅಭೇದವನ್ನು ಹೊಂದಿ ಗಣೇಶಾದಿ ರೂಪತ್ವವನ್ನು ಹೊಂದುವನು. "ದೇವ್ಯಾದೇಹೋಯಥಾಪ್ರೋಕ್ತೋ ಗುರುದೇಹಸ್ತಥೈವಚ । ತತ್ಪ್ರಸಾದಾಚ್ಚಶಿಷ್ಯೋಽಪಿ ತದ್ರೂಪಃ ಸನ್‌ಪ್ರಕಾಶತೇ" ಎಂಬ ವಾಕ್ಯದಲ್ಲಿ ಈ ಅರ್ಥವನ್ನು ಕಾಣಬಹುದು. ದೇವಿಯ ದೇಹದಲ್ಲಿ ಯಾವ ಯಾವ ಅವಯವಗಳು ಯಾವ ಯಾವ ರೂಪದಿಂದಿವೆಯೋ ಆರೂಪದ ಅವಯವಗಳಿಂದಲೇ ಗುರು-ಶಿಷ್ಯರ ದೇಹಗಳೂ ಇರುವುವೆಂದು ತಾತ್ಪರ್ಯವು ॥ ೧೦೧ ॥

೧೦೨

ಇತ್ಥಂ ಮಾತಾ ವಿದ್ಯಾ ಚಕ್ರಂ ಸ್ವಗುರುಃ ಸ್ವಯಂ ಚೇತಿ ।
ಪಂಚಾನಾಮಪಿ ಭೇದಾಭಾವೋ ಮಂತ್ರಸ್ಯ ಕೌಲಿಕಾರ್ಥೋಽಯಮ್ ॥ ೧೦೨ ॥

ನನು ಗಣೇಶಾದ್ಯಾತ್ಮಕತ್ವಜ್ಞಾಪ್ಯಕಃ ಪಂಚಾಭೇದಃ ಕಥಮುಪಪದ್ಯತೇ. ಗಣಪದಸ್ಯ ಸಮುದಾಯಾರ್ಥಕಸ್ಯ ಸಮುದಾಯಿಸಾಪೇಕ್ಷತ್ವೇನ ಸಮುದಾಯಿನಾಂ ದೇವತಾಽಕ್ಷರರೇಖಾಣಾಂ ಭೇದೇ ತದ್ಭೇದಸ್ಯಾಽಽವಶ್ಯಕತ್ವಾತ್, ನಕ್ಷತ್ರತ್ವಾದೇರಪಿ ಸಂಖ್ಯಾಮಾತ್ರಸ್ಯಾನುಗಮಕತ್ವೇಽಪಿ ಸಂಖ್ಯಾವತಾಂ ವಿರುದ್ಧಧರ್ಮಾಧಿಕರಣತ್ವೇನ ಭೇದಸ್ಯ ಸಂಖ್ಯಾವತಾಂ ಸಮ್ಮತತ್ವೇನ ಭಿನ್ನಭಿನ್ನತ್ವಾತ್ ; ತೇನ ಚ ನೈಕಸ್ಯಾಪಿ ಧರ್ಮಸ್ಯಾಭೇದವ್ಯಾಪಕತೇತಿ ಕಥಂ ತಜ್ಜ್ಞಾಪ್ಯಕಾಭೇದಃ ಸಾಧ್ಯತ ಇತಿ ಚೇತ್ ; ನೈವಂ ; ವಚನಬಲಾದೇವ ಸಮುದಾಯಿನಾಂ ಸಂಖ್ಯಾವತಾಂ ಚಾಭೇದಸ್ಯ ಸಿದ್ಧತ್ವಾತ್. ಉಪಕ್ರಮಾದಿಭಿರ್ನಿರ್ಣೀತ ತಾತ್ಪರ್ಯಕಸ್ಯ ಶಬ್ದ

ಈ ಪದ್ಯವು ಕೌಲಿಕಾರ್ಥವನ್ನು ಪ್ರತಿಪಾದಿಸುತ್ತಿದೆ. ಈ ರೀತಿಯಾಗಿ ದೇವೀ, ವಿದ್ಯಾ, ಚಕ್ರ, ಸ್ವಗುರು, ಮತ್ತು ಉಪಾಸಕನಾದ ತಾನು ಈ ಐದು ವ್ಯಕ್ತಿಗಳ ಅಭೇದವು ಮಂತ್ರದ ಕೌಲಿಕಾರ್ಥವೆನಿಸುವುದು. ಇಲ್ಲಿ ಈ ರೀತಿಯಾಗಿ ಶಂಕಿಸಬಹುದು. ಗಣೇಶಾದ್ಯಾತ್ಮಕತ್ವವನ್ನು ಸೂಚಿಸುವ ಈ ಅಭೇದವು ಹೇಗೆ ತಾನೇ ಸಿದ್ಧಿಸುವುದು. ಗಣಪದವು ಸಮೂಹವೆಂಬ ಅರ್ಥವನ್ನು ಬೋಧಿಸುವುದರಿಂದ ಸಮೂಹವಾಗಬೇಕಾದರೆ ಅಲ್ಲಿ ಸೇರಿದ ಸಮೂಹಿ ವ್ಯಕ್ತಿಗಳ ಅಪೇಕ್ಷೆಯು ನಿತ್ಯವಾಗಿರುವುದರಿಂದ ದೇವತಾ–ಅಕ್ಷರ–ರೇಖೆಗಳೆಂಬ ಸಮೂಹಿವ್ಯಕ್ತಿಗಳು ಬೇರೆಯಾದರೆ ಸಮೂಹವೂ ಬೇರೆಯಾಗಲೇಬೇಕು. ನಕ್ಷತ್ರತ್ವಾದಿ ಧರ್ಮ ವಿಷಯದಲ್ಲಿಯೂ ಸಂಖ್ಯೆಯು ಮಾತ್ರ ಒಂದಾದರೂ ಸಂಖ್ಯೆಯುಳ್ಳ ವ್ಯಕ್ತಿಗಳು ವಿರುದ್ಧವಾದ ಧರ್ಮಗಳಿಂದ ಕೂಡಿ ಬೇರೆಯಾಗಿರುವುದರಿಂದ ನಕ್ಷತ್ರ ಅಭೇದವೂ ಬರುವುದಿಲ್ಲ. ಹೀಗೆ ಗಣೇಶತ್ವಾದಿ ಯಾವ ಧರ್ಮವೂ ಅಭೇದಕ್ಕೆ ವ್ಯಾಪಕವಾಗಲಾರದಾದ್ದರಿಂದ ಅದನ್ನು ಸಾಧಿಸುವುದಕ್ಕೋಸ್ಕರ ಪಂಚ ವ್ಯಕ್ತಿಗಳ ಅಭೇದವನ್ನು ಹೇಗೆ ಸಾಧಿಸುವುದು ? ಈ ಶಂಕೆಯನ್ನು ಮುಂದಿನ ಸಮಾಧಾನದಿಂದ ಪರಿಹರಿಸಬೇಕು. ಸಮೂಹಿ ವ್ಯಕ್ತಿಗಳಿಗೂ, ಸಂಖ್ಯಾಶ್ರಯ ವ್ಯಕ್ತಿಗಳಿಗೂ ಅಭೇದವು ವಚನ ಪ್ರಾಮಾಣ್ಯದಿಂದಲೇ ಸಿದ್ಧವಾಗುವುದು. ಉಪಕ್ರಮೋಪಸಂಹಾರಾದಿ

ಸ್ಯ ಪ್ರತ್ಯಕ್ಷಾದಿನಿಖಿಲಪ್ರಮಾಣೇಭ್ಯೋಽಪಿ ಬಲವತ್ತ್ವಾಯಾಶ್ಚಂದ್ರಪ್ರಾದೇಶಿಕತ್ವಭ್ರಮಾದಾವನ್ಯತ್ರ ಚೌಪನಿಷದೈರ್ಬಹುತರಂ ಸಾಧಿತತ್ವಾತ್. ಕಿಂ ಚ ಸ್ವಾಶ್ರಯಸಮಾನಜಾತೀಯಾಶ್ರಿತ ಸ್ವಾತಿರಿಕ್ತಸ್ವವ್ಯಾಪಕಸಂಖ್ಯಾ ವಿರಹಸಹಕೃತಸ್ವತ್ವರೂಪ ಸಂಖ್ಯಾ ಮಾತ್ರತ್ವಮಪ್ಯಭೇದಸಾಧಕಮೇವ, ಬಾಧಕಾಭಾವಾತ್. ಸ್ವಪದಾನಿ ನವಾದಿ ಸಂಖ್ಯಾರೂಪಾಣಿ. ತೇನ ವಿದ್ಯಾ ದೇವತಾಸ್ವರೂಪಾದಭಿನ್ನಾ ನವಸಂಖ್ಯಾಮಾತ್ರಾಶ್ರಯತ್ವಾದ್ದೇವತಾಸ್ವರೂಪವದಿತ್ಯಾದಯಃ ಪೃಥಕ್ ಪ್ರಯೋಗಾಃ. ಅತ ಏವೈಕತ್ವ ಸಂಖ್ಯಾಮಾತ್ರಾಶ್ರಯತ್ವಾದಾಕಾಶ ಕಾಲದಿಗೀಶ್ವರಾಣಾಮಭೇದೋ ದೀಧಿತಿಕೃತಃ ಸಂಮತಃ. ಇದಂ ಚಾನುಮಾನಮಾಗಮಸಹಿತಮೇವ ಪ್ರಮಾಣಂ ವಿಷಯಪ್ರಮಾತ್ವದಾರ್ಢ್ಯ ಸಂಪಾದನಾಯ. ತೇನ ನ ಘಟತ್ವಪಟತ್ವಾದೇರಭೇದಾಪತ್ತಿಃ. ತದೇತತ್ಸರ್ವಮಭಿಸಂಧಾಯೋಪಸಂಹರತಿ ॥ ೧೦೨ ॥

ಲಿಂಗಗಳಿಂದ ತಾತ್ಪರ್ಯ ನಿರ್ಣಯವನ್ನು ಹೊಂದಿರುವ ಶಬ್ದಪ್ರಮಾಣವು ಪ್ರತ್ಯಕ್ಷಾದಿ ನಿಖಿಲ ಪ್ರಮಾಣಗಳಿಗಿಂತಲೂ ಪ್ರಬಲವೆಂಬುದನ್ನು ಔಪನಿಷದರು (ವೇದಾಂತಿಗಳು) “ ಚಂದ್ರಬಿಂಬದ ಪರಿಮಾಣ ವಿಷಯದಲ್ಲಿ ಪ್ರತ್ಯಕ್ಷ ಪ್ರಮಾಣದಿಂದ ನ್ಯೂನ ಪರಿಮಾಣವೂ ಶಾಸ್ತ್ರಪ್ರಮಾಣದಿಂದ ಅಧಿಕ ಪರಿಮಾಣವೂ ತೋರುವುದಾದರೂ ಶಬ್ದ ಪ್ರಮಾಣವೇ ಪ್ರಬಲ” ವೆಂಬ ಉದಾಹರಣೆಯಿಂದ ಸಿದ್ಧಾಂತ ಪಡಿಸಿರುವರು. ಮತ್ತು ಒಂದು ಸಂಖ್ಯೆಯು ತನ್ನ ಆಶ್ರಯಕ್ಕೆ ಸಮಾನ ಜಾತಿಯ ಮತ್ತೊಂದು ಆಶ್ರಯದಲ್ಲಿ ವ್ಯಾಪಕ ಸಂಖ್ಯೆಯು ಇಲ್ಲದೇ ತಾನು ಮಾತ್ರವಿರುವ ಪಕ್ಷಕ್ಕೆ ಆ ಆಶ್ರಯ ವ್ಯಕ್ತಿಗಳು ಅಭಿನ್ನವೆಂದು ಸಾಧಿಸುವುದರಲ್ಲಿ ಬಾಧಕವಿಲ್ಲ. ಪ್ರಕೃತದಲ್ಲಿ ನವತ್ವ ಮುಂತಾದ ಸಂಖ್ಯೆಯನ್ನು ತೆಗೆದುಕೊಂಡು ನವಸಂಖ್ಯಾಶ್ರಯವಾದ ದೇವತಾಸ್ವರೂಪದಲ್ಲಿ ದೇವತಾಸ್ವರೂಪಾಭೇದವಿದ್ದಂತೆ ವಿದ್ಯೆಯಲ್ಲಿಯೂ ನವಸಂಖ್ಯಾಶ್ರಯತ್ವವಿರುವುದರಿಂದ ವಿದ್ಯೆಯು ದೇವತಾಸ್ವರೂಪಕ್ಕೆ ಅಭಿನ್ನವೆಂದು ಬೇರೆ ಬೇರೆ ಅನುಮಾನ ಪ್ರಯೋಗಗಳಿಂದ ಸಾಧಿಸಬಹುದು. ಇದೇ ಯುಕ್ತಿಯಿಂದಲೇ ತಾರ್ಕಿಕರಲ್ಲಿ ದೀಧಿತಿ ಗ್ರಂಥಕಾರರು ಆಕಾಶ, ಕಾಲ, ದಿಕ್, ಈಶ್ವರ ಈ ಪದಾರ್ಥಗಳ ಅಭೇದವನ್ನು ಸಾಧಿಸಿರುವರು, ಅವುಗಳಲ್ಲಿಯೂ ಪ್ರತ್ಯೇಕವಾಗಿ ಏಕತ್ವವೆಂಬ ಸಂಖ್ಯೆಯೊಂದೇ ಇರುವುದಾಗಿದೆ. ಇಂತಹ ಅನುಮಾನವು ತನ್ನ ವಿಷಯವನ್ನು ದೃಢಪಡಿಸಲು ಆಗಮಪ್ರಮಾಣ ಸಹಾಯವನ್ನು ಅಪೇಕ್ಷಿಸುವುದು. ಆದ್ದರಿಂದ ಘಟತ್ವ-ಪಟತ್ವಗಳಿಗೂ ಅಭೇದವನ್ನು ಈ ಕ್ರಮದಿಂದ ಸಾಧಿಸಲಾಗುವುದಿಲ್ಲ. ಈ ಶಂಕಾಸಮಾಧಾನಗಳನ್ನು ಮನಸಿನಲ್ಲಿಟ್ಟು ಈ ಪದ್ಯವು ಸಮಾಪ್ತಿಗೊಂಡಿದೆ ॥ ೧೦೨ ॥

೧೦೩-೧೦೪

ದ್ವಾದಶಷೋಡಶದಶಭಿಸ್ತಪನಶಶಿದಹನಕಲಾಭಿರಾಕೀರ್ಣೈಃ ।
ಪಂಚಾಶದ್ಭಿರ್ವರ್ಣೈರಭಿನ್ನದೇಹಾ ಕುಲೀನಕುಂಡಲಿನೀ ॥ ೧೦೩ ॥
ಬಿಸತನ್ವೀ ತಟಿದಾಭಾ ಮೂಲಾಧಾರಸ್ಥಪದ್ಮಶೃಂಗಾಟಾತ್ ।
ಭಿತ್ವಾ ಮೂಲಹೃದಾಜ್ಞಾಗತವಹ್ನಿರವೀಂದುಮಂಡಲತ್ರಿತಯಮ್ ॥೧೦೪॥

ಅಥ ಕ್ರಮಪ್ರಾಪ್ತಂ ಸರ್ವರಹಸ್ಯಾರ್ಥಮಾಹ—ಸೂರ್ಯಸ್ಯ ಕಲಾಸ್ತಪಿನ್ಯಾದಯೋ ದ್ವಾದಶ ಕಕಾರಾದಿಭಿರ್ದ್ವಾದಶಭಿರಾನುಲೋಮ್ಯೇನ ಭಕಾರಾದಿಭಿಃ ಪ್ರಾತಿಲೋಮ್ಯೇನ ದ್ವಾದಶಭಿಶ್ಚ ಯುಕ್ತಾಃ. ಚಂದ್ರಸ್ಯ ಕಲಾಃ ಷೋಡಶಾಮೃತಾಽಽದಯಃ ಷೋಡಶಭಿಃ ಸ್ವರೈರ್ಯುಕ್ತಾಃ. ಅಗ್ನೇಃ ಕಲಾ ದಶ ಧೂಮ್ರಾರ್ಚಿರಾದಯೋ ಯಕಾರಾದಿಭಿರ್ದಶಭಿರ್ವರ್ಣೈರ್ಯುಕ್ತಾಃ. ಏವಂ ಪಂಚಾದಶದ್ಭಿರಕ್ಷರೈರಭಿನ್ನಾ ಕುಲಕುಂಡಲಿನೀ ಬಿಸತಂತುತನೀಯಸೀ ತಟಿತ್ಕೋಟಿಪ್ರಖ್ಯಾ. ಮೂಲಾಧಾರಸ್ಥಪದ್ಮಶೃಂಗಾಟಾತ್ ಮೂಲಾಧಾರಸ್ಯ ಕರ್ಣಿಕಾಯಾಂ ವಿದ್ಯಮಾನಾಚ್ಛೃಂಗಾಟಾತ್ತ್ರಿಕೋಣಾದುಪರಿ ಸಾರ್ಧತ್ರಿವಲಯಾಕಾರೇಣಾಧೋಮುಖೀ ಸಮುಪವಿಷ್ಟಾ ಯೋಗಮರ್ಯಾದಯಾ ಯೋಗಿಭಿರೂರ್ಧ್ವಮುಖತಯೋತ್ಥಾಪ್ಯತೇ. ಸಾ ಮೂಲಾಧಾರಾನಾಹತಾಜ್ಞಾಚಕ್ರೇಷು ವಿದ್ಯಮಾನಾನಿವಹ್ನಿಸೂರ್ಯಸೋಮಮಂಡಲಾನಿ ಭಿನತ್ತಿ ॥ ೧೦೩-೧೦೪ ॥

ಕ್ರಮದಲ್ಲಿ ಬಂದ ಸರ್ವರಹಸ್ಯಾರ್ಥವನ್ನು ಈ ಪದ್ಯಗಳು ಹೇಳುತ್ತವೆ. “ತಪಿನೀ” ಮುಂತಾದ ಹನ್ನೆರಡು ಸೂರ್ಯನ ಕಲೆಗಳು ಮಾತೃಕಾ ಅನುಕ್ರಮದಿಂದ ಕಕಾರಾದಿ ಹನ್ನೆರಡು ವರ್ಣಗಳಿಂದಲೂ ಪ್ರತಿ ಲೋಮಕ್ರಮದಿಂದ ಭಕಾರಾದಿ ಹನ್ನೆರಡು ವರ್ಣಗಳಿಂದಲೂ ವ್ಯಾಪ್ತವಾಗಿವೆ. “ಅಮೃತಾ” ಮುಂತಾದ ಚಂದ್ರನ ಹದಿನಾರು ಕಲೆಗಳು ಹದಿನಾರು ಸ್ವರಾಕ್ಷರಗಳಿಂದ ಕೂಡಿರುತ್ತವೆ. “ಧೂಮ್ರಾರ್ಚಿ” ಮುಂತಾದ ಅಗ್ನಿಯ ಹತ್ತು ಕಲೆಗಳು ಯಕಾರಾದಿ ಹತ್ತು ವರ್ಣಗಳಿಂದ ಯುಕ್ತಗಳಾಗಿವೆ. ಹೀಗೆ ಪಂಚಾಶದ್ವರ್ಣಾತ್ಮಕಗಳಾದ ಸೂರ್ಯ-ಚಂದ್ರ-ಅಗ್ನಿ ಕಲೆಗಳಿಂದ ಅಭಿನ್ನವಾದ ಮೂರ್ತಿಯುಳ್ಳದ್ದಾಗಿಯೂ ತಾವರೆಯ ನಾಳನಂತೆ ಸೂಕ್ಷ್ಮವಾಗಿಯೂ ಕೋಟಿ ಮಿಂಚುಗಳ ಪ್ರಕಾಶವುಳ್ಳದ್ದಾಗಿಯೂ ಇರುವ ಕುಲೀನ ಕುಂಡಲಿನಿಯು ಮೂಲಾಧಾರ ಪದ್ಮದ ಕರ್ಣಿಕೆಯ ಊರ್ಧ್ವಭಾಗದಲ್ಲಿರುವ ತ್ರಿಕೋಣ ಆಕಾರದ ಮೇಲೆ ಸಾರ್ಧತ್ರಿವಲಯಾಕಾರದಿಂದ ಅಧೋಮುಖವಾಗಿರುತ್ತದೆ. ಇದನ್ನು ಯೋಗಿಗಳು ಯೋಗಾಭ್ಯಾಸ ಪಾಟವದಿಂದ ಊರ್ಧ್ವಮುಖವಾಗುವಂತೆ ಎಬ್ಬಿಸುವರು. ಆಗ ಮೂಲಾಧಾರ ಅನಾಹತ ಆಜ್ಞಾಚಕ್ರಗಳಲ್ಲಿರುವ ಅಗ್ನಿ-ಸೂರ್ಯ-ಸೋಮ ಮಂಡಲಗಳನ್ನು ಭೇದಿಸುತ್ತದೆ ॥ ೧೦೩–೧೦೪ ॥

೧೧೫-೧೧೬

ವ್ಯೋಮನಿ ಚಿಚ್ಛಶಿಮಂಡಲಮಧ್ಯೇಽತ್ವಕುಲೇನ ಸಂಗಮ್ಯ ।
ಉಭಯಾಂಗಸಂಗಜನ್ಯಂ ಪ್ರವಾಹಯಂತೀ ಸುಧಾಪೂರಮ್ ॥ ೧೧೫ ॥
ಸ್ವಯಮಪಿ ತತ್ಪಾನವಶಾನ್ಮತ್ತಾ ಭೂತ್ವಾ ಪುನಶ್ಚ ತೇನೈವ ॥
ಮಾರ್ಗೇಣ ಪರಾವೃತ್ಯ ಸ್ವಸ್ಮಿನ್ ಸ್ಥಾನೇ ಸುಖಂ ಸ್ವಪಿತಿ ॥ ೧೧೬ ॥

"ದ್ವಾದಶಾಂತಂ ಲಲಾಟೋರ್ಧ್ವಂ ಕಪಾಲೋರ್ಧ್ವಾವಸಾನಕಂ. ದ್ವ್ಯಂಗುಲೋರ್ಧ್ವಂ ಶಿರೋದೇಶಂ ಪರಂ ವ್ಯೋಮ ಪ್ರಕೀರ್ತಿತಂ," ಇತ್ಯುಕ್ತಲಕ್ಷಣೇ ವ್ಯೋಮನಿ ವಿದ್ಯಮಾನಸ್ಯ ಚಿಚ್ಛಶಿಮಂಡಲಸ್ಯಾಧೋಮುಖಸಹಸ್ರಾರಕರ್ಣಿಕಾರೂಪಸ್ಯ ಮಧ್ಯೇ ಸ್ಥಿತಯಾಽಕುಲಕುಂಡಲಿನ್ಯಾ ಸಂಗಮ್ಯ ತತೋಽಮೃತಪೂರಂ ಸ್ರಾವಯಿತ್ವಾ ಡಾಕಿನ್ಯಾದಿಮಂಡಲಾನ್ಯಾಪ್ಲಾವಯಂತೀ ಸ್ವಯಮಪಿ ತತ್ಪಾನೇನ ಮತ್ತಾ ಭೂತ್ವಾ ಪುನಸ್ತೇನೈವ ಸುಷುಮ್ನಾಮಾರ್ಗೇಣ ಪರಾವೃತ್ಯ ಸ್ವಸ್ಥಾನೇ ಸುಖಂ ಸ್ವಪಿತಿ. ಸರ್ವಮೇತದ್ಯೋಗಿನಾಮನುಭವಗಮ್ಯಂ. ಯೋಗಶಾಸ್ತ್ರಮರ್ಯಾದಾಜ್ಞಾನಮಾತ್ರವತಾಂ ತು ಪರೋಕ್ಷಜ್ಞಾನಗೋಚರೋ ಗುರುಮುಖಾದೇವ ವಿವಿಚ್ಯ ಬೋದ್ಧವ್ಯಮಿತಿ ನೇಹ ವಿವಿಚ್ಯತೇ ॥ ೧೧೫-೧೧೬ ॥

"ದ್ವಾದಶಾಂತಂ ಲಲಾಟೋರ್ಧ್ವಂ ಕಪಾಲೋರ್ಧ್ವಾವಸಾನಕಂ । ದ್ವ್ಯಂಗುಲೋರ್ಧ್ವಂ ಶಿರೋದೇಶಂ ಪರಂ ವ್ಯೋಮಪ್ರಕೀರ್ತಿತಂ ॥ ಲಲಾಟದ ಊರ್ಧ್ವ ಭಾಗದಲ್ಲಿ ದ್ವಾದಶಾಂಗುಲ ಪ್ರಮಾಣದ ಅಂತದಲ್ಲಿ ದ್ವ್ಯಂಗುಲ ಪ್ರಮಾಣದ ಊರ್ಧ್ವಾಕಾರವಾಗಿ ಶಿರಃಕಪಾಲಗಳ ಊರ್ಧ್ವ ಭಾಗವೇ ಅವಸಾನವಾಗಿರುವ ಶಿರೋದೇಶವು "ಪರವ್ಯೋಮ" ವೆಂದು ಹೇಳಲ್ಪಟ್ಟಿದೆ. ಇಂತಹ ಪರವ್ಯೋಮದಲ್ಲಿ ಅಧೋಮುಖ ಸಹಸ್ರಾರಕರ್ಣಿಕಾರೂಪವಾದ ಚೈತನ್ಯಚಂದ್ರಮಂಡಲದ ಮಧ್ಯದಲ್ಲಿರುವ ಅಕುಲಕುಂಡಲಿನಿಯ ಜೊತೆಗೆ ಹಿಂದೆ ಹೇಳಿದಂತೆ ಊರ್ಧ್ವ ಮುಖವಾದ ಕುಲಕುಂಡಲಿನಿಯು ಸೇರಿ ಕುಂಡಲಿನೀದ್ವಯಸಂಗಮದಿಂದ ಹುಟ್ಟುವ ಅಮೃತಪ್ರವಾಹವನ್ನು ಸುರಿಸಿ ಅದರಿಂದ ಡಾಕಿನ್ಯಾದಿ ಧಾತುದೇವತೆಗಳನ್ನು ನೆನೆಸುತ್ತಾ ತಾನೂ ಅಮೃತಪಾನದಿಂದ ಮತ್ತವಾಗಿ ತಿರುಗಿ ಅದೇ ಸುಷುಮ್ನಾ ಮಾರ್ಗದಿಂದಲೇ ಹಿಂದೆ ಸರಿದು ತನ್ನ ಸ್ಥಾನದಲ್ಲಿ ಸುಖವಾಗಿ ನಿದ್ರಿಸುತ್ತದೆ. ಈ ಕುಂಡಲಿನ್ಯುತ್ಥಾಪನಕ್ರಮವು ಯೋಗಿಗಳಿಗೆ ಪ್ರತ್ಯಕ್ಷವಾಗಿ ಅನುಭವಕ್ಕೆ ಬಂದ ವಿಷಯವಾಗಿದೆ. ಯೋಗಶಾಸ್ತ್ರ ಕ್ರಮವನ್ನು ಮಾತ್ರ ಅರಿತು ಅಭ್ಯಾಸವಿಲ್ಲದಪರೋಕ್ಷಜ್ಞಾನಿಗಳಿಗೆ ಈ ಅಂಶಗಳೆಲ್ಲವೂ ರಹಸ್ಯವಾದ್ದರಿಂದ ಗುರುಮುಖದಿಂದಲೇ ತಿಳಿಯಲ್ಪಡಬೇಕಾದವುಗಳಾದ್ದರಿಂದ ಇದನ್ನು ಹೆಚ್ಚಾಗಿ ಇಲ್ಲಿ ವಿವರಿಸಿಲ್ಲ ॥ ೧೧೫-೧೧೬ ॥

೧೦೭

ಸಾಕ್ಷಾದ್ವಿದ್ಯೈವೈಷಾ ನ ತತೋ ಭಿನ್ನಾ ಜಗನ್ಮಾತಾ ।
ಅಸ್ಯಾಃ ಸ್ವಾಭಿನ್ನತ್ವಂ ಶ್ರೀವಿದ್ಯಾಯಾ ರಹಸ್ಯಾರ್ಥಃ ॥ ೧೦೭ ॥

ಈದೃಶ್ಯಾಃ ಕುಂಡಲಿನ್ಯಾ ಮಾತುರ್ವಿದ್ಯಾಯಾಃ ಸ್ವಸ್ಯ ಚಾಭೇದ ಇತಿ ರಹಸ್ಯರೂಪೋಽಪ್ರಕಾಶ್ಯೋಽರ್ಥ ಇತ್ಯರ್ಥಃ ॥ ೧೦೭ ॥

ಇಂತಹ ಕುಂಡಲಿನಿಯು ಸಾಕ್ಷಾತ್ತಾಗಿ ವಿದ್ಯಾರೂಪವಾದುದು. ಜಗನ್ಮಾತೆಯೂ ಕುಂಡಲಿನಿಗಿಂತ ಬೇರೆ ಯಾದವಳಲ್ಲ. ಮತ್ತು ಉಪಾಸಕನೂ ಕುಂಡಲಿನಿಯ ಐಕ್ಯವನ್ನು ಹೊಂದಿಕೊಂಡಿರುವನು. ಎಂಬುದಾಗಿ ಕುಂಡಲಿನಿ, ದೇವಿ, ವಿದ್ಯಾ, ಉಪಾಸಕ ಇವರೆಲ್ಲರ ಅಭೇದವು ಶ್ರೀವಿದ್ಯೆಯ ರಹಸ್ಯಾರ್ಥವು. ಇದು ರಹಸ್ಯವಾದ್ದರಿಂದಲೇ ಸಾಮಾನ್ಯ ಜನರಿಗೆ ಪ್ರಕಾಶಪಡಿಸಲು ಅರ್ಹವಲ್ಲ ॥೧೦೭॥

೧೦೮-೧೦೯

ವಾಗಿಂದ್ರಿಯೈರಗಮ್ಯೇ ತತ್ತ್ವಾತೀತೇ ಮಹತ್ತರೇಽಣುತರೇ ।
ವ್ಯೋಮ್ನೋಽಪ್ಯುಪರಿ ಸ್ಥಿತಿಮತಿ ವಿಶ್ವಾಭಿನ್ನೇ ಚಿದಾನಂದೇ ॥ ೧೦೮ ॥
ಬ್ರಹ್ಮಣಿ ಪರೇ ನಿಯೋಜ್ಯಃ ಸ್ವಾತ್ಮಾ ತದಭೇದಸಂಪ್ರಾಪ್ತ್ಯೈ ।
ಏಷ ಮಹಾತತ್ತ್ವಾರ್ಥಃ ಶ್ರೀವಿದ್ಯಾಯಾಃ ಶಿವೇನೋಕ್ತಃ ॥ ೧೦೯ ॥

ಅಥ ಮಹಾತತ್ತ್ವಾರ್ಥಮಾಹ—ವಾಗಗಮ್ಯೇ ಶಬ್ದಶಕ್ಯತಾಽವಚ್ಛೇದಕಾಭಾವವತಿ ; ಇಂದ್ರಿಯಾಗಮ್ಯೇ ಘ್ರಾಣಜಾದಿಷಡ್ವಿಧ ಪ್ರತ್ಯಕ್ಷಾವಿಷಯೇ ; "ಯತೋ ವಾಚೋ ನಿವರ್ತಂತೇ, ಅಪ್ರಾಪ್ಯ ಮನಸಾ ಸಹ," "ಅಶಬ್ದಮಸ್ಪರ್ಶಮರೂಪಂ" ಇತ್ಯಾದಿಶ್ರುತೇಃ. ನ ಚ ಸರ್ವಥಾ ಜ್ಞಾನಾವಿಷಯಸ್ಯಾಲೀಕತಾಽಽಪತ್ತಿಃ, ಶಬ್ದೈರ್ಲಕ್ಷಣಯಾ ಗಮ್ಯತ್ವಾತ್, ಶಾಬ್ದಪ್ರತ್ಯಕ್ಷವಿಷಯತ್ವಾಚ್ಚ. ತತ್ತ್ವಾತೀತೇ ಶಿವಾದಿ

ಈ ಶ್ಲೋಕಗಳು ಮಹಾತತ್ತ್ವಾರ್ಥವನ್ನು ವಿವರಿಸುತ್ತವೆ. ಹಿಂದೆ ಹೇಳಿದ ಪರವ್ಯೋಮಸ್ಥಾನದ ಊರ್ಧ್ವಭಾಗದಲ್ಲಿರುವ ಪರಬ್ರಹ್ಮನಲ್ಲಿ ಉಪಾಸಕನು ತನ್ನ ಆತ್ಮವನ್ನು ಸೇರಿಸಬೇಕು. ಎಂದರೆ ಬ್ರಹ್ಮಾತ್ಮೈಕ್ಯವನ್ನು ಚಿಂತಿಸಬೇಕು ಎಂದು ಅರ್ಥವು. ಪರಬ್ರಹ್ಮವಸ್ತುವಿಗೆ ಅನೇಕ ವಿಶೇಷಣಗಳು ಪದ್ಯಗಳಲ್ಲಿ ಹೇಳಲ್ಪಟ್ಟಿವೆ. ಶಬ್ದವು ಅಭಿಧಾವೃತ್ತಿಯಿಂದ ಪ್ರವರ್ತಿಸಲು ಅರ್ಥದಲ್ಲಿ ಇರಬೇಕಾದ ಜಾತ್ಯಾದಿ ಧರ್ಮವು ಬ್ರಹ್ಮವಸ್ತುವಿನಲ್ಲಿಲ್ಲದ್ದರಿಂದ ವಾಗಿಂದ್ರಿಯಕ್ಕೆ ಅಗಮ್ಯವಾದುದು. ಮನಸ್ಸು ಮತ್ತು ಘ್ರಾಣ ಮೊದಲಾದ ಜ್ಞಾನೇಂದ್ರಿಯಗಳಿಗೆ ಅಗೋಚರವಾದುದು. "ಯತೋವಾಚೋನಿವರ್ತಂತೇ ಅಪ್ರಾಪ್ಯ ಮನಸಾಸಹ" ಎಂದು ಶ್ರುತಿಯು ಇದೇ ಅರ್ಥವನ್ನೇ ಹೇಳಿದೆ. "ಅಶಬ್ದಮಸ್ಪರ್ಶಮರೂಪಂ" ಎಂಬ ಶ್ರುತಿಯು ಸಕಲ ಧರ್ಮ ವರ್ಜಿತತ್ವವನ್ನು ಹೇಳುತ್ತಿದೆ. ಪರಬ್ರಹ್ಮವು ಸರ್ವ ಪ್ರಕಾರದಿಂದಲೂ ಜ್ಞಾನಾವಿಷಯವಾದರೂ ಅಳೀಕವಸ್ತುವಲ್ಲ. ಶಬ್ದಗಳಿಂದ ಲಕ್ಷಣೆಯಿಂದ ಬೋಧಿಸಲ್ಪಡುವುದರಿಂದಲೂ ಶಾಬ್ದ ಪ್ರತ್ಯಕ್ಷಕ್ಕೆ ವಿಷಯವಾದುದರಿಂದಲೂ ಅಳೀಕವಲ್ಲ. ತತ್ತ್ವಾತೀತವೆಂದರೆ ಶಿವಾದಿಕ್ಷಿತ್ಯಂತ ಮೂವತ್ತಾರು ತತ್ತ್ವಗಳನ್ನು ಅತಿಕ್ರಮಿಸಿರುವುದು. ಮಹತ್ತರ–ದೊಡ್ಡದಕ್ಕಿಂತಲೂ ತುಂಬಾ ದೊಡ್ಡದು. ಅಣುತರ–ಚಿಕ್ಕದಕ್ಕಿಂತಲೂ ಚಿಕ್ಕದು. ಮಹತ್ತ್ವ, ಅಣುತ್ವಗಳೆಂಬ

ಕ್ಷಿತ್ಯಂತಷಟ್ತ್ರಿಂಶತ್ತತ್ತ್ವಾನ್ಯತಿಕ್ರಾಂತೇ. ಮಹತ್ತರೇ, ಮಹತೋ ಮಹೀಯಸಿ. ಅಣುತರೇ, ಅಣೋರಣೀಯಸಿ. ಆಕಾಶಾದಿಜನಕತ್ವಾನ್ಮಹತ್ತ್ವಮುಪಚರ್ಯತೇ, ಸ್ಥೂಲದೃಷ್ಟ್ಯವಿಷಯತ್ವಾದಣುತ್ವಮಪಿ ತಥಾ; ನ ಪುನಃ ಪರಿಮಾಣವಿಶೇಷಃ, ತತ್ರ ತದಭಾವಾತ್. ಅತ ಏವ "ಅಣೋರಣೀಯಾನ್ಮಹತೋ ಮಹೀಯಾನ್" ಇತಿ ಶ್ರುತಿರಪ್ಯವಿರೋಧೇನ ಸಂಗಚ್ಛತೇ. ವ್ಯೋಮ್ನಃ ಉಕ್ತಲಕ್ಷಣಾದುಪರಿ ಸ್ಥಿತಿಮತಿ, ಉಪಾಸನಾರ್ಥಂ ಕಲ್ಪಿತಸ್ಥಾನ ವಿಶೇಷೇಣೋಪಲಕ್ಷಿತೇ. ವಿಶ್ವಾಭಿನ್ನೇ ಪರಿಣಾಮಿತ್ವಾತ್- ಚಿತಿ ಸ್ವಪ್ರಕಾಶೇ. ಆನಂದೇ ಸುಖೈಕಸ್ವರೂಪೇ. ಪರೇ ಬ್ರಹ್ಮಣಿ ಸ್ವಾತ್ಮಾ ನಿಯೋಜ್ಯಃ. ತೇನ ಸಹಾಭೇದಸ್ಯ ಸ್ವಾಜ್ಞಾನ ವಶಾದಲಬ್ಧಪ್ರಾಯಸ್ಯ ಸಂಪ್ರಾಪ್ತ್ಯೈ "ಬ್ರಹ್ಮ ವೇದ ಬ್ರಹ್ಮೈವ ಭವತಿ ಇತಿ ಶ್ರುತೇಃ. ಸಕಲತತ್ತ್ವಮೂಲಭೂತತ್ವಾದಯಂ ಮಹಾತತ್ತ್ವಾರ್ಥ ಇತ್ಯುಚ್ಯತೇ ‖ ೧೦೪-೧೦೯ ‖

ಪರಿಮಾಣಶೂನ್ಯವಾದ ಬ್ರಹ್ಮನಲ್ಲಿ ಮಹತ್ತರ ಅಣುತರಗಳೆಂಬ ವಿಶೇಷಣಗಳು ಆಕಾಶಾದಿ ಮಹಾಪದಾರ್ಥಗಳನ್ನು ಸೃಷ್ಟಿಸಿರುವುದರಿಂದ ಔಪಚಾರಿಕ ಮಹತ್ತ್ವವನ್ನೂ ಸ್ಥೂಲ ದೃಷ್ಟಿಗೆ ವಿಷಯವಾಗದಿರುವುದರಿಂದ ಔಪಚಾರಿಕವಾದ ಅಣುತ್ವವನ್ನೂ ಬೋಧಿಸುತ್ತವೆ. ಹೀಗೆಯೇ "ಅಣೋರಣೀಯಾನ್ ಮಹತೋಮಹೀಯಾನ್" ಎಂಬ ಶ್ರುತಿವಾಕ್ಯಕ್ಕೂ ಅರ್ಥಮಾಡಬೇಕು. ವ್ಯೋಮದ "ಉಪರಿಸ್ಥಿತಿಮತ್" ಎಂದರೆ ಉಪಾಸನೆಗೋಸ್ಕರ ಕಲ್ಪಿತ ಸ್ಥಾನ ವಿಶೇಷವಾದ ಪರವ್ಯೋಮದ ಮೇಲೆ ಇರುವುದು. ವಿಶ್ವಾಭಿನ್ನವೆಂದರೆ ವಿಶ್ವಕ್ಕೆಲ್ಲ ಪರಿಣಾಮಿಕಾರಣವಾದ್ದರಿಂದ ಸ್ವಕಾರ್ಯವಾದ ವಿಶ್ವವೆಂಬ ಪರಿಣಾಮದ ಅಭೇದವುಳ್ಳದ್ದು. ಚಿತ್ ಎಂದರೆ ಸ್ವಪ್ರಕಾಶವಾದುದು. ಆನಂದ ಎಂದರೆ ಸುಖೈಕರೂಪವು. ಇಂತಹ ಪರಬ್ರಹ್ಮನಲ್ಲಿ ತನ್ನ ಜೀವಾತ್ಮಾಭೇದವು ಅಜ್ಞಾನನಿಂದ ಅಲಬ್ಧವಾದಂತೆ ಇರುವುದರಿಂದ ತತ್ಪ್ರಾಪ್ತಿಗೋಸ್ಕರ ಜೀವಬ್ರಹ್ಮರ ಅಭೇದವನ್ನು ಅನುಸಂಧಾನಮಾಡಿ ಸಾಕ್ಷಾತ್ಕರಿಸಬೇಕು. "ಬ್ರಹ್ಮವೇದ ಬ್ರಹ್ಮೈವ ಭವತಿ" ಎಂಬ ಶ್ರುತಿಯು ಬ್ರಹ್ಮಸಾಕ್ಷಾತ್ಕಾರದಿಂದ ಅಭೇದ ಪ್ರಾಪ್ತಿಯನ್ನು ಬೋಧಿಸುತ್ತದೆ. ಇದು ಸಕಲ ತತ್ತ್ವಗಳಿಗೂ ಮೂಲಭೂತವಾದ್ದರಿಂದ ಮಹಾತತ್ತ್ವಾರ್ಥವೆಂದು ಹೇಳಲ್ಪಡುತ್ತವೆ ‖ ೧೦೪-೧೦೯ ‖

೧೧೦

ತತ್ತದ್ವರ್ಣಾರ್ಥೇಯಂ ತತ್ತದ್ವರ್ಣಸ್ವರೂಪೇಯಮ್ ।
ಇತಿ ತು ಶ್ರೀ ವಿದ್ಯಾಯಾ ನಾಮಾರ್ಥಃ ಶಬ್ದರೂಪಾರ್ಥಃ ॥ ೧೧೦ ॥

ಅಥ ನಾಮಾರ್ಥಶಬ್ದರೂಪಾರ್ಥಾವಾಹ—ತತ್ತದ್ವರ್ಣಶಬ್ದೇನ ಕಕಾರಾದಯೋಽಷ್ಟಪಂಚಾಶದ್ವರ್ಣಾಃ ಸಪ್ತತ್ರಿಂಶದ್ವರ್ಣಾಃ ಪಂಚದಶ ವರ್ಣಾ ವಾ ಗೃಹ್ಯಂತೇ, ತೇಷಾಂ ಚ ಸರ್ವೇಷಾಂ ಬ್ರಹ್ಮವಾಚಕತ್ವೇನ 'ಸಹಸ್ರಶೀರ್ಷಾಪುರುಷಃ' ಇತ್ಯಾದಿವತ್ಸಾಮಾನಾಧಿಕರಣ್ಯೇನಾನ್ವಯೇ ಸಿದ್ಧೇ "ಅಸ್ತಿರ್ಭವಂತೀಪರಃ ಪ್ರಥಮಪುರುಷೇಽಪ್ರಯುಜ್ಯಮಾನೇಽಪ್ಯಸ್ತಿ" ಇತಿ ಕಾತ್ಯಾಯನವಚನೇ ಭವಂತೀತಿ ಪರ ಇತ್ಯಸ್ಯ ಲಟ್ ಪರ ಇತಿ ವ್ಯಾಖ್ಯಾನಾತ್ "ಅಸ್ತಿ" ಇತಿ ಶೇಷಪೂರಣೇನ ವಾಕ್ಯಾರ್ಥೋ ವರ್ಣನೀಯಃ. ಏವಂ ಸತಿ ನಾಮಾರ್ಥಸ್ತ್ರಿವಿಧಃ ಸಂಪದ್ಯತೇ—ಅಷ್ಟಪಂಚಾಶನ್ನಾಮಕಃ ಸಪ್ತತ್ರಿಂಶನ್ನಾಮಕಃ ಪಂಚದಶನಾಮಕಶ್ಚೇ

ನಾಮಾರ್ಥ, ಶಬ್ದರೂಪಾರ್ಥಗಳನ್ನು ಇಲ್ಲಿ ಹೇಳಿದೆ. ತತ್ತದ್ವರ್ಣಗಳೆಂದರೆ ಕಕಾರ ಮೊದಲಾದ ಐವತ್ತೆಂಟು ವರ್ಣಗಳು ಅಥವಾ ಮೂವತ್ತೇಳು ವರ್ಣಗಳು, ಅಥವಾ ಹದಿನೈದು ವರ್ಣಗಳು ಪರಿಗ್ರಹಿಸಲ್ಪಡಬೇಕು. ಆ ವರ್ಣಗಳೆಲ್ಲವೂ ಬ್ರಹ್ಮಬೋಧಕಗಳಾಗಿರುವುದರಿಂದ ಎಲ್ಲವೂ ಸಮಾನ ವಿಭಕ್ತಿಯಿಂದ ಕೂಡಿದವುಗಳಾಗಿ ತಮ್ಮ ಅರ್ಥಗಳಿಗೆ ಅಭೇದದಿಂದ ಪರಸ್ಪರಾನ್ವಯವನ್ನು ಹೊಂದಿಕೊಂಡಿವೆ. "ಸಹಸ್ರಶೀರ್ಷಾ ಪುರುಷಃ" ಎಂಬ ಪುರುಷಸೂಕ್ತ ವಾಕ್ಯದಲ್ಲಿಯೂ ಎರಡು ಪದಗಳು ಒಂದೇ ವಿಭಕ್ತಿಯಿಂದ ಇರುವುದರಿಂದ ಅವುಗಳ ಅರ್ಥಗಳಿಗೆ ಪರಸ್ಪರವಾಗಿ ಅಭೇದದಿಂದಲೇ ಅನ್ವಯವು. ಇದಕ್ಕೆ ಸಾಮಾನಾಧಿಕರಣ್ಯದಿಂದ ಅನ್ವಯವೆಂದು ಶಾಸ್ತ್ರೀಯಸಂಕೇತವು. ಪ್ರಕೃತ ವರ್ಣಗಳ ಅರ್ಥಕ್ಕೆ ಅಭೇದಾನ್ವಯವನ್ನು ಹೇಳಲು ಮೇಲ್ಕಂಡ ಶ್ರುತಿವಾಕ್ಯವನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಇಂತಹ ಸ್ಥಳದಲ್ಲಿ ಕ್ರಿಯಾಪದವಿಲ್ಲದೇ ವಾಕ್ಯದ ಅರ್ಥವು ಪರಿಪೂರ್ಣವಾಗಲಾರದಾದ್ದರಿಂದ ಕ್ರಿಯಾಪದದ ಅರ್ಥವನ್ನು ತಂದು ಅನ್ವಯಿಸಬೇಕಾದುದು ನ್ಯಾಯಸಮ್ಮತವು. "ಅಸ್ತಿರ್ಭವಂತೀಪರಃ ಪ್ರಥಮಪುರುಷೇಽಪ್ರಯುಜ್ಯಮಾನೇಽಪ್ಯಸ್ತಿ" ಎಂದು ಕಾತ್ಯಾಯನವಚನವಿದೆ. ಇದಕ್ಕೆ "ವರ್ತಮಾನ ಅರ್ಥವನ್ನು ಕೊಡುವ ಲಟ್ ಎಂಬ ಲಕಾರದಿಂದ ಕೂಡಿದ ಅಸ್ತಿ ಎಂಬ

ತಿ, ಅತ್ರ ಪಕ್ಷತ್ರಯೇಽಪಿ ಕಕಾರಾದೀನಾಮನ್ಯತಮಸ್ಯ ಬ್ರಹ್ಮವಾಚಕತ್ವಾತ್. ಅನ್ಯೇಷಾಂ ಪುನರುಕ್ತಾನಾಮುಕಾರಕಕಾರಾದೀನಾಂ ವೈಯರ್ಥ್ಯಪರಿಹಾರಸ್ತು "ಅಕಾರೋ ಬ್ರಹ್ಮವಿಷ್ಣ್ವೀಶಕಮುಠೇಷ್ವಂಗಣೇ ರಣೇ" ಇತ್ಯಾದಿರೀತ್ಯಾ ವಿಶ್ವಪ್ರಕಾಶಕೋಶೇ ತತ್ತದಕ್ಷರಾಣಾಮನೇಕಾರ್ಥವಾಚಕತ್ವೋಕ್ತೇಸ್ತೇಷು ಯೋಗ್ಯತಾಮನುಸೃತ್ಯಾರ್ಥವರ್ಣನೇನ ಕಾರ್ಯಃ. "ಶತಕೃತ್ವೋಽಪಿ ಪಥ್ಯಂ ವದಿತವ್ಯಂ" ಇತಿ ನ್ಯಾಯಾಚ್ಚೈತಾದೃಶಸ್ಥಲೇಷು ನ ಪೌನರುಕ್ತ್ಯಂ ದೋಷಃ. ಏವಂ ಚ ಸರ್ವೇಷಾಮಕ್ಷರಾಣಾಂ ತತ್ತದ್ವಾಚಕತ್ವೇನ ರೂಢ್ಯಾ ವಾ ಪ್ರತ್ಯಕ್ಷರಂ ಸೋಲೋರ್ಪಸ್ಯಾವಶ್ಯಕತ್ವೇನ ಪ್ರಾತಿಪದಿಕಮಾತ್ರಾವಶೇಷಾದ್ವೋಪಾಸಕಜನೇಷು ಪ್ರಸಿದ್ಧತ್ವಾದ್ವಾ ಸಂಭಾವ್ಯತ್ವಾದ್ವಾ ಪರಿಪಕ್ವಾರ್ಥರೂಪತ್ವಾದ್ವಾನಾವಮಾರ್ಥ ಇತಿ ಸಂಜ್ಞಾ. 'ನಾಮಧೇಯಂ ಚ ನಾಮ ಚ" ಇತಿ ಕೋಶಾತ್. ಯದ್ಯಪ್ಯಾಥರ್ವಣೇ "ಓಂಕಾರಂ ಪೃಚ್ಛಾಮಃ,

ಕ್ರಿಯಾಪದವು ಪ್ರಥಮ ಪುರುಷದಲ್ಲಿ ಪೃಥಕ್ಕಾಗಿ ಪ್ರಯೋಗ ಮಾಡದಿರುವ ವಾಕ್ಯಗಳಲ್ಲಿಯೂ ಸೇರಿಕೊಂಡಿದೆಯೆಂದು ತಿಳಿಯಬೇಕು" ಎಂದು ಅರ್ಥ. ಆ ಪ್ರಮಾಣವನ್ನನುಸರಿಸಿ ಮಂತ್ರಾರ್ಥದಲ್ಲಿಯೂ "ಅಸ್ತಿ" ಎಂಬ ಪದವನ್ನು ಸೇರಿಸಿ ವಾಕ್ಯಾರ್ಥವನ್ನು ವರ್ಣಿಸಬೇಕು. ಇದರಿಂದ ಪರಬ್ರಹ್ಮವು ಐವತ್ತೆಂಟು, ಮೂವತ್ತೇಳು, ಅಥವಾ ಹದಿನೈದು ಆಯಾಯ ವರ್ಣಗಳೆಂಬ ನಾಮಧೇಯವುಳ್ಳದ್ದಾಗಿದೆಯೆಂದು ನಾಮಾರ್ಥವು ಪರ್ಯವಸಾನ ಹೊಂದುವುದು. ಈ ಮೂರು ಪಕ್ಷಗಳಲ್ಲಿಯೂ ಮಂತ್ರದಲ್ಲಿರುವ ಒಂದೊಂದು ವರ್ಣವೂ ಬ್ರಹ್ಮವಾಚಕವಾಗಿರುವುದರಿಂದ ಅದೇ ಅರ್ಥವನ್ನು ಬೋಧಿಸುವ ಒಂದಕ್ಕಿಂತ ಹೆಚ್ಚಾದ ವರ್ಣಗಳು ಪುನರುಕ್ತಗಳಾದುದರಿಂದ ವ್ಯರ್ಥವೆಂಬ ಶಂಕೆಯು ತಲೆದೋರುವುದು. ಅಂತಹ ಶಂಕೆಯನ್ನು ಪರಿಹರಿಸುವುದು ಆವಶ್ಯಕವು. "ಅಕಾರೋಬ್ರಹ್ಮವಿಷ್ಣ್ವೀಶಕಮುಠೇಷ್ವಂಗಣೇರಣೇ" ಎಂದು ಮೊದಲಾಗಿ ವಿಶ್ವಕೋಶದಲ್ಲಿ ಒಂದೊಂದು ವರ್ಣಕ್ಕೂ ಅನೇಕಾರ್ಥಗಳು ಹೇಳಲ್ಪಟ್ಟಿವೆ. ಅದನ್ನನುಸರಿಸಿ ಮಂತ್ರದಲ್ಲಿರುವ ವರ್ಣಗಳಿಗೆ ಪ್ರಕೃತದಲ್ಲಿ ಅನ್ವಯಿಸಲು ಅರ್ಹವಾದ ಯಾವುದಾದರೊಂದು ಅರ್ಥವನ್ನು ಸ್ವೀಕರಿಸಬೇಕು. ಇದರಿಂದ ವೈಯರ್ಥ್ಯ ದೋಷವು ತೊಲಗುವುದು. ಮತ್ತು "ಶತಕೃತ್ವೋಽಪಿ ಪಥ್ಯಂ ವದಿತವ್ಯಂ" ಎಂಬ ಹಿತವಾದ ವಿಷಯವನ್ನು ಒಂದು ನೂರು ಸಲವಾದರೂ ಹೇಳಲೇಬೇಕು. ಹಿತೋಪದೇಶದಲ್ಲಿ ಪುನರುಕ್ತಿದೋಷವು

ಕೋ ಧಾತುಃ ಕಿಂ ಪ್ರಾತಿಪದಿಕಂ ಕಿಂ ನಾಮಾಖ್ಯಾತಂ" ಇತ್ಯೇವ ಪ್ರಯೋಗಃ, ತಥಾಽಪಿ 'ಸತ್ತ್ವಪ್ರಧಾನಾನಿ ನಾಮಾನಿ' ಇತಿ ಯಾಸ್ಕ ಪ್ರಯೋಗಾನ್ನಾಮುಪದೇನಾಽಪಿ ಪ್ರಾತಿಪದಿಕಾಭಿಧಾನಸಂಭವಾತ್, ಅವ್ಯಯಗಣೇ "ನಾಮ ಪ್ರಾಕಾಶ್ಯಸಂಭಾವ್ಯಕ್ರೋಧೋಪಗಮಕುತ್ಸನೇ" ಇತಿ ಕೋಶೋಕ್ತೇಃ. ಅವೋಽಪಕ್ವಸ್ತದ್ಭಿನ್ನೋ ನಾಮಃ, ನಕಾರೇಣೈವಾತ್ರ ಸಮಾಸೋ ನ ನಞಾ. ತೇನ 'ನಲೋಪೋ ನಞಃ' (೬-೩-೭೩) ಇತ್ಯಾದೇರನಾಪತ್ತಿಃ, ನಾಸ್ತಿಕ ಇತ್ಯಾದಿವತ್. ಪರಿಪಕ್ವತಾ ವಿರಸತ್ವಾಭಾವ ಇತ್ಯರ್ಥಾತ್. "ತತ್ತದ್ವರ್ಣಸ್ವರೂಪೇಯಂ" ಇತ್ಯತ್ರಾಪಿ ಪೂರ್ವವತ್ಪಕ್ಷತ್ರಯಂ. ನನು ಕಕಾರಾದಿಸ್ವರೂಪತ್ವಂ ನಾಮತಃ ಶಬ್ದಾಭಿನ್ನತ್ವಂ ತಥಾ ಚ ನ ಸ ಕಕಾರಸ್ಯಾರ್ಥಃ, ಶಬ್ದ ಸ್ವರೂಪೇ ಶಕ್ತ್ಯಭಾವಾತ್. ನ ಹಿ 'ಘಟಮಾನಯ' ಇತ್ಯಾದೌ ಘಟಶಬ್ದಸ್ಯಾನಯನಕ್ರಿಯಾಽನ್ವಯಃ. ಅತ ಏವ ನ ಶಬ್ದಾರ್ಥಯೋ

ಇಲ್ಲವೆಂದು ಅರ್ಥವುಳ್ಳ ನ್ಯಾಯಾನುಸಾರವಾಗಿ ಪರಮಹಿತಸಾಧನವನ್ನುಪದೇಶಿಸುವ ಮಂತ್ರದಲ್ಲಿ ಪುನರುಕ್ತಿ ದೋಷವನ್ನು ಶಂಕಿಸಲು ಅವಕಾಶವೇ ಇಲ್ಲ. ಒಟ್ಟಿನಲ್ಲಿ ಇಲ್ಲಿರುವ ಪ್ರತಿಯೊಂದು ವರ್ಣಗಳೂ ಆಯಾಯ ಅರ್ಥಕ್ಕೆ ವಾಚಕಗಳಾಗಿ ನಾಮವೆನಿಸಿದುದರಿಂದಲೂ, ಪ್ರತಿಯೊಂದು ಅಕ್ಷರದ ವಿಭಕ್ತಿ ಪ್ರತ್ಯಯವು ಲೋಪವಾಗಿ ಪ್ರಾತಿಪದಿಕ ಮಾತ್ರವೇ ಉಳಿದಿರುವುದರಿಂದಲೂ, ಇವುಗಳ ಅರ್ಥವು ಉಪಾಸಕ ಜನರಲ್ಲಿ ಪ್ರಸಿದ್ಧಿಗೊಂಡಿರುವ ನಿಮಿತ್ತದಿಂದಲೂ, ಮತ್ತು ಯುಕ್ತ್ಯನುಭವಗಳಿಂದ ಸಂಭಾವಿಸಲು ಅರ್ಹವಾಗಿರುವುದರಿಂದಲೂ, ಪರಿಪಕ್ವರೂಪವಾಗಿರುವುದರಿಂದಲೂ ಇದಕ್ಕೆ ನಾಮಾರ್ಥವೆಂದು ಹೆಸರು ಬಂದಿದೆ. "ನಾಮ" ಎಂಬ ಸಂಸ್ಕೃತ ಪದಕ್ಕೆ ಮೇಲೆ ಹೇಳಿದ ಎಲ್ಲ ಅರ್ಥಗಳೂ ಇವೆ- "ನಾಮಧೇಯಂ ಚ ನಾಮ ಚ" ಎಂಬ ಕೋಶವಾಕ್ಯವನ್ನು ಇಲ್ಲಿ ಪ್ರಮಾಣವಾಗಿಟ್ಟುಕೊಳ್ಳಬಹುದು. ಹಿಂದಿನ ಅರ್ಥಗಳಲ್ಲಿ ನಾಮಪದಕ್ಕೆ ಪ್ರಾತಿಪದಿಕವೆಂಬ ಅರ್ಥವನ್ನೂ ವಿವರಿಸಿದೆ. ಅಥರ್ವವೇದದ ಗೋಪಥ ಬ್ರಾಹ್ಮಣದಲ್ಲಿ ಓಂಕಾರವನ್ನು ಅಧಿಕರಿಸಿ ವಿಚಾರಮಾಡುವ ಪ್ರಸಂಗದಲ್ಲಿ "ಓಂಕಾರಂ ಪೃಚ್ಛಾಮಃ ಕೋಧಾತುಃ ಕಿಂಪ್ರಾತಿಪದಿಕಂ, ಕಿಂನಾಮಾಖ್ಯಾತಂ" ಎಂದು ಪ್ರಾತಿಪದಿಕಕ್ಕೆ ವ್ಯತಿರಿಕ್ತವಾದ ಸುಬಂತಶಬ್ದವೆಂಬ ಅರ್ಥದಲ್ಲಿ ಪ್ರಯೋಗವು ಕಂಡು ಬಂದಿದೆ. ಆದರೂ "ಸತ್ತ್ವಪ್ರಧಾನಾನಿ ನಾಮಾನಿ" ಎಂಬ ಯಾಸ್ಕಮುನಿಯ ನಿರುಕ್ತವಚನದಿಂದ

ರಭೇದಪಕ್ಷೋಽಪಿ ಯುಜ್ಯತೇ, ವಹ್ನ್ಯಾದಿಶಬ್ದೋಚ್ಚಾರಣೇ ಮುಖ ದಾಹಾದ್ಯಾಪತ್ತೇಶ್ಚೇತಿ ಚೇನ್ನ; ಶಬ್ದಸ್ಯ ಸ್ವಸ್ವರೂಪೇಽಪಿ ಶಕ್ತೇಸ್ತಂತ್ರವಾರ್ತಿಕಾದಾವುಕ್ತತ್ವಾತ್. ಉಕ್ತಂ ಚ ಭರ್ತೃಹರಿಣಾ—"ಗ್ರಾಹ್ಯತ್ವಂ ಗ್ರಾಹಕತ್ವಂ ಚ ದ್ವೇ ಶಕ್ತೀ ತೇಜಸೋ ಯಥಾ. ತಥೈವ ಸರ್ವ

ಲಿಂಗಸಂಖ್ಯಾನ್ವಯಿವಸ್ತು ಬೋಧಕವಾದ ಪ್ರಾತಿಪದಿಕವೆಂಬ ಅರ್ಥದಲ್ಲಿಯೂ ನಾಮಪದವನ್ನು ಪ್ರಯೋಗಿಸಬಹುದೆಂದು ತಿಳಿಯುವುದು. ಅವ್ಯಯ ವರ್ಗದಲ್ಲಿ "ನಾಮ ಪ್ರಾಕಾಶ್ಯ ಸಂಭಾವ್ಯ ಕ್ರೋಧೋಪಗಮಕುತ್ಸನೇ" ಎಂದು ನಾಮ ಪದಕ್ಕೆ ಪ್ರಸಿದ್ಧಿ ಸಂಭಾವನೆ ಎಂಬ ಅರ್ಥಗಳನ್ನೂ ತೋರಿಸಿದೆ. ನಾಮ ಎಂಬ ಕಡೆ ನ+ಆಮ ಎಂಬ ಎರಡು ಶಬ್ದಗಳ ಯೋಗವಾಗಿದೆಯೆಂದು ಇಟ್ಟುಕೊಳ್ಳ ಬಹುದು. ಆಮವೆಂದರೆ ಅಪಕ್ವವೆಂದು ಅರ್ಥ. ಆಮಪದದ ಜೊತೆಗೆ ನಕಾರವು ಸೇರಿ ಸಮಾಸವಾಗಿ ನಾಮವೆಂಬ ಪದವು ರೂಪಗೊಂಡಿದೆ. ನಞ್ ಪದದ ಜೊತೆಗೆ ಸಮಾಸಮಾಡಿದ್ದರೆ "ನಲೋಪೋನಞಃ" ಎಂಬ ಸೂತ್ರವಿಹಿತವಾದ ನಕಾರ ಲೋಪ ಮುಂತಾದ ಕಾರ್ಯಗಳು ಬಂದು ಅನಾಮವೆಂದಾಗಬೇಕಾಗಿತ್ತು. ನಾಸ್ತಿಕ ಎಂಬ ಪದದಲ್ಲಿಯೂ ನಕಾರಪದವೂ ಆಸ್ತಿಕ ಪದವೂ ಸೇರಿ ಸಮಾಸ ವಾಗಿರುವುದರಿಂದಲೇ ನಕಾರಕ್ಕೆ ಲೋಪಬರದೇ ಇದೆ. ಈ ಪಕ್ಷದಲ್ಲಿ ಅಪಕ್ವವೆಂದರೆ ವಿರಸತ್ವವು. ಅದಿಲ್ಲದಿರುವುದೆಂದು ತಾತ್ಪರ್ಯವು. ತತ್ತದ್ವರ್ಣಸ್ವರೂಪೇಯಂ" ಎಂಬ ಅಂಶದಲ್ಲಿಯೂ ತತ್ತದ್ವರ್ಣಗಳೆಂದರೆ ಹಿಂದೆ ಹೇಳಿದಂತೆ ಐವತ್ತೆಂಟು, ಮೂವತ್ತೇಳು, ಹದಿನೈದು ಸಂಖ್ಯೆಯ ವರ್ಣಗಳನ್ನು ವಿಕಲ್ಪವಾಗಿ ತೆಗೆದುಕೊಳ್ಳ ಬಹುದು. ಆಯಾಯ ವರ್ಣ ಸ್ವರೂಪಳೇ ಪರದೇವತೆಯು ಎಂಬುದು ಶಬ್ದ ರೂಪಾರ್ಥವು. ಇಲ್ಲಿ ಇದೊಂದು ಆಕ್ಷೇಪವು:—ಕಕಾರಾದಿ ರೂಪವೆಂದರೆ ಕಕಾರ ದೊಡನೆ ಐಕ್ಯ ಹೊಂದಿರುವ ವಸ್ತುವೆಂದು ಅರ್ಥ. ಆ ಅರ್ಥವನ್ನು ಕಕಾರವು ಹೇಗೆ ಬೋಧಿಸುವುದು, "ಘಟಮಾನಯ" ಬಿಂದಿಗೆಯನ್ನು ತೆಗೆದುಕೊಂಡು ಬಾ ಎಂದು ಹೇಳಿದರೆ ಬಿಂದಿಗೆ ಎಂಬ ಶಬ್ದವನ್ನು ತರುವುದೆಂದು ಅರ್ಥವಲ್ಲದ್ದ ರಿಂದ ಆಯಾಯ ಶಬ್ದಗಳಿಗೆ ವ್ಯವಹಾರದಲ್ಲಿ ಶಬ್ದಸ್ವರೂಪವನ್ನು ಬೋಧಿಸುವ ಶಕ್ತಿಯಿಲ್ಲ. ಮತ್ತು ಶಬ್ದ ಅರ್ಥಗಳಿಗೆ ಪರಸ್ಪರೈಕ್ಯವನ್ನು ಒಪ್ಪಿದರೆ ನಿಜವಾದ ಬೆಂಕಿಯು ಮುಖಕ್ಕೆ ತಗುಲಿದರೆ ಮುಖವು ಸುಟ್ಟುಹೋಗುವಂತೆ ಅದರ ಶಬ್ದ ವನ್ನು ಉಚ್ಚರಿಸಿದರೆ ಮುಖವು ಸುಟ್ಟುಹೋಗಬೇಕಾದ ಪ್ರಸಂಗವೊದಗುವುದ

ಶಬ್ದಾನಾಮೇತೇ ಪೃಥಗವಸ್ಥಿತೇ." ಅತ ಏವ "ಶಬ್ದಾರ್ಥಯೋಸ್ತಾದಾತ್ಮ್ಯಮೇವ ಶಕ್ತಿಃ" ಇತಿ ಶಾಬ್ದಿಕನವ್ಯಾ ಇತ್ಯನ್ಯತ್ರ ವಿಸ್ತರಃ. ಇತ್ಥಂ ಚ ಕಕಾರಾದಿವರ್ಣರೂಪೇತ್ಯಾದಿರ್ಮಂತ್ರಾರ್ಥಃ. ಅತ್ರ ಶಬ್ದಸ್ವರೂಪಸ್ಯೈವಾರ್ಥತ್ವೇನ ವರ್ಣನಾಚ್ಛಬ್ದರೂಪಾರ್ಥೋಽಯಮಿತಿ ವ್ಯಪದಿಶ್ಯತೇ || ೧೧೦ ||

ರಿಂದ ಶಬ್ದ-ಅರ್ಥಗಳಿಗೆ ಅಭೇದವನ್ನೊಪ್ಪುವುದೂ ಸರಿಯಲ್ಲ. ಈ ಆಕ್ಷೇಪವನ್ನು ಯುಕ್ತಿಯಿಂದ ಪರಿಹರಿಸಬಹುದು. ಶಬ್ದಸ್ವರೂಪದಲ್ಲಿಯೂ ಶಕ್ತಿಯಿದೆಯೆಂಬುದನ್ನು ತಂತ್ರವಾರ್ತಿಕ ಮುಂತಾದ ಗ್ರಂಥಗಳು ಹೇಳಿವೆ. ಭರ್ತೃಹರಿಯು ಕೂಡ "ಗ್ರಾಹ್ಯತ್ವಂ ಗ್ರಾಹಕತ್ವಂ ಚ ದ್ವೇಶಕ್ತೀ ತೇಜಸೋಯಥಾ | ತಥೈವ ಸರ್ವಶಬ್ದಾನಾಮೇತೇ ಪೃಥಗವಸ್ಥಿತೇ ||" ಎಂಬ ವಚನದಿಂದ ತೇಜಸ್ಸಿಗೆ ಗ್ರಾಹಕತ್ವ ಮತ್ತು ಗ್ರಾಹ್ಯತ್ವಗಳೆಂಬ ಎರಡು ಶಕ್ತಿಗಳಿರುವಂತೆ ಸರ್ವ ಶಬ್ದಗಳಿಗೂ ಈ ಎರಡು ಶಕ್ತಿಗಳಿವೆ ಎಂದು ಹೇಳಿರುವನು. ವೈಯಾಕರಣರೂ ಶಬ್ದ-ಅರ್ಥಗಳಿಗೆ ತಾದಾತ್ಮ್ಯ ಅಥವಾ ಐಕ್ಯವನ್ನೇ ಸಿದ್ಧಾಂತಮಾಡಿರುವರು. ಆಕ್ಷೇಪದಲ್ಲಿ ಎತ್ತಿರುವ ಪ್ರತಿಯೊಂದು ಶಂಕೆಗಳ ಸಮಾಧಾನವನ್ನು ಗ್ರಂಥಾಂತರಗಳಲ್ಲಿ ವಿಸ್ತಾರವಾಗಿ ನೋಡಬಹುದು. ಕಕಾರಾದಿ ವರ್ಣರೂಪಳೇ ಪರದೇವತೆಯೆಂದು ಮಂತ್ರದ ಅರ್ಥವು. ಇಲ್ಲಿ ಶಬ್ದ ಸ್ವರೂಪವೇ ಅರ್ಥವಾಗಿರುವುದರಿಂದ ಈ ಮಂತ್ರಾರ್ಥವನ್ನು ಶಬ್ದರೂಪಾರ್ಥವೆಂದು ಕರೆಯುವರು || ೧೧೦ ||

೧೧೧

ಕಲ್ಯಾಣ್ಯೇಕಾಕ್ಷರ್ಯರ್ಣಾವೀಶಿತ್ರೀ ಚಾಪಿ ಲಲಿತಾ ಚ ।
ಇತ್ಥಂ ನಾಮತ್ರಿಶತೀವಾಚ್ಯೋಽರ್ಥಸ್ತತ್ತದಕ್ಷರಸ್ಯಾಪಿ ॥ ೧೧೧ ॥

ಅಥ ನಾಮ್ನೈಕದೇಶಾರ್ಥಮಾಹ—ಅತ್ರ ಹಿ "ಕಕಾರರೂಪಾ ಕಲ್ಯಾಣೀ" ಇತ್ಯಾದಿನಾ ಪಂಚದಶಾಕ್ಷರ್ಯಾ ಏಕೈಕನಾಮಾದಿತಃ ಕೃತ್ವಾ ತಾದೃಶನಾಮಾನಿ ಪ್ರತ್ಯಕ್ಷರಂ ವಿಂಶತಿರುಕ್ತಾನಿ. ತಾನಿ ಚ ತ್ರೀಣಿ ಶತಾನಿ ಭವಂತಿ. ತಾನಿ ಚ ಮಂತ್ರಾಕ್ಷರಾಣಾಮರ್ಥಪ್ರಕಾಶನಾರ್ಥಂ ಪ್ರವೃತ್ತಾನಿ. ತಥಾ ಚ ಕಕಾರಸ್ಯ "ಕಕಾರರೂಪಾ ಕಲ್ಯಾಣೀ ಕಲ್ಯಾಣಗುಣಶಾಲಿನೀ" ಇತ್ಯಾದಯೋ ವಿಂಶತಿರರ್ಥಾಃ. ಏವಮೇಕಾರಾದೀನಾಮಪಿ ಪಾರ್ಥಕ್ಯೇನ ವಿಂಶತಿರರ್ಥಾಃ. ತೇಷು ಚ

ನಾಮ್ನೈಕದೇಶಾರ್ಥವನ್ನು ಈ ಪದ್ಯದಲ್ಲಿ ಹೇಳಿದೆ. ತ್ರಿಶತಿಯಲ್ಲಿ "ಕಕಾರ ರೂಪಾಕಲ್ಯಾಣೀ ಕಲ್ಯಾಣಗುಣಶಾಲಿನೀ" ಎಂದು ಮಂತ್ರದಲ್ಲಿ ಬರುವ ಕಕಾರ, ಏಕಾರ ಮುಂತಾದ ವರ್ಣಗಳಲ್ಲಿ ಕ್ರಮವಾಗಿ ಒಂದೊಂದು ವರ್ಣವೂ ಆದಿಯಲ್ಲಿ ಬರುವ ಇಪ್ಪತ್ತು ಇಪ್ಪತ್ತು ನಾಮಗಳು ಹೇಳಲ್ಪಟ್ಟಿವೆ. ಹದಿನೈದು ಮಂತ್ರಾಕ್ಷರಗಳಿಂದ ಈ ನಾಮಗಳು ಮೂರುನೂರು ಸಂಖ್ಯೆಯುಳ್ಳವುಗಳಾಗಿವೆ. ಆ ನಾಮಗಳೆಲ್ಲವೂ ಮಂತ್ರಾಕ್ಷರಗಳ ಅರ್ಥವನ್ನು ವಿವರಿಸಲು ಹೊರಟಿವೆ. ಹೀಗೆ ಕಕಾರ, ಏಕಾರ. ಈಕಾರ ಮೊದಲಾಗಿ ಪ್ರತಿಯೊಂದು ವರ್ಣಕ್ಕೂ ಇಪ್ಪತ್ತು ಅರ್ಥಗಳಿದ್ದಂತೆ ಆಯಿತು. ಪ್ರಸಿದ್ಧವಾದ ಕೋಶ, ವ್ಯಾಕರಣಾದಿ ಪ್ರಮಾಣಬಲದಿಂದ ಆಯಾಯ ವರ್ಣಗಳಿಗೆ ಅಷ್ಟು ಅರ್ಥಗಳಲ್ಲಿ ಶಕ್ತಿಯು ಸಿದ್ಧವಾಗದಿದ್ದರೂ ಈ ವಚನದ ಪ್ರಾಮಾಣ್ಯಾನ್ಯಥಾನುಪಪತ್ತಿಯೆಂಬ ಅರ್ಥಾಪತ್ತಿ ಪ್ರಮಾಣದಿಂದ ವರ್ಣಗಳಿಗೆ ಪ್ರತ್ಯೇಕವಾಗಿ ಶಕ್ತಿಯನ್ನು ಕಲ್ಪಿಸುವುದಕ್ಕಿಂತಲೂ "ನಾಮ್ನೈಕದೇಶೇ ನಾಮಗ್ರಹಣಂ" ಹೆಸರಿನಲ್ಲಿ ಒಂದು ಅಂಶವನ್ನು ಗ್ರಹಿಸಿದರೂ ಸಂಪೂರ್ಣ ನಾಮವನ್ನು ಗ್ರಹಿಸಿದಂತೆ ವ್ಯಕ್ತಿಬೋಧವುಂಟಾಗುವುದೆಂಬ ನ್ಯಾಯದಂತೆ ತ್ರಿಶತಿಯಲ್ಲಿ ಹೇಳಿರುವ ನಾಮಗಳಿಗೆ ಮಾತ್ರ ವರ್ಣಗಳು ಏಕದೇಶವಾಗಿರುವುದರಿಂದ ಸಂಪೂರ್ಣನಾಮಾರ್ಥವನ್ನು ಬೋಧಿಸುತ್ತವೆಯೆಂಬ ಕಲ್ಪನೆಯು ಉತ್ತಮವಾದುದು. ಸೌಂದರ್ಯಲಹರಿಯಲ್ಲಿ ಶ್ರೀ ಶಂಕರಾಚಾರ್ಯರೂ "ಭಜಂತೇ ವರ್ಣಾ

ಸರ್ವೇಷು ಪ್ರಸಿದ್ಧಕೋಶವ್ಯಾಕರಣಾದಿರೀತ್ಯಾ ಶಕ್ತೇರಸಂಭವಾದೇತದ್ಬಲಾದೇವ ಕಲ್ಪನಸ್ಯಾರ್ಥಾಪತ್ತಿಶರಣತ್ವಾತ್, ಅನ್ಯಥಾಽನುಪಪತ್ತಿರೂಪಾರ್ಥಾಪತ್ತೇಶ್ಚ "ನಾಮ್ನ್ಯೈಕದೇಶೇ ನಾಮಗ್ರಹಣಂ" ಇತಿ ನ್ಯಾಯೇನ ಪರಿಕ್ಷಯಾತ್. ತೇಷಾಂ ನಾಮ್ನಾಮೇಕದೇಶಾ ಏವ ಕಕಾರಾದಯ ಇತಿ ಕಲ್ಪ್ಯತೇ. ಅತ ಏವಾಚಾರ್ಯಭಗವತ್ಪಾದೈಃ 'ಶಿವಃ ಶಕ್ತಿಃ ಕಾಮಃ' ಇತ್ಯಾದೀನಾಮುದ್ಧೃತವರ್ಣಾನಾಂ ನಾಮಾವಯವತ್ವಂ ಸ್ಪಷ್ಟಮುಕ್ತಂ 'ಭಜಂತೇ ವರ್ಣಾಸ್ತೇ ತವ ಜನನಿ ನಾಮಾವಯವತಾಂ' ಇತಿ ಸೌಂದರ್ಯಲಹರ್ಯಾಂ. ಅಸ್ತಿ ಹಿ ನಾಮ್ನ್ಯೈಕದೇಶೇ ನಾಮಗ್ರಹಣಂ "ಭೀಮೋ ಭೀಮಸೇನಃ," "ಸತ್ಯಾ ಸತ್ಯಭಾಮಾ," "ಗುರುರ್ಲಘುರ್ಗಲೌ ಚ" ಇತ್ಯಾದೌ. 'ಅನುಷ್ಟುಭಿ, ಯಜ್ಞಾಯಜ್ಞೀಯೇ, ಉದ್ಗೀಥೋಪಾಂತ್ಯಂ, ಗಾಯತ್ರೀಷು, ಜರಾಬೋಧೀಯೇ, ರಥಂತರೇ, ಪ್ರತಿಹಾರಾದಿಃ' ಇತಿ ವಕ್ತವ್ಯೇ, 'ಷ್ಟುಭಿ, ಜ್ಞೀಯೇ,

ಸ್ತೇತವಜನನಿ ನಾಮಾವಯವತಾಂ" ಎಂಬ ವಾಕ್ಯದಿಂದ "ಶಿವಃ, ಶಕ್ತಿಃ, ಕಾಮಃ" ಮುಂತಾದ ಸಂಕೇತಪದಗಳಿಂದ ಉದ್ಧಾರಮಾಡಲ್ಪಟ್ಟ ಕಕಾರಾದಿ ವರ್ಣಗಳನ್ನು ನಾಮಾಯವಗಳೆಂದು ಹೇಳಿರುತ್ತಾರೆ. "ನಾಮ್ನ್ಯೈಕದೇಶೇ ನಾಮಗ್ರಹಣಂ" ಎಂಬ ನ್ಯಾಯದ ಪ್ರಚಾರವನ್ನು ಭೀಮಸೇನ ಎಂಬುದಕ್ಕೆ ಭೀಮ, ಸತ್ಯಭಾಮಾ ಎಂಬುದಕ್ಕೆ ಸತ್ಯಾ, ಗುರು, ಲಘು ಎಂಬುದಕ್ಕೆ ಗ, ಲ ಎಂದು ಮೊದಲಾಗಿ ಪ್ರಯೋಗಿಸುವ ಉದಾಹರಣೆಗಳಲ್ಲಿ ಕಾಣಬಹುದು. ಇಷ್ಟೇ ಅಲ್ಲದೇ ಸಾಮವೇದಿಗಳ ಪುಲ್ಲ ಸೂತ್ರ ಗ್ರಂಥದಲ್ಲಿ ಅನುಷ್ಟುಭಿ, ಯಜ್ಞಾಯಜ್ಞೀಯೇ, ಉದ್ಗೀಥೋಪಾಂತ್ಯಂ, ಗಾಯತ್ರೀಷು, ಜರಾಬೋಧೀಯೇ, ರಥಂತರೇ, ಪ್ರತಿಹಾರಾದಿಃ ಎಂಬ ಪೂರ್ಣ ನಾಮಗ್ರಹಣ ಮಾಡಬೇಕಾದ ಪ್ರಸಂಗಗಳಲ್ಲಿ ಏಕದೇಶವನ್ನು ಮಾತ್ರ ಗ್ರಹಿಸಿ ಷ್ಟುಭಿ, ಜ್ಞೀಯೇ, ಗೀಥೋಪಾಂತ್ಯಂ, ತ್ರೀಷು, ಬೋಧೀಯೇ, ತರೇ, ಹಾರಾದಿಃ, ಎಂದು ಹೇಳಿರುವುದು ಹೆಚ್ಚಾಗಿ ಕಂಡುಬರುವುದು. ಕಕಾರವೇ ಆದಿಯಲ್ಲಿರುವ ನಾಮಗಳು ಅಂತವಿಲ್ಲದಷ್ಟು ಇರುವುದರಿಂದ ಮಂತ್ರಾಂತರ್ಗತ ಕಕಾರಕ್ಕೆ "ನಾಮ್ನ್ಯೈಕದೇಶೇ" ಎಂಬ ನ್ಯಾಯದಿಂದ ಎಲ್ಲವೂ ಅರ್ಥವಾಗಬಹುದಾದ್ದರಿಂದ ತ್ರಿಶತಿಯಲ್ಲಿ ಹೇಳಿರುವ ನಾಮಾರ್ಥಗಳನ್ನೇ ತೆಗೆದುಕೊಂಡು ಮಿಕ್ಕವು ಅರ್ಥಗಳಲ್ಲವೆಂದು ತಿಳಿಯಬೇಕು. ಮಿಕ್ಕ ಅರ್ಥಗಳನ್ನು ವ್ಯಾವೃತ್ತಿಮಾಡುವ ನಿಯಮವನ್ನು ತೋರಿಸುವುದೇ ತ್ರಿಶತಿಯ ಉದ್ದೇಶ್ಯವು.

ಗೀಥೋಸಾಂತ್ಯಂ, ತ್ರೀಷು, ಬೋಧೀಯೇ, ತರೇ, ಹಾರಾದಿಃ,' ಇತ್ಯಾದಿ ಪ್ರಯೋಗಾಃ ಸಾಮುದೇದಿನಾಂ ಫುಲ್ಲಸೂತ್ರೇ ಚ ಬಹುಲಮುಪಲಭ್ಯಂತೇ. ತತ್ರ ಚ ಕಕಾರಾದಿನಾಮ್ನಾಮಾನಂತ್ಯಾತ್ಕಕಾರಸ್ಯಾಪ್ಯನಂತಾರ್ಥಕತ್ವೇ ಪ್ರಾಪ್ತೇಽಯಂ ನಿಯಮ ಏತ ಏವಾರ್ಥಾನಾನ್ಯ ಇತಿ. ತೇಷು ಚ ಪ್ರತ್ಯಕ್ಷರಂ ಪ್ರಥಮನಾಮ್ನಾಂ ನಾಮಾರ್ಥಶಬ್ದರೂಪಾರ್ಥಾಭ್ಯಾಂ ಪೌನರುಕ್ತ್ಯಾದಿಹ್ಯೈಕೋನವಿಂಶತಿರೇವಾರ್ಥಾ ವಿವಕ್ಷಿತಾಃ. ತಥಾ ಚ ನಾಮೈಕದೇಶಾರ್ಥೋಽಪ್ಯೇಕೋನವಿಂಶತಿವಿಧಃ ಸಂಪನ್ನಃ. ಅತ್ರ ಚ ಪಂಚದಶಸಂಖ್ಯಾಸು ವಿಂಶಿಕಾಸು ಪ್ರಥಮನಾಮಾನಿ ಪರಿತ್ಯಜ್ಯ ದ್ವಿತೀಯನಾಮಾನ್ಯುಟ್ಟಂಕಿತಾನಿ, ಪ್ರಥಮನಾಮ್ನಾಂ ಪೂರ್ವತನಾರ್ಥ ವರ್ಣನೇನ ಲಬ್ಧತ್ವಾತ್ ॥ ೧೧೧-೧೧೨ ॥

ಅಲ್ಲಿ ತೋರಿಸಿದ ಇಪ್ಪತ್ತು ನಾಮಗಳಲ್ಲಿ ಮೊದಲನೆಯ ನಾಮವು ಹಿಂದೆ ಹೇಳಿದ ನಾಮಾರ್ಥ-ಶಬ್ದ ರೂಪಾರ್ಥಗಳಲ್ಲಿ ಸೇರಿ ಹೋಗುವುದರಿಂದ ಮಿಕ್ಕಹತ್ತೊಂಭತ್ತು ಅರ್ಥಗಳು ಮಾತ್ರವೇ ಈ ಅರ್ಥದಲ್ಲಿ ವಿವಕ್ಷಿತಗಳೆಂದು ಭಾವಿಸಬೇಕು. ಎಂದರೆ ನಾಮೈಕದೇಶಾರ್ಥವು ಪ್ರತಿಯೊಂದು ವರ್ಣಕ್ಕೂ ಹತ್ತೊಂಭತ್ತು ವಿಧವಾಗಿದೆ. ಇಲ್ಲಿ ಮೂಲ ಶ್ಲೋಕಗಳಲ್ಲಿ ತ್ರಿಶತಿಯಲ್ಲಿ ಬರುವ ಪ್ರಥಮ ನಾಮವನ್ನು ಬಿಟ್ಟು ಕ, ಏ, ಈ, ಲ ಎಂಬ ವರ್ಣಗಳು ಆದಿಯಲ್ಲಿರುವ ಕಲ್ಯಾಣೀ, ಏಕಾಕ್ಷರೀ, ಈಶಿತ್ರೀ, ಲಲಿತಾ ಎಂಬ ದ್ವಿತೀಯನಾಮಗಳನ್ನು ಹೇಳಿದೆ. ಇವೆಲ್ಲವೂ ಆಯಾಯ ಮಂತ್ರಾಕ್ಷರಗಳ ವಾಚ್ಯಾರ್ಥವು. ನಾಮೈಕ ದೇಶಗ್ರಹಣದಿಂದ ನಾಮದ ಉಪಸ್ಥಿತಿ ಬಂದು ಅದರ ಅರ್ಥವು ಸ್ಮೃತವಾಗುವುದರಿಂದ ತ್ರಿಶತಿಯಲ್ಲಿರುವ ನಾಮಗಳ ವಾಚ್ಯಾರ್ಥವು ನಾಮೈಕದೇಶಾರ್ಥವಾಗುವುದು || ೧೧೧-೧೧೨ ||

೧೧೩

ತಿಥಿಮಿತಬಿಂದುಗಣೋತ್ತರಗಜರಸಗಿರಿದಸ್ರರಾಮಸಂಖ್ಯಾಕಾಃ ।
ಅರ್ಥಾ ಭವಂತಿ ಯೋಗಾನ್ನಾಮ್ನೋ ನಾಮೈಕದೇಶಸ್ಯ ॥ ೧೧೩ ॥

ಏತೇಷು ಚ ವಿಂಶತಿಸಂಖ್ಯಾಕೇಷ್ವರ್ಥೇಷು ಕಕಾರಸ್ಯ ಕಕಾರರೂಪೇತ್ಯರ್ಥವರ್ಣನದಶಾಯಾಮೇಕಾರಸ್ಯೈಕಾರರೂಪೇತಿ, ಈಕಾರಸ್ಯೇಕಾರರೂಪಿಣೀತ್ಯೇವಾರ್ಥೋ ವರ್ಣನೀಯ ನ ಇತಿ ನಿಯಮಃ. ಕಕಾರರೂಪೈಕಾಕ್ಷರೀ ಈಪ್ಸಿತಾರ್ಥಪ್ರದಾಯಿನೀತ್ಯಪ್ಯರ್ಥಸ್ಯ ಸುವಚತ್ವಾತ್. ಏವಂ ಚಾತ್ರ ಪಂಚದಶಾಕ್ಷರಾಣಿ ವಿಲಿಖ್ಯ ಪ್ರತ್ಯಕ್ಷರಶಿರಸಿ ವಿಂಶತ್ಯಂಕಾನ್ ದತ್ತ್ವಾ ಪರಸ್ಪರಂ ಹನನೇ ಚರಮಾಕ್ಷರೇ ಯಾ ಸಂಖ್ಯಾ ನಿಷ್ಪದ್ಯತೇ ತಾಮೇವಾಹ—ನಾಮ್ನೋ ನಾಮಾರ್ಥೇಷು ತೃತೀಯಪಕ್ಷ

ಒಂದೊಂದು ವರ್ಣಕ್ಕೂ ಹಿಂದೆ ಹೇಳಲ್ಪಟ್ಟ ಇಪ್ಪತ್ತು ಅರ್ಥಗಳಲ್ಲಿ ಕವರ್ಣಕ್ಕೆ ಕಕಾರ ರೂಪಳೆಂದು ಮೊದಲನೆಯ ಅರ್ಥವನ್ನು ಹೇಳುವಾಗ ಏವರ್ಣಕ್ಕೆ ಏಕಾರರೂಪಳೆಂದು ಮೊದಲನೆಯ ಅರ್ಥವನ್ನೇ ಹೇಳಬೇಕೆಂಬ ನಿಯಮವಿಲ್ಲದ್ದರಿಂದ ಆಗ ಏಕಾರಕ್ಕೆ ಏಕಾಕ್ಷರೀ ಎಂದೂ ಈಕಾರಕ್ಕೆ ಈಪ್ಸಿತಾರ್ಥ ಪ್ರದಾಯಿನಿಯೆಂದೂ ಅರ್ಥವನ್ನು ಹೇಳಬಹುದು. ಈ ರೀತಿಯಿಂದ ಹದಿನೈದು ಮಂತ್ರಾಕ್ಷರಗಳನ್ನು ಬರೆದು ಅವುಗಳ ಮೇಲುಗಡೆ ಇಪ್ಪತ್ತು ಸಂಖ್ಯೆಯನ್ನು ಬರೆದು ಆ ಸಂಖ್ಯೆಗಳನ್ನು ಪರಸ್ಪರವಾಗಿ ಗುಣಿಸುತ್ತಾ ಬಂದರೆ ಕಡೆಯ ಅಕ್ಷರದಲ್ಲಿ ಲಬ್ಧವಾಗುವ ನಾಮೈಕ ದೇಶಾರ್ಥಗಳ ಸಂಖ್ಯೆಯನ್ನು ಇಲ್ಲಿ ಹೇಳಿರುತ್ತದೆ. ಹದಿನೈದು ವರ್ಣಗಳೆಂಬ ಹಿಂದೆ ಹೇಳಿರುವ ತೃತೀಯ ಪಕ್ಷದಲ್ಲಿ ಒಂದು ನಾಮಾರ್ಥವನ್ನು ಹತ್ತೊಂಭತ್ತು ಇತರ ನಾಮೈಕ ದೇಶಾರ್ಥಗಳ ಜೊತೆಗೆ ಗುಣನಮಾಡಿದರೆ "ತಿಥಿ" ಮುಂತಾದ ಪರಿಭಾಷೆಯಿಂದ ಸಂಕೇತ ಮಾಡಲ್ಪಟ್ಟ ಮಹಾ ಸಂಖ್ಯೆಯು ಲಭಿಸುವುದು. ತಿಥಿ= ಹದಿನೈದು. ಅಷ್ಟು ಸಂಖ್ಯೆಯ ಬಿಂದುಗಳು ಮತ್ತು ಅವುಗಳ ಮುಂದೆ ಕ್ರಮವಾಗಿ ಗಜ= ಎಂಟು, ರಸ= ಆರು, ಗಿರಿ = ಏಳು, ದಸ್ರ= ಎರಡು, ರಾಮ = ಮೂರು ಎಂದು ಈ ಸಂಕೇತವುಳ್ಳ ಸಂಖ್ಯೆಗಳು "ಅಂಕಾನಾಂವಾಮತೋಗತಿಃ" ಎಂಬ ನ್ಯಾಯದಿಂದ ಹದಿನೈದು ಬಿಂದುಗಳನ್ನು ಬರೆದು ವಾಮಗತಿಯಲ್ಲಿ ವಾಮಭಾಗವೇ ಮುಂದೆ ಇರುವುದಾದ್ದರಿಂದ ಆಸ್ಥಾನಗಳಲ್ಲಿ ಎಂಟು

ಸ್ಯೈಕಸ್ಯ ನಾಮ್ನೈಕದೇಶಾರ್ಥಸ್ಯೈಕೋನವಿಂಶತಿ ವಿಧಸ್ಯ ಚ ಯೋಗಾದುಕ್ತರೀತ್ಯಾ ಗುಣನಾತ್ ತಿಥಿಭಿಃ ಪಂಚದಶಸಂಖ್ಯಯಾಮಿತಃ ಸಂಮಿತೋ ಯೋ ಬಿಂದುಗಣಸ್ತಸ್ಯೋತ್ತರೇ ಯೇ ಗಜಾದಯಃ, ಗಜಾ ಅಷ್ಟೌ, ರಸಾಃ ಷಟ್, ಗಿರಯಃ ಸಪ್ತ, ದಸ್ರೌ ದ್ವೌ, ರಾಮಾಸ್ತ್ರಯಃ, "ಅಂಕಾನಾಂ ವಾಮತೋ ಗತಿಃ" ಇತಿ ನ್ಯಾಯಾದಾದೌ ಪಂಚದಶ ಬಿಂದೂನ್ವಿಲಿಖ್ಯ ತದ್ವಾಮೇ ಗಜಾದೀನ್ವಿಲಿಖೇತ್, ವಾಮಗತೌ ವಾಮಭಾಗಸ್ಯೈವೋತ್ತರತ್ವಾತ್. ಅಥ ವಾ, ಬಿಂದುಗಣ ಉತ್ತರೋ ಯೇಭ್ಯಸ್ತೇ ಗಜಾದಯ ಇತಿ ವಿಗ್ರಹಃ. ಗಜಾದೀನ್ ವಾಮಗತ್ಯಾ ವಿಲಿಖ್ಯ ಜಾತಸ್ಯಾಂಕಸಮೂಹಸ್ಯೋತ್ತರತ್ರ ದಕ್ಷಿಣಗತ್ಯೈವ ಬಿಂದವೋ ಲೇಖ್ಯಾ ಇತ್ಯರ್ಥೇ ಫಲಿತೇ ನ ವಿವಾದಃ. ಏವಂ ಚ ಶತತ್ರಯೋತ್ತರ ಸಪ್ತವಿಂಶತಿಸಂಖ್ಯಾಕಪರಾರ್ಧಾನಿ ಷಣ್ಮಧ್ಯಾನ್ಯಷ್ಟಾಂತ್ಯಾನಿ ಚ ತ್ರಿಶತ್ಯುಕ್ತಾರ್ಥಭೇದಾ ಭವಂತಿ. ಅಂಕತೋಽಪಿ

೩೨೭೬೮,೦೦೦,೦೦೦,೦೦೦,೦೦೦,೦೦೦.

ಏತದಂಕಜ್ಞಾನಪ್ರಕಾರಸ್ತು 'ಚರಮಾಂಕಮಾರಭ್ಯ ಪೂರ್ವಪೂರ್ವಾಂ

ಮುಂತಾದ ಅಂಕಗಳನ್ನು ಬರೆಯಬೇಕು. ಅಥವಾ ಬಿಂದುಗಣವೇ ಮುಂದೆ ಇರುವ ಗಜಾದಿ ಸಂಖ್ಯೆಯೆಂದರೆ ಗಜಾದಿಗಳನ್ನು ವಾಮಗತಿಯಿಂದ ಬರೆದು ಅವುಗಳ ಮುಂದೆ ಬಲಗಡೆಯಲ್ಲಿಯೇ ಹದಿನೈದು ಬಿಂದುಗಳನ್ನು ಬರೆಯಬೇಕೆಂಬ ಫಲಿತಾರ್ಥ ಬರುವಂತೆ "ಬಿಂದುಗಣ ಉತ್ತರೋ ಯೇಭ್ಯಸ್ತೇಗಜಾದಯಃ" ಎಂದು ಬಹುವ್ರೀಹಿಸಮಾಸವನ್ನು ಒಪ್ಪಿದರೆ ಯಾವ ವಿವಾದಕ್ಕೂ ಅವಕಾಶವಿಲ್ಲ. ಒಟ್ಟು ಗಣನೆಯಿಂದ ಮೂರನೂರ ಇಪ್ಪತ್ತೇಳು ಪರಾರ್ಧ ಆರು ಮಧ್ಯ ಎಂಟು ಅಂತ್ಯ ಸಂಖ್ಯೆಯಿಂದ ತ್ರಿಶತಿಯಲ್ಲಿ ಹೇಳಿರುವ ಅರ್ಥಗಳು ಲಭಿಸುತ್ತವೆ. ಅಂಕಗಳನ್ನು ಬರೆಯುವುದು ಈ ಕ್ರಮವನ್ನು ಹೊಂದಿದೆ.—೩೨೭೬೮೦೦೦,೦೦೦,೦೦೦,೦೦೦,೦೦೦. ಅಂಕಗಳ ವಿಷಯದಲ್ಲಿ ಲೀಲಾವತೀ ಮುಂತಾದ ಗ್ರಂಥಗಳಿಂದ ಈ ನಿಯಮವು ತೋರುತ್ತದೆ. ಕಡೆಯ ಅಂಕಕ್ಕಿಂತಲೂ ಪೂರ್ವಪೂರ್ವಾಂಕಗಳು ದಶಗುಣಿತವಾಗಿವೆ. ಇವುಗಳಿಗೆ "ಏಕದಶಶತಸಹಸ್ರಾಯುತಕೋಟಯಃ ಕ್ರಮಶಃ । ಅರ್ಬುದಮಬ್ಜಂಖರ್ವನಿಖರ್ವಮಹಾಪದ್ಮಶಂಕವಸ್ತಸ್ಮಾತ್ । ಜಲಧಿಶ್ಚಾಂತ್ಯಂ ಮಧ್ಯಂ ಪರಾರ್ಧಮಿತಿದಶಗುಣೋತ್ತರಾಃ ಸಂಜ್ಞಾಃ ||" ಎಂಬ ವಚನಾನುಸಾರವಾಗಿ ಏಕ, ದಶ, ಶತ, ಸಹಸ್ರ, ಅಯುತ,

ಕದಶದಶಗುಣಿತಾ ಉತ್ತರೋತ್ತರಾಂಕಾಃ' ಇತಿ ಪರಿಭಾಷಯಾ. ತನ್ನಿಯಮುಶ್ಚ ಲೀಲಾವತ್ಯಾಂ—'ಏಕದಶಶತಸಹಸ್ರಾಯುತಲಕ್ಷಪ್ರಯುತ ಕೋಟಯಃ ಕ್ರಮಶಃ. ಅರ್ಬುದಮಬ್ಧಂ ಖರ್ವನಿಖರ್ವ ಮಹಾಪದ್ಮ ಶಂಕವಸ್ತಸ್ಮಾತ್. ಜಲಧಿಶ್ಚಾಂತ್ಯಂ ಮಧ್ಯಂ ಪರಾರ್ಧಮಿತಿ ದಶಗುಣೋತ್ತರಾಃ ಸಂಜ್ಞಾಃ." ಇತಿ. ಏತದಗ್ರೇಽಪ್ಯಂಕವಿಸ್ತರಸ್ತು ಛಂದಃ ಕೌಸ್ತುಭೇಽಷ್ಟಮೇಽಧ್ಯಾಯೇ ಪ್ರಪಂಚಿತೋಽಸ್ಮಾಭಿಃ ॥ ೧೧೩ ॥

ಲಕ್ಷ, ಪ್ರಯುತ, ಕೋಟಿ, ಅರ್ಬುದ, ಅಬ್ಧ, ಖರ್ವ, ನಿಖರ್ವ, ಮಹಾಪದ್ಮ, ಶಂಕು, ಜಲಧಿ, ಅಂತ್ಯ, ಮಧ್ಯ, ಪರಾರ್ಧ ಎಂದು ಕ್ರಮವಾಗಿ ಹೆಸರು, ಇವುಗಳ ಮುಂದೆ ಅಂಕಗಳ ವಿಸ್ತಾರ ಕ್ರಮವು ಛಂದಃ ಕೌಸ್ತುಭವೆಂಬ ಗ್ರಂಥದ ಎಂಟನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ ನಿರೂಪಿಸಲ್ಪಟ್ಟಿದೆ ॥ ೧೧೩ ॥

೧೧೪

ವಾಕ್ಕಾಮಶಕ್ತಿಕೂಟೈರವಯವಶೋ ವಿಗ್ರಹೋ ಮಾತುಃ ।
ಪ್ರತಿಪಾದ್ಯೋತ್ರಾಕಂಠಾದಾಮಧ್ಯಾದಾಚ ಪಾದಾಗ್ರಾತ್ ॥ ೧೧೪ ॥

ಅಥ ಶಾಕ್ತಾರ್ಥೋ ದ್ವಿವಿಧಃ—ಅವಯವಾರ್ಥಃ ಶಕ್ತಿಸಮೂಹಾರ್ಥಶ್ಚೇತಿ. ತತ್ರಾವಯವಾರ್ಥೋ ನಾಮ ದೇವ್ಯಾ ಅವಯವಾನಾಂ ವರ್ಣನಂ. ತದಾಹ—ಅತ್ರ ವಿದ್ಯಾಯಾಂ ವಾಕ್ಕೂಟೇನ, ಆ ಕಂಠಾತ್ಕಂಠಮಭಿವ್ಯಾಪ್ಯ, ಅರ್ಥಾತ್ಕಿರೀಟಮಾರಭ್ಯಾವಯವಶೋ ವಿಗ್ರಹಃ ಪ್ರತಿಪಾದ್ಯಃ. ಕಾಮರಾಜಕೂಟೇನ ಕಂಠಾಧಃಕಟಿಪರ್ಯಂತ ವಿಗ್ರಹಃ. ಶಕ್ತಿಕೂಟೇನ ಕಟ್ಯಧಃ ಪಾದಾಗ್ರಾಂತೋ ದೇಹಃ ಪ್ರತಿಪಾದ್ಯ ಇತ್ಯರ್ಥಃ. ಅತ ಏವ ವಾಚ್ಯವಾಚಕಯೋರಭೇದವಿವಕ್ಷಯೋಕ್ತಂ ಸಹಸ್ರನಾಮಸು—'ಶ್ರೀಮದ್ವಾಗ್ಭವಕೂಟೈಕ ಸ್ವರೂಪಮುಖ ಪಂಕಜಾ. ಕಂಠಾಧಃ ಕಟಿಪರ್ಯಂತ ಮಧ್ಯಕೂಟ ಸ್ವರೂಪಿಣೀ. ಶಕ್ತಿಕೂಟೈಕತಾಪನ್ನಕಟ್ಯಧೋ ಭಾಗಧಾರಿಣೀ. ಮೂಲಮಂತ್ರಾತ್ಮಿಕಾ ಮೂಲಕೂಟತ್ರಯಕಲೇವರಾ.' ಇತಿ. ॥ ೧೧೪ ॥

ಅವಯವಾರ್ಥ, ಶಕ್ತಿ ಸಮೂಹಾರ್ಥಗಳೆಂದು ಶಾಕ್ತಾರ್ಥವು ಎರಡು ವಿಧವಾದದ್ದು. ಇವುಗಳಲ್ಲಿ ದೇವಿಯ ಅವಯವಗಳನ್ನು ವರ್ಣಿಸುವ ಅರ್ಥವು ಅವಯವಾರ್ಥವೆನಿಸಲ್ಪಡುವುದು. ಅದನ್ನು ಈ ಪದ್ಯವು ಹೇಳುತ್ತಿದೆ- ಈ ವಿದ್ಯೆಯಲ್ಲಿ ವಾಕ್ಕೂಟವು ಕಿರೀಟ ಮೊದಲ್ಗೊಂಡು ಕಂಠಾವಯವ ಪರ್ಯಂತ ವಿಗ್ರಹವನ್ನು ಪ್ರತಿಪಾದಿಸುತ್ತದೆ. ಕಾಮರಾಜ ಕೂಟವು ಕಂಠದಿಂದ ಕಟಿಭಾಗಪರ್ಯಂತಾವಯವಗಳ ವಿಗ್ರಹವನ್ನು ಪ್ರತಿಪಾದಿಸುತ್ತದೆ. ಶಕ್ತಿಕೂಟವು ಕಟಿ ಪ್ರದೇಶದಿಂದ ಪಾದಾಗ್ರಪರ್ಯಂತ ವಿಗ್ರಹವನ್ನು ಪ್ರತಿಪಾದಿಸುತ್ತದೆ. ಹೀಗೆ ವಾಚ್ಯವಾಚಕ ಭಾವವನ್ನೊಳಗೊಂಡಿರುವುದರಿಂದ ವಾಚ್ಯವಾಚಕಗಳ ಅಭೇದ ವಿವಕ್ಷೆಯಿಂದ ಸಹಸ್ರನಾಮದಲ್ಲಿ-"ಶ್ರೀಮದ್ವಾಗ್ಭವ ಕೂಟೈಕ ಸ್ವರೂಪಮುಖಪಂಕಜಾ। ಕಂಠಾಧಃ ಕಟಿಪರ್ಯಂತ ಮಧ್ಯಕೂಟಸ್ವರೂಪಿಣೀ । ಶಕ್ತಿಕೂಟೈಕತಾಪನ್ನ ಕಟ್ಯಧೋಭಾಗ ಧಾರಿಣೀ । ಮೂಲಮಂತ್ರಾತ್ಮಿಕಾ ಮೂಲಕೂಟತ್ರಯ ಕಲೇಬರಾ ॥" ಎಂದು ಆಯಾಯ ಕೂಟಗಳಿಗೂ ಆಯಾಯ ಅವಯವಗಳ ವಿಗ್ರಹಕ್ಕೂ ಐಕ್ಯವು ಹೇಳಲ್ಪಟ್ಟಿರುತ್ತದೆ ॥ ೧೧೪ ॥

೧೧೫

ವೇಧೋಭಾರತ್ಯೌ ಮಾಧವಲಕ್ಷ್ಮ್ಯೌ ರುದ್ರಪಾರ್ವತ್ಯೌ ।
ರೇಫಾಂತವರ್ಣಷಟ್ಕಸ್ಯಾರ್ಥಾನ್ ಕ್ರಮಶೋ ವಿಜಾನೀಯಾತ್ ॥ ೧೧೫ ॥

ಶಕ್ತಿಸಮೂಹಾರ್ಥಮಾಹ—ಅತ್ರ ಹಕಾರರೇಫಯೋರ್ವಿಭಜ್ಯಗಣನಂ. ದುರ್ವಾಸಾದಿವಿದ್ಯಾವಿಶೇಷೇಷು ತಥೈವ ಪಾಠಾತ್ ॥ ೧೧೫ ॥

ಶಕ್ತಿಸಮೂಹಾರ್ಥವು ಈ ವಿಧವಾದುದು, .ದೂರ್ವಾಸಾದಿ ವಿದ್ಯೆಗಳಲ್ಲಿ ಹಕಾರ–ರೇಫಗಳನ್ನು ಪ್ರತ್ಯೇಕವಾಗಿ ಪಠಿಸಿರುವುದರಿಂದ ಈ ವಿದ್ಯೆಯಲ್ಲಿ "ಹ್ರೀಂ" ಎಂಬ ಕಡೆ ಹಕಾರ ರೇಫಗಳನ್ನು ಪ್ರತ್ಯೇಕವಾಗಿ ಎಣಿಸಿದರೆ ಆರುವರ್ಣಗಳು ಲಭಿಸುವುವು. ಅವಕ್ಕೆ ಕ್ರಮವಾಗಿ ಬ್ರಹ್ಮ-ಭಾರತಿಯರು, ವಿಷ್ಣು-ಲಕ್ಷ್ಮಿಯರು, ರುದ್ರ–ಪಾರ್ವತಿಯರು ಎಂಬ ಮೂರು ಯುಗ್ಮಗಳು ಅರ್ಥವು ॥ ೧೧೫ ॥

೧೧೬

ತಾ ಏತಾಃ ಸಕಲಾ ಅಪಿ ಕಾಮಕಲಾ ಏವ ನ ತತೋಽನ್ಯಾಃ |
ಸಾಮಾನಾಧಿಕರಣ್ಯಾದೀಕಾರೇಣಾಯಮರ್ಥೋಽಸ್ಯ || ೧೧೬ ||

ಏತಾ ಬ್ರಹ್ಮಾದಯಃ ಷಟ್. ಯದ್ಯಪಿ ಬ್ರಹ್ಮಾದೀನಾಂ ಪುಂಸ್ತ್ವೇನ ಭಾರತ್ಯಾದೀನಾಂ ಸ್ತ್ರೀತ್ವೇನ ತದ್ವಾಚಕಶಬ್ದೇ "ಪುಮಾನ್ ಸ್ತ್ರಿಯಾ" (೧-೨-೬೭) ಇತ್ಯೇಕಶೇಷತಃ ಏತೇ ಇತ್ಯೇವ ಭಾವ್ಯಂ. ತಥಾಽಪಿ ಬ್ರಹ್ಮವಿಷ್ಣುಮಹೇಶ್ವರಾಣಾಂ ಸ್ತ್ರೀರೂಪತಯಾ ಭಾವಾರ್ಥಪ್ರಕರಣೇ ಕಥಿತಾಯಾಃ ಸ್ಮರಣಾಯೈವಮುಕ್ತಿಃ ಸಾಮಾನಾಧಿಕರಣ್ಯಾದೇಕವಿಭಕ್ತಿಕತ್ವರೂಪಾತ್. ಪ್ರತ್ಯಕ್ಷರಂ ವಿದ್ಯಮಾನಾನಾಂ ಸುಪಾಂ ತು ಲೋಪಃ. ವಾಕ್ಯೇ ಸಂಹಿತಾಯಾ ಅವಿವಕ್ಷಣಾದೀಕಾರೇಣ ಸಹ ನ ಸಂಧಿಃ || ೧೧೬ ||

ಬ್ರಹ್ಮ–ಭಾರತಿ ಮುಂತಾದ ಶಕ್ತಿಗಳೆಲ್ಲವೂ ಒಂದೇ ವಿಭಕ್ತಿಯುಳ್ಳ ಶಬ್ದ ಪ್ರತಿಪಾದ್ಯವಾಗಿರುವುದರಿಂದ ಕಾಮಕಲೆಯ ಅಭೇದವನ್ನು ಹೊಂದಿಕೊಂಡಿವೆ. ಕಾಮಕಲೆಗಿಂತ ಭಿನ್ನವಾದುವುಗಳಲ್ಲವೆಂಬುದು ಈಕಾರದ ಅರ್ಥವು. ಈ ಪದ್ಯದಲ್ಲಿ "ಏತಾಃ" ಎಂಬುದು ಸರ್ವನಾಮ ಏತದ್ ಶಬ್ದದ ಸ್ತ್ರೀಲಿಂಗ ಪ್ರಥಮಾ ವಿಭಕ್ತಿಯ ಬಹುವಚನದ ರೂಪವು. ಬ್ರಹ್ಮಾದಿಗಳು ಪುರುಷರೂಪರೂ ಭಾರತ್ಯಾದಿಗಳು ಸ್ತ್ರೀರೂಪರೂ ಆಗಿರುವುದರಿಂದ ತದ್ವಾಚಕ ಶಬ್ದಗಳ ಸಮಾಸದಲ್ಲಿ "ಪುಮಾನ್‌ಸ್ತ್ರಿಯಾ" ಎಂಬ ವ್ಯಾಕರಣಸೂತ್ರಾನುಸಾರವಾಗಿ "ಎತೇ" ಎಂದು ಇರಬೇಕಾದುದು ಉಚಿತವೆಂದು ತೋರಬಹುದು. ಆದರೆ ಭಾವಾರ್ಥ ಪ್ರಕರಣದಲ್ಲಿ ಬ್ರಹ್ಮಾದಿಗಳನ್ನೂ ಸ್ತ್ರೀ ರೂಪರೆಂದು ಹೇಳಿರುವುದನ್ನು ಸ್ಮರಿಸಿಕೊಳ್ಳಬೇಕೆಂಬ ಅಭಿಪ್ರಾಯದಿಂದ ಇಲ್ಲಿ ಸ್ತ್ರೀಲಿಂಗ ಶಬ್ದವನ್ನು ನಿರ್ದೇಶಮಾಡಿರುತ್ತದೆ. ಸಾಮಾನಾಧಿಕರಣ್ಯವೆಂದರೆ ಒಂದೇ ವಿಭಕ್ತಿಯುಳ್ಳ ಶಬ್ದಸ್ವರೂಪವೆಂದು ಅರ್ಥವು. ಪ್ರತಿಯೊಂದು ಅಕ್ಷರಗಳ ಮೇಲಿನ ವಿಭಕ್ತಿ ಪ್ರತ್ಯಯಗಳಿಗೆ ಲೋಪಬಂದಿದೆಯೆಂದೂ ಸಂಹಿತಾ (ಸೇರಿಸಿ ಉಚ್ಚಾರಣೆ) ಎಂಬುದು ವಾಕ್ಯದಲ್ಲಿ ವಿವಕ್ಷಾಧೀನವಾಗಿರುವುದರಿಂದ ಇಲ್ಲಿ ವಿವಕ್ಷೆಯಿಲ್ಲವಾದ್ದರಿಂದ ಈಕಾರದ ಜೊತೆಗೆ ಸ್ವರಸಂಧಿ ಬಂದಿಲ್ಲವೆಂದೂ ತಿಳಿಯಬೇಕು || ೧೧೬ ||

೧೧೭-೧೧೮

ಅಯಮೇವ ಕೂಟಯೋರಪಿ ಪರಯೋರರ್ಥಃ ಪರಂ ತು ತಾರ್ತೀಯೇ ।
ದ್ವೈತೀಯಿಕದ್ವೈತೀಯಿಕಹಕಾರಃ ಸಕಾರತಃ ಪೂರ್ವಃ ॥ ೧೧೭ ॥
ಅನ್ವಯಿತವ್ಯೋಽಕ್ಷರಶಃ ಶಕ್ತೇಃ ಶಾಕ್ತೈರ್ವಿಭಾವ್ಯತ್ವಾತ್ ।
ನಾನೇಚ್ಛಾದಿಕಶಕ್ತಿಮಯತ್ವೋಕ್ತೇರೇಷ ಶಾಕ್ತಾರ್ಥಃ ॥ ೧೧೮ ॥

ಪ್ರಥಮಕೂಟಸ್ಯ ಯಾವಾನರ್ಥಸ್ತಾವಾನೇವ ದ್ವಿತೀಯತೃತೀಯ ಕೂಟಯೋಃ. ದ್ವಿತೀಯಕೂಟೇ ಮಧ್ಯಮಹಕಾರಃ ಪರಂ ತೃತೀಯ ಕೂಟಸ್ಯ ಪ್ರಥಮಭಾಗೇಽನ್ವಯಯೋಗ್ಯಃ. ತಸ್ಯ ತತ್ರ ಚತುರ್ಥತ್ವೇಽಪಿ ಸಜಾತೀಯಯೋರ್ಮಧ್ಯೇ ದ್ವಿತೀಯತ್ವಾತ್ತಥೋಕ್ತಿಃ. ತೇನ ತಯೋರಪಿ ಕೂಟಯೋಃ ಪ್ರಾತಿಸ್ವಿಕಂ ರೇಫಾಂತಾ ವರ್ಣಾಃ ಷಡೇವ ಸಂಪದ್ಯಂತ ಇತಿ ತೇಷಾಮುಕ್ತರೀತ್ಯೈವಾರ್ಥವರ್ಣನಂ. ಅತ್ರ ಪ್ರತ್ಯಕ್ಷರಮೇಕೈಕತ್ರ ಶಕ್ತಿಃ. ತೇನ ಶಕ್ತಾನಾಮಕ್ಷರಾಣಾಮರ್ಥಃ ಶಾಕ್ತಾರ್ಥಃ. 'ಸ್ವಾರ್ಥೇಽಣ್.' ಅಥ ವಾ ಶಾಕ್ತಾನಾಮುಪಾಸಕಾನಾಮರ್ಥಃ ಪ್ರಯೋಜನಂ, ಅಥ ವಾ ಶಕ್ತಿಸಮೂಹಃ ಪ್ರತಿಪಾದ್ಯತ ಇತಿ ತ್ರೇಧಾ ನಿರ್ವಚನಂ. ಭಾವಾರ್ಥೇನ ಸಹ ಪೌನರುಕ್ತ್ಯಪರಿಹಾರಸ್ತು ಪೂರ್ವಮೇವ ಕೃತಃ ॥ ೧೧೭-೧೧೮ ॥

ಪ್ರಥಮ ಕೂಟಕ್ಕೆ ಯಾವ ಅರ್ಥವೋ ಅದೇ ದ್ವಿತೀಯ ತೃತೀಯ ಕೂಟಗಳಿಗೂ ಅರ್ಥವು. ಆದರೆ ದ್ವಿತೀಯ ಕೂಟದಲ್ಲಿರುವ ಎರಡು ಹಕಾರಗಳ ಮಧ್ಯದಲ್ಲಿ ಎರಡನೆಯ ಹಕಾರವನ್ನು ತೃತೀಯ ಕೂಟದ ಸಕಾರದ ಮೊದಲು ಅನ್ವಯಿಸಬೇಕು. ದ್ವಿತೀಯ ಕೂಟದಲ್ಲಿ ನಾಲ್ಕನೆಯ ಸ್ಥಾನದಲ್ಲಿ ಹಕಾರವಿದ್ದರೂ ಹಕಾರಗಳಲ್ಲಿ ಎರಡನೆಯದೆಂದು ಹೇಳಲ್ಪಟ್ಟಿದೆ. ಇದರಿಂದ ಎಲ್ಲ ಕೂಟಗಳಲ್ಲಿಯೂ ರೇಫಾಂತದವರೆಗೆ ವರ್ಣಗಳು ಆರು ಲಭಿಸುವುವಾದ್ದರಿಂದ ಎಲ್ಲ ಕೂಟಗಳಿಗೂ ಅರ್ಥವು ಸಮವೇ ಆಗುವುದು. ಇಲ್ಲಿ ಪ್ರತಿಯೊಂದು ವರ್ಣವೂ ಒಂದೊಂದು ಅರ್ಥದಲ್ಲಿ ಶಕ್ತಿಯುಳ್ಳವುಗಳಾಗಿರುವುದರಿಂದ ಶಕ್ತಾನಾಂ ಅರ್ಥಾಃ ಎಂದರೆ ಶಕ್ತ ವರ್ಣಗಳ ಅರ್ಥವು ಇದು ಎಂಬ ಅಭಿಪ್ರಾಯದಿಂದ ಶಾಕ್ತಾರ್ಥವೆನಿಸಲ್ಪಟ್ಟಿದೆ. ಶಕ್ತಾರ್ಥ ಶಬ್ದಕ್ಕೆ ಸ್ವಾರ್ಥಿಕ "ಅಣ್" ಎಂಬ ಪ್ರತ್ಯಯದಿಂದ ಶಾಕ್ತಾರ್ಥವೆಂದು ರೂಪವು ಉಂಟಾಗಿದೆ. ಶಾಕ್ತರ = ಉಪಾಸಕರ ಪ್ರಯೋಜನ ಅಥವಾ ಶಕ್ತಿಸಮೂಹವು ಪ್ರತಿಪಾದ್ಯವಾಗಿದೆಯೆಂಬ ಅಭಿಪ್ರಾಯದಿಂದಲೂ ಶಾಕ್ತಾರ್ಥವೆಂಬ ಪದಕ್ಕೆ ನಿರ್ವಚನ ಮಾಡಬಹುದು. ಭಾವಾರ್ಥಕ್ಕೂ ಶಾಕ್ತಾರ್ಥಕ್ಕೂ ಇರುವ ತಾರತಮ್ಯವನ್ನು ಹಿಂದೆಯೇ ಹೇಳಿರುವುದರಿಂದ ಪೌನರುಕ್ತ್ಯ ದೋಷಕ್ಕೆ ಅವಕಾಶವಿಲ್ಲ || ೧೧೭–೧೧೮ ||

೧೧೯-೧೨೦

ಕಹಯೋರ್ಲಸಯೋರರ್ಥೌ ಶಿವಶಕ್ತೀ ಶುದ್ಧಯೋರಚೋಃ ಶಕ್ತಿಃ ।
ಉಭಯೋಃ ಸಮರಸಭಾವೋ ಹೃಲ್ಲೇಖಾಯಾಃ ಪರಂ ಬ್ರಹ್ಮ ॥ ೧೧೯ ॥
ಬ್ರಹ್ಮೈವ ಶಿವಃ ಶಕ್ತಿಶ್ಚೇತಿ ಪ್ರತ್ಯೇಕಕೂಟಾರ್ಥಃ ।
ಶಿವಶಕ್ತಿಸಾಮರಸ್ಯಾದ್ವಿದ್ಯಾಯಾ ಏಷ ಸಾಮರಸ್ಯಾರ್ಥಃ ॥ ೧೨೦ ॥

ಅಥ ಸಾಮರಸ್ಯಾರ್ಥಮಾಹ—ಕಾದಿವಿದ್ಯಾಯಾಂ ಹಿ ಕಕಾರಾಸ್ತ್ರಯೋ ಹಕಾರೌ ದ್ವೌ ತೇಷಾಂ ಶಿವ ಏವಾರ್ಥಃ. ಏವಂ ಲಕಾರಾಸ್ತ್ರಯಃ ಸಕಾರೌ ದ್ವೌ ತೇಷಾಂ ಶಕ್ತಿಃ. ಅತ ಏವ ಮನ್ಮಥಬೀಜೇ ಕಕಾರಲಕಾರಯೋರ್ಯೋಗಃ. ಪರಾಪ್ರಾಸಾದೇ ಹಕಾರಸಕಾರಯೋಃ. ಶುದ್ಧಯೋರಚೋರ್ದ್ವಿತೀಯತೃತೀಯಯೋಃ ಶಕ್ತಿಃ. ಲಜ್ಜಾಬೀಜಸ್ಯೋಭಯಸಾಮರಸ್ಯಾತ್ಮಕಂ ಪರಂ ಬ್ರಹ್ಮಾರ್ಥಃ. ವ್ಯೋಮಾಗ್ನಿತುರೀಯಸ್ವರಬಿಂದುಭಿಃ ಕ್ರಮೇಣ ಪ್ರಕಾಶಗ್ರಾಸಸಾಮರಸ್ಯತಾದಾತ್ಮ್ಯಪನ್ನೇತ್ಯರ್ಥಸ್ಯ ಪರಬ್ರಹ್ಮೈಕರೂಪಸ್ಯ ಷಟ್ಚತ್ವಾರಿಂಶದುತ್ತರಶತತಮಶ್ಲೋಕವ್ಯಾಖ್ಯಾಯಾಂ ಸ್ಪಷ್ಟೀಕರಿಷ್ಯಮಾಣತ್ವಾತ್. ಶಿವಃ ಶಕ್ತಿಶ್ಚೇತ್ಯೇತದುಭಯಂ ಬ್ರಹ್ಮೈವೇತಿ ಪ್ರತಿಕೂಟಮರ್ಥಃ. ತದುಕ್ತಂ ತ್ರಿಶತ್ಯಾಂ—'ಕತ್ರಯಂ ಹದ್ವಯಂ ಚೈವ ಶೈವೋಭಾಗಃ ಪಕೀರ್ತಿತಃ. ಶೇಷಾಣಿಶಕ್ತ್ಯಕ್ಷರಾಣಿ ಹ್ರೀಂಕಾರ ಉಭಯಾತ್ಮಕಃ.' ಇತಿ ॥ ೧೧೯-೧೨೦ ॥

ಕಾದಿ ವಿದ್ಯೆಯಲ್ಲಿ ಮೂರು ಕಕಾರಗಳೂ ಎರಡು ಹಕಾರಗಳೂ ಇವೆ. ಅವಕ್ಕೆ ಶಿವ ಎಂದು ಅರ್ಥ. ಹಾಗೆಯೇ ಮೂರು ಲಕಾರಗಳೂ ಎರಡು ಸಕಾರಗಳೂ ಇವೆ. ಇವಕ್ಕೆ ಶಕ್ತಿಯೆಂದು ಅರ್ಥ. ಆದ್ದರಿಂದಲೇ ಮನ್ಮಥಬೀಜದಲ್ಲಿ ಕಕಾರ ಲಕಾರಗಳ ಯೋಗವೂ ಪರಾಪ್ರಾಸಾದದಲ್ಲಿ ಹಕಾರ ಸಕಾರಗಳ ಯೋಗವೂ ಇದೆ ಶುದ್ಧವಾದ ಎರಡು ಮೂರನೆಯ ಸ್ವರಗಳಿಗೆ ಶಕ್ತಿಯೇ ಅರ್ಥವು. ಹ್ರೀಂಕಾರ ಅಥವಾ ಲಜ್ಜಾಬೀಜಕ್ಕೆ ಶಿವಶಕ್ತಿ ಸಾಮರಸ್ಯ ರೂಪವಾದ ಪರಬ್ರಹ್ಮವು ಅರ್ಥ. ಹಕಾರ ರೇಫ ಈಕಾರ ಬಿಂದುಗಳಿಂದ ಸೇರಿದ ಹ್ರೀಂಕಾರವು ಕ್ರಮವಾಗಿ ಪ್ರಕಾಶ-ಗ್ರಾಸ-ಸಾಮರಸ್ಯ ತಾದಾತ್ಮ್ಯವನ್ನು ಹೊಂದಿದ ಪರಬ್ರಹ್ಮವು ಬೋಧ್ಯವಾಗುವುದೆಂಬುದನ್ನು ಒಂದುನೂರನಲವತ್ತಾರನೆಯ ಶ್ಲೋಕವ್ಯಾಖ್ಯಾನದಲ್ಲಿ ಸ್ಪಷ್ಟಪಡಿಸಿದೆ. ಪ್ರತ್ಯೇಕ ಕೂಟಗಳಿಗೂ ಶಿವ, ಶಕ್ತಿ ಎಂಬೆರಡು ಪರಬ್ರಹ್ಮವು ಎಂದು ಅರ್ಥ. ಇದೇ ಅಭಿಪ್ರಾಯವನ್ನು "ಕತ್ರಯಂ ಹದ್ವಯಂ ಚೈವ ಶೈವೋಭಾಗಃ ಪ್ರಕೀರ್ತಿತಃ । ಶೇಷಾಣಿಶಕ್ತ್ಯಕ್ಷರಾಣಿ ಹ್ರೀಂಕಾರ ಉಭಯಾತ್ಮಕಃ ॥" ಎಂಬ ತ್ರಿಶತೀವಚನದಲ್ಲಿ ಸ್ಪಷ್ಟಪಡಿಸಿದೆ. ಈ ಕೂಟಾರ್ಥಗಳಲ್ಲಿ ಶಿವಶಕ್ತಿಗಳ ಸಾಮರಸ್ಯವು ಸೇರಿರುವುದರಿಂದ ವಿದ್ಯೆಯ ಈ ಅರ್ಥವು ಸಾಮರಸ್ಯಾರ್ಥವೆಂದೆನಿಸಲ್ಪಟ್ಟಿದೆ ॥ ೧೧೯-೧೨೦ ॥

೧೨೧-೧೨೨

ಕನದೀಪ್ತಾವಿತಿ ಧಾತೋಃ ಪ್ರಕಾಶಕತ್ವಂ ಕಕಾರಾರ್ಥಃ |
ಅಧ್ಯಯನಾರ್ಥೇಕತೇಜಃ ಸ್ಯಾದೇಕಾರಸ್ತದೀಯಕರಣಾರ್ಥಃ || ೧೨೧ ||
ವರ್ಣದ್ವಯಮೇಲನತಃ ಪ್ರಕಾಶಿಕಾ ಬುದ್ಧಿರಿತ್ಯರ್ಥಃ |
ಈ ವ್ಯಾಪ್ತಾವಿತಿಧಾತೋಸ್ತಸ್ಯಾ ವ್ಯಾಪ್ತಿಸ್ತೃತೀಯವರ್ಣಾರ್ಥಃ || ೧೨೨ ||
ತಸ್ಯ ಲಹರ್ಯಾಧಿಕ್ಯಂ ತನ್ನಿರ್ಮಾಣಂ ಮಕಾರಾರ್ಥಃ |

ಅಥ ಸಮಸ್ತಾರ್ಥಮಾಹ—ಕನ್ಯತೇ ಪ್ರಕಾಶ್ಯತೇಽನೇನೇತಿ ಕಂ ಪ್ರಕಾಶಕಂ. ಬಾಹುಲಕೋ ನಲೋಪಃ. ಔಣಾದಿಕಃ 'ಞಮಂತಾಡ್ಡಃ' (೧೧೧) ಇತಿ ಡಪ್ರತ್ಯಯೋ ವಾ. 'ಇಙ್ ಅಧ್ಯಯನೇ' ಇತಿ ಧಾತುರಧಿಪೂರ್ವೋಽಪಿ ಪ್ರಕೃತ ಆರ್ಷತ್ವಾತ್ತದ್ವಿಯೋಕಃ. ಅತ ಏವೇಜಃ ಕ್ವಿಪಿ ಕೃತೇ ಕಿತ್ತ್ವೇಽಪಿ ಗುಣಃ. ವಿಜ್ಞಾ ಕಾರ್ಯಃ. ಅಧೀಯತೇಽನೇನೇತ್ಯಧ್ಯಯನಕರಣಂ ಬುದ್ಧಿಃ. ಅನಯೋಃ ಕರ್ಮಧಾರಯಃ. ಅಸಂಧಿರಾರ್ಷಃ. ತತ ಈಕಾರೇಣ ಷಷ್ಠೀತತ್ಪುರುಷಃ. ಲಹರೀತ್ಯತ್ರಾ

ಈ ಪದ್ಯಗಳಿಗೆ ಸಮಸ್ತಾರ್ಥವನ್ನು ನಿರೂಪಿಸುವುದರಲ್ಲಿ ತಾತ್ಪರ್ಯವು. ಕನದೀಪ್ತೌ ಎಂದು ಧಾತುಪಾಠದಲ್ಲಿರುವ ದೀಪ್ತಿ ಅಥವಾ ಪ್ರಕಾಶ ಎಂಬ ಅರ್ಥವುಳ್ಳ ಕನಧಾತುವಿನಿಂದ ಕನ್ಯತೇ = ಪ್ರಕಾಶ್ಯತೇ ಅನೇನ ಎಂಬ ವ್ಯುತ್ಪತ್ತಿಗೆ ಅನುಸಾರವಾಗಿ ಕಕಾರ ರೂಪವು ಸಿದ್ಧವಾಗಿರುವುದರಿಂದ ಅದಕ್ಕೆ ಪ್ರಕಾಶಕವೆಂದು ಅರ್ಥವು. ಧಾತುವಿನ ನಕಾರಕ್ಕೆ ಬಹುಲಾಧಿಕಾರದಿಂದ ವೈಕಲ್ಪಿಕಲೋಪ ಬಂದಿದೆಯೆಂದಾಗಲಿ ಉಣಾದಿ "ಞಮನ್ತಾಡ್ಡಃ" (೧೧೧) ಎಂಬ ಸೂತ್ರದಿಂದ ವಿಹಿತವಾದ "ಡ" ಪ್ರತ್ಯಯ ಬಂದಿದೆಯೆಂದಾಗಲಿ ತಿಳಿಯಬೇಕು. "ಇಙ್ ಅಧ್ಯಯನೇ" ಎಂದು ಧಾತುಪಾಠದಲ್ಲಿ ಪಠಿತವಾಗಿದೆ. ಅಧ್ಯಯನ ಅರ್ಥವುಳ್ಳ ಇಙ್ ಧಾತುವು ಅಧಿ ಉಪಸರ್ಗಸಹಿತವಾಗಿಯೇ ಇರಬೇಕಾದುದಾದರೂ ಆರ್ಷಪ್ರಯೋಗವಾದ್ದರಿಂದ ಇಲ್ಲಿ ಉಪಸರ್ಗವಿಲ್ಲದೇ ಧಾತು ರೂಪವು ಮಾತ್ರ ಉಳಿದಿದೆ. ಆರ್ಷವಾಗಿರುವುದರಿಂದಲೇ ಇಙ್ ಧಾತುವಿಗೆ ಕ್ವಿಪ್ ಪ್ರತ್ಯಯವು ಮುಂದೆ ಬಂದಾಗ ಆ ಪ್ರತ್ಯಯದಲ್ಲಿ ಕಕಾರವೆಂಬ ಇತ್ ಸಂಜ್ಞೆಯವರ್ಣವಿರುವುದರಿಂದ ಇಕಾರಕ್ಕೆ ಏ ಎಂಬ ಗುಣಾದೇಶವು ನಿಷೇಧಿಸಲ್ಪಟ್ಟಿದ್ದರೂ ಆ ಆದೇಶವು ಇಲ್ಲಿ

ಕಾರಲೋಪಃ. ಮಾಜ್‌ಮಾನೇ ' ಇತಿ ಧಾತೋಃ ಕ್ವಿಪಿ ತಲ್ಲೋಪೇ "ಪ್ರಾತಿಪದಿಕಾದ್ಧಾತ್ವರ್ಥೇ ಬಹುಲಮಿಷ್ಠವಚ್ಚ" (ಗ. ೨೦೩) ಇತಿ ಣಿಚಿ 'ಣೇರನಿಟ' (೬-೪-೫೧) ಇತಿ ಟಲೋಪೇ ಚ ಮ್ ಇತಿ ಸಿದ್ಧ್ಯತಿ. ಪ್ರಕಾಶಕತ್ವಂ ಸೂಕ್ಷ್ಮತ್ವಂ. ತಥಾ ಚ ಸೂಕ್ಷ್ಮಮತಿವ್ಯಾಪನಾಧಿಕ್ಯಂ ಪ್ರಥಮ ಕೂಟಾರ್ಥಃ ‖ ೧೨೧-೧೨೨ ‖

ಬಂದಿದೆ. ವಿಚ್‌ಪ್ರತ್ಯಯದಿಂದಲೂ ಏಕಾರ ರೂಪವನ್ನು ಸಾಧಿಸಬಹುದು. ಇಜ್‌ಧಾತುವಿನಿಂದ "ಅಧೀಯತೇ ಅನೇನ" ಎಂಬ ಕರಣವ್ಯುತ್ಪತ್ತಿಯನ್ನು ಮಾಡಿದರೆ ಅಧ್ಯಯನಕರಣವಾದ ಬುದ್ಧಿಯೆಂಬ ಅರ್ಥವು ಲಭಿಸುವುದು. ಕಕಾರ ಏಕಾರಗಳಿಗೆ ಕರ್ಮಧಾರಯಸಮಾಸವನ್ನು ಅಂಗೀಕರಿಸಿದರೆ ಪ್ರಕಾಶಕವಾದ ಬುದ್ಧಿಯು ಎಂದು ಅರ್ಥವು ಪರ್ಯವಸಾನ ಹೊಂದುವುದು. ಕ+ಏ ಇಲ್ಲಿ ಸ್ವರಸಂಧಿಯು ಆರ್ಷಪ್ರಯೋಗವಾದ್ದರಿಂದ ಬಂದಿಲ್ಲವೆಂಬ ಸಮಾಧಾನವನ್ನು ಸ್ಮರಿಸಬೇಕು. ಮುಂದೆ ಈಕಾರದೊಡನೆ ಷಷ್ಠೀ ತತ್ಪುರುಷ ಸಮಾಸವನ್ನು ಮಾಡಬೇಕು. ಈಕಾರಕ್ಕೆ ಈ ವ್ಯಾಪ್ತೌ ಎಂಬ ಧಾತ್ವನುಸಾರವಾಗಿ ವ್ಯಾಪ್ತಿಯೆಂದು ಅರ್ಥ. ಲಹರೀ ಎಂದರೆ ಆಧಿಕ್ಯವು. ಮಾಜ್‌ಮಾನೇ ಎಂಬ ಧಾತುವಿನ ಮುಂದೆ ಕ್ವಿಪ್ ಪ್ರತ್ಯಯವು ಬಂದು ಅದು ಲುಪ್ತವಾಗಲು "ಪ್ರಾತಿಪಾದಿಕಾದ್ಧಾತ್ವರ್ಥೇ ಬಹುಲಮಿಷ್ಠವಚ್ಚ (ಗ ೨೦೩)" ಎಂಬ ಸೂತ್ರಾನುಸಾರ ಣಿಚ್‌ಪ್ರತ್ಯಯವನ್ನೂ "ಣೇರನಿಟ (೬–೪–೫೧)" ಎಂಬ ಸೂತ್ರಾನುಸಾರವಾಗಿ ಟಲೋಪವನ್ನೂ ಮಾಡಿದರೆ ಮ್ ಎಂಬ ರೂಪವು ಸಿದ್ಧಿಸುವುದು. ಆ ಪದಕ್ಕೆ ನಿರ್ಮಾಣವೆಂದು ಅರ್ಥ. ಇಷ್ಟನ್ನೂ ಒಟ್ಟಾಗಿ ಸೇರಿಸಿದರೆ ಪ್ರಕಾಶಕ ಬುದ್ಧಿಯ ವ್ಯಾಪ್ತ್ಯಾಧಿಕ್ಯದ ನಿರ್ಮಾಣವು ಎಂಬ ಅರ್ಥವು ಪ್ರಥಮ ಕೂಟದಿಂದ ಲಭಿಸುವುದು ‖ ೧೨೧–೧೨೨ ‖

೧೨೩-೧೨೬

ಹನಹಿಂಸಾಯಾಮಿತಿಹಂ ಶೌರ್ಯಂ ಪ್ರತ್ಯರ್ಥಿಹನನಕರಣತ್ವಾತ್ ॥ ೧೨೩ ॥
ಸಂಭೋಗಸಾಧನಂ ಧನಮುಪಭೋಗಾರ್ಥಾತ್ಸ್ಯತೇಃ ಸುನೋತೇರ್ವಾ ।
ಕಮುಕಾಂತಾವಿತಿಧಾತೋರಿಚ್ಛಾವಿಷಯೋಂಗನಾದಿಃ ಕಮ್ ॥ ೧೨೪ ॥
ಏಷಾಂ ಗಮನಂ ಪ್ರಾಪಣಮೋಹಾಙ್ಗತ್ಯರ್ಥಧಾತುಜನ್ಯಂ ಹಮ್ ।
ತಸ್ಯಾತಿಶಯೋ ಲಹರೀ ತತ್ರ ಶ್ಲಿಷ್ಟಃ ಸವರ್ಣದೀರ್ಘೇಣ ॥ ೧೨೫ ॥
ಈಕಾರಸ್ತಸ್ಯಾರ್ಥಃ ಕೀರ್ತಿಃ ಸರ್ವಾಸು ದಿಕ್ಷು ದೀಪ್ತತ್ವಾತ್ ।
ಈದೀಪ್ತೌ ಇತಿ ಧಾತೋರ್ನಿರ್ಮಿತಿರನಯೋರ್ನಕಾರಾರ್ಥಃ ॥ ೧೨೬ ॥

ಹನ್ಯತೇಽನೇನೇತಿ ಹಂ ಶೌರ್ಯಂ- "ಅನುದಾತ್ತೋಪದೇಶವನತಿತನೋತ್ಯಾದೀನಾಮನುನಾಸಿಕಲೋಪೋ ಝಲಿ ಕ್ಙಿತಿ" (೬-೪-೩೭) ಇತಿ ನಲೋಪಃ. 'ಷೋ ಅಂತಕರ್ಮಣಿ' ಇತಿ 'ಷುಞ್ ಅಭಿಷವೇ' ಇತಿ ವಾ ಧಾತೋಃ ಕರಣಾರ್ಥೇ ಡಪ್ರತ್ಯಯೇ ಸಮ್ ಇತಿ ರೂಪಂ. ಸೀಯತ ಇತಿ ಸೂಯತ ಇತಿ ವಾ ಸಂ ದ್ರವ್ಯಂ. ಕಾಮ್ಯತ ಇತಿ ಕಂ

ಹನ-ಹಿಂಸಾಯಾಂ ಎಂಬ ಧಾತುವಿನಂದ "ಹನ್ಯತೇ ಅನೇನ" ಎಂಬ ಕರಣವ್ಯುತ್ಪತ್ತಿಯಿಂದ ಸಿದ್ಧವಾಗಿರುವ "ಹಂ" ಎಂಬುದಕ್ಕೆ ಶತ್ರುಗಳ ಹನನ ಸಾಧನವಾದ ಶೌರ್ಯವೆಂದು ಅರ್ಥ. ಹನ್ ಎಂಬಲ್ಲಿರುವ ನಕಾರಕ್ಕೆ "ಅನುದಾತ್ತೋಪದೇಶವನತಿತನೋತ್ಯಾದೀನಾಮನುನಾಸಿಕಲೋಪೋ ಝಲಿ ಕ್ಙಿತಿ (೬-೪-೩೭)" ಎಂಬ ಸೂತ್ರದಿಂದ ಲೋಪವು ಬಂದಿದೆ. "ಷೋಂತಕರ್ಮಣಿ" ಅಥವಾ "ಷುಞ್ ಅಭಿಷವೇ" ಎಂಬ ಧಾತುವಿನಿಂದ "ಡ" ಪ್ರತ್ಯಯವು ಸೇರಿ ಆಗುವ "ಸ" ಎಂಬುದಕ್ಕೆ "ಸೀಯತೇ" ಅಥವಾ "ಸೂಯತೇ" ಎಂಬ ವ್ಯುತ್ಪತ್ತಿಗೆ ಅನುಸಾರವಾಗಿ ಉಪಭೋಗಸಾಧನವಾದ ದ್ರವ್ಯವೆಂದು ಅರ್ಥ. "ಕಮುಕಾಂತೌ" ಎಂಬ ಧಾತು ನಿಷ್ಪನ್ನವಾದ "ಕಂ" ಎಂಬುದು "ಕಾಮ್ಯತೇ" ಎಂಬವ್ಯುತ್ಪತ್ತಿ ಗನುಸಾರವಾಗಿ ಸುಖಾನುಭವಕ್ಕಾಗಿ ಅಪೇಕ್ಷಿಸಲ್ಪಡುವ ಸ್ರಕ್ ಚಂದನಾದಿ ವಿಷಯಗಳನ್ನು ಬೋಧಿಸುವುದು. ಈ ಅರ್ಥಗಳನ್ನು ಬೋಧಿಸುವ ಹ+ಸ+ಕ ಎಂಬ ವರ್ಣಗಳಿಗೆ ದ್ವಂದ್ವ ಸಮಾಸವನ್ನು ಮಾಡಿ ಮುಂದಿನ ಹಕಾರದೊಡನೆ ಷಷ್ಠೀ ತತ್ಪುರುಷ ಸಮಾಸವನ್ನು ಮಾಡಬೇಕು. ಎಆಡನೆಯ

ಸ್ರಕ್ಚಂದನವನಿತಾऽऽದಿಕಂ. ಹಸಕಾನಾಂ ದ್ವಂದ್ವಃ. ತತೋ ಹಕಾರೇಣ ಪ್ರಾಪ್ತ್ಯರ್ಥಕೇನ ಷಷ್ಠೀತತ್ಪುರುಷಃ. ತತೋ ಲಹರೀಪದೇನ ತತ್ಪುರುಷಃ. ತತ ಈಕಾರೇಣ ಕೀರ್ತ್ಯರ್ಥಕೇನ ದ್ವಂದ್ವಃ. ತತೋ ಮಕಾರೇಣ ತತ್ಪುರುಷಃ. ತಥಾ ಚ ಶೌರ್ಯಧನಸ್ತ್ರೀಪ್ರಾಪ್ತ್ಯತಿಶಯಸ್ಯ ಕೀರ್ತೇಶ್ಚ ನಿರ್ಮಾಣಂ ದ್ವಿತೀಯಕೂಟಾರ್ಥಃ ॥ ೧೨೩.೧೨೪-೧೨೫-೧೨೬ ॥

ಹಕಾರವು "ಓಹಾಙ್ಗತೌ" ಎಂಬ ಧಾತುವಿನಿಂದ ರೂಪನಿಷ್ಪತ್ತಿಯಾಗಿರುವುದರಿಂದ ಪ್ರಾಪ್ತಿಯೆಂಬ ಅರ್ಥವನ್ನು ಬೋಧಿಸುತ್ತದೆ. ಮುಂದಿನ ಲಹರೀ ಪದದ ಜೊತೆಗೆ ಪುನಃ ಷಷ್ಠೀ ತತ್ಪುರುಷವನ್ನು ಮಾಡಬೇಕು. ಲಹರೀ ಎಂಬ ಶಬ್ದಕ್ಕೆ ಅತಿಶಯವೆಂದು ಅರ್ಥ. "ಲಹರೀ' ಎಂಬ ಶಬ್ದದ ಮುಂದೆ ಸವರ್ಣ ದೀರ್ಘ ಸಂಧಿಯಿಂದ ಈಕಾರವು ಸೇರಿಕೊಂಡಿದೆ. ಆ ಈಕಾರದ ಜೊತೆಗೆ ಲಹರೀ ಶಬ್ದಕ್ಕೆ ದ್ವಂದ್ವಸಮಾಸವನ್ನು ಮಾಡಬೇಕು. ಈಕಾರಕ್ಕೆ "ಈ ದೀಪ್ತೌ" ಎಂಬ ಧಾತುವನ್ನನುಸರಿಸಿ ಸರ್ವದಿಕ್ಕುಗಳಲ್ಲಿಯೂ ಬೆಳಗುತ್ತಿರುವ ಕೀರ್ತಿಯೆಂದು ಅರ್ಥ. ಮುಂದೆ ನಿರ್ಮಾಣವೆಂಬ ಅರ್ಥವನ್ನು ಬೋಧಿಸುವ ಮಕಾರದ ಜೊತೆಗೆ ಷಷ್ಠೀ ತತ್ಪುರುಷ ಸಮಾಸವನ್ನು ಮಾಡಿದರೆ ಒಟ್ಟಾಗಿ ದ್ವಿತೀಯ ಕೂಟದ ವರ್ಣ ಸಮುದಾಯಕ್ಕೆ ಶೌರ್ಯ, ಧನ, ಸ್ರಕ್ಚಂದನ ವನಿತಾದಿಗಳ ಅತಿಶಯ ಮತ್ತು ಕೀರ್ತಿಗಳ ನಿರ್ಮಾಣವೆಂದು ಅರ್ಥವು ॥ ೧೨೩-೧೨೪-೧೨೫-೧೨೬ ॥

೧೨೭

ವಾಗ್ಭವಕೂಟಸ್ಯಾರ್ಥಃ ಸೂಕ್ಷ್ಮಮತಿವ್ಯಾಪನಾಧಿಕ್ಯಮ್ ।
ಶೌರ್ಯಧನಸ್ತ್ರೀಯಶಸಾಮಾಧಿಕ್ಯಂ ಕಾಮರಾಜಾರ್ಥಃ ॥ ೧೨೭ ॥

ತದೇವ ತಾವದ್ವದತಿ—ಸ್ಪಷ್ಟಂ ॥ ೧೨೭ ॥

ಹಿಂದೆ ಪ್ರತಿಪಾದಿಸಿರುವಂತೆ ಪ್ರಥಮ (ವಾಗ್ಭವ) ಕೂಟವು ಸೂಕ್ಷ್ಮವಾದ ಬುದ್ಧಿ ವ್ಯಾಪ್ತಿಯ ಆಧಿಕ್ಯ ನಿರ್ಮಾಣವೆಂಬ ಅರ್ಥವನ್ನೂ ದ್ವಿತೀಯ (ಕಾಮರಾಜ) ಕೂಟವು ಶೌರ್ಯ, ಧನ, ಸ್ತ್ರೀ ಕೀರ್ತಿಗಳ ಆಧಿಕ್ಯ ನಿರ್ಮಾಣವೆಂಬ ಅರ್ಥವನ್ನೂ ಬೋಧಿಸುತ್ತವೆ ॥ ೧೨೭ ॥

೧೨೮-೧೩೦

ಏತೇ ಸಮ್ಯಕ್ಕಲಯತಿ ಸಕಲಾ ಹರತೇ ಹೃಕಾರಃ ಸ್ಯಾತ್ ॥
ನಿಖಿಲಜಗತ್ಸಂಹರ್ತ್ರೀತ್ಯರ್ಥಸ್ತಸ್ಯಾಪಿ ವರ್ಣಸ್ಯ ॥ ೧೨೮ ॥
ಈಕಾರಃ ಪ್ರಶ್ಲಿಷ್ಟಃ ಸೃಷ್ಟಿಸ್ಥಿತಿರೂಪದೀಪ್ತಿಕರ್ತ್ರರ್ಥಃ ।
ಯದ್ವಾ ಹೃದಿ ಖೇದಹರೇ ಪ್ರಕಾಶತೇ ತೇನ ಮಾತಾ ಹ್ರೀಃ ॥ ೧೨೯ ॥
ಸಕಲಾಂತೇನ ಪದೇನ ಹ್ರೀಕಾರೇ ಕರ್ಮಧಾರಯಃ ಕಾರ್ಯಃ ।
ತಸ್ಯ ವಿಶೇಷ್ಯೋ ಮಃ ಸ್ಯಾನ್ಮಾದಾರ್ಥಃ ಸಂವಿದರ್ಥೋ ವಾ ॥ ೧೩೦ ॥

ಕೂಟದ್ವಯಸ್ಯ ದ್ವಂದ್ವಃ. ಏತೇ ನಿರ್ವಾಣೇ ಸಮ್ಯಕ್ಕಲಯತೀತಿ ಸಕಲಾ. ಮಕಾರಲೋಪಃ. ಹರತೀತಿ ಹೃ. 'ಈದೀಪ್ತೌ' ಇತಿ ಧಾತೋಃ ಈದೀಪ್ತಿಃ. ದೀಪ್ತಿರ್ನಾಮ ಸೃಷ್ಟಿಃ ಸ್ಥಿತಿಶ್ಚ. ಹೃಕಾರೇಕಾರಯೋಃ ಕರ್ಮಧಾರಯೇ ಯಣಿ ಕೃತೇ ಹ್ರೀಃ ಸೃಷ್ಟ್ಯಾದಿಪಂಚಕೃತ್ಯಕರ್ತ್ರೀತ್ಯುಪಲಕ್ಷಣವಿಧಯಾಽರ್ಥಃ. ಯದ್ವಾ, ಹರತಿ ಸರ್ವಂ ವಿಷಯೀಕರೋತೀತಿ ಹೃ. ಕ್ವಿಪ್. ಆಗಮಶಾಸ್ತ್ರಸ್ಯಾನಿತ್ಯತ್ವಾತ್ಪ್ರಕೃತೇ ನ ತುಕ್. ತಚ್ಚ ದಹರಾಕಾಶಂ. ತತ್ರ ಪ್ರಕಾಶತ ಇತಿ ಹ್ರೀಃ. ಹ್ರೀಕಾರಾಂತಪದಸ್ಯ ಮಕಾರೇಣ ಕರ್ಮಧಾರಯಃ. ಯದ್ಯಪಿ ಕೂಟತ್ರಯೇಽಪಿ ಮ

ತೃತೀಯಕೂಟದ ಅರ್ಥವು ಇಲ್ಲಿ ವಿವರಿಸಲ್ಪಟ್ಟಿದೆ. ಹಿಂದಿನ ಕೂಟಗಳನ್ನು ಸೇರಿಸಿ ದ್ವಂದ್ವಸಮಾಸವನ್ನು ಮಾಡಿ "ತೇ ಸಮ್ಯಕ್‌ಕಲಯತೀತಿ" ಎಂದು ಸಮಾಸಮಾಡಿದರೆ "ಸಕಲಾ" ಎಂದು ರೂಪವಾಗುವುದು. ಮುಂದೆ "ಹರತಿ" ಧಾತುವಿನಿಂದ ಬಂದ ಹೃ ಎಂಬುದು ಹರಣವೆಂಬ ಅರ್ಥವನ್ನು ಬೋಧಿಸುತ್ತದೆ. "ಈ" ಎಂಬುದು ದೀಪ್ತಿ ಎಂಬ ಅರ್ಥವನ್ನು ಬೋಧಿಸುವುದರ ಮೂಲಕ ಸೃಷ್ಟಿ, ಸ್ಥಿತಿಗಳನ್ನು ಸೂಚಿಸುತ್ತದೆ. "ಹೃ + ಈ" ಇವೆರಡನ್ನು ಸೇರಿಸಿದರೆ ಯಣ್ ಸಂಧಿಯಿಂದ ಹ್ರೀಃ ಎಂದು ಸೇರಿ ಸೃಷ್ಟಿ ಮೊದಲಾದ ಪಂಚಕೃತ್ಯಗಳನ್ನು ನೆರವೇರಿಸುವವಳೆಂದು ಅರ್ಥವಾಗುವುದು. ಸೃಷ್ಟಿಸ್ಥಿತಿ ಸಂಹಾರಗಳು ಮಾತ್ರ ಪಠಿತಗಳಾಗಿದ್ದರೂ ಮಿಕ್ಕ ಕೃತ್ಯಗಳನ್ನೂ ಜೊತೆಗೆ ತಾತ್ಪರ್ಯಾನುಸಾರವಾಗಿ ಸೇರಿಸಿಕೊಂಡಿದೆ. ಅಥವಾ ಹೃ ಎಂಬುದು ಸರ್ವವನ್ನೂ ವಿಷಯೀಕರಿಸುವ ದಹರಾಕಾಶವೆಂಬ ಅರ್ಥವನ್ನು ಬೋಧಿಸುತ್ತದೆ. ಹರತೀತಿ ಹೃ ಎಂಬಲ್ಲಿ ಕ್ವಿಪ್ ಪ್ರತ್ಯಯಾಂತರೂಪಕ್ಕೆ ತುಕ್ ಆಗಮವು ಸೇರಿ ಹೃತ್ ಆಗಬೇಕಾದುದು ಆವಶ್ಯಕವು. ಆದರೆ ಆಗಮ ಶಾಸ್ತ್ರವು ಅನಿತ್ಯವೆಂಬ ಪರಿಭಾಷೆಯಿಂದ ತುಕ್ ಆಗಮವು ಪ್ರಕೃತದಲ್ಲಿ ಬಂದಿಲ್ಲವೆಂದು ಅರಿಯಬೇಕು. ಹೃ ಎಂದರೆ ದಹರಾಕಾಶದಲ್ಲಿ "ಈ" = ಪ್ರಕಾಶಿಸುವುದು ಎಂದು ಅರ್ಥ. ಹ್ರೀಕಾರಾಂತಪದಕ್ಕೂ ಮಕಾರಕ್ಕೂ ಕರ್ಮಧಾರಯ

ಕಾರೋ ನಾಸ್ತ್ಯೇವ. ಅನುಸ್ವಾರಸ್ಯೈವ ತಂತ್ರೇಷೂದ್ಧೃತತ್ವಾತ್; ತಥಾಽಪಿ ಮಕಾರಸ್ಯೈವ ಲಕ್ಷಣವಶಾದನುಸ್ವಾರ ಇತಿ ಕೂಟದ್ವಯೇ ಸುವಚಂ. ಚರಮಕೂಟೇಽತ್ರಾನುಸ್ವಾರ ಏವ ವಿಶೇಷ್ಯೋಽಸ್ತು. ತತಶ್ಚ, ಬುದ್ಧಿಶೌರ್ಯಧನಸ್ತ್ರೀಯಶಸಾಮಾಧಿಕ್ಯಕರ್ತೃ ನಿಖಿಲಜಗತ್ಸೃಷ್ಟ್ಯಾದಿಕರ್ತೃ ದಹರಾಕಾಶವರ್ತಿ ನಾದರೂಪಂ ಚಿದ್ರೂಪಂ ಬ್ರಹ್ಮೇತಿ ಮಂತ್ರಾರ್ಥಃ ಸಿದ್ಧಃ. ಅಯಂ ಚಾರ್ಥೋ ಬ್ರಹ್ಮಸೂತ್ರಾಣಾಂ ಶಕ್ತಿಪರತ್ವೇನ ಯೋಜನಾಂ ಪ್ರದರ್ಶಯದ್ಭಿಸ್ತತ್ರಭವದ್ಭಿರ್ಭಾಷ್ಯಕಾರೈರ್ವಿಸ್ತರೇಣ ನಿರೂಪಿತ ಇಹ ಸಂಕ್ಷಿಪ್ಯೋಕ್ತಃ. ತತ್ರ ಕ್ವಚಿತ್ಕ್ವಚಿದ್ವ್ಯಾಕರಣವಿರೋಧಃ ಪ್ರತೀಯತೇ. ಸ ಚ ಮಂತ್ರಸ್ಯ ಮಂತ್ರಾರ್ಥಸ್ಯ ಚರ್ಷಿಪ್ರೋಕ್ತತ್ವೇನ ಪ್ರಾಮಾಣಿಕತ್ವೇ ಸಿದ್ಧೇ "ಪ್ರಯೋಗಶರಣಾ ವೈಯಾಕರಣಾ." ಇತ್ಯುಕ್ತೇರೇತದನುಸಾರೇಣೈವ ವ್ಯಾಕರಣಲಕ್ಷಣಾನಾಂ ಕಲ್ಪ್ಯತ್ವಾತ್ಪರಿಹಾರ್ಯಃ ॥ ೧೨೮-೧೨೯-೧೩೦ ॥

ಸಮಾಸವನ್ನು ಮಾಡಬೇಕು. ಇಲ್ಲಿ ಮೂರು ಕೂಟಗಳಲ್ಲಿಯೂ ಅನುಸ್ವಾರವೇ ತಂತ್ರಶಾಸ್ತ್ರಗಳಲ್ಲಿ ಉದ್ಧರಿಸಲ್ಪಟ್ಟಿರುವುದರಿಂದ ಮಕಾರವು ಇಲ್ಲವೆಂದು ಶಂಕಿಸಬಹುದು. ಆದರೆ ಸ್ವಾಭಾವಿಕವಾಗಿ ಅಲ್ಲಿ ಇದ್ದ ಮಕಾರಕ್ಕೆ ಶಾಸ್ತ್ರೀಯವಾಗಿ ಅನುಸ್ವಾರ ಬಂದಿದೆಯೆಂಬ ಭಾವದಿಂದ ಮೊದಲಿನ ಎರಡು ಕೂಟಗಳಲ್ಲಿ ಮಕಾರದ ಅರ್ಥವನ್ನು ಹೇಳಬಹುದು. ಮೂರನೆಯ ಕೂಟದಲ್ಲಿ ಅನುಸ್ವಾರವೇ ವಿಶೇಷ್ಯವಾಗಿದೆಯೆನ್ನಬಹುದು. ಮೂರು ಕೂಟಗಳಿಂದಲೂ ಸೇರಿ ಮಂತ್ರಕ್ಕೆ ಬುದ್ಧಿ, ಶೌರ್ಯ, ಧನ, ಸ್ತ್ರೀ, ಕೀರ್ತಿಗಳ ಆಧಿಕ್ಯವನ್ನುಂಟುಮಾಡುವುದೂ, ನಿಖಿಲ ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡುವುದೂ ಆದ ದಹರಾಕಾಶದಲ್ಲಿರುವನಾದರೂಪಚಿನ್ಮಯವಾದ ಬ್ರಹ್ಮವು. ಎಂಬ ಅರ್ಥವು ಪರ್ಯವಸಾನ ಹೊಂದುವುದು. ಬ್ರಹ್ಮಸೂತ್ರಗಳಿಗೆ ಶಕ್ತಿಪರವಾಗಿ ವ್ಯಾಖ್ಯಾನವನ್ನು ಮಾಡಿರುವ ಭಾಷ್ಯಕಾರರು ವಿಸ್ತಾರವಾಗಿ ತೋರಿಸಿರುವ ಅರ್ಥವನ್ನು ಇಲ್ಲಿ ಸಂಕ್ಷೇಪವಾಗಿ ತೋರಿಸಿದೆ. ಈ ವ್ಯಾಖ್ಯಾನದಲ್ಲಿ ಕೆಲವು ಸ್ಥಳಗಳಲ್ಲಿ ವ್ಯಾಕರಣ ವಿರೋಧವು ಬಂದಂತೆ ಕಾಣುವುದು. ಆದರೆ ಈ ಮಂತ್ರವೂ ಅದರ ಅರ್ಥವೂ ಋಷಿಪ್ರೋಕ್ತವಾಗಿರುವುದರಿಂದ ಪ್ರಾಮಾಣಿಕವಾದ ಈ ವಚನಕ್ಕೆ ಅನುಸಾರವಾಗಿಯೇ ವ್ಯಾಕರಣ ಪ್ರಕ್ರಿಯೆಗಳನ್ನು ಕಲ್ಪಿಸಬೇಕಾದುದು ಆವಶ್ಯಕವು. ವ್ಯಾಕರಣ ಶಾಸ್ತ್ರವು ಲೋಕದಲ್ಲಿ ಸಿದ್ಧವಾದ ಪ್ರಾಮಾಣಿಕ ಪ್ರಯೋಗವನ್ನು ಅವಲಂಬಿಸಿಯೇ ಹೊರಟಿರುವುದೆಂಬುದಕ್ಕೆ "ಪ್ರಯೋಗ ಶರಣಾವೈಯಾಕರಣಾಃ" ಎಂಬ ಉಕ್ತಿಯು ಆಧಾರವಾಗಿದೆ ॥ ೧೨೮-೧೨೯-೧೩೦ ॥

೧೩೧-೧೩೨

ಧಾತೋರ್ಬಹ್ವರ್ಥತ್ವಾದ್ಬಹುಲಗ್ರಹಣಾತ್ಪೃಷೋದರಾದಿತ್ವಾತ್ ।
ಆಕೃತಿಗಣಪಾಠೇನ ಸ್ವೇಚ್ಛಾಽನುಗುಣಾದುಣಾದಿಕಲ್ಪನತಃ ॥ ೧೩೧ ॥
ಛಂದಸಿ ಸರ್ವವಿಧೀನಾಂ ವೈಕಲ್ಪಿಕತಾವಶಾದಮುಷ್ಯ ಮನೋಃ ।
ಸಿದ್ಧ್ಯೈಃ ಕಥಿತೇಽರ್ಥೇಽಸ್ಮಿನ್ ವೈಯಾಕರಣಶಾಸನಾನುಮತಿಃ ॥ ೧೩೨ ॥

ತತ್ಪ್ರಕಾರಮೇವ ಪ್ರದರ್ಶಯತಿ—‘ ಕುರ್ದಖುರ್ದಗುರ್ದಗುದ ಕ್ರೀಡಾಯಾಮೇವ’ ಇತ್ಯೇವಕಾರೇಣ ‘ ತನೂಕರಣೇ ತಕ್ಷಃ ’ ಇತರ್ಥನಿರ್ದೇಶಬಲಾಚ್ಚ ಸತ್ತಾದ್ಯರ್ಥನಿರ್ದೇಶಸ್ಯೋಪಲಕ್ಷಣಮಾತ್ರತ್ವೇನ ಧಾತವೋಽನೇಕಾರ್ಥಾಃ. ತೇನ ಸ್ಯತೇರಂತಕರ್ಮವಾಚಕತ್ವೇಽಪ್ಯುಪಭೋಗಾರ್ಥಕತ್ವಮವಿರುದ್ಧಂ. ಅತ ಏವ ಚೇಜಿತೋಽಧಿಪೂರ್ವತ್ವಾತ್ಕೇವಲಪ್ರಯೋಗಾಸಂಭವೇಽಪಿ ‘ ಇಟಕಿಟಕಟೀ ಗತೌ ’ ಇತ್ಯತ್ರ ಪ್ರಶ್ಲಿಷ್ಟ ಈಕಾರ ಏವೈತದರ್ಥಕೋ ಭವಿಷ್ಯತಿ. ಗತ್ಯರ್ಥಾನಾಂ ಸರ್ವೇಷಾಮಪಿ ಜ್ಞಾನಾರ್ಥಕತ್ವಾತ್. ಬಹುಲೇತಿ. ಕ್ವಚಿತ್ಪ್ರವೃತ್ತಿಃ ಕ್ವಚಿದ

ವ್ಯಾಕರಣವಿರೋಧವನ್ನು ಪರಿಹರಿಸುವ ಬಗೆಯನ್ನು ಈ ರೀತಿಯಾಗಿ ತಿಳಿಯಬೇಕು. ಧಾತುಪಾಠದಲ್ಲಿರುವ ಧಾತುಗಳು ಸಂದರ್ಭೋಚಿತವಾಗಿ ಅನೇಕಾರ್ಥಗಳನ್ನು ಹೊಂದಿವೆ. “ ಕುರ್ದ ಖುರ್ದ ಗುರ್ದ ಗುದ ಕ್ರೀಡಾಯಾಮೇವ ” ಎಂಬಲ್ಲಿ ಏವಕಾರವು ಕುರ್ದ ಮುಂತಾದ ಧಾತುಗಳು “ ಕ್ರೀಡಾ ” ಎಂಬ ಒಂದೇ ಅರ್ಥದಲ್ಲಿರುತ್ತವೆಯೆಂದು ಬೋಧಿಸುವುದರಿಂದ ಏವಕಾರವಿಲ್ಲದ ಕಡೆಯಲ್ಲಿ ಹೇಳಿರುವ ಅರ್ಥದ ಜೊತೆಗೆ ಇತರಾರ್ಥಗಳೂ ಇರಬಹುದೆಂದು ತೋರುತ್ತದೆ. “ ತನೂಕರಣೇತಕ್ಷಃ ”-ಮುಂತಾದ ಸೂತ್ರಗಳಲ್ಲಿ ಕಾರ್ಯ ವಿಶೇಷವನ್ನು ವಿಧಿಸಲು ಧಾತುಗಳನ್ನು ಅನುವಾದ ಮಾಡುವಾಗ ತನೂಕರಣವೆಂಬ ಅರ್ಥವುಳ್ಳ ತಕ್ಷಧಾತುವೆಂದು ವಿಶೇಷವಾಗಿ ಅನುವಾದ ಮಾಡಿರುವುದು ಇತರಾರ್ಥಗಳೂ ಆ ಧಾತುವಿಗೆ ಇವೆಯೆಂಬುದನ್ನು ಸೂಚಿಸುತ್ತದೆ ಆದ್ದರಿಂದ “ ಭೂಸತ್ತಾಯಾಂ” ಮುಂತಾದ ಕಡೆ “ ಸತ್ತಾಯಾಂ ” ಎಂದು ಅರ್ಥವನ್ನು ತೋರಿಸಿರುವುದು ಇತರಾರ್ಥಗಳನ್ನೂ ಸೇರಿಸಿಕೊಳ್ಳಬೇಕೆಂಬ ಭಾವದಿಂದಲೇ ಆಗಿದೆ. ಆದ್ದರಿಂದ ಷೋಂತಕರ್ಮಣಿ ಎಂದು ಪಠಿತವಾದ ಧಾತುವಿಗೆ ಉಪಭೋಗವೆಂಬ ಅರ್ಥವನ್ನು ಹೇಳು

ಪ್ರವೃತ್ತಿಃ ಕ್ವಚಿದ್ವಿಭಾಷಾ ಕ್ವಚಿದನ್ಯ ಏವ. ವಿಧೇರ್ವಿಧಾನಂ ಬಹುಧಾಸ ಮೀಕ್ಷ್ಯ ಚತುರ್ವಿಧಂ ಬಾಹುಲಕಂ ವದಂತಿ.' ಇತಿ ಬಹುಲಪದಾರ್ಥಃ. ತೇನ ಲಹ್ರೀತ್ಯತ್ರಾಕಾರಲೋಪಃ ಸಿದ್ಧಃ. 'ರಣ್ಡಃ' ಇತ್ಯಾದಿಸಿದ್ಧ್ಯ ರ್ಥಮಡಿತೋಽಪಿ ಞಮಂತಾಡ್ಡಸ್ಯ ಡಿತ್ತ್ವಮಪಿ ಸಿದ್ಧಂ. ಗತ್ಯಂತರಮ ಪ್ಯಾಹ—ಪೃಷೋದರಾದಿತ್ವಾದಿತಿ. "ಪೃಷೋದರಾದೀನಿಯಥೋಪದಿ ಷ್ಟಂ" (೬-೩-೧೦೯) ಪೃಷೋದರಾದಯಃ ಶಬ್ದಾಃ ಯಥೈವ ಶಿಷ್ಟೈಃ ಪ್ರಯುಜ್ಯಂತೇ ತಥೈವ ಸಾಧವಃ. ನ ತತ್ರ ಲಕ್ಷಣಾಂತರಂ ಮೃಗ್ಯಮಿ ತ್ಯರ್ಥಃ. ನ ಚೈವಂ ಸತಿ ಸ್ಥಲಾಂತರೇಽಪಿ ಲಹ್ರೀತಿ ಪ್ರಯೋಗಾಪತ್ತಿಃ ಪೃಷೋದರಶಬ್ದವದಿತಿ ವಾಚ್ಯಂ. ಅತ್ರೈವ ಸಾಧುರಿತಿ ನಿಯಮಸ್ವೀಕಾ ರಾತ್. ಅತ ಏವ 'ಗೂಢೋಽತ್ಮಾ' ಇತಿ ನ ಸ್ಥಲಾಂತರೇ ಪ್ರಯು ಜ್ಯತೇ. ಅತ ಏವ ಚ ವಿಷ್ಣುಸಹಸ್ರನಾಮಭಾಷ್ಯೇ "ನ್ಯಗ್ರೋಧೋದುಂ ಬರೋಽಶ್ವತ್ಥಃ" ಇತ್ಯತ್ರ ಪೃಷೋದರಾದಿತ್ವಾತ್ಸಂಧಿರಿತ್ಯುಕ್ತಂ ಶಂಕರ

ವುದು ವಿರುದ್ಧವಲ್ಲ. ಇಜ್ ಧಾತುವನ್ನು ಅಧಿ ಉಪಸರ್ಗ ರಹಿತವಾಗಿ ಪ್ರಯೋಗ ಮಾಡುವ ವಾಡಿಕೆಯಿಲ್ಲವಾದರೂ "ಇಟಕಿಟಕಟೀ ಗತೌ" ಎಂಬಲ್ಲಿ ಕಡೆಯಲ್ಲಿ ಸವರ್ಣದೀರ್ಘ ಸಂಧಿಯಿಂದ ಸೇರಿಕೊಂಡಿರುವ ಗತಿ ಎಂಬ ಅರ್ಥವುಳ್ಳ ಈಕಾ ರವು ಗತ್ಯರ್ಥ ಧಾತುಗಳಿಗೆ ಜ್ಞಾನವೆಂಬ ಅರ್ಥವೂ ಇರುವುದರಿಂದ ಜ್ಞಾನ ವೆಂಬ ಅರ್ಥವನ್ನು ಬೋಧಿಸುತ್ತದೆ. ಸೂತ್ರಗಳಲ್ಲಿ "ಬಹುಲಂ" ಎಂಬ ಅಧಿ ಕಾರ ಪದವಿದ್ದು ಮುಂದಿನ ಸೂತ್ರಗಳಲ್ಲಿ ಅದು ಅನ್ವಯಿಸುತ್ತದೆ. ಅದಕ್ಕೆ "ಕ್ವಚಿತ್ಪ್ರವೃತ್ತಿಃಕ್ವಚಿದಪ್ರವೃತ್ತಿಃ ಕ್ವಚಿದ್ವಿಭಾಷಾ ಕ್ವಚಿದನ್ಯಏವ। ವಿಧೇ ರ್ವಿಧಾನಂ ಬಹುಧಾಸಮೀಕ್ಷ್ಯ ಚತುರ್ವಿಧಂ ಬಾಹುಲಕಂ ವದಂತಿ ॥" ಎಂಬ ವಚನದಿಂದ ಕೆಲವು ಉದಾಹರಣೆಗಳಲ್ಲಿ ವಿಧಿಸುವ ಕಾರ್ಯವು ನಿತ್ಯವಾಗಿ ಪ್ರವರ್ತಿ ಸುವುದು, ಕೆಲವು ಕಡೆ ನಿತ್ಯವಾಗಿ ಪ್ರವರ್ತಿಸುವುದಿಲ್ಲ, ಕೆಲವು ಕಡೆ ವಿಕಲ್ಪವಾಗಿ ಪ್ರವರ್ತಿಸುವುದು ಎಂದು ನಾನಾರ್ಥಗಳುಂಟು. ಅದರಿಂದ ಲಹರೀ ಶಬ್ದದಲ್ಲಿ ಹಕಾರದ ಮೇಲಿನ ಅಕಾರವು ಲೋಪಹೊಂದಿದೆಯೆನ್ನಬಹುದು. ಹೀಗೆಯೇ "ರಣ್ಡಃ" ಮುಂತಾದ ರೂಪಸಿದ್ಧಿಗೋಸ್ಕರ "ಞಮಂತಾಡ್ಡಃ" ಎಂಬಲ್ಲಿ ವಿಧಿಸಲ್ಪಡುವ ಡ ಪ್ರತ್ಯಯದಲ್ಲಿ ಡಕಾರಕ್ಕೆ ಇತ್ ಸಂಜ್ಞೆಯಿಲ್ಲವಾದರೂ ಕನ್ ಧಾತುವಿಗೆ ಡ ಪ್ರತ್ಯಯವು ಸೇರಿ "ಕ" ಎಂದಾಗುವಾಗ ಆ ಪ್ರತ್ಯಯದ ಡಕಾ ರಕ್ಕೆ ಇತ್ ಸಂಜ್ಞೆಯನ್ನು ಅಂಗೀಕರಿಸಬಹುದು. ಮತ್ತು ವ್ಯಾಕರಣದ ಗಣ ಪಾಠದಲ್ಲಿ ಪ್ರತಿಯೊಂದು ಗಣದಲ್ಲಿಯೂ ಕೆಲಕೆಲವು ಶಬ್ದಗಳು ಪಠಿಸಲ್ಪಟ್ಟಿವೆ. ಅವುಗಳಲ್ಲಿ ಪೃಷೋದರಾದಿ ಗಣವೂ ಒಂದು. ಆ ಗಣದಲ್ಲಿ ಶಬ್ದಗಳು ಯಾವ

ಭಗವತ್ಪಾದೈಃ. ಗಣಪಾಠಾಭಾವೇಽಪ್ಯಾಹ—ಆಕೃತೀತಿ. ಷುಙ್ಧಾತೋರ್ದಪ್ರತ್ಯಯಾದರ್ಶನಾದಾಹ—ಸ್ವೇಚ್ಛೇತಿ. ಸಂಜ್ಞಾಸು ಧಾತುರೂಪಾಣಿ ಪ್ರತ್ಯಯಾಶ್ಚ ತತಃ ಪರೇ. ಕಾರ್ಯಾದ್ವಿದ್ಯಾದನೂಬಂಧಮೇತಚ್ಛಾಸ್ತ್ರಮುಣಾದಿಷು. ಇತಿ ವಚನಾಟ್ಟಿಲೋಪಾರ್ಥಂ ಡಿತ್ತ್ವಕಲ್ಪನೇತ್ಯರ್ಥಃ. ಛಾಂದಸತ್ವಸಮಾಧಾನಂ ತು ನಿರಂಕುಶಮಿತ್ಯಾಹ—ಛಂದಸೀತಿ ॥ ೧೩೧-೧೩೨ ॥

ರೂಪದಿಂದ ಪಠಿಸಲ್ಪಟ್ಟಿವೆಯೋ ಆ ಕ್ರಮದಲ್ಲಿಯೇ ಸಾಧು ಶಬ್ದಗಳೆನಿಸಲ್ಪಡುತ್ತವೆ. "ಪೃಷೋದರಾದೀನಿ ಯಥೋಪದಿಷ್ಟಂ" ಎಂಬ ಸೂತ್ರವು ಶಿಷ್ಟರು ಪೃಷೋದರಾದಿ ಶಬ್ದಗಳನ್ನು ಯಾವ ರೀತಿಯಲ್ಲಿ ಪ್ರಯೋಗ ಮಾಡುವರೋ ಹಾಗೆಯೇ ಸಾಧುಗಳು ಎಂಬ ಅರ್ಥವನ್ನು ಬೋಧಿಸುತ್ತದೆ. ಆ ರೂಪವನ್ನು ಸಾಧಿಸುವ ಶಾಸ್ತ್ರವನ್ನು ಹುಡುಕಬೇಕಾದುದಿಲ್ಲವೆಂದು ತಾತ್ಪರ್ಯವು. ಆದರೆ ಪೃಷೋದರಾದಿ ಶಬ್ದವನ್ನು ಲೋಕದಲ್ಲಿಯೂ ಪ್ರಯೋಗಿಸುವುದು ತಪ್ಪಾಗದಿದ್ದರೂ ಲಹರೀ ಶಬ್ದದ ಮಧ್ಯದ ಅಕಾರವನ್ನು ಬಿಟ್ಟು ಬೇರೆ ಕಡೆಯಲ್ಲಿ ಪ್ರಯೋಗಿಸುವುದು ತಪ್ಪು. ಆದ್ದರಿಂದ ಅಕಾರವನ್ನು ಬಿಟ್ಟು ಲಹ್ರೀ ಎಂಬ ರೂಪವು ಈ ಮಂತ್ರದಲ್ಲಿ ಮಾತ್ರವೇ ಸಾಧುವೆಂದು ಕಲ್ಪಿಸುವುದು ಆವಶ್ಯಕವು. ಇದೇ ರೀತಿಯಾಗಿ ಗೂಢೋತ್ಮಾ ಎಂಬುದು ಶ್ರುತಿಯಲ್ಲಿ ಮಾತ್ರ ಸಾಧುವಾಗಿದ್ದರೂ ಮಿಕ್ಕ ಕಡೆ ಪ್ರಯೋಗಾರ್ಹವಲ್ಲ. ವಿಷ್ಣು ಸಹಸ್ರನಾಮ ಭಾಷ್ಯದಲ್ಲಿ "ನ್ಯಗ್ರೋಧೋದುಂಬರೋಽಶ್ವತ್ಥಃ" ಎಂಬ ಕಡೆ ನ್ಯಗ್ರೋಧಃ, ಉದುಂಬರಃ ಎಂಬ ಎರಡು ಪದಗಳೂ ಪೃಷೋದರಾದಿ ಶಬ್ದದಂತೆ ಸಂಧಿಸಿವೆಯೆಂದು ಪ್ರತಿಪಾದಿಸಲ್ಪಟ್ಟಿದೆ. ಇಲ್ಲಿ ವಿವಕ್ಷಿತವಾದ ಶಬ್ದರೂಪವು ಗಣಪಾಠದಲ್ಲಿ ಪಠಿಸಲ್ಪಡದೇ ಇದ್ದರೆ ಆ ಗಣವನ್ನು ಆಕೃತಿಗಣವೆಂದು ಕಲ್ಪಿಸಿ ಅಲ್ಲಿ ಪಠಿಸಲ್ಪಟ್ಟ ಶಬ್ದಗಳಿಗೆ ಹೋಲತಕ್ಕ ಶಬ್ದಗಳನ್ನು ಗಣಪಾಠದಲ್ಲಿ ಸೇರಿದಂತೆ ಕಲ್ಪಿಸಬೇಕು. ಮತ್ತು ವಿವಕ್ಷೆಗೆ ತಕ್ಕಂತೆ "ಸಂಜ್ಞಾಸುಧಾತು ರೂಪಾಣಿ ಪ್ರತ್ಯಯಾಶ್ಚತತಃಪರೇ ಕಾರ್ಯಾದ್ವಿದ್ಯಾದನೂಬಂಧ ಮೇತಚ್ಛಾಸ್ತ್ರಮುಣಾದಿಷು ||" ಎಂಬ ವಚನದಂತೆ ಪ್ರತ್ಯಯಗಳಲ್ಲಿ ಆಯಾಯ ವರ್ಣಗಳಿಗೆ ಇತ್ಸಂಜ್ಞೆಯನ್ನೂ ಕಲ್ಪಿಸಬಹುದು. "ಛಂದಸಿ ಬಹುಲಂ" ಎಂದರೆ ಮಂತ್ರಗಳಲ್ಲಿ ಎಲ್ಲವ್ಯಾಕರಣ ವಿಧಿಗಳೂ ವಿಕಲ್ಪವಾಗಿ ಬರುತ್ತವೆಯೆಂಬ ಸಮಾಧಾನವು ಎಲ್ಲ ಸ್ಥಳಗಳಲ್ಲಿ ಪ್ರಬಲವಾದ ಅಸ್ತ್ರದಂತೆ ಇರುವುದು. ಈ ಬಗೆಯ ಪರಿಹಾರಗಳಿಂದ ಮೇಲೆ ಹೇಳಿರುವ ಮಂತ್ರಾರ್ಥಗಳಲ್ಲಿ ವ್ಯಾಕರಣ ಶಾಸ್ತ್ರದ ಅನುಮತಿಯನ್ನು ಸಂಪಾದಿಸಬೇಕು || ೧೩೧–೧೩೨ ||

೧೩೩

**ಬಹುತರಸಮಾಸಯೋಗಾತ್ಸಮಸ್ತ ಪುರುಷಾರ್ಥಸಾಧನತ್ವೋಕ್ತೇಃ ।
ಸಂಕ್ಷೇಪಾತ್ಸಾರೋಕ್ತೇಃ ಶ್ರೀವಿದ್ಯಾಯಾಃ ಸಮಸ್ತಾರ್ಥಃ ॥ ೧೩೩ ॥**

ಸಮಸ್ತಾರ್ಥಪದನಿರುಕ್ತಿಪೂರ್ವಕಮುಪಸಂಹರತಿ—ಸಮಸ್ತಪದಸ್ಯಾರ್ಥ ಇತಿ ವಾ, ಸಮಸ್ತಾಃ ಸಕಲಾ ಅರ್ಥಾಃ ಪುರುಷಾರ್ಥಾ ಯಸ್ಮಿನ್ನಿತಿ ವಾ, ಸಮಸ್ತಃ ಸಂಕ್ಷಿಪ್ತೋಽರ್ಥ ಇತಿ ವಾ ನಿರುಕ್ತಿಃ ॥ ೧೩೩ ॥

ಮೇಲ್ಕಂಡ ಅರ್ಥವನ್ನು ಸಮಸ್ತಾರ್ಥವೆಂದು ಕರೆಯಲು ನಾನಾವಿಧ ಸಮಾಸಗಳಿಂದ ಕೂಡಿದ ಪದಕ್ಕೆ ಅರ್ಥವಾಗಿರುವುದೂ ಸಮಸ್ತ ಪುರುಷಾರ್ಥಗಳನ್ನು ಸಾಧಿಸುವುದಾಗಿರುವುದೂ, ಸಾರಾಂಶವನ್ನೇ ಸಂಗ್ರಹಿಸಿರುವುದೂ ಕಾರಣವೆಂದು ತಿಳಿಯಬೇಕು. ಸಮಸ್ತ ಪದಸ್ಯ+ಅರ್ಥಃ, ಸಮಸ್ತಾ+ಅರ್ಥಾಃ ಯಸ್ಮಿನ್, ಸಮಸ್ತಶ್ಚಾಸೌ+ಅರ್ಥಶ್ಚ ಎಂದು ಮೂರು ವಿಧವಾದ ವಿಗ್ರಹದಿಂದ ಮೇಲ್ಕಂಡ ಅರ್ಥಗಳು ಲಭಿಸುವುವು ॥ ೧೩೩ ॥

೧೩೪-೧೩೬

ಕೋ ವಿಧಿರೇಕಾರೋ ಹರಿರಕಾರ ಈಶಃ ಸ್ತವಾರ್ಥವೀಡಪದನ್ ।
ದ್ವಿಸ್ವರಮಧ್ಯಗತಸ್ಯ ಡಕಾರಸ್ಯ ಳಕಾರ ಆದೇಶಃ ॥ ೧೩೪ ॥
ತೇನರ್ಗ್ವೇದಾತ್ಮತ್ವಂ ಸೂಚಿತಮಾದ್ಯಸ್ಯ ಕೂಟಸ್ಯ ।
ಕ್ರಮಶೋಽಗ್ರಿಮಕೂಟಯುಗೇ ತೇನ ಯಜುಃಸಾಮತಾ ಸಿದ್ಧಾ ॥೧೩೫॥
ಹ್ರೀಮಿತಿ ನಾಮ ವಿಶೇಷ್ಯಂ ನಪುಂಸಕಂ ಬ್ರಹ್ಮಲಕ್ಷಕತ್ವೇನ ।
ವಿಧಿಹರಿಗಿರಿಶೈರೀಡ್ಯಂ ಬ್ರಹ್ಮೇತಿ ಪ್ರಥಮಕೂಟಾರ್ಥಃ ॥ ೧೩೬ ॥

ಅಥ ಸಗುಣಾರ್ಥಮಾಹ—ಏಕಾರೋತ್ತರಂ ಪೂರ್ವರೂಪೇಣಾಕಾರಃ ಪ್ರಶ್ಲಿಷ್ಯತೇ. ಸ ಚ ಶಿವವಾಚಕಃ. “ಅಕಾರೋ ಬ್ರಹ್ಮವಿಷ್ಣ್ವೀಶಕಮಠೇಷು” ಇತಿ ಕೋಶಾತ್. ‘ಕಃ ಪ್ರಜಾಪತಿರುದ್ದಿಷ್ಟಃ’ ಇತಿ ‘ಏಕಾರ ಉಚ್ಯತೇ ವಿಷ್ಣುಃ’ ಇತಿ ಚೈಕಾಕ್ಷರ ನಿಘಂಟೂಕ್ತೇಃ ಬ್ರಹ್ಮವಿಷ್ಣು ಪರೌ ಕಕರೈಕಾರೌ. ‘ಈಡಸ್ತುತೌ’ ಇತಿ ಧಾತೋರಚಿಸ್ತುತ್ಯ ಇತ್ಯರ್ಥಃ. ಏತಸ್ಯರ್ಗ್ವೇದಾತ್ಮಕತ್ವಾದಜ್ದ್ವಯಮಧ್ಯಗತಸ್ಯ ಡಕಾರಸ್ಯ ಸ್ಥಾನೇ ಳಕಾರ ಆದೇಶಃ “ಅಗ್ನಿಮೀಳೇ ಪುರೋಹಿತಂ” ಇತ್ಯಾದಿವತ್. ತದುಕ್ತಂ ಬ್ರಹ್ವೃಚಪ್ರಾತಿಶಾಖ್ಯೇ ‘ದ್ವಯೋಶ್ಚಾಸ್ಯ ಸ್ವರಯೋರ್ಮಧ್ಯಮೇತ್ಯ ಸಂಪದ್ಯತೇ ಸ ಡಕಾರೋ ಳಕಾರಃ.’ (೧-೧೦) ಇತಿ.

ಈ ಪದ್ಯಗಳು ಸಗುಣಾರ್ಥವನ್ನು ತೋರಿಸುತ್ತವೆ. ಕ+ಎ ಎಂಬ ವರ್ಣಗಳ ಮುಂದೆ ಪೂರ್ವರೂಪ ಸಂಧಿಯಿಂದ ಅಕಾರವು ಸೇರಿದೆಯೆಂದು ಭಾವಿಸಬೇಕು. “ಅಕಾರೋ ಬ್ರಹ್ಮವಿಷ್ಣ್ವೀಶಕಮಠೇಷು” ಎಂಬ ಕೋಶ ಪ್ರಮಾಣದಿಂದ ಅಕಾರಕ್ಕೆ ಶಿವ ಎಂದು ಅರ್ಥವು. “ಕಃಪ್ರಜಾಪತಿರುದ್ದಿಷ್ಟಃ, ಏಕಾರ ಉಚ್ಯತೇ ವಿಷ್ಣುಃ” ಎಂಬ ಏಕಾಕ್ಷರಕೋಶದಿಂದ ಕಕಾರಕ್ಕೆ ಬ್ರಹ್ಮನೆಂದೂ ಏಕಾರಕ್ಕೆ ವಿಷ್ಣುವೆಂದೂ ಅರ್ಥವು, “ಈಡಸ್ತುತೌ” ಎಂದು ಧಾತು ಪಾಠದಲ್ಲಿರುವುದರಿಂದ ಸ್ತುತಿಯೆಂಬ ಅರ್ಥದಲ್ಲಿ ಈಡ ಎಂಬುದಕ್ಕೆ ಈಲ ಎಂದು ಹೇಳಲ್ಪಡುವುದು. ಋಗ್ವೇದದಲ್ಲಿ ಎರಡು ಸ್ವರಗಳ ನಡುವೆ ಬರುವ ಡಕಾರಕ್ಕೆ ಳಕಾರ ಆದೇಶವು ಬರುವುದೆಂದು “ದ್ವಯೋಶ್ಚಾಸ್ಯ ಸ್ವರಯೋರ್ಮಧ್ಯಮೇತ್ಯ ಸಂಪದ್ಯತೇ ಸಡಕಾರೋಳಕಾರಃ” (೧-೧೦) ಎಂಬ ಬಹ್ವೃಚ ಪ್ರಾತಿಶಾಖ್ಯವಚನವು ಹೇಳಿದೆ. “ಈಲ” ಎಂಬುದಕ್ಕೆ ಸ್ತುತ್ಯವಸ್ತುವೆಂದು ಅರ್ಥವು ಲಭಿಸಿದಂತಾಯಿತು. ಋಗ್ವೇದ ಪ್ರಾತಿಶಾಖ್ಯದಲ್ಲಿ ಹೇಳಿರುವ ಡಕಾರಕ್ಕೆ ಳಕಾರಾದೇಶವೆಂಬ ಕಾರ್ಯ

ಇದನೇವ ಚ ಜ್ಞಾಪಕಮಾದ್ಯಕೂಟಸ್ಯರ್ಗ್ವೇದಾತ್ಮಕತ್ವೇ ದ್ವಿತೀಯ ತೃತೀಯಕೂಟಯೋರ್ಯಜುರ್ವೇದ ಸಾಮವೇದಾತ್ಮಕತ್ವೇ ಚ. ಯ ದ್ಯಪಿ 'ಕಾಮೋಯೋನಿಃ ಕಮಲಾ ವಜ್ರಪಾಣಿಃ' ಇತ್ಯತ್ರ ವಜ್ರ ಪಾಣಿಶಬ್ದೇನ ಲಕಾರ ಏವೋದ್ಧೃತೋ ನ ಳಕಾರಃ, ತಥಾಽಪಿ ಲಳ ಯೋರಭೇದಾಭಿಪ್ರಾಯೇಣೇದಂ. ಅತ ಏವ ಕ್ವಚಿತ್ತಂತ್ರೇ ತ್ರಿಖಂಡೀ ಗತಾಸ್ತ್ರಯೋಽಪಿ ಮೋಹಾರ್ಣಪದೇನ ಳಕಾರಾ ಏವೋದ್ಧೃತಾಃ. ನಪುಂಸಕಮಿತಿ. ಅವ್ಯಯಮಿತ್ಯೇವ ಯುಕ್ತಂ, ಸ್ವರಾದೇರಾಕೃತಿಗಣ ತ್ವಾತ್. ಅತ ಏವ ತ್ರಿಶತ್ಯಾಮೇಕೋನಶತತಮಸ್ಯ ನಾಮ್ನೋ ನಮೋ ಯೋಗೇ ಚತುರ್ಥ್ಯಾಂ ಪ್ರಾಪ್ತಾಯಾಮಪಿ 'ಹ್ರೀಂನಮಃ' ಇತ್ಯೇವ ಸಾಂಪ್ರದಾಯಿಕಾನಾಂ ಪ್ರಯೋಗಃ ಸಂಗಚ್ಛತೇ ॥ ೧೩೪-೧೩೫-೧೩೬ ॥

ವು ಬಂದಿರುವುದರಿಂದ ಮೊದಲನೆಯ ಕೂಟವು ಋಗ್ವೇದ ಸ್ವರೂಪವೆಂದು ಸೂಚಿತವಾಗುವುದು. ಮಿಕ್ಕ ಎರಡು ಕೂಟಗಳು ಕ್ರಮವಾಗಿ ಯಜುರ್ವೇದ ಸಾಮವೇದ ಸ್ವರೂಪಗಳೆಂದೂ ಇದರಿಂದಲೇ ಸೂಚಿಸಲ್ಪಡುವುವು. ಈ ಮಂತ್ರದ ವರ್ಣಗಳನ್ನು ಉದ್ಧಾರ ಕ್ರಮದಿಂದ ತೋರಿಸಿರುವ "ಕಾಮೋಯೋನಿಃ ಕಮಲಾ ವಜ್ರಪಾಣಿಃ'' ಎಂಬ ಶ್ರುತಿಯಲ್ಲಿ ವಜ್ರಪಾಣಿ ಎಂಬ ಸಾಂಕೇತಿಕ ಶಬ್ದದಿಂದ ಲಕಾರವು ಉದ್ಧೃತವಾಗಿದ್ದರೂ ಲಕಾರ ಳಕಾರಗಳಿಗೆ ಅಭೇದವಿರುವುದರಿಂದ ಮೇಲೆ ಹೇಳಿರುವ ಅರ್ಥವು ಅಸಂಗತವಾಗುವುದಿಲ್ಲ. ಆದ್ದರಿಂದಲೇ ಕೆಲವು ತಂತ್ರ ಶಾಸ್ತ್ರ ಗ್ರಂಥಗಳಲ್ಲಿ ಮೋಹಾರ್ಣವೆಂಬ ಸಂಕೇತಪದದಿಂದ ಖಂಡತ್ರಯದಲ್ಲಿಯೂ ಳಕಾರಗಳೇ ಉದ್ಧೃತಗಳಾಗಿವೆ. "ಹ್ರೀಂ" ಎಂಬ ಪದವು ಬ್ರಹ್ಮವಸ್ತುವನ್ನು ಲಕ್ಷಣಾವೃತ್ತಿಯಿಂದ ಬೋಧಿಸುವ ನಪುಂಸಕಲಿಂಗದ ವಿಶೇಷ್ಯ ನಾಮಪದವು. ವಸ್ತುತಃ ಹ್ರೀಂ ಎಂಬುದನ್ನು ಅವ್ಯಯವೆಂದು ಹೇಳುವುದು ಉಚಿತವು. ಸ್ವರಾದಿ ಸಮುದಾಯವು ಆಕೃತಿ ಗಣವಾದ್ದರಿಂದ ಹ್ರೀಂ ಎಂಬುದನ್ನು ಆಗಣದಲ್ಲಿ ಸೇರಿಸಲು ಅವಕಾಶವಿದೆ. ತ್ರಿಶತಿಯಲ್ಲಿ ತೊಂಭತ್ತ ಒಂಭತ್ತನೆಯ ನಾಮವಾದ ಹ್ರೀಂ ಎಂಬುದಕ್ಕೆ ನಮಃ ಎಂಬುದನ್ನು ಸೇರಿಸುವಾಗ ಚತುರ್ಥೀ ವಿಭಕ್ತಿಯು ಪ್ರಾಪ್ತ ವಾದರೂ ಹ್ರೀಂ ನಮಃ ಎಂಬುದಾಗಿಯೇ ಸಂಪ್ರದಾಯಜ್ಞರು ಪ್ರಯೋಗಿಸುವುದ ರಿಂದ ಹ್ರೀಂ ಎಂಬುದು ಅವ್ಯಯವೆಂದು ವ್ಯಕ್ತವಾಗುವುದು. ಪ್ರಥಮ ಕೂಟವು ಬ್ರಹ್ಮ-ವಿಷ್ಣು-ಶಿವ ರಿಂದ ಸ್ತುತ್ಯವಾದ ಪರಬ್ರಹ್ಮ ವಸ್ತುವನ್ನು ಒಟ್ಟಾಗಿ ಬೋಧಿ ಸುತ್ತದೆ ॥ ೧೩೪-೧೩೫-೧೩೬ ॥

೧೩೭-೧೩೯

ಹಸಕಂ ತು ಹಸದ್ವದನಂ ಮತಂ ಕಕಾರಸ್ಯ ವದನವಾಚಿತ್ವಾತ್ ।
ಯದ್ವಾ ಹಸ ಆನಂದಃ ಕಃ ಸೂರ್ಯೋ ಹಸ್ತು ಚಂದ್ರಃ ಸ್ಯಾತ್॥ ೧೩೭ ॥
ಏತೌ ಲೌ ನಯನೇ ಯಸ್ಯ ತತ್ತು ಕಹಲಂ ರವೀಂದುನೇತ್ರಮಿತಿ।
ತೇನ ಪ್ರಕಾಶಕತ್ವಾಚ್ಚಿದ್ರೂಪತ್ವಂ ಚ ನಿಗದಿತಂ ಭವತಿ ॥ ೧೩೮ ॥
ವಿಧಿಹರಿಗಿರಿಶೇಡ್ಯತ್ವೇ ಹೇತೂ ಏತೇ ಹಸತ್ವಕಹಲತ್ವೇ।
ತೇನಾತ್ಯಮಿತಾನಂದಂ ಚಿದ್ಬ್ರಹ್ಮೇತಿ ದ್ವಿತೀಯಕೂಟಾರ್ಥಃ ॥ ೧೩೯ ॥

ಹಸೋ ಹಾಸ್ಯಂ. ಅರ್ಶ ಆದಿತ್ವಾನ್ಮತ್ವರ್ಥೀಯೋಽಚ್. ತತಃ ಕಕಾರೇಣ ಮುಖವಾಚಕೇನ ಬಹುವ್ರೀಹಿಃ. ಹಸಃ ಕೋ ಯಸ್ಯ ತದಿತಿ ವಿಗ್ರಹಃ. ಯದ್ವಾ ಹಾಸಸ್ಯಾನಂದಜನ್ಯತ್ವಾದಾನಂದೇ ಹಸಪದಸ್ಯ ಲಕ್ಷಣಾ. ಕಶ್ಚ ಹಶ್ಚ ಕಹೌ, ಕಹೌ ಲೌ ಯಸ್ಯ ತತ್ ಕಹಲಂ. 'ಮುಖೇ ಸೂರ್ಯೇಽಪಿ ಕಃ ಸ್ಮೃತಃ' 'ಹಃ ಕೋಪೇ ವರುಣೇ

ಹಸಕಂ=ನಗುಮುಖವುಳ್ಳದ್ದು, ಹಸಪದಕ್ಕೆ ಹಾಸ್ಯವೆಂದು ಅರ್ಥವು. ಹಸವುಳ್ಳದ್ದು ಎಂಬ ಅರ್ಥದಲ್ಲಿ ಹಸಪದಕ್ಕೆ ಅರ್ಶ ಆದಿಗಣ ಪಠಿತವಾದ ಶಬ್ದಗಳಿಗೆ ಬಂದು ಸೇರುವ ಮತ್ವರ್ಥೀಯವಾದ ಅಚ್ ಪ್ರತ್ಯಯವನ್ನು ಸೇರಿಸಿದರೆ ಹಸ ಎಂದೇ ರೂಪವಾಗುವುದು. ಹಸಂ+ಕಂ= ಯಸ್ಯ ತತ್ ಎಂದು ಬಹುವ್ರೀಹಿ ಸಮಾಸಮಾಡುವುದರಿಂದ ನಗುವಿನಿಂದ ಕೂಡಿದ ಮುಖವುಳ್ಳದ್ದೆಂಬ ಅರ್ಥವು ಲಭಿಸುವುದು. "ಕಂ" ಎಂಬುದು ಮುಖವೆಂಬ ಅರ್ಥವನ್ನು ಬೋಧಿಸುತ್ತದೆ. ಅಥವಾ ಹಾಸ್ಯವು ಆನಂದದಿಂದ ಹುಟ್ಟುವುದಾದ್ದರಿಂದ ಹಸಪದಕ್ಕೆ ಲಕ್ಷಣಾ ವೃತ್ತಿಯಿಂದ ಆನಂದವೆಂಬ ಅರ್ಥವನ್ನು ತೆಗೆದುಕೊಳ್ಳಬೇಕು. ಮುಂದೆ ಇರುವ ಕವರ್ಣಕ್ಕೆ ಸೂರ್ಯನೆಂದೂ ಹವರ್ಣಕ್ಕೆ ಚಂದ್ರನೆಂದೂ ಅರ್ಥವಿರುವುದರಿಂದ ಕಶ್ಚ+ಹಶ್ಚ ಕಹೌ ಎಂಬ ವಿಗ್ರಹದಿಂದ ಸೂರ್ಯ ಚಂದ್ರರೆಂಬ ಅರ್ಥವು ಲಬ್ಧವಾಗುವುದು. ಕಹೌ+ಲೌ - ಯಸ್ಯತತ್ ಎಂಬ ವಿಗ್ರಹದಿಂದ ಸೂರ್ಯ ಚಂದ್ರರೇ "ಲೌ" ಎಂದರೆ ನೇತ್ರಗಳಾಗಿ ಇರುವ ಬ್ರಹ್ಮವೆಂಬ ಅರ್ಥವಾಗುವುದು. ಇಲ್ಲಿ ಕ್ರಮವಾಗಿ "ಮುಖೇಸೂರ್ಯೇಽಪಿಕಃ ಸ್ಮೃತಃ, ಹಃಕೋಪೇ ವರುಣೇ ಚಂದ್ರೇ, ಇಂದ್ರೇಪಿ ಲೋಚನೇಲಃಸ್ಯಾತ್" ಎಂಬ ಏಕಾಕ್ಷರ ನಿಘಂಟ

ಚಂದ್ರೇ'' ಇಂದ್ರೇಽಪಿ ಲೋಚನೇ ಲಃ ಸ್ಯಾತ್. ಇತ್ಯೇಕಾಕ್ಷರ ನಿಘಂಟುಃ. ಹಸಪದಕಹಲಪದಯೋಃ ಕರ್ಮಧಾರಯಃ. ಏತದರ್ಥಪ್ರತಿಪಾದಕಂ ಮೂಲಮಾಹ—ಹೇತೂ ಇತಿ. ಯತೋ ಹ್ರೀಂ ಹಸಕಹಲಂ ತತೋ ಹ್ರೀಂ ಕಏಈಲಮಿತ್ಯನ್ವಯಃ ‖ ೧೩೭-೧೩೮-೧೩೯ ‖

ವನ್ನು ಕ, ಹ, ಲ ವರ್ಣಗಳಿಗೆ ಮೇಲೆ ಹೇಳಿದ ಅರ್ಥಗಳಲ್ಲಿ ಪ್ರಮಾಣವಾಗಿ ತಿಳಿಯಬೇಕು. ಸೂರ್ಯ ಚಂದ್ರರು ನೇತ್ರವಾಗಿರುವುದೆಂಬ ವಿಶೇಷಣದಿಂದ ಪ್ರಕಾಶಕತ್ವಗುಣವು ಸೂಚಿತವಾಗಿ ತನ್ಮೂಲಕ ಚಿನ್ಮಯವೆಂಬ ಅರ್ಥದಲ್ಲಿ ಪರ್ಯವಸಾನವಾಗುವುದು. ಹಸಪದಕ್ಕೂ ಕಹಲಪದಕ್ಕೂ ಕರ್ಮಧಾರಯ ಸಮಾಸವನ್ನು ಮಾಡುವುದರಿಂದ ಆನಂದ ರೂಪತ್ವವೂ ತಿಳಿಯುವುದು. ಬ್ರಹ್ಮ ವಿಷ್ಣು ರುದ್ರರಿಂದ ಬ್ರಹ್ಮವು ಸ್ತುತ್ಯವಾಗಿರಲು ಆನಂದ ಚೈತನ್ಯಮಯತ್ವವೆಂಬ ಗುಣಗಳೇ ಕಾರಣವಾಗಿರುವುವು. ಪರಬ್ರಹ್ಮವಸ್ತುವು ಯಾವ ಕಾರಣದಿಂದ ಆನಂದಮಯವೂ ಚೈತನ್ಯಮಯವೂ ಆಗಿದೆಯೋ ಆ ಕಾರಣದಿಂದಲೇ ಅಂತಹ ಪರಬ್ರಹ್ಮವಸ್ತುವು ಬ್ರಹ್ಮ ವಿಷ್ಣು ರುದ್ರರಿಂದ ಸ್ತುತ್ಯವಾಗಿದೆಯೆಂದು ಪ್ರಥಮ ದ್ವಿತೀಯ ಕೂಟಗಳಿಗೆ ಸಮನ್ವಿತವಾದ ಅರ್ಥವು. ದ್ವಿತೀಯ ಕೂಟಕ್ಕೆ ಚೈತನ್ಯ ಅಮಿತಾನಂದಗಳಿಂದ ಕೂಡಿದ ಪರಬ್ರಹ್ಮವೆಂದು ಮಾತ್ರವೇ ಅರ್ಥವು ‖ ೧೩೭–೧೩೮–೧೩೯ ‖

೧೪೦

ಸಕಲಕಲಾಭಿಃ ಸಹಿತಂ ಸಕಲಂ ಬ್ರಹ್ಮ ತು ತೃತೀಯಕೂಟಾರ್ಥಃ ।
ಇತ್ಥಂ ಗುಣಗಣಕಥನಾದ್ವಿದ್ಯಾಯಾ ಏಷ ಸಗುಣಾರ್ಥಃ ॥ ೧೪೦ ॥

ಅತ್ರ ಸರ್ವತ್ರ ಸುಲೋಪಃ. ಸ್ಪಷ್ಟಮನ್ಯತ್ ॥ ೧೪೦ ॥

ಸಕಲವೆಂದರೆ ಸಂಪೂರ್ಣಕಲೆಗಳಿಂದ ಕೂಡಿದುದೆಂಬ ಅರ್ಥವಾಗುವುದರಿಂದ ತೃತೀಯ ಕೂಟಕ್ಕೆ ಸಮಸ್ತ ಕಲೆಗಳಿಂದ ಕೂಡಿದ ಬ್ರಹ್ಮವೆಂದು ಅರ್ಥವು. ಈ ರೀತಿಯಾಗಿ ಬ್ರಹ್ಮವಸ್ತುವಿನಲ್ಲಿರುವ ಗುಣಗಣಗಳನ್ನು ವರ್ಣಿಸಿರುವುದರಿಂದ ಈ ಅರ್ಥವನ್ನು ಸಗುಣಾರ್ಥವೆಂದು ಕರೆಯುತ್ತಾರೆ. ಈ ಅರ್ಥಗಳಲ್ಲಿ ಎಲ್ಲ ಕಡೆಯೂ ವಿಭಕ್ತಿ ಪ್ರತ್ಯಯವಾದ ಸು ಎಂಬುದು ಲೋಪವಾಗಿದೆಯೆಂದು ಭಾವಿಸಬೇಕು ॥ ೧೪೦ ॥

೧೪೧-೧೪೨

ವಿಧಿಹರಿಶಿವವಚನಾ ಅಪಿ ಕಕಾರ ಏಕಾರಕೋऽಕಾರಃ ।
ಸೃಷ್ಟಿಸ್ಥಿತಿಭಂಗಾತ್ಮಕತತ್ತಜ್ಜನಕತ್ವಲಾಕ್ಷಣಿಕಾಃ ॥ ೧೪೧ ॥
ಈಶ್ವರವಾಚೀಕಾರೋ ವಕ್ತಿ ಡಕಾರಃ ಸದಾಶಿವಂ ತಾಭ್ಯಾಮ್ ।
ಲಕ್ಷಣಯಾ ತತ್ರ ತಿರೋಧಾನಾನುಗ್ರಹಣಕೃತ್ಯತಾ ಗದಿತಾ ॥ ೧೪೨ ॥

ಚರವೋದ್ದಿಷ್ಟಂ ಮಹಾವಾಕ್ಯಾರ್ಥಮಾಹ—ಈಕಾರಸ್ಯ ನಾಮೈಕದೇಶನ್ಯಾಯೇನೇಶ್ವರಬೋಧಕತ್ವಂ. 'ಡೋ ಮಹೇಶಃ ಸಮಾಖ್ಯಾತಃ' ಇತಿ ವಚನೇऽಪಿ ಪ್ರಕೃತೇ ಸದಾಶಿವ ಏವಾನುಗ್ರಹಕರ್ತಾ ವಿವಕ್ಷಿತಃ. ಏತೇನ 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಇತ್ಯಾದಿ ಶ್ರುತಾವುಕ್ತಂ ಬ್ರಹ್ಮಣಸ್ತಟಸ್ಥಲಕ್ಷಣಮುಕ್ತಂ ಭವತಿ ॥ ೧೪೧-೧೪೨ ॥

ಕಡೆಯದಾದ ಮಹಾವಾಕ್ಯಾರ್ಥವನ್ನು ಈ ಪದ್ಯಗಳು ಹೇಳುತ್ತವೆ. ಪ್ರಥಮ ಕೂಟದಲ್ಲಿ ಏಕಾರದ ಮುಂದೆ ಪೂರ್ವರೂಪ ಸಂಧಿಯಿಂದ ಅಕಾರವಿದೆಯೆಂದು ಇಟ್ಟುಕೊಳ್ಳಬೇಕು. ಆಗ ಕ=ಬ್ರಹ್ಮನು, ಏ=ವಿಷ್ಣುವು, ಅ=ಶಿವನು ಎಂಬ ಅರ್ಥಗಳು ಶಕ್ತಿಯಿಂದ ತೋರಿದರೂ ಇಲ್ಲಿ ಲಕ್ಷಣಾವೃತ್ತಿಯಿಂದ ಅವರವರ ಅಸಾಧಾರಣ ಕೃತ್ಯಗಳನ್ನು ತೆಗೆದುಕೊಂಡು ಕ್ರಮವಾಗಿ ಸೃಷ್ಟಿ ಜನಕ, ಸ್ಥಿತಿ ಜನಕ, ಭಂಗ (ಲಯ) ಜನಕಗಳೆಂದು ಅರ್ಥಮಾಡಿಕೊಳ್ಳಬೇಕು. ಈಕಾರವು "ನಾಮೈಕದೇಶಗ್ರಹಣೇ ನಾಮಗ್ರಹಣಂ" ಎಂಬ ನ್ಯಾಯದಿಂದ ಈಶ್ವರನನ್ನು ಬೋಧಿಸುವುದು. ಲಕಾರವು "ಡೋಮಹೇಶಃ ಸಮಾಖ್ಯಾತಃ" ಎಂಬ ವಚನಾನುಸಾರವಾಗಿ ಪ್ರಕೃತದಲ್ಲಿ ಅನುಗ್ರಹ ಕೃತ್ಯವನ್ನು ಮಾಡುವ ಸದಾಶಿವನೆಂಬ ಅರ್ಥವನ್ನು ಬೋಧಿಸುತ್ತದೆ. ಈಶ್ವರ ಸದಾಶಿವರೆಂಬ ಅರ್ಥಗಳನ್ನು ಶಕ್ತಿಯಿಂದ ಬೋಧಿಸುವ ಈ, ಲ, ಎಂಬ ವರ್ಣಗಳೂ ಲಕ್ಷಣಾವೃತ್ತಿಯಿಂದ ತಿರೋಧಾನ-ಅನುಗ್ರಹ ಜನಕರೆಂಬ ಅರ್ಥಗಳನ್ನು ಬೋಧಿಸುತ್ತವೆ. ಇದರಿಂದ ಒಟ್ಟಾಗಿ ಸೃಷ್ಟಿ ಸ್ಥಿತಿ ಸಂಹಾರ ತಿರೋಧಾನ ಅನುಗ್ರಹಗಳೆಂಬ ಪಂಚಕೃತ್ಯಕರ್ತೃತ್ವವೆಂಬ "ಯತೋವಾ ಇಮಾನಿಭೂತಾನಿ ಜಾಯಂತೇ" ಎಂಬ ಶ್ರುತಿಯಲ್ಲಿ ಪ್ರತಿಪಾದಿಸಲ್ಪಟ್ಟ ಬ್ರಹ್ಮನ ತಟಸ್ಥ ಲಕ್ಷಣವು ಹೇಳಲ್ಪಟ್ಟಿದೆ ॥ ೧೪೧-೧೪೨ ॥

ಹಸ ಆನಂದಃ ಸತ್ಯಂ ಕಂ ಹಮನಂತಂ ಚ ಲಂ ಜ್ಞಾನಮ್ ।

ಅಥ "ಸತ್ಯಂ ಜ್ಞಾನಮನಂತಂ ಬ್ರಹ್ಮ" ಇತ್ಯುಕ್ತಂ ಸ್ವರೂಪ ಲಕ್ಷಣಂ ದ್ವಿತೀಯಕೂಟೇನಾಹ—"ಸಖಾ ಕಶ್ಚ ಬುಧೈಃ ಪ್ರೋಕ್ತಃ" ಇತಿ ಕೋಶಾತ್ಕಕಾರಃ ಸಖಿವಾಚಕಃ. ಸಖಿತ್ವಮಾಪ್ತತ್ವಂ. ತಚ್ಚ ಯಥಾಽರ್ಥವಕ್ತೃತ್ವಮಿತಿ ಶಕ್ಯಸಂಬಂಧೇನ ಪ್ರಕೃತೇ ಸತ್ಯಮೇವ ವಿವಕ್ಷಿತಂ. ಏವಂ ಹಕಾರಸ್ಯ ವ್ಯೋಮಬೀಜತ್ವೇನ ವ್ಯೋಮ್ನೋಽನಂತತ್ವಾದನಂತಮಿತ್ಯರ್ಥಃ. ಪ್ರತ್ಯಕ್ಷಜ್ಞಾನಜನಕಲೋಚನವಾಚಿಲಕಾರಸ್ಯಜ್ಞಾನಮರ್ಥಃ ॥ ೧೪೩ ॥

ದ್ವಿತೀಯ ಕೂಟವು "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂಬ ಶ್ರುತಿಯಿಂದ ಪ್ರತಿಪಾದಿತವಾದ ಬ್ರಹ್ಮನ ಸ್ವರೂಪ ಲಕ್ಷಣವನ್ನು ಹೇಳುವುದು. ಹಸ ಎಂದರೆ ಆನಂದವು. ಕಂ ಎಂದರೆ ಸತ್ಯವೆಂದು ಅರ್ಥ. "ಸಖಾ ಕಶ್ಚಬುಧೈಃ ಪ್ರೋಕ್ತಃ" ಎಂಬ ಕೋಶದಿಂದ ಕ ವರ್ಣಕ್ಕೆ ಸಖಿಯೆಂಬ ಅರ್ಥವು ತೋರುತ್ತದೆ. ಸಖಿಯು ಆಪ್ತಸ್ವರೂಪನು. ಯಥಾರ್ಥವಕ್ತೃತ್ವ (ಸತ್ಯವಾದಿತ್ವ) ವೇ ಆಪ್ತನ ಸ್ವರೂಪವು. ಈ ವಿಧವಾದ ಸಂಬಂಧದಿಂದ ಸಖನನ್ನು ಬೋಧಿಸುವ ಕ ವರ್ಣಕ್ಕೆ ಪ್ರಕೃತದಲ್ಲಿ ಸತ್ಯವೆಂಬ ಅರ್ಥವನ್ನು ಪರಿಗ್ರಹಿಸಬೇಕು. ಹವರ್ಣವು ಆಕಾಶ ಬೀಜವಾದುದರಿಂದ ಆಕಾಶವನ್ನು ಬೋಧಿಸಬಲ್ಲದು. ಆಕಾಶವು ಅನಂತತ್ವ ಗುಣದಿಂದ ಕೂಡಿರುವುದಾದ ಕಾರಣ ಲಕ್ಷಣೆಯಿಂದ ಅನಂತವೆಂಬ ಅರ್ಥವೂ ಹವರ್ಣದಿಂದ ಬೋಧ್ಯವಾಗುವುದು. ಲಂ ಎಂದರೆ ಜ್ಞಾನವು. ಲವರ್ಣವು ಪ್ರತ್ಯಕ್ಷ ಜ್ಞಾನಕ್ಕೆ ಸಾಧನವಾದ ಚಕ್ಷುರಿಂದ್ರಿಯವನ್ನು ಬೋಧಿಸುವುದರಿಂದ ಸಾಮಾನ್ಯ ಜ್ಞಾನವೆಂಬ ಅರ್ಥವೂ ಲ ವರ್ಣಕ್ಕೆ ಬೋಧ್ಯವೇ ಆಗಿದೆ. ಹೀಗೆ ಸತ್ಯ–ಜ್ಞಾನ–ಅನಂತ–ಆನಂದಸ್ವರೂಪಗಳು ಈ ವರ್ಣಗಳಿಂದ ಬೋಧ್ಯವಾಗಿರುವುದರಿಂದ ಬ್ರಹ್ಮನ ಸ್ವರೂಪ ಲಕ್ಷಣವು ಇಲ್ಲಿ ಪ್ರತಿಪಾದಿತವಾಗಿದೆ.

೧೪೩-೧೪೭

ಇತ್ಥಂ ಬ್ರಹ್ಮ ತಟಸ್ಥಸ್ವರೂಪಲಕ್ಷಣಯುಗೇನ ನಿರ್ಣೀಯ ॥ ೧೪೩ ॥
ತದಭೇದಂ ಜೀವಗಣೇ ವಕ್ತಿ ತೃತೀಯೇನ ಕೂಟೇನ ।
ಜಾಗ್ರತ್ಸ್ವಪ್ನಸುಷುಪ್ತ್ಯಾಖ್ಯಕಲಾತ್ರಿತಯೇನ ಸಾಹಿತ್ಯಾತ್ ॥ ೧೪೪ ॥
ಸಕಲಪದಂ ಜೀವಪರಂ ಬ್ರಹ್ಮಪರಂ ಶಕ್ತಿಬೀಜಂ ಸ್ಯಾತ್ ।
ಸಾಮಾನಾಧಿಕರಣ್ಯಾತ್ತಲ್ಲಕ್ಷಿತಶುದ್ಧಯೋರಭೇದಾರ್ಥಃ ॥ ೧೪೫ ॥
ಅತ್ಯಲ್ಪಮಿದಂ ಕಥಿತಂ ಯತ್ಸರ್ವಂ ಖಲ್ವಿದಂ ಬ್ರಹ್ಮ ।
ಇತ್ಯೇವಂ ಬೋಧಯಿತುಂ ಸಕಲಪದಂ ವಾ ತೃತೀಯಕೂಟಗತಮ್ ॥೧೪೬॥
ಏವಮುಪಾಂತರವಾಕ್ಯೈರ್ಜೀವಬ್ರಹ್ಮಸ್ವರೂಪಮಭಿಧಾಯ ।
ತದಭೇದೋವರ್ಣಿತ ಇತ್ಯೇಷ ಮಹಾಪೂರ್ವವಾಕ್ಯಾರ್ಥಃ ॥ ೧೪೭ ॥

"ತತ್ತ್ವಮಸಿ" ಇತಿ ಮಹಾವಾಕ್ಯೇ ತತ್ಪದಾರ್ಥತ್ವಂಪದಾರ್ಥಯೋರೇಕ ವಿಭಕ್ತಿಮತ್ತ್ವ ರೂಪಸಾಮಾನಾಧಿಕರಣ್ಯಾದಭೇದೋ ಬೋಧ್ಯತೇ. ಸ ಚ ವಾಚ್ಯಾರ್ಥಯೋರಸಂಭವಾಜ್ಜಹದಜಹಲ್ಲಕ್ಷಣಯಾಲಕ್ಷ್ಯಪದಾರ್ಥಯೋರಿತಿ ಸ್ಥಿತಿಃ. ತತ್ರ ತತ್ಪದಸ್ಯ ವಾಚ್ಯಾರ್ಥಃ ಸೃಷ್ಟ್ಯಾದಿಕೃತ್ಯಪಂಚಕಜನಕಃ. ಸ ಚ "ಯತೋ ವಾ ಇಮಾನಿ ಭೂತಾನಿ ಜಾಯಂತೇ" ಇತ್ಯಾದಿನಾ ಶ್ರುತಾವುಕ್ತಃ. ಲಕ್ಷ್ಯಾರ್ಥಸ್ತು ಕೃತ್ಯಾ

ಹಿಂದೆ ನಿರೂಪಿಸಿರುವ ರೀತಿಯಲ್ಲಿ ತಟಸ್ಥಸ್ವರೂಪಲಕ್ಷಣಗಳಿಂದ ಬ್ರಹ್ಮವನ್ನು ನಿರೂಪಿಸಿ ಅಂತಹ ಬ್ರಹ್ಮಾಭೇದವನ್ನು ಜೀವಾತ್ಮನಲ್ಲಿ ತೃತೀಯ ಕೂಟವು ಪ್ರತಿಪಾದಿಸುತ್ತದೆ. ತತ್ತ್ವಮಸಿ ಎಂಬ ಛಾಂದೋಗ್ಯೋಪನಿಷತ್ತಿನ ಮಹಾವಾಕ್ಯದಲ್ಲಿ ತತ್+ತ್ವಂ ಎಂಬ ಎರಡು ಪದಗಳು ಒಂದೇ ವಿಭಕ್ತ್ಯಂತಗಳಾಗಿರುವುದರಿಂದ ಅವುಗಳ ಅರ್ಥಗಳಿಗೆ ಅಭೇದವನ್ನು ಬೋಧಿಸುತ್ತವೆ. ಅಭೇದವು ಆ ಪದಗಳ ವಾಚ್ಯಾರ್ಥಗಳಿಗೆ ಸಂಭವಿಸುವುದಿಲ್ಲವಾದ್ದರಿಂದ ಜಹದಜಹಲ್ಲಕ್ಷಣಾವೃತ್ತಿಯಿಂದ ಬೋಧ್ಯವಾದ ತತ್, ತ್ವಂಪದಗಳ ಅರ್ಥಗಳಿಗೆ ಅಭೇದವನ್ನು ಅಂಗೀಕರಿಸಬೇಕು "ಯತೋವಾ ಇಮಾನಿ ಭೂತಾನಿ ಜಾಯಂತೇ" ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಸೃಷ್ಟ್ಯಾದಿ ಕೃತ್ಯಪಂಚಕವನ್ನು ಮಾಡುವವನು ಎಂಬುದು ತತ್‌ಪದದ ವಾಚ್ಯಾರ್ಥವು. ಕೃತ್ಯಾತೀತವೂ ನಿರ್ವಿಶೇಷವೂ ಆದ ಪರ

ತೀತಂ ನಿರ್ವಿಶೇಷಂ ಬ್ರಹ್ಮ. ತದಪಿ 'ಸತ್ಯಂ ಜ್ಞಾನಂ' ಇತ್ಯಾದಿನಾ ಪ್ರತಿಪಾದಿತಂ. ಏವಂ ತ್ವಂಪದಸ್ಯ ವಾಚ್ಯಾರ್ಥೋ ಜಾಗ್ರದಾದ್ಯವಸ್ಥಾ ಪಂಚಕವಿಶಿಷ್ಟಃ. ಸ ಚ 'ತದ್ಯಥಾಽಸ್ಮಿನ್ನಾಕಾಶೇ ಶ್ಯೇನೋ ವಾ ಸುಪರ್ಣೋ ವಾ ವಿಪರಿಪತ್ಯ ಶ್ರಾಂತಃ ಸಂಹತ್ಯಪಕ್ಷೌ ಸಂಲಯಾಯೈವ ಧ್ರಿಯತ ಏವಮೇವಾಯಂ ಪುರುಷ ಏತಸ್ಮಾ ಅಂತಾಯ ಧಾವತಿ. ತದ್ಯಥಾ ಮಹಾಮತ್ಸ್ಯಃ' ಇತ್ಯಾದಿ ಶ್ರುತಿಭಿರುಕ್ತಃ. ಲಕ್ಷ್ಯಾರ್ಥಸ್ತ್ವವಸ್ಥಾದ್ಯತೀತಂ ಬ್ರಹ್ಮ. ತದಪಿ "ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ ಪುರುಷಃ, ನ ದೃಷ್ಟೇರ್ದ್ರಷ್ಟಾರಂ ಪಶ್ಯೇಃ' ಇತ್ಯಾದಿಭಿಃ ಪ್ರತಿಪಾದಿತಂ. ಏವಮವಾಂತರವಾಕ್ಯೈರ್ವಾಚ್ಯಾರ್ಥಲಕ್ಷ್ಯಾರ್ಥಯೋರ್ನಿರ್ಣಯೇ ಸತಿ ಮಹಾವಾಕ್ಯೇ ಲಕ್ಷ್ಯಾರ್ಥಯೋರಭೇದಬೋಧಃ. ಯದ್ಯಪಿ ಶ್ರುತಿಷು ಕೃತ್ಯತ್ರಯಮವಸ್ಥಾತ್ರಯಮೇವ ವರ್ಣ್ಯತೇ, ತಥಾಽಪಿ ತಂತ್ರಾನುಸಾರಾತ್ತತ್ಪಂಚಕೋಪಲಕ್ಷಣ

ಬ್ರಹ್ಮವೇ ಲಕ್ಷ್ಯಾರ್ಥ. ಇದು "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂಬ ಶ್ರುತಿವಾಕ್ಯದಲ್ಲಿ ಹೇಳಲ್ಪಟ್ಟಿದೆ. ಹೀಗೆಯೇ "ತದ್ಯಥಾಽಸ್ಮಿನ್ನಾಕಾಶೇಶ್ಯೇನೋ ವಾ ಸುಪರ್ಣೋ ವಾ ವಿಪರಿಪತ್ಯ ಶ್ರಾಂತಃ ಸಂಹತ್ಯಪಕ್ಷೌ ಸಂಲಯಾಯೈವಧ್ರಿಯತ ಏವಮೇವಾಯಂ ಪುರುಷ ಏತಸ್ಮಾ ಅಂತಾಯಧಾವತಿ ತದ್ಯಥಾಮಹಾಮತ್ಸ್ಯಃ||" ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಜಾಗ್ರದಾದಿ ಅವಸ್ಥಾಪಂಚಕದಿಂದ ಕೂಡಿದ ವಸ್ತುವು ತ್ವಂ ಪದದ ವಾಚ್ಯಾರ್ಥವು. ಅವಸ್ಥಾತೀತವಾದ ಬ್ರಹ್ಮವು ತ್ವಂಪದದ ಲಕ್ಷ್ಯಾರ್ಥ, ಇದು "ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ ಪುರುಷಃ, ನದೃಷ್ಟೇರ್ದ್ರಷ್ಟಾರಂಪಶ್ಯೇಃ" ಎಂಬ ಶ್ರುತಿವಾಕ್ಯದಲ್ಲಿ ಹೇಳಲ್ಪಟ್ಟಿದೆ. ಹೀಗೆ ಅವಾಂತರ ವಾಕ್ಯಗಳಿಂದ ತತ್ ತ್ವಂಪದಗಳ ವಾಚ್ಯಾರ್ಥ ಲಕ್ಷ್ಯಾರ್ಥಗಳನ್ನು ಪ್ರತ್ಯೇಕವಾಗಿ ತೋರಿಸಿ ಮಹಾವಾಕ್ಯದಲ್ಲಿ ಆ ಲಕ್ಷ್ಯಾರ್ಥಗಳಿಗೆ ಐಕ್ಯವು ಬೋಧಿಸಲ್ಪಟ್ಟಿದೆ. ಶ್ರುತಿಯಲ್ಲಿ ಸೃಷ್ಟ್ಯಾದಿ ಕೃತ್ಯತ್ರಯ, ಜಾಗ್ರದಾದ್ಯವಸ್ಥಾತ್ರಯವು ಮಾತ್ರ ನಿರೂಪಿಸಲ್ಪಟ್ಟಿದ್ದರೂ ಪಂಚೀಕರಣದ ಉಪಲಕ್ಷಣಾರ್ಥವಾಗಿ ತ್ರಿವೃತ್ಕರಣವನ್ನು ಹೇಳಿರುವಂತೆ ಅವಸ್ಥಾ ಕೃತ್ಯ ಪಂಚಕವನ್ನು ಸೇರಿಸಿಕೊಳ್ಳುವುದು ಆವಶ್ಯಕವು. ಪ್ರಕೃತಮಂತ್ರದಲ್ಲಿ ತೃತೀಯಕೂಟದಲ್ಲಿರುವ ಸಕಲ ಪದವು ಅವಸ್ಥೆಗಳಿಂದ ಕೂಡಿರುವುದೆಂಬ ತ್ವಂಪದ ವಾಚ್ಯಾರ್ಥವನ್ನು ಹೇಳಿದ್ದರೂ ಲಕ್ಷ್ಯಾರ್ಥವನ್ನು ಹೇಳಿಲ್ಲವೆಂಬ ನ್ಯೂನತಾಪರಿಹಾರಕ್ಕೋಸ್ಕರ

ಪರತ್ವೇನ ವ್ಯಾಖ್ಯೇಯಂ ತ್ರಿವೃತ್ಕರಣಸ್ಯ ಪಂಚೀಕರಣಪರತ್ವಮಿವ. ಏವಂ ಚ ಪ್ರಕೃತೇ ತೃತೀಯಕೂಟಸ್ಥಸಕಲಪದೇನ ಕಲಾಭಿರವಸ್ಥಾಭಿಃ ಸಹಿತ ಇತ್ಯರ್ಥಕೇನ ವಾಚ್ಯಾರ್ಥಸ್ಯೋಕ್ತಾವಪಿ ಲಕ್ಷ್ಯಾರ್ಥಾನುಕ್ತೇರ್ನ್ಯೂನತಾ. ತದರ್ಥಂ ಚ ಕೂಟದ್ವಯಮೇವಾವೃತ್ತ್ಯಾ ತ್ವಂ ಪದಸ್ಯ ವಾಚ್ಯಾರ್ಥಲಕ್ಷ್ಯಾರ್ಥಯೋಃ ಸಮರ್ಪಕತ್ವೇನ ವ್ಯಾಖ್ಯೇಯಂ. ಅಥ ವಾ ತಾಂತ್ರಿಕಾಣಾಂ ಮತೇ ವಾಚ್ಯಾರ್ಥಯೋರಪ್ಯತ್ಯಂತಾಭೇದಸ್ಯ ಶಾಂಭವಾನಂದಕಲ್ಪಲತಾಕಾರಾದಿಭಿರುಪಪಾದನಾತ್ಕೂಟದ್ವಯೇನ ಸೃಷ್ಟಿಕರ್ತೃತ್ವಾದಿ ವಿಶಿಷ್ಟಸ್ಯಾವಸ್ಥಾಽಽದಿವಿಶಿಷ್ಟಸ್ಯೈವ ವಾಚ್ಯಾರ್ಥಸ್ಯ ಸಮರ್ಪಣಂ ತೃತೀಯಕೂಟೇ ತು ತಯೋರಭೇದೊ ಜಗತೋ ವಾ ಸಂಪೂರ್ಣಸ್ಯಾಭೇದೋ ಬೋಧ್ಯತೇ. ಇಹಯಾವಾನ್ವಕ್ತವ್ಯೋಂಶಸ್ತಾವತಃ ಸರ್ವಸ್ಯಾಪ್ಯುಕ್ತೌ ವೇದಾಂತಶಾಸ್ತ್ರಸ್ಯೈವ ಕೃತ್ಸ್ನಸ್ಯಾರಂಭಣೀಯತಾಽಽಪತ್ತ್ಯೋಪರಮ್ಯತೇ. ಮಹಾಪೂರ್ವೇತಿ.

ಹಿಂದಿನ ಕೂಟದ್ವಯವನ್ನೇ ಆವೃತ್ತಿಮಾಡಿ ಅದರಿಂದಲೇ ತ್ವಂಪದದ ವಾಚ್ಯಾರ್ಥ ಲಕ್ಷ್ಯಾರ್ಥಗಳು ಲಭಿಸುತ್ತವೆಯೆಂದು ತಿಳಿಯಬೇಕು. ಅಥವಾ ತಾಂತ್ರಿಕ ಸಿದ್ಧಾಂತದಲ್ಲಿ ವಾಚ್ಯಾರ್ಥಗಳಿಗೆ ಅಭೇದವು ಅನ್ವಯಿಸಬಹುದೆಂದು ಶಾಂಭವಾನಂದ ಕಲ್ಪಲತಾಗ್ರಂಥಕಾರರು ಸಮರ್ಥಿಸಿರುವುದರಿಂದ ಕ್ರಮವಾಗಿ ಮೊದಲಿನ ಎರಡು ಕೂಟಗಳು ಸೃಷ್ಟಿಕರ್ತೃತ್ವಾದಿಗಳಿಂದ ಕೂಡಿದ ತತ್ಪದಾರ್ಥವನ್ನೂ, ಜಾಗ್ರದಾದ್ಯವಸ್ಥೆಗಳಿಂದ ಕೂಡಿದ ತ್ವಂಪದಾರ್ಥವನ್ನೂ ಬೋಧಿಸುವುದರಿಂದ ತೃತೀಯಕೂಟವು ಅವುಗಳ ಅಭೇದವನ್ನು ಅಥವಾ ಸಂಪೂರ್ಣ ಜಗತ್ತಿಗೆ ಬ್ರಹ್ಮಾಭೇದವನ್ನು ಬೋಧಿಸುವುದೆಂದು ತಿಳಿಯಬಹುದು. ಇಲ್ಲಿ ವಿವರಿಸಬೇಕಾಗಿರುವ ಎಲ್ಲ ಅಂಶಗಳನ್ನೂ ವಿವರಿಸುತ್ತ ಬಂದರೆ ಸಂಪೂರ್ಣ ವೇದಾಂತ ಶಾಸ್ತ್ರವನ್ನೇ ಆರಂಭಿಸಬೇಕಾಗಿರುವುದರಿಂದ ಇಲ್ಲಿಗೆ ನಿಲ್ಲಿಸಿರುತ್ತದೆ. ಈ ಅರ್ಥವು ಮಹತ್ತಾಗಿಯೂ ಪ್ರಾಚೀನವೂ ಆಗಿರುವುದರಿಂದ "ಮಹಾಂಶ್ಚಾಸೌ ಪೂರ್ವಶ್ಚ, ತಾದೃಶೋ ವಾಕ್ಯಾರ್ಥಃ" ಎಂಬ ವ್ಯುತ್ಪತ್ತಿಯ ಅರ್ಥವನ್ನು ಮನಸ್ಸಿನಲ್ಲಿಟ್ಟು ಮಹಾಪೂರ್ವ ವಾಕ್ಯಾರ್ಥವೆಂದು ಕರೆಯಲ್ಪಟ್ಟಿದೆ. ಅಥವಾ ಮಹಾ ಎಂಬ ಶಬ್ದವೇ ಪೂರ್ವದಲ್ಲಿದ್ದ ವಾಕ್ಯದ ಅರ್ಥವು "ಮಹಾಶಬ್ದಃ ಪೂರ್ವೋಯಸ್ಮಿನ್ ವಾಕ್ಯೇ, ತಸ್ಯ ಅರ್ಥಃ" ಎಂಬ ವ್ಯುತ್ಪತ್ತಿ ಲಭ್ಯವಾಗುವುದು. ಈ ತಾತ್ಪರ್ಯವನ್ನೂ ಅಂಗೀಕರಿಸಬಹುದು. ಇದುವರೆಗೆ ಇಲ್ಲಿ ವರ್ಣಿಸಲ್ಪಟ್ಟ ಅರ್ಥಗಳು ಮಿಕ್ಕ

ಮಹಾಂಶ್ಚಾಸೌ ಪೂರ್ವಶ್ಚ ವಾಕ್ಯಾರ್ಥ ಇತಿ, ಮಹಾಶಬ್ದಃ ಪೂರ್ವೋ ಯಸ್ಮಿನ್ ವಾಕ್ಯೇ ಶಬ್ದೇ ತಸ್ಯ ಮಹಾವಾಕ್ಯಸ್ಯಾರ್ಥ ಇತಿ ವಾ ನಿರುಕ್ತಿಃ. ಏತೇ ಚಾರ್ಥಾ ಉಪಲಕ್ಷಣಭೂತಾಃ. ತೇನ ತಂತ್ರೇಷು ತತ್ರ ತತ್ರೋಕ್ತಾನಾಮನ್ಯೇಷಾಮಪ್ಯರ್ಥಾನಾಂ ಸಂಗ್ರಹಃ. ತಥಾ ಹಿ—ಯೋಗಿನೀಹೃದಯೇ ತಾವತ್ 'ಆತ್ಮನಃ ಸ್ಫುರಣಂ ಪಶ್ಯೇದ್ಯದಾ ಸಾ ಪರಮಾ ಕಲಾ' ಇತ್ಯಾರಭ್ಯ ಕಾಂಶ್ಚಿಚ್ಚತುರಶ್ಚತುರಃ ಪದಾರ್ಥಾನುಕ್ತ್ವಾ ತದ್ವಾಚಕತ್ವಂ ಕೂಟತ್ರಯಂ ತುರೀಯವಿದ್ಯಾ ಚೇತಿ ಚತುರ್ಣಾಂ ಶಬ್ದಾನಾಂ ಪ್ರತಿಪಾದಿತಂ—'ಕೂಟತ್ರಿತಯಯುಕ್ತಸ್ಯ ಸಕಲಸ್ಯ ಮನೋಃ ಪುನಃ. ಏತಾನಿ ವಾಚ್ಯರೂಪಾಣಿ ಕುಲಕೌಲಮಯಾನಿ ತು" ಇತಿ. ಏವಂ ಚ ಯಾವಂತಿ ಚತುಷ್ಕಾಣಿ ತಾವಂತೋ ಮಂತ್ರಾರ್ಥಾಃ. ತಾನಿ ಚ ಪ್ರಥಮೇಂಶೇ 'ಪುಟಧಾಮ—' ಇತ್ಯಾದಿ ಶ್ಲೋಕೋಕ್ತಾನಿ. ತತ್ರ ಹಿ ಯದ್ಯಪಿ ಕೂಟಾನಾಂ ಪುಟಾದ್ಯಭೇದ ಏವೋಕ್ತಃ, ತಥಾಪಿ

ಸಮಸ್ತಾರ್ಥಗಳಿಗೂ ಉಪಲಕ್ಷಣವಾಗಿರುವುದರಿಂದ ಆಯಾಯ ತಂತ್ರಗಳಲ್ಲಿ ಹೇಳಿರುವ ಇತರಾರ್ಥಗಳನ್ನೂ ಸೇರಿಸಿಕೊಳ್ಳಬೇಕು. ಯೋಗಿನೀ ಹೃದಯದಲ್ಲಿ "ಕೂಟತ್ರಿತಯ ಯುಕ್ತಸ್ಯ ಸಕಲಸ್ಯಮನೋಃ ಪುನಃ, ಏತಾನಿ ವಾಚ್ಯರೂಪಾಣಿ ಕುಲಕೌಲಮಯಾನಿ ತು॥" ಎಂಬ ಪದ್ಯವು "ಆತ್ಮನಃ ಸ್ಫುರಣಂ ಪಶ್ಯೇದ್ಯದಾಸಾ ಪರಮಾಕಲಾ" ಎಂದು ಪೂರ್ವೋಕ್ತವಾದ ನಾಲ್ಕು ನಾಲ್ಕು ವಸ್ತುಗಳನ್ನು ವ್ಯಷ್ಟಿರೂಪದಿಂದ ಕೂಟತ್ರಯವೂ ಮತ್ತು ತತ್ಸಮಷ್ಟಿಯೂ ಕ್ರಮವಾಗಿ ಬೋಧಿಸುತ್ತದೆಯೆಂದು ಹೇಳಿದೆ. ಹೀಗೆ ಚತುಷ್ಕ (ನಾಲ್ಕು ವಸ್ತುಗಳಿಂದ ಕೂಡಿದ ಗುಂಪು)ಗಳು ಎಷ್ಟಿವೆಯೋ ಅಷ್ಟು ಮಂತ್ರಾರ್ಥಗಳೆಂದು ಪ್ರಥಮಾಂಶದಲ್ಲಿ ಬಂದ "ಪುಟಧಾಮ" ಎಂಬ ಶ್ಲೋಕದಲ್ಲಿ ಹೇಳಿರುತ್ತದೆ. ಅಲ್ಲಿ ಕೂಟಗಳಿಗೂ ಪುಟಾದಿ ಅರ್ಥಗಳಿಗೂ ಐಕ್ಯವು ಹೇಳಲ್ಪಟ್ಟಿರುವುದಾದರೂ ಅದಕ್ಕೆ ವಾಚ್ಯವಾಚಕಭಾವ ಸಂಬಂಧದಲ್ಲಿಯೇ ಪರ್ಯವಸಾನವು. ಪಾತಂಜಲಗ್ರಂಥದಲ್ಲಿಯೂ ಮಂಜೂಷಾ ಗ್ರಂಥದಲ್ಲಿಯೂ ವಾಚ್ಯವಾಚಕಭಾವ ಸಂಬಂಧ ಅಥವಾ ಶಕ್ತಿಯನ್ನು ಶಬ್ದಾರ್ಥಗಳ ತಾದಾತ್ಮ್ಯರೂಪವನ್ನಾಗಿಯೇ ಸಾಧಿಸಿರುತ್ತಾರೆ. ಮತ್ತು ಕಾದಿಮತದಲ್ಲಿ ಯೋಗಿನೀ ಹೃದಯದ ಮೂವತ್ತೈದನೆಯ ಪಟಲದಲ್ಲಿ ಇಪ್ಪತ್ತನಾಲ್ಕು ಮೊದಲಾದ ಸಂಖ್ಯೆಯಿಂದ ಕೂಡಿರುವ ಸ್ಥಳ ಪಲ್ಲಟವನ್ನು ಹೊಂದಿರುವ ವರ್ಣಗಳುಳ್ಳ ಮೂರು ಪದ್ಯಗಳಿಂದ ಅರ್ಥವು ವಿವರಿಸಲ್ಪಟ್ಟಿದೆ.

ಸ ವಾಚ್ಯವಾಚಕಭಾವ ಏವ ಪರ್ಯವಸ್ಯತಿ, ಶಬ್ದಾರ್ಥಯೋಸ್ತಾದಾತ್ಮ್ಯಸ್ಯೈವ ಶಕ್ತಿರೂಪತ್ವೇನ ಪಾತಂಜಲೇ ಮಂಜೂಷಾಯಾಂ ಚ ಸ್ಫುಟತರಮುಪಪಾದನಾತ್. ಏವಂ ಕಾದಿಮತೇ ಪಂಚತ್ರಿಂಶೇ ಪಟಲೇ ಚತುರ್ವಿಂಶಾದಿಭಿಸ್ತ್ರಿಭಿರ್ವ್ಯಾಕುಲಾಕ್ಷರೈಃ ಶ್ಲೋಕೈರರ್ಥೋ ವರ್ಣಿತಃ—'ರ್ಣೈಃ ಯಾಭಿಲಿರ್ವತಾಸ್ತ್ರಿಲತೇರ್ಥೋಧೀಕಯುಲಾಽಭಿಸ. ಣದೇರೂಷೇಪೇಣವೀಶೇ ತವ್ ದಿವಿಾನ ರಿಸ್ಯಾದತೇ ‖ ೧ ‖ ತ್ಸ್ನಂತೋಗಶೇತ್ಕೃಷಜ ಅತವ್ ತ್ಮವಿಾಲ್ಲೇರಿಖಾಕಹೃ. ತಃ ರ್ಥಕಸ್ಯಾಥಿಶ್ಚಾಸ್ತುತ ತಃನ್ತ್ರೇಗೋರ್ವಪಿತಷುಸ ‖ ೨ ‖ ತ್ವಂ ಕಾವಮಾವ್ನಾನಪ್ರಶವ್ರೊ್ಯೇ ನಾನಮುಸಗ್ನಿವಾತ್ವಗ್ರ. ರೋಮಈಯೋಕಾರ್ವಿಶರ್ತಭಾನವ್ ತಭಾನ್ದುಲನಾನ್ನಿಬಿ ‖ ೩ ‖ ಇತಿ. ಏತೇಷಾಂ ವಾಚನಕ್ರಮೋ ಯಥಾ—'ದೇವತಾರಥಗೋಮೂಕ—(೮೪೬೨೭೩೫೧) ಇತಿ ಯೋ ವೇತ್ತಿ ನ ಕ್ರಮಂ. ನವ್ಯಾಕುಲಾಕ್ಷರೇ ಮೂಕೋ ದೇವತಾರಥಗೋಽಪಿಸನ್.' ಇತಿ. ತೃತೀಯಕೂ

ಆ ಪದ್ಯಗಳು ಈ ರೀತಿಯಾಗಿವೆ :—"ರ್ಣೈಃಯಾಭಿಲಿರ್ವತಾಸ್ತ್ರಿಲ ತೇರ್ಥೋಧೀಕಯುಲಾಽಭಿಸ | ಣದೇರೂಷೇಪೇಣವೀಶೇತವ್‌ದಿವಿಾನ ರಿಸ್ಯಾದತೇ ‖ ೧ ‖ ತ್ಸ್ನಂತೋಗಶೇತ್ಕೃಷಜ ಅತವ್‌ತ್ಮವಿಾಲ್ಲೇರಿಖಾಕಹೃ | ತಃರ್ಥಕಸ್ಯಾಥಿಶ್ಚಾಸ್ತುತತಃನ್ತ್ರೇಗೋರ್ವಪಿತಷುಸ ‖ ೨ ‖ ತ್ವಂಕಾವಮಾವ್ನಾನಪ್ರಶವ್ರೊ್ಯೇ ನಾನಮುಸಗ್ನಿ ವಾತ್ವಗ್ರ | ರೋಮ ಈಯೋಕಾರ್ವಿಶರ್ತನವ್ ತಭಾನ್ದುಲ ನಾನ್ನಿಬಿ" ‖ ೩ ‖ ಈ ವರ್ಣಗಳನ್ನು ಜೋಡಿಸಿ ಓದುವ ಕ್ರಮವನ್ನು" ದೇವತಾ ರಥಗೋಮೂಕ(೮೪೬೨೭೩೫೧) ಇತಿಯೋವೇತ್ತಿನ ಕ್ರಮಂ | ನವ್ಯಾಕುಲಾಕ್ಷರೇಮೂಕೋ ದೇವತಾರಥಗೋಽಪಿಸನ್ ‖ ಎಂಬ ಕೆಲವು ಶ್ಲೋಕಗಳಿಂದ ಹೇಳಿದೆ. ಆ ಕ್ರಮದಿಂದ ವರ್ಣಗಳನ್ನು ಸೇರಿಸಿದರೆ ಶ್ಲೋಕಾಕ್ಷರಗಳ ಕ್ರಮವು ಈ ರೀತಿಯಾಗಿ ಏರ್ಪಡುವುದು :—"ಲಲಿತಾಯಾ ಸ್ತ್ರಿಭಿರ್ವರ್ಣೈಃ ಸಕಲಾರ್ಥೋಽಭಿಧೀಯತೇ | ಶೇಷೇಣದೇವೀರೂಪೇಣ ತೇನಸ್ಯಾದಿದವಿಾರಿತಂ ‖ ೧ ‖ ಅಶೇಷತೋಜಗತ್‌ಕೃತ್ಸ್ನಂ ಹೃಲ್ಲೇಖಾತ್ಮಕವಿಾರಿತಂ | ತಸ್ಯಾಶ್ಚಾರ್ಥಸ್ತುಕಥಿತಃ ಸರ್ವತಂತ್ರೇಷು ಗೋಪಿತಃ ‖ ೨ ‖ ವ್ಯೊಮ್ನಾಪ್ರಕಾಶಮಾನತ್ವಂ ಗ್ರಸಮಾನತ್ವಮಗ್ನಿನಾ | ತಯೋರ್ವಿಮರ್ಶ ಈಕಾರೋ ಬಿಂದುನಾತನ್ನಿಭಾಲನಂ ‖ ೩ ‖ ಇವುಗಳಲ್ಲಿ ಮೊದಲನೆಯ ಶ್ಲೋಕವು ಮಂತ್ರಸ್ಥವಾದ ತೃತೀಯ ಕೂಟದ ಸಕಲ ಎಂಬ ಮೂರು ವರ್ಣಗಳು ಸರ್ವ ವಸ್ತುಗಳನ್ನೂ, ಮಿಕ್ಕ ವರ್ಣಗಳು ದೇವಿಯನ್ನೂ ಬೋಧಿಸುವುದರಿಂದ

ಟೇ ವರ್ಣತ್ರಯಂ ಸರ್ವಾರ್ಥಕಂ. ತುರ್ಯಮಕ್ಷರಂ ದೇವ್ಯರ್ಥಕಂ. ತೇನಾಯಮರ್ಥಃ ಸಂಪನ್ನ ಇತಿ ಪ್ರಥಮ ಶ್ಲೋಕಸ್ಯಾರ್ಥಃ. ಸರ್ವಂಜಗದ್ದೇವೀರೂಪಮೇವೇತ್ಯರ್ಥಸ್ತಂತ್ರಾಂತರೇಷು ಗೋಪಿತ ಇತಿ ದ್ವಿತೀಯ ಶ್ಲೋಕಸ್ಯ. ಲಜ್ಜಾಬೀಜಸ್ಥೈಶ್ಚತುರ್ಭಿರಕ್ಷರೈರ್ಯತ್ಪ್ರಕಾಶಕಂ ಯಚ್ಚಗ್ರಸಿಷ್ಣು, ತಯೋರ್ಯತ್ಸಾಮರಸ್ಯಂ ತತ್ತಾದಾತ್ಮ್ಯಂ ದ್ವಿತೀಯೇ ಪ್ರತಿಪಾದ್ಯತ ಇತಿ ತೃತೀಯಸ್ಯ ಪ್ರಕಾಶಗ್ರಾಸಶಬ್ದೌ ತೂತ್ಪತ್ತಿ ಸಂಹಾರಯೋರ್ವಿದ್ಯಾಽವಿದ್ಯಯೋರ್ವಾ ವಾಚಕಾವಿತಿ. ಅಯಮಪ್ಯರ್ಥಃ "ಅತ್ಯಲ್ಪಮಿದಂ ಕಥಿತಂ" ಇತಿ ಶ್ಲೋಕೇ ಸೂಚಿತಃ. ಏವಂ ಚಾತ್ರ 'ಪುಟಧಾಮ—' ಇತಿ ಶ್ಲೋಕೇ ತ್ರಯೋದಶಾರ್ಥಾಃ ; ಗಾಯತ್ರ್ಯಾದಿ ಪಂಚದಶಾರ್ಥೇಷು ಭಾವಾರ್ಥಾಶ್ಚತ್ವಾರಃ ; ನಾಮಾರ್ಥಾಸ್ತ್ರಯಃ ; ಶಾಕ್ತಾರ್ಥೌ ದ್ವೌ ಕೌಲಿಕಾರ್ಥೇಽಪಿ ಗಣೇಶಾದಿ ರೂಪತ್ವಸ್ಯ ದೇವೀವಿದ್ಯಾಚಕ್ರಭೇದೇನ ತ್ರೈವಿಧ್ಯಂ, ಮಹಾವಾಕ್ಯಾರ್ಥೇಽಪಿ ದ್ವೈವಿಧ್ಯಮಿತಿ ಚತುರ್ದ

ಸಕಲವೂ ದೇವೀರೂಪವೆಂಬ ಮಂತ್ರಾರ್ಥವನ್ನು ಬೋಧಿಸುತ್ತದೆ. ದ್ವಿತೀಯ ಶ್ಲೋಕವು ಸರ್ವ ಜಗತ್ತು ದೇವೀ ರೂಪವಾದುದು ಎಂಬುದು ಸರ್ವತಂತ್ರಗಳಲ್ಲಿಯೂ ಗೋಪ್ಯವಾದ ಅರ್ಥವಾಗಿದೆ. ಎಂಬ ಅರ್ಥವನ್ನು ತೋರಿಸುತ್ತದೆ. ಹ್ರೀಂಕಾರದಲ್ಲಿರುವ ಹಕಾರರೇಫಗಳು ಪ್ರಕಾಶಕ-ಗ್ರಾಸಶೀಲಗಳೆಂಬ ಅರ್ಥಗಳನ್ನು ಕ್ರಮವಾಗಿ ಬೋಧಿಸುತ್ತವೆ. ಪ್ರಕಾಶವೆಂದರೆ ಉತ್ಪತ್ತಿ ಅಥವಾ ವಿದ್ಯೆಯೆಂದೂ, ಗ್ರಾಸವೆಂದರೆ ಸಂಹಾರ ಅಥವಾ ಅವಿದ್ಯೆಯೆಂದೂ ಇಟ್ಟುಕೊಳ್ಳಬೇಕು. ಈ ಪ್ರಕಾಶಕ-ಗ್ರಸಿಷ್ಣು ವಸ್ತುಗಳ ಸಾಮರಸ್ಯದ ತಾದಾತ್ಮ್ಯವನ್ನು ಈಕಾರದಿಂದ ಕೂಡಿದ ಬಿಂದುವು ಸೂಚಿಸುತ್ತದೆಯೆಂಬ ದ್ವಿತೀಯ ಶ್ಲೋಕಾರ್ಥದ ವಿವರಣೆಯನ್ನು ತೃತೀಯ ಶ್ಲೋಕವು ಬೋಧಿಸಿದೆ. ಈ ಅರ್ಥವೂ "ಅತ್ಯಲ್ಪಮಿದಂಕಥಿತಂ" ಎಂಬ ಶ್ಲೋಕದಲ್ಲಿ ಸೂಚಿಸಲ್ಪಟ್ಟಿದೆ. ಹೀಗೆ "ಪುಟಧಾಮ" ಎಂಬ ಶ್ಲೋಕದಲ್ಲಿ ಹೇಳಲ್ಪಟ್ಟ ಹದಿಮೂರು ಅರ್ಥಗಳು, ಗಾಯತ್ರ್ಯಾದಿ ಹದಿನೈದು ಅರ್ಥಗಳಲ್ಲಿ ಭಾವಾರ್ಥಗಳು ನಾಲ್ಕು, ನಾಮಾರ್ಥಗಳು ಮೂರು, ಶಾಕ್ತಾರ್ಥಗಳು ಎರಡು, ಕೌಲಿಕಾರ್ಥದಲ್ಲಿಯೂ ದೇವೀ, ವಿದ್ಯಾ, ಚಕ್ರಗಳೆಂಬ ಮೂರು ವಸ್ತುಗಳ ಐಕ್ಯದಿಂದ ಪ್ರತ್ಯೇಕವಾಗಿ ಗಣೇಶಾದಿ ರೂಪತ್ವವನ್ನು ಹೇಳಿದ್ದರಿಂದ ಆ ಅರ್ಥಗಳು ಮೂರು, ಮಹಾವಾಕ್ಯಾರ್ಥಗಳು ಎರಡು, ಮಿಕ್ಕ ಅರ್ಥಗಳು ಎರಡು ಒಟ್ಟು ಸೇರಿ ಮೂವತ್ತೇಳು ಮಂತ್ರಾರ್ಥಗಳು ಸಿದ್ಧವಾಗುವುವು. ನಾಮೈಕದೇಶಾರ್ಥಗಳು

ಶ; ಶೇಷಾ ದಶ ಇತಿ ಮಿಲಿತ್ವಾ ಸಪ್ತತ್ರಿಂಶದರ್ಥಾಃ. ನಾಮ್ನೈಕದೇಶಾರ್ಥೇऽತ್ವನಂತಾ ಭೇದಾ ಉಕ್ತಾಃ. ಏವಂ ಬಹುತಂತ್ರದ್ರಷ್ಟೃಭಿರನ್ಯೇऽಪ್ಯರ್ಥಾಃ ಸಂಗ್ರಾಹ್ಯಾಃ ॥ ೧೪೩-೧೪೪-೧೪೫-೧೪೬-೧೪೭ ॥

ಅನಂತಗಳಾಗಿವೆಯೆಂದು ಹೇಳಲ್ಪಟ್ಟಿವೆ. ತಂತ್ರಾಂತರಗಳನ್ನು ಹೆಚ್ಚಾಗಿ ಪರಿಶೀಲಿಸಿರುವವರ ದೃಷ್ಟಿಯಿಂದ ತೋರಿಬರುವ ಇನ್ನೂ ಇನೇಕ ಅರ್ಥಗಳನ್ನೂ ಸಂಗ್ರಹಿಸಬೇಕಾದುದು ಆವಶ್ಯಕವು ॥ ೧೪೩–೧೪೭ ॥

೨೪೮

ಶಕ್ತ್ಯಾ ಲಕ್ಷಣಯಾ ವಾ ಯೇ ಯೇಽರ್ಥಾ ದರ್ಶಿತಾ ಮನೋರಸ್ಯ ।
ತೇಷು ನ ಕೋಽಪಿ ವಿವಾದಃ ಪ್ರತ್ಯಕ್ಷೇಣೈವ ಸಿದ್ಧತ್ವಾತ್ ॥ ೧೪೮ ॥

ಮನೋರ್ಮಂತ್ರಸ್ಯ. ಪ್ರತ್ಯಕ್ಷೇಣೇತಿ. ಶಕ್ತಿಗ್ರಾಹಕವ್ಯಾಕರಣಕೋಶಾದೇಃ ಶಕ್ಯಸಂಬಂಧಸ್ಯ ಚ ಸ್ಫುಟಂ ಪ್ರದರ್ಶನಾದಿತಿ ಭಾವಃ ॥ ೧೪೮ ॥

ಈ ಮಂತ್ರಕ್ಕೆ ಇದುವರೆಗೆ ಶಕ್ತಿ ಅಥವಾ ಲಕ್ಷಣಾವೃತ್ತಿಗಳಿಂದ ಯಾವ ಯಾವ ಅರ್ಥಗಳು ಹೇಳಲ್ಪಟ್ಟವೆಯೋ ಶಕ್ತಿಗ್ರಾಹಕಗಳಾದ ವ್ಯಾಕರಣ-ಕೋಶಾದಿ ಪ್ರಮಾಣಗಳಿರುವುದರಿಂದಲೂ ಶಕ್ತಿಸಂಬಂಧದ ಮೂಲಕ ಲಕ್ಷಣಾವೃತ್ತಿಯು ತೋರಿಸಲ್ಪಟ್ಟಿರುವುದರಿಂದಲೂ ಮೇಲ್ಕಂಡ ಅರ್ಥಗಳಲ್ಲಿ ಯಾರೂ ವಿವಾದ ಮಾಡಲು ಅವಕಾಶವು ಇರುವುದಿಲ್ಲ ॥ ೧೪೮ ॥

೧೪೯

ಯೇ ಪುನರಿಹ ಭಾವಾರ್ಥಾದಯಃ ಷಡರ್ಥಾ ಮನೋರುಕ್ತಾಃ ।
ತೇಷು ಯದಿ ಶಕ್ತಿಭಕ್ತೀ ನ ಹಿ ಸಂಭವತಸ್ತದಾಽಪಿ ಕಾ ಹಾನಿಃ ॥ ೧೪೯ ॥

ಶಕ್ತಿಗ್ರಾಹಕ ವ್ಯಾಕರಣಾದ್ಯಭಾವಾನ್ನ ಶಕ್ತಿಃ; ಅತ ಏವ ಚ ನ ಶಕ್ಯಸಂಬಂಧರೂಪಾ ಭಕ್ತಿರಪಿ. ವ್ಯಕ್ತಿರೂಪಾ ತೃತೀಯಾ ವೃತ್ತಿರ್ಭವಿಷ್ಯತಿ; 'ವಕ್ತೃಬೋದ್ಧವ್ಯಕಾಕೂನಾಮನ್ಯಸನ್ನಿಧಿವಾಚ್ಯಯೋಃ. ಪ್ರಸ್ತಾವದೇಶಕಾಲಾದೇರ್ವೈಶಿಷ್ಟ್ಯಾತ್ಪ್ರತಿಭಾಜುಷಾಂ' ಇತ್ಯತ್ರಾದಿಪದೇನೋಪಾಸನಾಽಪಿ ಗೃಹೀಷ್ಯತ ಇತ್ಯಾಶಯೇನ ಸಮಾಧತ್ತೇ ಕಾ ಹಾನಿರಿತಿ ॥ ೧೪೯ ॥

ಭಾವಾರ್ಥ ವೊದಲಾದ ಯಾವ ಆರು ಅರ್ಥಗಳು ಮಂತ್ರಕ್ಕೆ ತೋರಿಸಲ್ಪಟ್ಟವೆಯೋ ಆ ಅರ್ಥಗಳಲ್ಲಿ ಮಂತ್ರಸ್ಥವಾದ ವರ್ಣಗಳಿಗೆ ಶಕ್ತಿಗ್ರಾಹಕ ಪ್ರಮಾಣಗಳಿಲ್ಲದುದರಿಂದ ಶಕ್ತಿಯೂ, ಶಕ್ತಿ ಮೂಲಕವಾದ ಲಕ್ಷಣಾಸಂಬಂಧವೂ ಇಲ್ಲ. ಆದರೂ ಕೂಡ ಮೂರನೆಯದಾಗಿ ವ್ಯಂಜನಾವೃತ್ತಿಯು ಇರುವುದರಿಂದ ಈ ವೃತ್ತಿಯು "ವಕ್ತೃಬೋದ್ಧವ್ಯಕಾಕೂನಾಂ ಅನ್ಯಸಂನಿಧಿವಾಚ್ಯಯೋಃ । ಪ್ರಸ್ತಾವದೇಶಕಾಲಾದೇರ್ವೈಶಿಷ್ಟ್ಯಾತ್ಪ್ರತಿಭಾಜುಷಾಂ ॥ ಎಂಬ ವಚನದಲ್ಲಿ ಆದಿ ಪದದಿಂದ ಸಂಗ್ರಾಹ್ಯವಾದ ಉಪಾಸನಾ ವೈಶಿಷ್ಟ್ಯದಿಂದ ಆ ಅರ್ಥಗಳನ್ನು ಬೋಧಿಸಬಹುದಾದ್ದರಿಂದ ಶಕ್ತಿಲಕ್ಷಣಾ ಸಂಬಂಧಗಳು ಇಲ್ಲದಿರುವುದರಿಂದ ಏನೂ ಹಾನಿಯಿಲ್ಲ ॥ ೧೪೯ ॥

೧೫೦

**ಆಸ್ತಾಮನ್ಯಾ ವೃತ್ತಿರ್ವಿಲಕ್ಷಣಾ ತದ್ಗ್ರಹಸ್ತು ಮನೋಃ ।
ಶಿವವಚನೇನ ಭವಿಷ್ಯತಿ ಯದ್ವೈಷಾ ಶಕ್ತಿರೇವಾಸ್ತು ॥ ೧೫೦ ॥
ಏತಸ್ಮಾದಯಮರ್ಥೋ ಬೋದ್ಧವ್ಯ ಇತೀಶ್ವರೇಚ್ಛಾತ್ವಾತ್ ॥**

ವ್ಯಂಜನಾಯಾ ಬಹುಭಿರನಂಗೀಕಾರಾದಾಹ—ಅನ್ಯಾ ಶಕ್ತಿಭಕ್ತಿ ವ್ಯಕ್ತಿಭ್ಯೋ ವಿಲಕ್ಷಣಾ ಶಕ್ತ್ಯಾದಿತ್ರಿತಯಪ್ರಕ್ರಿಯಾತೋ ವಿಲಕ್ಷಣಪ್ರಕ್ರಿಯಾಶಾಲಿನೀ. ಉಚ್ಛೃಂಖಲಸ್ಯ ಪಂಥಾನಂ ಪರಿತ್ಯಜ್ಯಾಹ—ಯದ್ವೇತಿ. ಶಿವೇನೈವಾಸ್ಯಾಯಮರ್ಥ ಇತಿ ಸ್ಪಷ್ಟಮುಕ್ತತ್ವಾದಿತಿ ಭಾವಃ ॥ ೧೫೦ ॥

ಅನೇಕ ತಾಂತ್ರಿಕರು ವ್ಯಂಜನಾವೃತ್ತಿಯನ್ನು ಒಪ್ಪಿರುವುದಿಲ್ಲ. ಅದರಂತೆ ಮಂತ್ರಶಾಸ್ತ್ರಜ್ಞರು ವ್ಯಂಜನಾವೃತ್ತಿಯನ್ನೊಪ್ಪದಿದ್ದರೂ ಕೂಡ ಈ ಮಂತ್ರಕ್ಕೆ ಹಿಂದೆ ಪ್ರತಿಪಾದಿಸಿರುವ ಅರ್ಥಗಳಲ್ಲಿ ಶಕ್ತಿ ಲಕ್ಷಣಾ ವ್ಯಂಜನಾ ವೃತ್ತಿಗಳಿಗಿಂತ ವಿಲಕ್ಷಣವಾದ ಪ್ರಕ್ರಿಯೆಯಿಂದ ಕೂಡಿದ ಅತಿರಿಕ್ತವಾದ ವೃತ್ತಿಯೇ ಇರಬಹುದು. ಈ ವೃತ್ತಿಯ ಜ್ಞಾನವು ಶಿವವಚನವೆಂಬ ಆಪ್ತೋಪದೇಶ ಪ್ರಮಾಣದಿಂದಲೇ ಹುಟ್ಟುವುದು. ಅಥವಾ ಈ ಶಬ್ದ ಅರ್ಥಗಳ ಸಂಬಂಧವು ಶಕ್ತಿರೂಪವೇ ಆಗಿರಬಹುದು. ಶಿವನೇ ಪ್ರತ್ಯಕ್ಷವಾಗಿ ಈ ರೀತಿಯಾಗಿ ಮಂತ್ರಾರ್ಥವನ್ನು ವಿವರಿಸಿರುವುದರಿಂದ ಈ ಪದದಿಂದ ಇಂತಹ ಅರ್ಥವನ್ನು ತಿಳಿಯಬೇಕು ಎಂಬ ಈಶ್ವರೇಚ್ಛೆಯು ಇರಬೇಕಾದುದಾವಶ್ಯಕವಾಗಿರುವುದರಿಂದ ಅದೇ ಶಕ್ತಿರೂಪವಾಗುವುದು || ೧೫೦ ||

೧೫೧-೧೫೨

ಪ್ರತಿಪದಮರ್ಥವಿಶೇಷಾ ಜ್ಞಾನೇಽಪ್ಯಾಸ್ತಾಮಖಂಡವಾಕ್ಯಸ್ಯ ॥ ೧೫೧ ॥
ಅರ್ಥೋಽಪ್ಯಖಂಡರೂಪೋ ವಿಶಿಷ್ಟಮತಿರಿಕ್ತಮಿತಿ ಹಿ ಸಿದ್ಧಾನ್ತಃ ॥
ಆಸೇಚನಕವ್ಯಾಪ್ತ್ಯಾದಿಪದವದಾಸ್ತಾಂ ಪದತ್ವಮಪಿ ॥ ೧೫೨ ॥

ಇದಂ ಪದಮಿಮಮರ್ಥಂ ಬೋಧಯತ್ವಿತೀಚ್ಛಾಯಾಮರ್ಥಬೋಧಜನಕತ್ವನಿಷ್ಠಪ್ರಕಾರತಾನಿರೂಪಿತವಿಶೇಷ್ಯತಾಶಾಲಿತ್ವೇನ ಪದಸ್ಯಾಪಿ ವಿಷಯತ್ವಾತ್ಪ್ರಕೃತೇ ಪ್ರತಿಪದಮರ್ಥಾನುಕ್ತೇಃ ಕಥಂ ಶಕ್ತಿರಿತಿಚೇನ್ನ; ಇದಂ ವಾಕ್ಯಮಿಮಮಖಂಡಾರ್ಥಂ ಬೋಧಯತ್ವಿತ್ಯಾಕಾರಿಕಾಯಾ ಏವೇಚ್ಛಾಯಾಃ ಕಲ್ಪನಾತ್. ವಾಕ್ಯಸ್ಯಾಖಂಡತ್ವಂ ವೈಯಾಕರಣಾನಾಮಿಷ್ಟಮೇವ. ಅರ್ಥಸ್ಯಾಖಂಡತ್ವಂ 'ಪ್ರಕೃಷ್ಟಪ್ರಕಾಶಶ್ಚಂ

ಈಶ್ವರೇಚ್ಛೆಯು "ಈ ಪದವು ಇಂತಹ ಅರ್ಥವನ್ನು ಬೋಧಿಸಲಿ" ಎಂಬ ಸ್ವರೂಪವುಳ್ಳದ್ದಾಗಿ ಅಂಗೀಕರಿಸಲ್ಪಟ್ಟಿದೆ. ಪ್ರಕೃತ ಮಂತ್ರಾರ್ಥದ ವಿಷಯದಲ್ಲಿ ಶಿವೋಪದೇಶವು ಪ್ರತಿಪದಕ್ಕೂ ಅರ್ಥವನ್ನು ಬೋಧಿಸಿರುವುದಿಲ್ಲ. ಪ್ರತಿಪದಕ್ಕೂ ಇಚ್ಛಾರೂಪವಾದ ಶಕ್ತಿಯು ಸಿದ್ಧಿಸಲಾರದು. ಆದರೂ ವಿಶಿಷ್ಟ ವಾಕ್ಯದಲ್ಲಿಯೇ "ಈ ವಾಕ್ಯವು ಈ ವಿಶಿಷ್ಟಾರ್ಥವನ್ನು ಬೋಧಿಸಲಿ" ಎಂಬುದಾಗಿ ವಿಶಿಷ್ಟಾರ್ಥವನ್ನು ಕೊಡುವ ಶಕ್ತಿಯನ್ನು ಕಲ್ಪಿಸಲು ಯಾವ ಅಡ್ಡಿಯೂ ಇಲ್ಲ. ವಾಕ್ಯವು ಅಖಂಡವಾಗಿದೆಯೆಂಬುದನ್ನು ವೈಯಾಕರಣರೂ ಅರ್ಥವು ಅಖಂಡವಾಗಿರಬಹುದೆಂಬುದನ್ನು "ಪ್ರಕೃಷ್ಟಪ್ರಕಾಶಶ್ಚಂದ್ರಃ" (ಅಧಿಕ ಪ್ರಕಾಶವುಳ್ಳವನೇ ಚಂದ್ರನು) ಎಂಬ ವಾಕ್ಯವನ್ನು ಉದಾಹರಿಸಿರುವ ವೇದಾಂತಿಗಳೂ ಅಂಗೀಕರಿಸಿರುವರು. ಈ ಸಿದ್ಧಾಂತವು ವಿಶಿಷ್ಟವು ಅತಿರಿಕ್ತವೆಂಬ ಪ್ರಕ್ರಿಯೆಯನ್ನು ಅವಲಂಬಿಸಿರುತ್ತದೆ. ಒಟ್ಟಿನಲ್ಲಿ ಪ್ರತಿಪದಕ್ಕೂ ಅರ್ಥವಿವೇಕವು ಸಂಭವಿಸುವ ಕಡೆಯಲ್ಲಿ ಸಾಮಾನ್ಯವಾಗಿ ಶಬ್ದ-ಅರ್ಥಗಳಿಗೆ ವಾಚ್ಯವಾಚಕಭಾವ ಸಂಬಂಧವೂ ಅದಿಲ್ಲದ ಕಡೆಯಲ್ಲಿ ಅಖಂಡವಾಕ್ಯರೂಪವಾದ ಪದ-ತದರ್ಥಗಳಿಗೆ ವಾಚ್ಯವಾಚಕಭಾವ ಸಂಬಂಧವೂ ಬರಬಹುದೆಂದು ತಿಳಿಯಬಹುದು. ಸಂಪೂರ್ಣ ವಾಕ್ಯವನ್ನೇ ಒಂದು ಪದವನ್ನಾಗಿ ಭಾವಿಸಬೇಕೆಂದು ತಾತ್ಪರ್ಯವು. ಆದರೆ ಒಂದು ಪದವು ಮಿಳಿತವಾದ ಬಹು ಅರ್ಥಗಳನ್ನು ಬೋಧಿಸಲಾರದೆಂದು ಶಂಕಿಸಬಾರದು.

ದ್ರಃ ' ಇತ್ಯಾದಿವಾಕ್ಯಾರ್ಥಂ ವರ್ಣಯತಾಮೌಪನಿಷದಾನಾಮಿಷ್ಟಮೇವ. ತಚ್ಚ ವಿಚಾರ್ಯಮಾಣೇ ವಿಶಿಷ್ಟಸ್ಯಾತಿರಿಕ್ತತ್ವ ಏವ ಪರ್ಯವಸ್ಯತಿ. ತಥಾ ಚ ಯತ್ರ ಪ್ರತಿಪದಮರ್ಥವಿವೇಕಸ್ತತ್ರೇಯಂ ರೀತಿಃ ; ಯತ್ರ ಯತ್ರ ನ ಸ ತತ್ರ ಸಂಪೂರ್ಣಸ್ಯೈಕಪದತ್ವಮೇವಾಸ್ತು. ನ ಚೈಕಸ್ಯ ಪದಸ್ಯ ವಿಶಿಷ್ಟಬಹ್ವರ್ಥವಾಚಕತ್ವ ಮದೃಷ್ಟಮಿತಿ ವಾಚ್ಯಂ. ಘಟತ್ವಘಟಸಮವಾಯಾನಾಂ ಘಟಪದವಾಚ್ಯತ್ವಾತ್. ' ತದಾಸೇಚನಕಂ ತೃಪ್ತೇರ್ನಾಸ್ತ್ಯಂತೋ ಯಸ್ಯ ದರ್ಶನಾತ್ ' ಇತಿ ಕೋಶಾತ್, ಹೇತುಸಮಾನಾಧಿಕರಣಾತ್ಯಂತಾಭಾವಾಪ್ರತಿಯೋಗಿಸಾಧ್ಯಸಾಮಾಧಿಕರಣ್ಯಸ್ಯ-ವ್ಯಾಪ್ತಿಪದಾರ್ಥತ್ವಾಚ್ಚೇತ್ಯಾಹ—ಆಸೇಚನಕೇತಿ. ಆದಿನೋಪಾಧಿಪರಿಗ್ರಹಃ. ತೇನೇಶ್ವರೇಚ್ಛಾಯಾಂ ಪದಸ್ಯೈವ ವಿಶೇಷ್ಯತ್ವೇಽಪಿ ನ ಪ್ರಕೃತನಿರ್ವಾಹಾಯ ವಿಲಕ್ಷಣೇಚ್ಛಾಕಲ್ಪನಾಽಽಪತ್ತಿಃ ‖ ೧೫೧-೧೫೨ ‖

ಘಟತ್ವಜಾತಿ, ಘಟವ್ಯಕ್ತಿ, ಅವುಗಳ ಸಮವಾಯಸಂಬಂಧ ಇವುಗಳನ್ನು ಒಂದೇ ಘಟಪದವು ಬೋಧಿಸುವಂತೆಯೂ "ತದಾಸೇಚನಕಂತೃಪ್ತೇರ್ನಾಸ್ತ್ಯಂತೋ ಯಸ್ಯದರ್ಶನಾತ್" ಎಂಬ ಕೋಶಾನುಸಾರವಾಗಿ ಎಷ್ಟು ನೋಡಿದರೂ ತೃಪ್ತಿಯುಂಟಾಗದೇ ಇನ್ನೂ ನೋಡಬೇಕೆಂದೆನಿಸುವ ವಸ್ತುವೆಂಬ ವಿಶಿಷ್ಟಾರ್ಥವನ್ನು ಆಸೇಚನಕವೆಂಬ ಪದವು ಬೋಧಿಸುವಂತೆಯೂ, "ಹೇತುಸಮಾನಾಧಿಕರಣಾತ್ಯಂತಾಭಾವಾ ಪ್ರತಿಯೋಗಿಸಾಧ್ಯಸಾಮಾನಾಧಿಕರಣ್ಯಂ" ಹೇತುವು ಇರುವ ಕಡೆಯಲ್ಲಿ ತಪ್ಪದೇ ಜೊತೆಯಲ್ಲೇ ಇರುವ ಸಾಧ್ಯದ ಆಧಾರದಲ್ಲೆಲ್ಲ ಇರುವಿಕೆಯೆಂಬ ಬಹ್ವರ್ಥಗರ್ಭಿತವಾದ ವಿಶಿಷ್ಟಾರ್ಥವನ್ನು ವ್ಯಾಪ್ತಿಪದವು ಬೋಧಿಸುವಂತೆಯೂ ಮಂತ್ರರೂಪ ವಿಶಿಷ್ಟವಾಕ್ಯವೆಂಬ ಪದವು ಬಹ್ವರ್ಥಗಳಿಂದ ಕೂಡಿದ ವಿಶಿಷ್ಟಾರ್ಥವನ್ನು ಬೋಧಿಸಬಲ್ಲದು. ಆಸೇಚನಕ, ವ್ಯಾಪ್ತಿ ಮುಂತಾದ ಪದಗಳಂತೆ ಆದಿಪದದಿಂದ "ಉಪಾಧಿ" ಎಂಬ ಪದವನ್ನೂ ಇದಕ್ಕೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಆ ಪದವು ಸಾಧ್ಯಕ್ಕೆ ವ್ಯಾಪಕವೂ, ಸಾಧನಕ್ಕೆ ಅವ್ಯಾಪಕವೂ ಆಗಿರುವ ವಸ್ತುವೆಂಬ ವಿಶಿಷ್ಟಾರ್ಥವನ್ನೇ ಬೋಧಿಸುತ್ತದೆ. ಈ ವ್ಯಾಖ್ಯಾನದಿಂದ ಸಾಮಾನ್ಯವಾದ ಇಚ್ಛಾಸ್ವರೂಪದಲ್ಲಿ ಪದವು ವಿಶೇಷ್ಯವಾಗಿರುವಂತೆ ಈ ಇಚ್ಛೆಯಲ್ಲಿಯೂ ವಾಕ್ಯರೂಪವಾದ ಪದವೇ ವಿಶೇಷ್ಯವೆಂದು ಸಮರ್ಥಿಸಿರುವುದರಿಂದ ವೈಲಕ್ಷಣ್ಯವನ್ನು ಯಾವ ಅಂಶದಲ್ಲಿಯೂ ಒಪ್ಪಿದಂತಾಗುವುದಿಲ್ಲ ‖ ೧೫೧-೧೫೨ ‖

೧೫೩-೧೫೪

ಏಕಸ್ಯಾನೇಕಾರ್ಥಾ ದೃಷ್ಟ್ವಾ ಹರಿಸೈಂಧವಾದಿಷು ಪದೇಷು ।
ಅನ್ಯತಮೈಕಾವಗತಾ ಪ್ರಕರಣತಾತ್ಪರ್ಯಯೋರ್ವಿಶೇಷಕತಾ ॥ ೧೫೩ ॥
ಪ್ರಕೃತೇ ತು ಸರ್ವಬೋಧಸ್ಯೇಷ್ಟತ್ವಾನ್ನೋ ವಿಶೇಷಕಾಕಾಂಕ್ಷಾ ।
ಅಥವಾ ಸಕಲಾರ್ಥೇಷ್ವಪಿ ಶಕ್ತ್ಯೈಕ್ಯಂ ಪುಷ್ಪವಂತಪದವದಿಹ ॥ ೧೫೪ ॥

ನನ್ವಸ್ಯ ಪದಸ್ಯೈಽನೇಕಾರ್ಥತ್ವಂ ದೋಷ ಇತ್ಯತ ಆಹ—ಅನೇಕಾರ್ಥತಾಯಾಃ ಪ್ರಮಾಣಬಲಾಯಾತತ್ವಾದದೋಷತ್ವಂ. ಸರ್ವತ್ರಾನೇಕಾರ್ಥಸ್ಥಲೇಽನ್ಯತಮಸ್ಯೈಕಸ್ಯೈವ ಬೋಧನಾರ್ಥಂ ಪ್ರಕರಣಾದಿಜ್ಞಾನಸ್ಯ ಕಾರಣತ್ವಾದಿಕಲ್ಪನದೋಷಃ. ಪ್ರಕೃತೇ ತು ತದಭಾವ ಇತ್ಯಾಹ—ಅನ್ಯತಮೇತ್ಯಾದಿನಾ. ಅಥ ವಾ ಈಶ್ವರೇಚ್ಛಾವಿಷಯಿಾಭೂತಬೋಧೀಯವಿಶೇಷ್ಯತಾ ಯಥಾ ಸೂರ್ಯಾಚಂದ್ರಮಸೋಃ ಪರ್ಯಾಪ್ತೈಕೈವ ಸ್ವೀಕ್ರಿಯತ ಇತಿ ನ ತತ್ರ ಪುಷ್ಪವಂತ ಪದೇ ಶಕ್ತ್ಯನೇಕತ್ವಂ, ತದ್ವದಿಹಾಪ್ಯಸ್ತ್ವಿತ್ಯಾಹ—ಅಥ ವೇತಿ ॥ ೧೫೩-೧೫೪ ॥

ಅನೇಕಾರ್ಥಗಳನ್ನು ಒಪ್ಪಬೇಕಾಗಿ ಪ್ರಮಾಣಗಳಿದ್ದಲ್ಲಿ ಒಂದೇ ಪದಕ್ಕೆ ಅನೇಕಾರ್ಥಗಳನ್ನು ಅಂಗೀಕರಿಸುವುದು ದೋಷವಲ್ಲ. ಆದ್ದರಿಂದ ಹರಿ ಪದಕ್ಕೆ ವಿಷ್ಣು, ಸೂರ್ಯ, ಕಪಿ ಮುಂತಾದ ಅನೇಕಾರ್ಥಗಳನ್ನೂ, ಸೈಂಧವ ಪದಕ್ಕೆ ಕುದುರೆ, ಉಪ್ಪು ಎಂಬ ಅನೇಕಾರ್ಥಗಳನ್ನೂ ಅಂಗೀಕರಿಸಿರುವರು. ಆದರೆ ಹರಿ-ಸೈಂಧವಾದಿ ಪದಗಳಲ್ಲಿ ಒಂದೊಂದುಕಡೆ ಒಂದೊಂದೇ ಅರ್ಥವನ್ನು ಪರಿಗ್ರಹಿಸಿ ಮತ್ತೊಂದು ಅರ್ಥವನ್ನು ಬಿಡಲು ಗ್ರಾಹ್ಯಾರ್ಥವನ್ನು ಗೊತ್ತುಮಾಡುವ ಪ್ರಕರಣಾದಿ ತಾತ್ಪರ್ಯಗ್ರಾಹಕಗಳನ್ನಾಶ್ರಯಿಸಬೇಕಾಗುವುದು. ಪ್ರಕೃತದಲ್ಲಿ ಎಲ್ಲ ಅರ್ಥಗಳನ್ನೂ ಸಂಗ್ರಹಿಸುವುದೇ ಇಷ್ಟವಾದ್ದರಿಂದ ತಾತ್ಪರ್ಯ ನಿರ್ಣಾಯಕಗಳ ಅನ್ವೇಷಣಮಾಡಬೇಕಾದ ಶ್ರಮವು ಇಲ್ಲ. ಅಥವಾ ಪುಷ್ಪವಂತ ಪದದಿಂದ ಸೂರ್ಯ-ಚಂದ್ರರು ಬೋಧ್ಯರಾಗಲಿ ಎಂಬ ಇಚ್ಛಾಸ್ವರೂಪವಾದ ಶಕ್ತಿಯ ಗ್ರಹದಲ್ಲಿ ಸೂರ್ಯಚಂದ್ರರೆಂಬ ವ್ಯಕ್ತಿದ್ವಯದಲ್ಲಿಯೂ ಸೇರಿ ಒಂದೇ ವಿಶೇಷ್ಯತೆಯಿರುವುದರಿಂದ ಪುಷ್ಪದಂತ ಪದಕ್ಕೆ ಸೂರ್ಯಚಂದ್ರರಲ್ಲಿ ಒಂದೇ ಶಕ್ತಿಯು ಇರುವಂತೆಯೇ ಪ್ರಕೃತಮಂತ್ರಕ್ಕೆ ಸಕಲಾರ್ಥಗಳಲ್ಲಿಯೂ ಸೇರಿ ಒಂದೇ ಶಕ್ತಿ ವಿಶೇಷ್ಯತೆಯಿರುವುದರಿಂದ ಪ್ರಕೃತ ಮಂತ್ರಕ್ಕೆ ಸಕಲಾರ್ಥಗಳಲ್ಲಿಯೂ ಸೇರಿ ಒಂದೇ ಶಕ್ತಿಯನ್ನು ಸ್ವೀಕರಿಸಬಹುದು || ೧೫೩-೧೫೪ ||

೧೫೫

ಯತ್ರ ಪ್ರತಿಪದಮರ್ಥಸ್ಸ್ಯಾನ್ಮಂತ್ರಸ್ಯಾಸ್ತು ವಾಕ್ಯತ್ವಮ್ ।
ಕ್ವಚನಾವಾಂತರವಾಕ್ಯಂ ಸಮಾಸವಾಕ್ಯಂ ಮಹಾವಾಕ್ಯಮ್ ॥ ೧೫೫ ॥

ಯತ್ರ ಗಾಯತ್ರ್ಯರ್ಥನಾಮಾರ್ಥಾದಿಷು. ಅವಾಂತರವಾಕ್ಯಂ ಸಗುಣಾರ್ಥಾವಯವಾರ್ಥಾದೌ. ಅವಾಂತರವಾಕ್ಯತ್ವಂ ನಾಮ ವಾಕ್ಯಸಮೂಹಭಿನ್ನತ್ವೇ ಸತಿ ಪದಸಮೂಹತ್ವಮೇವ, ನ ಪುನರ್ಮಹಾವಾಕ್ಯೌಪಾಧಿಕತ್ವರೂಪಂ ಪ್ರಕೃತೇ. ಸಮಾಸವಾಕ್ಯಂ ಸಮಸ್ತಾರ್ಥೇ. ಮಹಾವಾಕ್ಯಂ ಚರಮೇಽರ್ಥೇ ॥ ೧೫೫ ॥

ಹಿಂದೆ ಹೇಳಿರುವ ಅರ್ಥಗಳಲ್ಲಿ ನಾಮಾರ್ಥಗಾಯತ್ರ್ಯರ್ಥಗಳಲ್ಲಿ ಪ್ರತಿಪದಕ್ಕೂ ಅರ್ಥವಿರುವುದರಿಂದ ಆ ದೃಷ್ಟಿಯಿಂದ ಮಂತ್ರವು ವಾಕ್ಯವೆನಿಸುವುದು. ಅವಯವಾರ್ಥಗಳ ದೃಷ್ಟಿಯಿಂದ ಅವಾಂತರವಾಕ್ಯವೆನಿಸುವುದು. ಅವಾಂತರವಾಕ್ಯವೆಂದರೆ ಪ್ರಕೃತದಲ್ಲಿ ವಾಕ್ಯಸಮೂಹವಲ್ಲದೇ ಇರುವ ಅನೇಕ ಪದಸಮೂಹವೆಂದು ಅರ್ಥವನ್ನಿಟ್ಟುಕೊಳ್ಳಬೇಕು. ಮಹಾ ವಾಕ್ಯಾರ್ಥಬೋಧಕ್ಕೆ ದ್ವಾರಭೂತವಾದ ಅರ್ಥವನ್ನು ಸಮರ್ಪಿಸುವುದೆಂಬ ಅರ್ಥವು ಇಲ್ಲಿ ಉಪಯುಕ್ತವಾಗುವುದಿಲ್ಲ. ಸಮಾಸ್ತಾರ್ಥದ ದೃಷ್ಟಿಯಿಂದ ಸಮಾಸವಾಕ್ಯವೆನಿಸುವುದು. ಕಡೆಯಲ್ಲಿ ಹೇಳಿರುವ ಅರ್ಥದ ದೃಷ್ಟಿಯಿಂದ ಮಹಾ ವಾಕ್ಯವೆನಿಸುವುದು ॥ ೧೫೫ ॥

೧೫೬–೧೫೭

ಏಕಸ್ಯಾನೇಕಾರ್ಥೇ ವಿನಿಯೋಗಾದರ್ಥಬಾಹುಲ್ಯಮ್ ।
ವೇದೇ ಬಹುಶಃ ಸ್ವೀಕೃತಮತ್ರ ತ್ವೇಕತ್ರ ವಿನಿಯೋಗಾತ್ ॥ ೧೫೬ ॥
ಅಖಿಲಾರ್ಥಬೋಧನಿಯಮೋ ನಿಯಮಾದೃಷ್ಟಂ ಪ್ರಕಲ್ಪಯತಿ ।
ಸಿದ್ಧೇ ಪ್ರಮಾಣದಾರ್ಢ್ಯೇ ಸಕಲಂ ಕಲ್ಪ್ಯಂ ಹಿ ತದವಿರೋಧಾತ್ ॥ ೧೫೭ ॥

ಪದಪಕ್ಷೇಽನೇಕಾರ್ಥತಾದೋಷಪರಿಹಾರವದ್ವಾಕ್ಯಪಕ್ಷೇಽಪಿ ಸಂಭವತಿ. ಪುರುಷಸೂಕ್ತಸ್ಯ ತತ್ತದ್ದೇವತಾಪೂಜಾಯಾಂ ವಿನಿಯೋಗೇ ನಾನೇಕಾರ್ಥತ್ವಸ್ಯೇಷ್ಟತ್ವಾತ್. ಇಯಾಂಸ್ತು ವಿಶೇಷಃ—ತತ್ತತ್ಪೂಜಾಯಾಂ ತಸ್ಯ ತಸ್ಯೈವಾರ್ಥಸ್ಯ ಸ್ಮರಣಂ ಪುರುಷಸೂಕ್ತೇ; ಪ್ರಕೃತೇ ತು ಸರ್ವೇಷಾಮರ್ಥಾನಾಂ ಸ್ಮರಣೇನೈವಾದೃಷ್ಟೋತ್ಪತ್ತಿರಿತಿ ಭಾವಃ ॥೧೫೬-೧೫೭ ॥

ಪದಪಕ್ಷದಲ್ಲಿ ಅನೇಕಾರ್ಥತಾದೋಷವನ್ನು ಪರಿಹರಿಸಿದಂತೆ ವಾಕ್ಯಪಕ್ಷದಲ್ಲಿಯೂ ಪರಿಹರಿಸಬೇಕು. ಒಂದೇ ಮಂತ್ರವು ಅನೇಕ ಕಾರ್ಯಗಳಲ್ಲಿ ವಿನಿಯೋಗವನ್ನು ಹೊಂದಿರುವುದರಿಂದ ಅನೇಕಾರ್ಥಗಳನ್ನು ಹೊಂದಿಯೇ ಇದೆ. ಇದು ವೇದ ಮಂತ್ರಗಳಲ್ಲಿ ಹೆಚ್ಚಾಗಿ ಅಂಗೀಕೃತವಾಗಿದೆ. ಪುರುಷ ಸೂಕ್ತವು ಪ್ರಸಕ್ತವಾಗುವ ಆಯಾಯ ದೇವತೆಗಳ ಪೂಜೆಯಲ್ಲಿ ವಿನಿಯುಕ್ತವಾಗಿದೆ. ಆದ್ದರಿಂದ ಆಯಾಯ ಸಮಸ್ತ ದೇವತಾಪರವಾಗುವಂತೆ ಅರ್ಥ ಬಾಹುಲ್ಯವನ್ನು ಹೊಂದಿರುವುದು ಆವಶ್ಯಕವು. ಆದರೆ ಆಯಾಯ ದೇವತೆಯ ಪೂಜೆಯಲ್ಲಿ ಆಯಾಯ ಅರ್ಥವನ್ನು ಸ್ಮರಿಸಿದರೆ ಸಾಕಾಗುವುದು. ಈ ವಿದ್ಯಾ ಉಪಾಸನೆಯಲ್ಲಿ ಸರ್ವಾರ್ಥಗಳನ್ನೂ ತಿಳಿಯಲೇ ಬೇಕೆಂದು ನಿಯಮವು ವಿಹಿತವಾಗಿದೆ. ಈ ನಿಯಮವನ್ನು ಪರಿಪಾಲಿಸಿದರೆ ನಿಯಮಾದೃಷ್ಟವು ಹುಟ್ಟಿ ತನ್ಮೂಲಕವಾಗಿ ಪ್ರಾಪ್ತವ್ಯವಾದ ಪುರುಷಾರ್ಥಗಳು ಲಭಿಸುವುವು. ಪ್ರಬಲವಾದ ಪ್ರಮಾಣವಿದ್ದ ಮೇಲೆ ತನ್ಮೂಲಕವಾಗಿ ಅದಕ್ಕೆ ವಿರೋಧ ಬಾರದಂತೆ ಒದಗುವ ಸಕಲ ಪ್ರಕ್ರಿಯೆಗಳನ್ನೂ ಕಲ್ಪಿಸಲೇಬೇಕು. ಆ ಕಲ್ಪನೆಯು ದೋಷವಾಗಲಾರದು ॥ ೧೫೬–೧೫೭ ||

೧೫೮

ಯಾಗಸ್ಯ ಸ್ವರ್ಗಂ ಪ್ರತಿ ಸಂಸಿದ್ಧೇ ಹೇತುಹೇತುಮದ್ಭಾವೇ।
ತದನುಪಪತ್ತಿಂ ನಿರಸಿತುಮಲೌಕಿಕಾಪೂರ್ವಮಪಿ ಕ್ಲೃಪ್ತಮ್ ॥ ೧೫೮ ॥

ಸಿದ್ಧೇ ಪ್ರಮಾಣದಾರ್ಢ್ಯ ಇತ್ಯತ್ರ ದೃಷ್ಟಾಂತಮಾಹ—"ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ" ಇತ್ಯತ್ರ ತೃತೀಯಾಶ್ರುತ್ಯಾ ಯಾಗಸ್ಯ ಜನಕತ್ವೇ ಕಾಮ್ಯಮಾನತಯಾ ಸ್ವರ್ಗಸ್ಯ ಜನ್ಯತ್ವೇ ಚ ಬೋಧಿತೇಽಪಿ ಭಿನ್ನಕಾಲೀನಯೋಸ್ತದಯೋಗಾದ್ದೇವತಾಪ್ರಸಾದಯಾಗಧ್ವಂಸಾದಿನಾಽತ್ರ ನಿರ್ವಾಹಾಭಾವಾದಪೂರ್ವೇಣೈವಾನುಪಪತ್ತಿನಿರಾಸ ಇತ್ಯಾದಿ ತಂತ್ರಾಂತರೇಷು ವಿಸ್ತರಃ ॥ ೧೫೮ ॥

ಪ್ರಮಾಣಾಧೀನವಾದ ಕಲ್ಪನೆಯು ದೋಷವಲ್ಲವೆಂಬುದನ್ನು ದೃಷ್ಟಾಂತದಿಂದ ಸ್ಥಾಪಿಸಲು ಈ ಪದ್ಯವು ಹೊರಟಿರುವುದು. "ಜ್ಯೋತಿಷ್ಟೋಮೇನ ಸ್ವರ್ಗಕಾಮೋಯಜೇತ" ಎಂಬ ವಾಕ್ಯದಲ್ಲಿ ಜ್ಯೋತಿಷ್ಟೋಮೇನ ಎಂದು ತೃತೀಯಾ ವಿಭಕ್ತಿ ಸಹಿತವಾದ ಪದವಿರುವುದರಿಂದ ತೃತೀಯಾ ಶ್ರುತಿಯೆಂಬ ಪ್ರಮಾಣದಿಂದ ಯಾಗವುಕಾರಣವೆಂದೂ, ಸರ್ವರಿಂದಲೂ ಕಾಮಿಸಲ್ಪಡುವ ಸ್ವರ್ಗವು ಅದಕ್ಕೆ ಕಾರ್ಯವೆಂದೂ ತಿಳಿಸಲ್ಪಡುವುವು. ಆದರೆ ಅನುಷ್ಠಾನ ಕಾಲದಲ್ಲಿಯೇ ಸಮಾಪ್ತಿ ಹೊಂದಿ ನಾಶಹೊಂದಿರುವ ಯಾಗವು ಕಾಲಾಂತರದಲ್ಲಿ ಬರುವ ಸ್ವರ್ಗಕ್ಕೆ ಕಾರಣವಾಗದಿರುವುದರಿಂದಲೂ ದೇವತಾ ಪ್ರೀತಿ, ಯಾಗ ಧ್ವಂಸಾದಿಗಳಿಂದ ಶಂಕಾನಿವೃತ್ತಿಯ ನಿರ್ವಾಹವಾಗದಿರುವುದರಿಂದಲೂ ಈ ಅನುಪಪತ್ತಿಯನ್ನು ಪರಿಹಾರ ಮಾಡಲು ಇತರ ಪ್ರಮಾಣಗಳಿಗೆ ಗೋಚರವಾಗದಿರುವ ಅದೃಷ್ಟವೆಂಬ ವ್ಯಾಪಾರವನ್ನು ಮೀಮಾಂಸಕರು ಕಲ್ಪಿಸಿರುವುದು ತಂತ್ರಾಂತರದಲ್ಲಿ ಪ್ರಸಿದ್ಧವಾಗಿದೆ. ಈ ವಿಷಯವು ಆ ತಂತ್ರದಲ್ಲಿಯೇ ವಿಸ್ತಾರವಾಗಿ ಹೇಳಲ್ಪಟ್ಟಿದೆ ॥ ೧೫೮ ॥

೧೫೯

ವಿದ್ಯಾವರ್ಣೋಯತ್ನೋದ್ಧಾರಃ ಕಾಲಸ್ತದುಚ್ಚಾರಃ ।
ಉತ್ಪತ್ತಿಸ್ಥಾನಂ ತದ್ಯತ್ನೋ ರೂಪಂ ಸ್ಥಿತಿಸ್ಥಾನಮ್ ।
ಆಕಾರಃ ಸ್ವಂ ರೂಪಂ ವಿಭಾವ್ಯಮರ್ಥೋಽಂತರಂಗಾಣಿ ॥

ಅಸ್ಮಿನ್ಪ್ರಕರಣೇ ಪೂರ್ವಂ ವರ್ಣಿತಾನ್ಪಂಚದಶಾರ್ಥಾನ್ ಸಂಗೃಹ್ಯಾನುವದತಿ—ವಿದ್ಯಾಯಾಂ ವರ್ಣೋಯತ್ರಾಽಷ್ಟಪಂಚಾಶದ್ವರ್ಣರೂಪಾ ವರ್ಣಸಂಖ್ಯಾ. ಉದ್ಧಾರಃ "ಕ್ರೋಧೀಶಃ ಶ್ರೀಕಂಠಾರೂಢ" ಇತ್ಯಾದಿನೋಕ್ತಃ. ಕಾಲಸ್ತ್ರಿಲವೋನೈಕತ್ರಿಂಶನ್ಮಾತ್ರಾಽಽತ್ಮಕೋ ವಿದ್ಯಾಯಾಃ, ಏಕಲವೋನಾ ಊನತ್ರಿಂಶನ್ಮಾತ್ರಾ ಉಚ್ಚಾರಣಸ್ಯ. ಉಚ್ಚಾರಣಂ 'ಇತ್ಯೇವಂ ವರ್ಣಾನಾಂ' ಇತ್ಯಾದಿಸಾರ್ಧಶ್ಲೋಕತ್ರಯೇಣೋಕ್ತಂ. ಉತ್ಪತ್ತಿಸ್ಥಾನಂ 'ಕಂಠೇ ಚ ಕಂಠತಾಲುನಿ' ಇತ್ಯತ್ರೋಕ್ತಂ. ಯತ್ನೋ ಬಾಹ್ಯಶ್ಚಾಂತರಶ್ಚ. ರೂಪಾದಿತ್ರಯಂ 'ಪ್ರಲಯಾಗ್ನಿನಿಭಂ' ಇತ್ಯಾದಿನೋಕ್ತಂ. ಸ್ವಂ ರೂಪಂ ವ್ಯಷ್ಟಿಸಮಷ್ಟಿವಿಭೇದಾತ್ ಇತ್ಯಾದಿನೋಕ್ತಂ. ವಿಭಾವ್ಯಮವಸ್ಥಾಪಂಚಕಾದಿ. ಅರ್ಥೋ ಗಾಯತ್ರ್ಯರ್ಥಾದಿರೂಪಃ. ಇಮಾನ್ಯಂತರಂಗತ್ವಾದುಪಾಸಕಾನಾಮತ್ಯಾವಶ್ಯಕಾನಿ ॥ ೧೫೯ ॥

ಈ ಪ್ರಕರಣದಲ್ಲಿ ಹೇಳಿರುವ ಅರ್ಥಗಳನ್ನು ಸಂಕ್ಷೇಪವಾಗಿ ಇಲ್ಲಿ ಪುನರನುವಾದ ಮಾಡಿರುತ್ತದೆ. ಮೊದಲು ವಿದ್ಯಾವರ್ಣಗಳ ಸಂಖ್ಯೆ ಐವತ್ತೆಂಟು ಎಂದು ಹೇಳಿರುತ್ತೆ. ಅವುಗಳ ಉದ್ಧಾರ ಕ್ರಮವು "ಕ್ರೋಧೀಶಃ ಶ್ರೀಕಂಠಾರೂಢಃ" ಎಂಬ ಪದ್ಯಗಳಿಂದ ಹೇಳಲ್ಪಟ್ಟಿರುವುದು, ಕಾಲವು ವಿದ್ಯೆಗೆ ಮೂರು ಲವಗಳು ಕಡಿಮೆಯಾದ ಮೂವತ್ತೊಂದುಮಾತ್ರಾತ್ಮಕವೂ, ಉಚ್ಚಾರಣೆಗೆ ಒಂದುಲವ ಕಡಿಮೆಯಾದ ಇಪ್ಪತ್ತೊಂಭತ್ತು ಮಾತ್ರಾತ್ಮಕವೂ ಹೇಳಲ್ಪಟ್ಟಿರುವುದು,"ಇತ್ಯೇವಂ ವರ್ಣಾನಾಂ" ಎಂಬ ಮೂರುವರೆ ಶ್ಲೋಕಗಳಿಂದ ಉಚ್ಚಾರಣದ ಕ್ರಮವು ಹೇಳಲ್ಪಟ್ಟಿರುತ್ತದೆ. "ಕಂಠೇಚಕಂಠತಾಲುನಿ" ಎಂಬ ಶ್ಲೋಕದಲ್ಲಿ ಉತ್ಪತ್ತಿಸ್ಥಾನವು ಹೇಳಲ್ಪಟ್ಟಿದೆ. ಯತ್ನವು ಬಾಹ್ಯ-ಆಭ್ಯಂತರವೆಂದು ಎರಡು ವಿಧವಾದುದು. "ಪ್ರಲಯಾಗ್ನಿನಿಭಂ" ಎಂದು ಹೇಳಲ್ಪಟ್ಟಿರುವ ರೂಪವು, "ವ್ಯಷ್ಟಿಸಮಷ್ಟಿವಿಭೇದಾತ್" ಎಂಬಲ್ಲಿ ಹೇಳಿರುವ ಸ್ವರೂಪವು, ವಿಭಾವ್ಯವಾದ ಅವಸ್ಥಾಪಂಚಕ ಮೊದಲಾದುದು, ಗಾಯತ್ರ್ಯರ್ಥಾದ್ಯಾತ್ಮಕ ಅರ್ಥವು, ಇವುಗಳೆಲ್ಲವೂ ಉಪಾಸಕರಿಗೆ ಅಂತರಂಗವಾದ್ದರಿಂದ ಬಹು ಆವಶ್ಯಕವಾದುವುಗಳು ॥ ೧೫೯ ॥

೧೬೦-೧೬೧

ಋಷಯಶ್ಛಂದೋದೈವತವಿನಿಯೋಗಾ ಬೀಜಶಕ್ತಿಕೀಲಾನಿ ॥ ೧೬೦ ॥
ನ್ಯಾಸಾ ಧ್ಯಾನಂ ನಿಯಮಾಃ ಪೂಜಾದೀನಿ ಬಹಿರಂಗಾಣಿ ॥
ಬಾಹ್ಯಾನ್ಯಂಗಾನಿ ಪುನಃ ಪ್ರಾಯೋ ಲೋಕೇ ಪ್ರಸಿದ್ಧಕಲ್ಪಾನಿ ॥ ೧೬೧ ॥

ಋಷಯೋ ಹಯಗ್ರೀವಾದಯಃ. ಛಂದಾಂಸಿ ಪಂಕ್ತ್ಯಾದೀನಿ, ದೈವತಂ ತ್ರಿಪುರಸುಂದರೀ. ವಿನಿಯೋಗ ಇಷ್ಟಾರ್ಥಜನಕತ್ವೇ. ಬೀಜಂ ವಾಗ್ಭವಾದಿ. ಶಕ್ತಿಃ ಪರಾऽऽದಿಃ. ಕೀಲಕಂ ಕಾಮರಾಜಾದಿ. ನ್ಯಾಸಾ ಋಷ್ಯಾದಿನ್ಯಾಸಜಾಲಂ. ಧ್ಯಾನಂ 'ಅರುಣಾಂ ಕರುಣಾತರಂಗಿತಾಕ್ಷೀಂ' ಇತ್ಯಾದಿನಾ ಕಥಿತಂ. ನಿಯಮಾಃ ಪುಂಡ್ರೇಕ್ಷು ದಂಡಭಕ್ಷಣವರ್ಜನಸಂಕಲ್ಪಾದಯಃ. ಪೂಜಾಃ ಪಾತ್ರಾಸಾದನಾದಿಶಾಂತಿಸ್ತವಾಂತಾ ನಿತ್ಯಾದಿಭೇದೇನ ತ್ರಿವಿಧಾಃ, ಪರಾऽऽದಿಭೇದಾದಪಿ ತ್ರಿವಿಧಾಃ, ಕೇವಲಾದಿಭೇದಾತ್ ಪಂಚವಿಧಾ ಅಪಿ. ಆದಿನಾ ಹೋಮತರ್ಪಣಾದಿಪರಿಗ್ರಹಃ. ಏತಾನಿ ಬಹಿರಂಗತ್ವೇನಾವಶ್ಯಕಾನಿ. ಪ್ರಸಿದ್ಧಕಲ್ಪಾನಿ, ಈಷನ್ನ್ಯೂನ ಪ್ರಸಿದ್ಧಿಮಂತಿ. ಪ್ರಾಯಃ ಪ್ರಸಿದ್ಧಾನೀತ್ಯರ್ಥಃ. ಕಲ್ಪಪ್ರತ್ಯಯಃ. ತಾನಿ ಚ ಪ್ರಕಾಶವರಿವಸ್ಯಾವಿಧೌ ಪ್ರಪಂಚಿತಾನ್ಯಸ್ಮಾಭಿಃ. ಅತೋऽತ್ರಗ್ರಂಥೇ ನೋಕ್ತಾನೀತಿ ಭಾವಃ ॥ ೧೬೦-೧೬೧ ॥

ಹಯಗ್ರೀವ ಮುಂತಾದ ಋಷಿಗಳು, ಪಂಕ್ತಿಮುಂತಾದ ಛಂದಸ್ಸುಗಳು, ತ್ರಿಪುರಸುಂದರೀದೇವತೆಯು, ಇಷ್ಟಾರ್ಥ ಜನಕತ್ವದಲ್ಲಿ ವಿನಿಯೋಗವು, ವಾಗವಾದಿ ಬೀಜವು, ಪರಾ ಮುಂತಾದ ಶಕ್ತಿಯು, ಕಾಮರಾಜಾದಿ ಕೀಲಕವು, ಋಷಿನ್ಯಾಸ ಮುಂತಾದ ನ್ಯಾಸಗಳು, "ಅರುಣಾಂಕರುಣಾತರಂಗಿತಾಕ್ಷೀಂ" ಮುಂತಾದ ವಿಹಿತವಾದ ಧ್ಯಾನವು, ಪುಂಡ್ರೇಕ್ಷುದಂಡ ಭಕ್ಷಣದ ವರ್ಜನ ಸಂಕಲ್ಪ ಮೊದಲಾದ ನಿಯಮಗಳು, ಪಾತ್ರಾಸಾದನಾದಿ ಶಾಂತಿಸ್ತವಾಂತವಾದ ನಿತ್ಯಾ ಮುಂತಾದ ಮೂರು ವಿಧಗಳಿಂದಲೂ ಪರಾ ಮುಂತಾದ ಮೂರು ವಿಧಗಳಿಂದಲೂ ಕೇವಲಾದಿ ಐದು ವಿಧಗಳಿಂದಲೂ ಕೂಡಿದ ಪೂಜೆಗಳು ಮತ್ತು ಶ್ಲೋಕದಲ್ಲಿರುವ ಆದಿಪದದಿಂದ ತೆಗೆದುಕೊಳ್ಳಬೇಕಾದ ಹೋಮತರ್ಪಣ ಮುಂತಾದುವುಗಳೆಲ್ಲವೂ ಲೋಕದಲ್ಲಿ ಪ್ರಾಯಕವಾಗಿ ಪ್ರಸಿದ್ಧಗಳಾಗಿರುವ ಬಹಿರಂಗಸಾಧನಗಳೆಂದು ತಿಳಿಯಬೇಕು. "ಪ್ರಸಿದ್ಧಕಲ್ಪಾನಿ" ಎಂಬ ಪದದಲ್ಲಿ ಅಲ್ಪ ಮಾತ್ರ ನ್ಯೂನವಾದ ಪ್ರಸಿದ್ಧಿಯುಳ್ಳವುಗಳು ಅಥವಾ ಪ್ರಾಯಶಃ ಪ್ರಸಿದ್ಧವಾದುವುಗಳು ಎಂಬ ಅರ್ಥನಲ್ಲಿ ಪ್ರಸಿದ್ಧ ಶಬ್ದದ ಮುಂದೆ "ಕಲ್ಪ" ಎಂಬ ಪ್ರತ್ಯಯವು ಬಂದಿದೆ. ಈ ಸಾಧನಗಳನ್ನೆಲ್ಲ ಪ್ರಕಾಶವರಿವಸ್ಯಾವಿಧಿಯೆಂಬ ಗ್ರಂಥದಲ್ಲಿ ನಾವು ವಿಸ್ತರಿಸಿರುವುದರಿಂದ ಈ ಗ್ರಂಥದಲ್ಲಿ ಅವನು ವಿಶದವಾಗಿ ಹೇಳಿಲ್ಲ ॥ ೧೬೦-೧೬೧ ॥

೧೬೨

ದುರ್ಲಭಮಾಂತರಮಂಗಂ ಪ್ರಾಯೋಽನ್ತರ್ಮುಖಜನೈಸ್ತದಾದೃತ್ಯಮ್ ।
ತೋಷಾಯೈಷಾ ತೇಷಾಮತಃ ಪ್ರದಿಷ್ಟಾ ರಹಸ್ಯವರಿವಸ್ಯಾ ॥ ೧೬೨ ॥

ಅಂತರ್ಮುಖೈರ್ವಿಷಯೇಷ್ವನಾಸಕ್ತಚಿತ್ತೈರ್ಜನೈಃ. ಪ್ರದಿಷ್ಟೋಪದಿಷ್ಟಾ 'ವಿದ್ಯಯೋಃ ಪಥಿ ಮುನಿಪ್ರದಿಷ್ಟಯೋಃ' ಇತಿ ಕಾಲಿದಾಸ ಪ್ರಯೋಗಾತ್ ॥ ೧೬೨ ॥

ಅಂತರಂಗ ಬಹಿರಂಗಗಳೆಂಬ ದ್ವಿವಿಧಸಾಧನಗಳಲ್ಲಿ ಅಂತರಂಗ ಸಾಧನಗಳು ಸಾಮಾನ್ಯ ಜನರಿಗೆ ದುರ್ಲಭವಾದರೂ ವಿಷಯ ಸುಖದಲ್ಲಿ ಆಸಕ್ತಿಯನ್ನು ತೊರೆದ ಅಂತರ್ಮುಖ ಜನರಿಗೆ ಬಹು ಪ್ರಿಯವಾಗಿರುವುದರಿಂದ ಅಂತಹ ಅಂತರ್ಮುಖ ಜನರ ಸಂತೋಷಕ್ಕೋಸ್ಕರ ಈ ರಹಸ್ಯ ವರಿವಸ್ಯಾವಿಧಿಯು ಉಪದೇಶಿಸಲ್ಪಟ್ಟಿದೆ. ಶ್ಲೋಕಸ್ಥವಾದ ಪ್ರದಿಷ್ಟಾ ಎಂಬ ಪದಕ್ಕೆ "ವಿದ್ಯಯೋಃ ಪಥಿಮುನಿಪ್ರದಿಷ್ಟಯೋಃ" ಎಂಬ ಕಾಲಿದಾಸ ಮಹಾಕವಿಯ ಪ್ರಯೋಗವನ್ನನುಸರಿಸಿ ಉಪದಿಷ್ಟವೆಂಬ ಅರ್ಥವನ್ನು ಹೇಳುವುದು ಸೂಕ್ತವಾಗುವುದು ॥ ೧೬೨ ॥

೧೬೩

ಏತಾನುತ್ಸೃಜ್ಯ ಜಡೈಃ ಕ್ರಿಯಮಾಣಾ ಬಾಹ್ಯಡಂಬರೋಪಾಸ್ತಿಃ ।
ಪ್ರಾಣವಿಹೀನೇವ ತನುರ್ವಿಗಲಿತಸೂತ್ರೇವ ಪುತ್ತಲಿಕಾ ॥ ೧೬೩ ॥

ಬಾಹ್ಯೋ ಡಂಬರೋಽಂಗವಿಸ್ತಾರೋ ಯಸ್ಯಾಂ ಸಾ. ಪ್ರಾಣಸೂತ್ರಯೋರಂತರಂಗತ್ವಾತ್ತದಭಾವೇನ ಯಥಾ ತಯೋರ್ನ ಕಾರ್ಯಕ್ಷಮತಾ ತಥೇತಿ ಭಾವಃ ॥ ೧೬೩ ॥

ಜಡರು ಈ ಅಂತರಂಗ ಸಾಧನಗಳನ್ನರಿಯದೇ ಅನುಷ್ಠಾನಮಾಡುವ ಬಾಹ್ಯಾಂಗ ವಿಸ್ತಾರವುಳ್ಳ ಉಪಾಸನೆಯು ಶರೀರದಲ್ಲಿ ಅಂತರಂಗವಾದ ಪ್ರಾಣವಾಯುವೂ ಬೊಂಬೆಯಲ್ಲಿ ಅಂತರಂಗವಾಗಿರುವ ಸೂತ್ರವೂ ಇಲ್ಲದೇ ಹೋದರೆ ಶರೀರ ಪುತ್ತಲಿಕೆಗಳು ಸ್ವಕಾರ್ಯಕ್ಷಮವಾಗದೇ ವ್ಯರ್ಥವೂ ಜುಗುಪ್ಸಿತವೂ. ಆದಂತೆ ವಿಫಲವಾಗುವುದು ॥ ೧೬೩ ॥

೧೬೪

ಬೀಜಾನ್ಮೂಲಂ ಮೂಲಾತ್ ಕ್ಷೇತ್ರಸ್ಯಾಂತಃಸ್ಥಬಾಹ್ಯವಿಸ್ತಾರೌ |
ಯದ್ಯಪ್ಯನಯೋಃ ಸಾಮ್ಯಂ ಪ್ರಾಧಾನ್ಯಮಥಾಪಿ ಚಾಂತರಂಗಸ್ಯ ||೧೬೪||

ಬೀಜಾತ್ಕಾಮಕಲಾರೂಪಾದ್ಧಾನ್ಯಾದಿ ರೂಪಾಚ್ಚ. ಮೂಲಂ ವೃಕ್ಷಪಾದೋ ಮಂತ್ರಶ್ಚ. ಕ್ಷೇತ್ರಸ್ಯ ಶರೀರಸ್ಯ ಕೇದಾರಸ್ಯ ಚ. ಯದ್ಯಪ್ಯನಯೋಃ ಸಾಮ್ಯಂ ಬೀಜಜನ್ಯತ್ವಾವಿಶೇಷಾತ್; ತಥಾಽಪಿ "ಅಂತರಂಗನಾಶೇ ಬಾಹ್ಯಾಂಗ ಸಹಿತ ವೃಕ್ಷನಾಶಃ, ಬಾಹ್ಯಾಂಗಮಾತ್ರನಾಶೇಽಪಿ ನ ವೃಕ್ಷಸ್ಯ ನ ವಾಽಂತರಂಗಸ್ಯ ನಾಶಃ" ಇತ್ಯಸ್ಯ ಪ್ರಸಿದ್ಧತ್ವಾದಿತಿ ಭಾವಃ || ೧೬೪ ||

ಒಂದು ಬೀಜದಿಂದ ಬೇರು, ಬೇರಿನಿಂದ ಹೊಲದ ಒಳಹೊರಭಾಗಗಳಲ್ಲಿ ವ್ಯಾಪಿಸುವಂತಹ ಅನೇಕಾವಯವಗಳ ವಿಸ್ತಾರಗಳೂ ಹುಟ್ಟುವಂತೆ ಕಾಮರಾಜಾದಿ ಬೀಜದಿಂದ ಮಂತ್ರವೂ ಅದರಿಂದ ಶರೀರದ ಆಂತರ ಮತ್ತು ಬಾಹ್ಯ ಪ್ರದೇಶಗಳಲ್ಲಿ ವ್ಯಾಪ್ತಿಯುಳ್ಳ ವಿಸ್ತಾರಗಳೂ ಹುಟ್ಟುತ್ತವೆ. ಆದುದರಿಂದ ಬೀಜದಿಂದ ಹುಟ್ಟುವ ಸಾಮ್ಯದೃಷ್ಟಿಯಿಂದ ಅಂತರಂಗ ಬಹಿರಂಗಗಳಲ್ಲಿ ಅಂತರಂಗಗಳಿಗೆ ಪ್ರಾಧಾನ್ಯವು ತಿಳಿಯುವುದಿಲ್ಲ. ಆದರೆ ಅಂತರಂಗವಾದ ಬೇರಿನ ವಿಸ್ತಾರವು ನಾಶವಾದರೆ ಶಾಖಾದಿ ಬಹಿರಂಗ ಸಹಿತವಾಗಿ ವೃಕ್ಷವೇ ನಾಶವಾಗುವುದು. ಬಾಹ್ಯಾಂಗಮಾತ್ರವೇ ನಶಿಸಿಹೋದರೆ ಅಂತರಂಗಕ್ಕಾಗಲಿ ವೃಕ್ಷಕ್ಕಾಗಲಿ ನಾಶವು ಸಂಭವಿಸುವುದಿಲ್ಲವೆಂಬ ಸೂಕ್ಷ್ಮವಾದ ದೃಷ್ಟಿಯಿಂದ ಅಂತರಂಗಗಳು ಪ್ರಧಾನವಾದುದೆಂದು ಪ್ರಸಿದ್ಧವೇ ಆಗಿದೆ-

೧೬೫

ಸದ್ಗುರುಕುಲತಃ ಕೃಪಯಾ ಲಬ್ಧಾ ಕಾಮಾನಿಯಂ ಸೂತೇ ।
ನಿಜಬುದ್ಧಿಮಾತ್ರಜನ್ಯಾ ಪಾಪಂ ಕನ್ಯಾ ಯಥಾ ಸ್ವೀಯಾ ॥ ೧೬೫ ॥

ಯದ್ಯಪೀಮಾನ್ಯಾವಶ್ಯಕತರತ್ವಾದತ್ರ ಗ್ರಂಥೇ ನಿಬದ್ಧಾನಿ, ತಥಾಽಪಿ ಪಾಂಡಿತ್ಯಬಲಾದೇತದ್ಗ್ರಂಥಾವಲೋಕನಾದೇವ ಗುರುಮನಪೇಕ್ಷ್ಯ ಸ್ವೀಕಾರಃ ಪಾಪಾಯೇತ್ಯಾಹ—ಪಾಪಂ ಸೂತ ಇತ್ಯನ್ವಯಃ. ಸದ್ಗುರೋಃ "ಸುಂದರಃ ಸುಮುಖಃ ಸ್ವಸ್ಥಃ" ಇತ್ಯಾದಿ ತಂತ್ರರಾಜೋಕ್ತಲಕ್ಷಣವಿಶಿಷ್ಟಸ್ಯ. ಕೃಪಯಾ ಸೇವಾಜನಿತ ಪ್ರಸಾದೇನ "ಪಾರಂಪರ್ಯವಿಹೀನಾ ಯೇ ಜ್ಞಾನಮಾತ್ರೇಣ ಗರ್ವಿತಾಃ. ತೇಷಾಂ ಸಮಯಲೋಪೇನ ವಿಕುರ್ವಂತಿ ಮರೀಚಯಃ." ಇತಿ ವಚನಾತ್. ಮರೀಚಯೋ ಡಾಕಿನ್ಯಾದಯಃ. ವಿಕುರ್ವಂತಿ ಧಾತುವಿಕಾರಪ್ರಾಪಣೇನ ಮಾರಯಂತೀತ್ಯರ್ಥಃ. ಕನ್ಯಾಪಕ್ಷೇ ಸದ್ಗುರುಃ ಶ್ವಶುರಃ ॥ ೧೬೫ ॥

"ಸುಂದರಃ ಸುಮುಖಃಸ್ವಸ್ಥಃ" ಮುಂತಾದ ತಂತ್ರರಾಜಗ್ರಂಥೋಕ್ತ ಲಕ್ಷಣಗಳಿಂದ ಕೂಡಿದ ಸದ್ಗುರು ಕೃಪೆಯಿಂದ ಲಬ್ಧವಾದ ಈ ವಿದ್ಯೆಯು ನಮ್ಮ ಅಭಿಲಷಿತವಾದ ಫಲಗಳನ್ನೆಲ್ಲ ಕೊಡುವುದು. ಸ್ವಬುದ್ಧಿಯಿಂದಲೇ ತಿಳಿದು ಉಪಾಸನೆ ಮುಂತಾದ ಅನುಷ್ಠಾನ ಪಾತ್ರವಾದ ವಿದ್ಯೆಯಾದರೋ ಪಾಪವನ್ನು ಉಂಟುಮಾಡುವುದು. "ಪಾರಂಪರ್ಯ ವಿಹೀನಾಯೇ ಜ್ಞಾನಮಾತ್ರೇಣ ಗರ್ವಿತಾಃ। ತೇಷಾಂಸಮಯಲೋಪೇನ ವಿಕುರ್ವಂತಿ ಮರೀಚಯಃ" ಎಂಬ ವಚನವು ಗುರು ಶುಶ್ರೂಷೆಯಿಂದ ಉಂಟಾಗುವ ಗುರುಪ್ರಸಾದಾಧೀನವಾದ ವಿದ್ಯಾಪ್ರಾಪ್ತಿಯೆಂಬ ಪಾರಂಪರ್ಯವಿಲ್ಲದೇ ಸ್ವಬುದ್ಧಿ ಜನ್ಯವಾದ ಜ್ಞಾನ ಮಾತ್ರದಿಂದ ಗರ್ವಿತರಾದವರಿಗೆ ಪ್ರತ್ಯವಾಯವು ಹುಟ್ಟುವುದಲ್ಲದೇ ಡಾಕಿನ್ಯಾದಿ ಶಕ್ತಿ ದೇವತೆಗಳು ಧಾತುವಿಕಾರವನ್ನು ಹುಟ್ಟಿಸಿ ಅಂತಹವರಿಗೆ ಅನರ್ಥವನ್ನು ಕೊಡುತ್ತವೆ ಎಂದು ಹೇಳಿರುತ್ತದೆ. ಪೂಜ್ಯನಾದ ಶ್ವಶುರನ ಸತ್ಕುಲೋತ್ಪನ್ನಳಾದ ಕನ್ಯೆಯನ್ನು ತಂದು ಕೌಲಕ್ರಮದಿಂದ ಅನುಭವಿಸುತ್ತ ಬಂದರೆ ಆಕೆಯು ಪಾಪಸಂಪರ್ಕವಿಲ್ಲದೆ ಕಾಮಸುಖವನ್ನು ಕೊಡುವಳು. ತನ್ನ ಕನ್ಯೆಯು ಪಾಪಕ್ಕೆ ಕಾರಣಳಾಗುವಳು. ಆದ್ದರಿಂದ ಗುರೂಪದೇಶ ಲಬ್ಧ ವಿದ್ಯೆಯು ಅರ್ಥಕಾರಿಯೂ ಸ್ವಬುದ್ಧಿಲಬ್ಧವಾದ ವಿದ್ಯೆಯು ಅನರ್ಥಕಾರಿಯೂ ಆಗಿರುವುದೆಂಬ ಅಂಶಕ್ಕೆ ಇಂತಹ ಕನ್ಯೆಯನ್ನು ದೃಷ್ಟಾಂತವಾಗಿ ತೋರಿಸಬಹುದು ॥ ೧೬೫ ॥

೧೬೬

ಅಕಥಾಸನಂ ಹಳಕ್ಷಾಂತರಂ ಸಮಾಸಾದ್ಯ ಮಾಮಕಂ ಜ್ಞಾನಮ್।
ಮಾಮಕಮೇವಾನಂದಂ ಮಹ್ಯಂ ದದತೋ ಜಯಂತಿ ಗುರುಚರಣಾಃ ॥ ೧೬೬ ॥

"ಮಂಗಲಾದೀನಿ ಮಂಗಲಮಧ್ಯಾನಿ ಮಂಗಲಾಂತಾನಿ ಹಿ ಶಾಸ್ತ್ರಾಣಿ ಪ್ರಥಂತೇ" ಇತಿ ವಚನಾದಂತೇ ಮಂಗಲಮಾರಚಯತಿ— ಕಥಾನಾಂ ವಾಚಾಮುನಾಸನಮವಿಷಯಂ. ವಾಚ್ಯಕಕ್ಷ್ಯಾಮತಿಕ್ರಾಂತ ಮಿತಿ ಯಾವತ್. ಹೇತಿ ನಿಶ್ಚಯೇ. ಲಕ್ಷ್ಯಸ್ಯ ಲಕ್ಷಣಾಯಾ ಅಂತರಮ ವಕಾಶೋ ಯಸ್ಮಿಂಸ್ತತ್. ಪಕ್ಷೇ, ಸಹಸ್ರಾರಪದ್ಮಕರ್ಣಿಕಾಮಧ್ಯಗತ ತ್ರಿಕೋಣರೇಖಾ ಆದಿಕಾದಿಥಾದಿಷೋಡಶಾರ್ಣತ್ರಯರೂಪಾಃ, ತನ್ಮ ಧ್ಯೇ ಕೋಣೇಷು ಹಕಾರಾದಿತ್ರಯಂ ತತ್ರ ತಂತ್ರೇಷು ಗುರುಧ್ಯಾನಂ ಕಥಿತಂ. ತಾದೃಶಮಾಸನಮಿತ್ಯರ್ಥಃ. ಮಾಮಕಮಾತ್ಮಾಭಿನ್ನಂ॥೧೬೬॥

ಸಹಸ್ರಾರ ಪದ್ಮದ ಕರ್ಣಿಕಾಮಧ್ಯಸ್ಥವಾದ ಅಕಾರಾದಿಯೂ ಕಕಾರಾದಿಯೂ ಥಕಾರಾದಿಯೂ ಆದ ಷೋಡಶ ವರ್ಣರೂಪವಾದ ತ್ರಿಕೋಣ ರೇಖೆಗಳ ಮಧ್ಯದಲ್ಲಿರುವ ಕೋಣತ್ರಯದಲ್ಲಿ ಹಕಾರ, ಳಕಾರ, ಕ್ಷಕಾರಗಳು ಇವೆ. ಅಲ್ಲಿ ಉಪಾಸಕನು ಉಪಾಸನಾರಂಭದಲ್ಲಿ ಗುರುಧ್ಯಾನವನ್ನು ಮಾಡಬೇಕೆಂದು ತಂತ್ರಗಳಲ್ಲಿ ವಿಹಿತವಾಗಿದೆ. ಅದರಂತೆ ಆಚರಿಸಿದ ಧ್ಯಾನದಿಂದ ಗುರುಗಳು ಪ್ರಸನ್ನರಾಗಿ ವಿದ್ಯೋಪದೇಶವನ್ನು ಮಾಡುವರು. ಅದರ ಉಪಾಸನೆಯಿಂದ ತತ್ತ್ವಜ್ಞಾನವು ಹುಟ್ಟುವುದು. ಅಂತಹ ಜ್ಞಾನವು ವಾಗಗೋಚರವಾಗಿಯೂ ಲಕ್ಷಣಾವೃತ್ತಿಗೆ ವಿಷಯವಾದ ತತ್ತ್ವವನ್ನು ಗೋಚರಿಸುವುದಾಗಿಯೂ ಇರುವುದು. ಅಂತಹ ಜ್ಞಾನವನ್ನು ಅನುಗ್ರಹಿಸಿ ಗುರುಗಳು ಸ್ವಸ್ವರೂಪವಾದ ಆನಂದವನ್ನು ನನಗೆ ಕೊಡುವರು. ಅಂತಹ ಗುರುಗಳು ಸರ್ವೋತ್ಕೃಷ್ಟರಾಗಿರುವರು. "ಮಂಗಲಾದೀನಿ ಮಂಗಲಮಧ್ಯಾನಿ ಮಂಗಲಾಂತಾನಿ ಹಿ ಶಾಸ್ತ್ರಾಣಿ ಪ್ರಥಂತೇ" ಎಂಬ ಉಕ್ತಿಯನ್ನನುಸರಿಸಿ ಗ್ರಂಥಾಂತದಲ್ಲಿ ಗುರು ಸ್ಮರಣರೂಪವಾದ ಮಂಗಳವನ್ನು ಈ ಪದ್ಯದಿಂದ ಗ್ರಂಥಕಾರನು ಮಾಡಿರುತ್ತಾನೆ || ೧೬೬ ||

೧೬೭

ಗುರುಚರಣೈಕ ಸಹಾಯೋ ಭಾಸ್ಕರರಾಯೋ ಜಗನ್ಮಾತುಃ ।
ವರಿವಸ್ಯಾತಿರಹಸ್ಯಂ ವೀರನನುಸ್ಯಂ ಪ್ರಜಗ್ರಂಥ ॥ ೧೬೭ ॥

ವೀರೈಃ ಅಹಮಿ ರಣಾಂಗಣ ಇದಮೋ ವೈರಿಣೋ ನಾಶಂ ಕುರ್ವಾಣೈಃ ಪರಾಪಂಚಾಶಿಕಾऽऽದೌ ಪ್ರಸಿದ್ಧೈಃ. ಇತಿ ಸರ್ವಮನವದ್ಯಮ್ ॥ ೧೬೭ ॥

ವಸ್ತು ಪ್ರಸ್ತುತಮಸ್ತು ನಿಸ್ತುಲಮಹಃಸ್ತೋಮಾಸ್ತಿತಾವಾಸ್ತುನೋ ।
ಹಸ್ತನ್ಯಸ್ತಸಮಸ್ತಪುಸ್ತಕಭರಧ್ವಸ್ತಾಸದೇನಸ್ತತಿ ॥
ಶಸ್ತಸ್ವಸ್ತಿಕೃದಸ್ತದುಸ್ತರತಮಃ ಸ್ವಸ್ತೋಕಸೌವಸ್ತಿಕಂ ।
ಗೀಸ್ತೋಯಸ್ತನಯಿತ್ನು ಸುಸ್ತನಯುಗಂ ವಾಸ್ತೋಷ್ಪತಿಪ್ರಸ್ತುತಮ್ ॥

ಇತಿ ಶ್ರೀಮತ್ಪದವಾಕ್ಯಪ್ರಮಾಣ ಪಾರಾವಾರಪಾರೀಣ ಸರ್ವತಂತ್ರಸ್ವತಂತ್ರ ಶ್ರೀನೃಸಿಂಹಾನಂದನಾಥ ಚರಣಾರವಿಂದಮಿಲಿಂದೇನ ಶ್ರೀಮದ್ಗಂಭೀರ ರಾಯಭಾರತೀದೀಕ್ಷಿತಾತ್ಮಜೇನ ಭಾಸ್ಕರರಾಯಾಪರನಾಮ್ನಾ ಭಾಸುರಾನಂದನಾಥೇನ ಪ್ರಣೀತಂ ಸವ್ಯಾಖ್ಯಾನಂ ವರಿವಸ್ಯಾರಹಸ್ಯಂ ಸಂಪೂರ್ಣಮ್.

ಗುರುಚರಣಾನುಗ್ರಹ ಮಾತ್ರವೇ ಅವಲಂಬನವಾಗಿರುವ ಭಾಸ್ಕರರಾಯನೆಂಬ ಪ್ರಕೃತ ಗ್ರಂಥಕಾರನು ಅಹಂಪದಾರ್ಥವೆಂಬ ರಣಾಂಗಣದಲ್ಲಿ ಬಂದಿಳಿಯುವ ಇದಂ ಪದಾರ್ಥ (ಪರಾಗ್ವಸ್ತು) ಗಳೆಂಬ ಶತ್ರುಗಳನ್ನು ಧ್ವಂಸಮಾಡುತ್ತಿರುವಂತೆ ಪರಾಪಂಚಾಶಿಕಾದಿ ಗ್ರಂಥ ಪ್ರಸಿದ್ಧರಾದ ವೀರರಿಂದ ಸೇವಿಸಲ್ಪಟ್ಟ ಜಗನ್ಮಾತೆಯ ವರಿವಸ್ಯಾರಹಸ್ಯವೆಂಬ ಗ್ರಂಥವನ್ನು ಬರೆದಿರುವನು. ಸರ್ವವೂ ನಿರ್ದೋಷವಾಗಲಿ.

ವರಿವಸ್ಯಾರಹಸ್ಯವು ಮುಗಿದುದು.

ಮೈಸೂರು:
ದಿ ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್,
೧೯೪೪